
ರತ್ನಾಕರ ಮಹಾಕವಿಯ

ಮೂರು ಶತಕಗಳು

(ರತ್ನಾಕರಶತಕ - ಅಪರಾಜಿತೇಶ್ವರಶತಕ - ತ್ರಿಲೋಕಶತಕ)
(ಮೂಲ-ಅನುವಾದ-ಟಿಪ್ಪಣಿಗಳ ಸಹಿತ)

ಸಂಪಾದಕ ಮತ್ತು ಅನುವಾದಕ: ಪ್ರೊ. ಜಿ. ಅಶ್ವತ್ಥನಾರಾಯಣ



ನ್ಯೂ ವೇವ್ ಬುಕ್ಸ್
NEW WAVE BOOKS

ತೇಜು ಪಬ್ಲಿಕೇಷನ್ಸ್, ನ್ಯೂವೇವ್ ಬುಕ್ಸ್ ಮತ್ತು
ಶ್ರೀನಿವಾಸ ಪುಸ್ತಕ ಪ್ರಕಾಶನ, ಬೆಂಗಳೂರು
ಅರ್ಪಿಸುವ

ನಾಲ್ಕು ಪುಸ್ತಕಗಳ ಬಿಡುಗಡೆಯ ಸಂಭ್ರಮ

ಪ್ರೊಫೆಸರ್ ಜಿ. ಅಶ್ವತ್ಥನಾರಾಯಣ ಅವರ

ರತ್ನಾಕರವರ್ಣಿಯ ಮೂರು ಶತಕಗಳು (ಜೈನಸಾಹಿತ್ಯ ಶತಕ ತ್ರಯ)

ನಾ ಕಂಡ ಕನ್ನಡದ ಹಿರಿಯ ಸಾಹಿತಿಗಳು (ಶ್ರೇಷ್ಠರ ವ್ಯಕ್ತಿಚಿತ್ರಗಳು)

ಡಾ. ಕೆ. ಸತ್ಯನಾರಾಯಣ ಅವರ

ಬೀದಿ ಜಗಳ ಮತ್ತು ಇತರ ಪ್ರಬಂಧಗಳು (ಲಲಿತ ಪ್ರಬಂಧಗಳು)

ಶ್ರೀ ವೈ. ಎನ್. ಗುಂಡೂರಾವ್ ಅವರ

ತಥಾ ಕಥಾ (ಪೌರಾಣಿಕ ಪಾತ್ರಗಳ ಮಾನಸಿಕ ತುಮುಲ)

ಗ್ರಂಥಗಳ ಪರಿಚಯ:

ಡಾ. ಪದ್ಮಿನಿ ನಾಗರಾಜು, ಪ್ರಾಧ್ಯಾಪಕಿ, ಕಾರ್ಯದರ್ಶಿ ಕ.ಸಾ.ಪ.

ಶ್ರೀ ವೈ.ವಿ. ಗುಂಡೂರಾವ್, ವ್ಯಕ್ತಿತ್ವವಿಕಸನಕಾರರು, ವಾಗ್ಮಿ

ಶ್ರೀ ಎನ್. ರಾಮನಾಥ್, ಅಂಕಣಕಾರರು

ಕೆ. ರಾಜಕುಮಾರ್ ಲೇಖಕರು, ಕನ್ನಡ ಹೋರಾಟಗಾರರು

ಅಧ್ಯಕ್ಷತೆ: ಬಾಬು ಕೃಷ್ಣಮೂರ್ತಿ, ಖ್ಯಾತ ಲೇಖಕರು

ನಿರೂಪಣೆ: ಶ್ರೀ ಶ್ರೀಪತಿ ಮಂಜನಬೈಲ್, ರಂಗಕರ್ಮಿ

ದಿನಾಂಕ: 28.05.2023 । ಭಾನುವಾರ: ಬೆಳಗ್ಗೆ 10 ಗಂಟೆಗೆ

ಸ್ಥಳ: **ಯುವಪಥ** ನಂ.44, 31ನೇ ಕ್ರಾಸ್, 11ನೇ ಮುಖ್ಯರಸ್ತೆ, 4ನೇ ಟಿ ಬ್ಲಾಕ್, ವಿಜಯಾ ಕಾಲೇಜ್ ಹಿಂಬಾಗ, ಜಯನಗರ, ಬೆಂಗಳೂರು – 560 011.

ನೀವೂ ಬನ್ನಿ, ಕನ್ನಡದ ಆಸಕ್ತರನ್ನೂ ಕರೆತನ್ನಿ

28-5-2023

ರತ್ನಾಕರ ಮಹಾಕವಿಯ

ಮೂರು ಶತಕಗಳು

(ರತ್ನಾಕರಶತಕ – ಅಪರಾಜಿತೇಶ್ವರಶತಕ – ತ್ರಿಲೋಕಶತಕ)

(ಮೂಲ–ಅನುವಾದ–ಟಿಪ್ಪಣಿಗಳ ಸಹಿತ)

ಸಂಪಾದಕ ಮತ್ತು ಅನುವಾದಕ

ಪ್ರೊ. ಜಿ. ಅಶ್ವತ್ಥನಾರಾಯಣ

ನ್ಯೂ ವೇವ್ ಬುಕ್ಸ್

ನಂ. 90/3, ಒಂದನೇ ಮಹಡಿ, ಈ.ಎ.ಟಿ. ಸ್ಟ್ರೀಟ್

ಬಸವನಗುಡಿ, ಬೆಂಗಳೂರು – 560 004.

ರತ್ನಾಕರ ಮಹಾಕವಿಯ ಮೂರು ಶತಕಗಳು
(ರತ್ನಾಕರಶತಕ – ಅಪರಾಜಿತೇಶ್ವರಶತಕ – ತ್ರಿಲೋಕಶತಕ)

RATNAAKARA MAHAKAVIYA MOORU SHATAKAGALU
(Ratnakara Shataka - Aparajiteswara Shataka - Triloka Shataka)

Edited and Translated by
Prof. G. Aswathanarayana
(Retired Kannada Professor)
95, 34th 'B' Cross, 16th Main, 4th 'T' Block, Jayanagar,
Bengaluru-560 041. Phone : 080-26637783, Mobile : 9481800023
ಪ್ರೊ. ಜಿ.ಅಶ್ವತ್ಥನಾರಾಯಣ
ನಿವೃತ್ತ ಕನ್ನಡ ಪ್ರಾಧ್ಯಾಪಕ
ನಂ.೯೫, ೩೪ನೇ 'ಬಿ' ಕ್ರಾಸ್, ೧೬ನೇ ಮುಖ್ಯರಸ್ತೆ, ೪ನೇ 'ಟಿ' ಬ್ಲಾಕ್, ಜಯನಗರ,
ಬೆಂಗಳೂರು-೫೬೦ ೦೪೧. ದೂರವಾಣಿ: ೦೮೦-೨೬೬೩೭೭೮೩, ಮೊಬೈಲ್: ೯೪೮೧೮೦೦೦೨೩

Published by
B.S. Madhu, on behalf of **New Wave Books**,
90/3, 1st Floor, E.A.T. Street, Basavanagudi,
Bangalore - 560 004. M : 9448788222

First Edition : 2023 ಪ್ರಥಮ ಮುದ್ರಣ : ೨೦೨೩

Pages : 248 + iv ಪುಟಗಳು : ೨೪೮ + iv

Price : ₹ 260 **ಬೆಲೆ : ರೂ. ೨೬೦**

No. of Copies : 1000 ಪ್ರತಿಗಳ ಸಂಖ್ಯೆ : ೧೦೦೦


70 GSM N.S. Maplitho – 1/8 Demy
ಕಾಗದ: ೭೦ ಜಿಎಸ್‌ಎಂ ಎನ್‌ಎಸ್ ಮ್ಯಾಪ್‌ಲಿಥೊ ೧/೮ ಡೆಮಿ

Cover Design : **Chandrashekar**
ಮುಖಪುಟ : ಚಂದ್ರಶೇಖರ್

Typeset at : **Page Designers,** Bangalore - 560 004.
ಪುಟವಿನ್ಯಾಸ : ಪೇಜ್ ಡಿಸೈನರ್ಸ್, ಬೆಂಗಳೂರು

Printed at : **Sathyananda Printers**
ಮುದ್ರಕರು : ಸತ್ಯಾನಂದ ಪ್ರಿಂಟರ್ಸ್
Pipeline Parallel Road, Cholura Palya, Bangalore - 560 023.

ಅನಂತನಮನ



ಮೊದಲ ಬಾರಿಗೆ ಸಮಗ್ರವಾಗಿ ರತ್ನಾಕರ ರಚಿತ ಶತಕತ್ರಯವನ್ನು ಪಾಠಾಂತರ-ಅನುವಾದಗಳೊಂದಿಗೆ ಪ್ರಕಟಿಸಿ ಅನಂತರ ರತ್ನಾಕರ ಶತಕಗಳನ್ನು ಪ್ರಕಟಿಸಿದವರಿಗೆಲ್ಲಾ ಮಾರ್ಗದರ್ಶಕರಾದವರೂ ಜೈನಸಾಹಿತ್ಯ-ಶಾಸ್ತ್ರಗ್ರಂಥಗಳನ್ನು ಅಧಿಕ ಸಂಖ್ಯೆಯಲ್ಲಿ ಪ್ರಪ್ರಥಮವಾಗಿ ರಚಿಸಿ ಪ್ರಕಟಿಸಿದವರೂ ಕನ್ನಡ ಜೈನ ಸಾಹಿತ್ಯಕ್ಕೆ ಅಮೂಲ್ಯ ಸೇವೆ ಸಲ್ಲಿಸಿದವರೂ, ನನ್ನ ಗ್ರಂಥರಚನೆಗೆ ಸ್ಫೂರ್ತಿವಂತರೂ ಆದ

ಪಂಡಿತರತ್ನಂ ವಿ. ಶಾಂತಿರಾಜಶಾಸ್ತ್ರಿ


(ಜನನ ೧೮೮೮ - ನಿಧನ ೧೯೫೨)


ಅವರಿಗೆ ನನ್ನ ಅನಂತ ನಮನಗಳು

ಜಿ. ಅಶ್ವತ್ಥನಾರಾಯಣ
ಸಂಪಾದಕ ಮತ್ತು ಅನುವಾದಕ


ಅರ್ಪಣೆ

ಮಹಾವೀರ ಮಿಷನ್ ಸ್ಥಾಪಕರೂ ಸಂಘಟಕರೂ ಆಗಿ
ಜೈನಧರ್ಮ ಸಾಹಿತ್ಯ ಪ್ರಸಾರ ಕಾರ್ಯದಲ್ಲಿ ಅವಿರತವಾಗಿ ಸೇವಾನಿರತರಾಗಿ
ನಾಡಿನಾದ್ಯಂತ ಕಾರ್ಯಕ್ರಮಗಳನ್ನು ಸಂಘಟಿಸಿ ಸಾಹಿತ್ಯ ಪೋಷಕರಾಗಿ
ಕಾರ್ಯನಿರ್ವಹಿಸಿದ ಶ್ರೇಷ್ಠ ಜೈನಶ್ರಾವಕರಾದವರೂ
ನನ್ನನ್ನು ನಾನಾ ಉಪನ್ಯಾಸ ಕಾರ್ಯಕ್ರಮಗಳಿಗೆ ನಾಡಿನಾದ್ಯಂತ ಆಹ್ವಾನಿಸಿ
ಧರ್ಮಚಕ್ರ ಸಂಚಾರ ಕಾಲದಲ್ಲಿ ಜೈನ ಸಮಾಜಕ್ಕೆ ಪರಿಚಯಿಸಿದವರೂ
ನನ್ನ ಜೈನಧರ್ಮಗ್ರಂಥಗಳನ್ನು ಪ್ರಕಟಿಸಿ ಪ್ರೋತ್ಸಾಹಿಸಿದವರೂ ಆದ
ಆತ್ಮೀಯ ಸನ್ಮಿತ್ರರಾದ





ದಿ|| ನೇಮಿನಾಥಯ್ಯ ಮತ್ತು **ದಿ|| ಎಸ್.ಬಿ. ವಸಂತರಾಜಯ್ಯ** ಅವರಿಗೆ
ಮತ್ತು ಜೈನಗ್ರಂಥಗಳನ್ನು ಶಾಸ್ತ್ರದಾನ ಮಾಡಿ ಉಪನ್ಯಾಸ ಕಾರ್ಯಕ್ರಮಗಳಿಗೆ ವ್ಯವಸ್ಥೆ
ಮಾಡಿ ಆಹ್ವಾನಿಸಿ ನನ್ನನ್ನು ಪ್ರೋತ್ಸಾಹಿಸಿದ ನಾಡಿನೆಲ್ಲೆಡೆಗಳಲ್ಲಿ ಜೈನಧಾರ್ಮಿಕ
ಸಮಾರಂಭಗಳ ಏರ್ಪಾಡಿಗೆ ಹಾಗೂ ಜೈನಗ್ರಂಥ ಪ್ರಕಟನೆಗೆ ಅಪಾರ ಸೇವೆ
ಸಲ್ಲಿಸಿದ ಆಪ್ತ ಮಿತ್ರರಾದ



ಅ.ನಾ. ಚಂದ್ರಕೀರ್ತಿ ಅವರಿಗೆ
ಈ ಮಿತ್ರ ರತ್ನತ್ರಯರಿಗೆ 'ರತ್ನಾಕರ ಮಹಾಕವಿಯ ಮೂರು ಶತಕಗಳು'
ಗ್ರಂಥವನ್ನು ಸ್ನೇಹಾಭಿಮಾನಗಳಿಂದ ಕೃತಜ್ಞತಾಪೂರ್ವಕ
ಅರ್ಪಿಸುತ್ತಿದ್ದೇನೆ.

೧೫.೧.೨೦೨೩
ಬೆಂಗಳೂರು

ಜಿ. ಅಶ್ವತ್ಥನಾರಾಯಣ
ಸಂಪಾದಕ ಮತ್ತು ಅನುವಾದಕ

ಸಂಪಾದಕ-ಅನುವಾದಕನ ಅರಿಕೆ

ಬೆಂಗಳೂರಿನ ವಿಜ್ಞಾನ ಕಾಲೇಜಿನಲ್ಲಿ ನಾನು ಕನ್ನಡ ಅಧ್ಯಾಪಕನಾಗಿದ್ದಾಗ ಹರಿಯಪ್ಪ ಎಂಬ ವಿಜ್ಞಾನದ ಪ್ರಾಧ್ಯಾಪಕರು ಸಹೋದ್ಯೋಗಿಗಳಾಗಿದ್ದರು. ಅವರು ಜೈನ್ ಹಾಸ್ಟೆಲಿನ ವಾರ್ಡನರಾಗಿದ್ದರು. ಅವರೊಂದಿಗೆ ಹಾಸ್ಟೆಲಿಗೆ ಭೇಟಿಕೊಟ್ಟಾಗ ಮೋತಿಖಾನೆ ತಿಮ್ಮಪ್ಪಯ್ಯನವರ ಆ ಕಟ್ಟಡದಲ್ಲಿದ್ದ ಮಹಾವೀರ ಮಿಷನ್ ಸಂಸ್ಥೆ ಪರಿಚಯವಾಗಿತ್ತು. ಆ ಸಮಯದಲ್ಲಿ ಆ ಸಂಸ್ಥೆಯ ಜೀವನಾಡಿಗಳಂತೆ ದುಡಿಯುತ್ತಿದ್ದವರು ನೇಮಿನಾಥಯ್ಯ ಮತ್ತು ವಸಂತರಾಜಯ್ಯ ಎಂಬ ಜೈನತರುಣರು. ಅವರ ಪರಿಚಯವಾಯಿತು. ಮಹಾವೀರ ಮಿಷನ್ ಆಗ ಜೈನ ಕಾವ್ಯ, ಸಾಹಿತ್ಯ, ಧರ್ಮಗಳ ಬಗ್ಗೆ ನಾಡಿನ ವಿದ್ವಾಂಸರಿಂದ ಉಪನ್ಯಾಸಗಳನ್ನು ಏರ್ಪಡಿಸುತ್ತಿತ್ತು. ಜೈನ ಸಾಹಿತ್ಯಾಸಕ್ತರಿಗೆ, ಜೈನಧರ್ಮೀಯರಿಗೆ ಆ ಉಪನ್ಯಾಸಗಳು ರಸದೌತಣಗಳಾಗಿರುತ್ತಿದ್ದವು. ನಾನೂ ಹಲವಾರು ಉಪನ್ಯಾಸಗಳನ್ನು ನೀಡಿದ್ದೇನೆ.

ಅನಂತರ ಮಹಾವೀರ ಮಿಷನ್ ತನ್ನ ಕಾರ್ಯಚಟುವಟಿಕೆಗಳನ್ನು ವಿಸ್ತರಿಸುತ್ತಾ ಬಂದಿತು. ಕ್ರೈಸ್ತ ಸಂಸ್ಥೆಗಳು ಕ್ರೈಸ್ತೇತರರಿಗೆ ಕ್ರಿಸ್ತಧರ್ಮದ ಸರಳ ಪರಿಚಯ ಮಾಡಿಕೊಡುವ ಪರೀಕ್ಷೆಗಳನ್ನು ಉಚಿತವಾಗಿ ಏರ್ಪಡಿಸಿ, ಅದಕ್ಕೆ ಬೇಕಾದ ಪಠ್ಯಗಳನ್ನು ಸರಳವಾಗಿ ಸಿದ್ಧಗೊಳಿಸಿ ನೀಡುತ್ತಿತ್ತು. ಹೀಗಾಗಿ ಕ್ರೈಸ್ತೇತರರಿಗೆ ಕ್ರಿಸ್ತಧರ್ಮ ಪರಿಚಯ ಸರಳವಾಗಿ ಚೆನ್ನಾಗಿ ಆಗುತ್ತಿತ್ತು. ಗದಗಿನ ಮಿಷನರಿ ಸಂಸ್ಥೆಯೊಂದು ನಡೆಸುತ್ತಿದ್ದ ಬೈಬಲ್ ಪರಿಚಯವಾದ ಕೋರ್ಸ್‌ವೊಂದನ್ನು ಅಂಚೆ ಮೂಲಕ ನಾನು ಪೂರೈಸಿದ್ದೆ. ಈ ವಿಷಯವನ್ನು ನೇಮಿನಾಥಯ್ಯ, ವಸಂತರಾಜಯ್ಯನವರಲ್ಲಿ ಪ್ರಸ್ತಾಪಿಸಿ, ಜೈನಧರ್ಮ - ಜೈನಸಾಹಿತ್ಯವನ್ನು ಜನಸಾಮಾನ್ಯ ಜೈನರಿಗೆ ಹಾಗೂ ಜೈನೇತರರಿಗೆ ತಿಳಿಸಲು ಉಚಿತ ಪರೀಕ್ಷೆಗಳನ್ನು ನಡೆಸಿ ಜೈನಧರ್ಮ ಪರಿಚಯ ಕಾರ್ಯಕ್ರಮ ಮಾಡಬಹುದಲ್ಲಾ ಎಂದಾಗ - ನನಗೆ ಹೈಸ್ಕೂಲಿನಿಂದ (೧೯೫೩ ರಿಂದ) ಕನ್ನಡ ಮಾರ್ಗದರ್ಶಕರಾಗಿ ಜೈನಸಾಹಿತ್ಯಾಸಕ್ತಿ ಮೂಡಿಸಿದ ಜೈನವಿದ್ವಾಂಸರಾದ ಡಿ. ಪದ್ಮನಾಭ ಶರ್ಮರು ಈ

ಯೋಜನೆಯನ್ನು ಮೆಚ್ಚಿ ಸರಳ ಜೈನಧರ್ಮ ಪರಿಚಯದ ಪಠ್ಯಗಳನ್ನು ಬರೆದುಕೊಟ್ಟರು. ಅದರೊಂದಿಗೆ ನಾನು ಮೂಲ ರತ್ನಕರಂಡಕ ಶ್ರಾವಕಾಚಾರ (ಸರಳ ಪಠ್ಯ ಪರಿಚಯದೊಂದಿಗೆ) ಉತ್ತಮ ಕ್ಷಮಾಧರ್ಮ, ರತ್ನಾಕರ ಶತಕತ್ರಯ (ವಿ. ಶಾಂತಿರಾಜಶಾಸ್ತ್ರಿ)ಗಳ ಶತಕತ್ರಯದ ಭಾವದೀಪಿಕೆ ಮತ್ತು ಜಿ.ಬ್ರಹ್ಮಪ್ಪನವರ ರತ್ನಾಕರನ ಶತಕಸಾಹಿತ್ಯ ಹಾಗೂ ಇತರ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ಸರಳವಾಗಿ ಮೂಲ ಮತ್ತು ಭಾವಾನುವಾದವನ್ನು ಟಿಪ್ಪಣಿಗಳೊಂದಿಗೆ ಮಹಾವೀರ ಮಿಷನ್ನಿನ ವಿದ್ಯಾರ್ಥಿಗಳಿಗಾಗಿ ಪರೀಕ್ಷೆ ಪಠ್ಯವಾಗಿ ಸಿದ್ಧಪಡಿಸಿದೆ. ನೇಮಿನಾಥಯ್ಯನವರ ಪದ್ಮಾಂಬಾ ಪ್ರೆಸ್ (ನೆಟ್ಟಕಲ್ಲಪ್ಪ ಸರ್ಕಲ್ ಬಳಿ ಇತ್ತು)ನಲ್ಲಿ ಶತಕತ್ರಯ ಅಚ್ಚಾಗಿ ಪುಸ್ತಕವಾಗಿ ಪ್ರಕಟವಾಗುವ ಕಾಲಕ್ಕೆ ಶತಕತ್ರಯದ ಪ್ರಕಾಶಕರು ನಿಧನರಾಗಿ ಪುಸ್ತಕ ಪ್ರಕಟವಾಗಲಿಲ್ಲ. ಕರಡು ತಿದ್ದಿದ ಪ್ರತಿ ನನ್ನಲ್ಲೇ ಉಳಿಯಿತು. ಆ ವೇಳೆಗೆ ಕಾರಣಾಂತರಗಳಿಂದ ಮಹಾವೀರ ಮಿಷನ್ ನಡೆಸುತ್ತಿದ್ದ ಜೈನಧರ್ಮ ಸಾಹಿತ್ಯ ಪರಿಚಯದ ಪರೀಕ್ಷೆಗಳು ನಿಂತು ಹೋದವು. ಹೀಗಾಗಿ ಆಗ (೧೯೭೫ರಲ್ಲಿ) ಸಿದ್ಧಪಡಿಸಿದ ರತ್ನಾಕರನ ಮೂರು ಶತಕಗಳು ಮೂಲ ಅನುವಾದ ಟಿಪ್ಪಣಿಗಳ ಸಹಿತ ಇದೀಗ ಮಿತ್ರರಾದ ಹಾಸ್ಯಸಾಹಿತಿ ರಾಮನಾಥ್ ಮತ್ತು ಬಿಎಸ್. ಮಧುರವರು ನ್ಯೂ ವೇವ್ ಬುಕ್ಸ್ ಪ್ರಕಾಶನದಿಂದ ಪ್ರಕಟಿಸಲು ನೆರವಾಗಿದ್ದಾರೆ.

ಕನ್ನಡದಲ್ಲಿ ಅತ್ಯಂತ ಜನಪ್ರಿಯ ಶತಕದ ಕವಿಗಳಲ್ಲಿ ಒಬ್ಬ ರತ್ನಾಕರವರ್ಣಿ ಮಹಾಕವಿ. ಈತನ ಭರತೇಶ ವೈಭವ ಕನ್ನಡದ ಮೇರುಕೃತಿಗಳಲ್ಲಿ ಒಂದಾಗಿದೆ. ಸಾಹಿತ್ಯ ಪ್ರಿಯರಿಗೆ ಭರತೇಶ ವೈಭವದ ಕವಿಯೆಂದೇ ರತ್ನಾಕರವರ್ಣಿ ಪ್ರಸಿದ್ಧನಾಗಿದ್ದಾನೆ. ಹಾಗೆಯೇ ಜನಸಾಮಾನ್ಯರಲ್ಲಿ ಜನಪ್ರಿಯ ಶತಕಕಾರರೆಂದರೆ ಹರಿಹರ, ರತ್ನಾಕರ, ಸೋಮೇಶ್ವರ, ಶತಕರತ್ನತ್ರಯರು.

ರತ್ನಾಕರನನ್ನು ಕುರಿತು ಕೃತಿಗಳನ್ನು ಕುರಿತು ಹತ್ತಾರು ವಿಮರ್ಶಾ ಗ್ರಂಥಗಳು ಲೇಖನಗಳು ಕನ್ನಡದಲ್ಲಿ ಪ್ರಕಟವಾಗಿವೆ. ಈ ಪೈಕಿ ರತ್ನಾಕರನ ಶತಕತ್ರಯವನ್ನು ಅಚ್ಚುಕಟ್ಟಾಗಿ ಟೀಕೆಸಹಿತ ೩ ಓಲೆಗರಿಗಳ ಪಾಠಾಂತರಗಳೊಂದಿಗೆ ಮೊದಲಬಾರಿಗೆ ಕನ್ನಡಕ್ಕೆ ತಂದವರು ಪಂಡಿತ ವಿ. ಶಾಂತರಾಜ ಶಾಸ್ತ್ರಿಗಳು. ರತ್ನಾಕರನ ಶತಕಾಭ್ಯಾಸಿಗಳಿಗೆ ಈಗಲೂ ಕೈದೀವಿಗೆಯ ಗ್ರಂಥವಾಗಿದೆ. ನಾನು ಈ ಗ್ರಂಥವನ್ನು ರಚಿಸುವಲ್ಲಿ ಮುಖ್ಯ ಆಕರಗ್ರಂಥವನ್ನಾಗಿ ಅದನ್ನಿಟ್ಟುಕೊಂಡಿದ್ದೇನೆ. ಅವರಿಗೆ ನಾನು ಚಿರಋಣಿ. ಅನಂತರ ಈ ಶತಕತ್ರಯರಲ್ಲಿ ಮೊದಲಿನ ಎರಡು ಶತಕಗಳನ್ನು ಕುರಿತು ಎ. ನಾಗರಾಜ್ ಜೈನ ವಿದ್ವಾಂಸರು ಮೂಲ ಅನ್ವಯ, ತಾತ್ಪರ್ಯದೊಡನೆ ಪ್ರಕಟಿಸಿದರು. ಈಚೆಗೆ ಕನ್ನಡ ಸಾಹಿತ್ಯ ಪರಿಷತ್ತು ಅವರ ರತ್ನಾಕರ ಶತಕವನ್ನು ಪುನರ್ಮುದ್ರಿಸಿದೆ. (ಅಪರಾಜಿತೇಶ್ವರ ಶತಕ ಪ್ರತ್ಯೇಕವಾಗಿ ಪುನರ್ಮುದ್ರಣವಾಗಿಲ್ಲ). ತ್ರಿಲೋಕಶತಕವನ್ನು ಕುರಿತು ಅವರು ಟೀಕೆ

ರಚಿಸಿದಂತಿಲ್ಲ. ಹೀಗಾಗಿ ಶಾಂತರಾಜ ಶಾಸ್ತ್ರಿಗಳ ರತ್ನಾಕರನ ಶತಕತ್ರಯವೊಂದೇ ಮೂಲ – ಅನುವಾದವಾಗಿ ಸಿಗುವ ಶುದ್ಧರೂಪದ ಪ್ರಕಟನೆ ಆಗಿದೆ.

ಈಚೆಗೆ ರತ್ನಾಕರನ ಶತಕತ್ರಯದ ಮೂಲ ಮತ್ತು ಟಿಪ್ಪಣಿ ಸಹಿತ ಸರಳಾನುವಾದ ಪ್ರಕಟನೆ ಯಾವುದೂ ಸುಲಭವಾಗಿ ಎಲ್ಲೆಡೆ ಮಾರುಕಟ್ಟೆಯಲ್ಲಿ ಸಿಗದಿರುವ ಕಾರಣ ಮೂಲ, ಅನುವಾದ, ವಿಸ್ತೃತ ಟಿಪ್ಪಣಿಗಳನ್ನು ಒಳಗೊಂಡ ಈ ಗ್ರಂಥವನ್ನು ಮೊದಲ ಬಾರಿ ಪ್ರಕಟಿಸಲಾಗಿದೆ. ರತ್ನಾಕರನ ಶತಕತ್ರಯ ಎಲ್ಲ ಕಾಲದಲ್ಲೂ ಎಲ್ಲಾ ಕನ್ನಡಿಗರೂ ಓದಲೇಬೇಕಾದ ಶತಕತ್ರಯ ಗ್ರಂಥವಾಗಿದೆ.

ಈಗ ಪ್ರಕಟವಾಗಿರುವ ಹಲವಾರು ಶತಕತ್ರಯದಲ್ಲಿ ಪದ್ಯಗಳ ಅನುಕ್ರಮಣಿಕೆಗಳಿಲ್ಲ ಅದನ್ನಿಲ್ಲಿ ಸಿದ್ಧಪಡಿಸಿಕೊಟ್ಟಿದೆ ಮತ್ತು ಪದ್ಯಗಳ ಅಕಾರಾದಿಗಳಲ್ಲಿ ನಾಗರಾಜ್ ಅವರ ಶತಕದ್ವಯಗಳಲ್ಲಿ (ರತ್ನಾಕರಶತಕ ಮತ್ತು ಅಪರಾಜಿತೇಶ್ವರ ಶತಕ) ಅಕಾರಾದಿ ಪಟ್ಟಿ ಸಿಗುತ್ತದೆ. ತ್ರಿಲೋಕ ಶತಕಕ್ಕೆ ಇಲ್ಲ. ಈ ಆವೃತ್ತಿಯಲ್ಲಿ ಮೊದಲ ಬಾರಿಗೆ ಮೂರು ಶತಕಗಳ ಅಕಾರಾದಿ ಮತ್ತು ಪದ್ಯಗಳ ಅನುಕ್ರಮಣಿಕೆಗಳನ್ನು ಕೊಟ್ಟಿದ್ದೇನೆ. ಇದರಿಂದ ಅಭ್ಯಾಸಿಗಳಿಗೆ ವಿದ್ವಾಂಸರಿಗೆ ಉಪಯುಕ್ತವೆಂದು ಭಾವಿಸಿದ್ದೇನೆ.

ರತ್ನಾಕರ ಶತಕಗಳನ್ನು ಓದಿ ಹಾಡಿ ಉಪನ್ಯಾಸ ಮಾಡಿ ಜನರಲ್ಲಿ ಶತಕಗಳ ಬಗ್ಗೆ ಆಸಕ್ತಿ ಮೂಡಿಸುವ ಜೈನ ಸಾಹಿತ್ಯಾಭಿಮಾನಿಗಳಿದ್ದರು. ಶ್ರಾವಕರಾದ ಧರಣೇಂದ್ರಯ್ಯ, ನಾಗರಾಜ್ ವಿಮಲಾ ಮೊದಲಾದವರು ನೆನಪಾಗುತ್ತಾರೆ. ಕೆಲವು ಗಮಕಿಗಳು ರತ್ನಾಕರ ಶತಕದ ಗಮಕವಾಚನ ಮಾಡಿ ಜನಪ್ರಿಯಗೊಳಿಸಿದ್ದಾರೆ. ಆದರೆ ಇದು ಸಾಲದು. ರತ್ನಾಕರ ಶತಕಗಳನ್ನು ಗಮಕವಾಚನ ವ್ಯಾಖ್ಯಾನ ಕಾರ್ಯಕ್ರಮಗಳನ್ನು ಉಪನ್ಯಾಸಮಾಲೆಗಳನ್ನು ಉದಾರಿಗಳು ಜೈನಧರ್ಮೀಯರು, ಜೈನಸಾಹಿತ್ಯಾಭಿಮಾನಿಗಳು ಹೆಚ್ಚು ಹೆಚ್ಚಾಗಿ ಏರ್ಪಡಿಸಿದರೆ ರತ್ನಾಕರ ಮತ್ತೆ ಜನಮಾನಸದಲ್ಲಿ ಜನಪ್ರಿಯನಾಗುತ್ತಾನೆ. ಈ ಸಂದರ್ಭದಲ್ಲಿ ರತ್ನಾಕರನ ಹಾಡುಗಳನ್ನು ಪ್ರಚಾರಕ್ಕೆ ತರುವುದು ಬಳಸಿಕೊಳ್ಳುವುದು ಅಗತ್ಯವಾಗಿದೆ.

ಈ ಗ್ರಂಥಾರ್ಪಣೆಗೆ ಬೇಕಾಗಿದ್ದ ಜೈನಮಿತ್ರರ ಫೋಟೋಗಳನ್ನು ಒದಗಿಸಿಕೊಟ್ಟ ಜೈನಸಾಹಿತಿ ಡಾ॥ ಎಸ್.ವಿ. ಸುಜಾತ ಅವರಿಗೆ ನನ್ನ ಕೃತಜ್ಞತೆಗಳು. ಈ ಅನುವಾದ ರಚಿಸಲು ಪ್ರೋತ್ಸಾಹಿಸಿದ ಡಿ. ಪದ್ಮನಾಭ ಶರ್ಮರಿಗೆ, ನೇಮಿನಾಥಯ್ಯ, ವಸಂತರಾಜಯ್ಯ ಅವರಿಗೂ ಮಹಾವೀರ ಮಿಶನ್ನಿಗೂ ನಾನು ಕೃತಜ್ಞನಾಗಿದ್ದೇನೆ.

ಈಗಲೂ ಪಂಡಿತರತ್ನಂ ಎ.ಶಾಂತಿರಾಜ ಶಾಸ್ತ್ರಿಗಳ ಟ್ರಸ್ಟ್ ಅವರು ರತ್ನಾಕರ ಶತಕಗಳನ್ನು ಭಾವದೀಪಿಕೆಯೊಂದಿಗೆ ಪುನರ್ಮುದ್ರಣ ಮಾಡಿ ಜನಕ್ಕೆ ದೊರೆಯುವಂತೆ

ಮಾಡುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ. ಈ ಶತಕತ್ರಯವನ್ನು ಸಿದ್ಧಪಡಿಸುವಾಗ ನನ್ನಾಕೆ ಎಂ.ಆರ್. ಲಕ್ಷ್ಮೀದೇವಿ ನೀಡಿದ ಪ್ರೋತ್ಸಾಹವನ್ನು ನಾನು ನೆನೆಯಬೇಕಾದುದು ನನ್ನ ಕರ್ತವ್ಯವಾಗಿದೆ.

ಇನ್ನೊಂದು ಮಾತು. ನನಗೆ ಜೈನಧರ್ಮಾಸಕ್ತಿಯನ್ನೂ, ಜೈನಸಾಹಿತ್ಯದ ಅಧ್ಯಯನಕ್ಕೆ ಸ್ಫೂರ್ತಿ, ಮಾರ್ಗದರ್ಶನಗಳನ್ನೂ ನನ್ನ ಹೈಸ್ಕೂಲ್ ವಿದ್ಯಾಭ್ಯಾಸದ ಕಾಲದಿಂದಲೂ (೧೯೫೩) ತಾವು ದಿವಂಗತರಾಗುವ ದಿನದವರೆಗೂ (೧೯೯೫) ನಿರಂತರವಾಗಿ ನೀಡಿದವರು ಘನ ಜೈನಸಾಹಿತ್ಯ ವಿದ್ವಾಂಸರಾದ ಡಿ. ಪದ್ಮನಾಭಶರ್ಮರು. ಅವರನ್ನು ನಾನು ಸದಾ ಸ್ಮರಿಸುತ್ತಿರುತ್ತೇನೆ. ಕೇವಲ ಜ್ಞಾನೋಪದೇಶದಿಂದಷ್ಟೇ ಅಲ್ಲ, ಸಾತ್ವಿಕವೃತ್ತಿಯ ಸಾಧು ಮನೋಭಾವನೆ, ಸಜ್ಜನನಡೆನುಡಿಗಳಿಂದ ಹಾಗೂ ಜೈನಸಮಾಜದಲ್ಲಿ ವಿದ್ವತ್ತಿನಿಂದ ಗಣ್ಯರಾಗಿದ್ದ ಪುಣ್ಯಜೀವಿಗಳು ಅವರು. ಅವರ ಸತತ ಸಾನ್ನಿಧ್ಯದಿಂದ ನನ್ನ ಜನ್ಮ ಪುನೀತವಾಗಿದೆ. ಆ ನನ್ನ ಆರಾಧ್ಯದೈವಕ್ಕೆ ನನ್ನ ಶತಶತ ನಮನಗಳು.

ಇದೀಗ ಅನುವಾದ, ಟಿಪ್ಪಣಿಗಳೊಂದಿಗೆ ೧೯೭೫ರಲ್ಲಿ ಅಚ್ಚಿಗೆ ಸಿದ್ಧವಾಗಿದ್ದ ಈ ಕೃತಿಯನ್ನು ಪರಮಮಿತ್ರರೂ, ಅಣಕು ಹಾಸ್ಯಗಾರರೂ ಆಗಿರುವ ರಾಮನಾಥರು ನ್ಯೂ ವೇವ್ ಬುಕ್ಸ್ ಪ್ರಕಾಶನದಿಂದ ಬೆಳಕಿಗೆ ತರಲು ನೆರವಾಗಿದ್ದಕ್ಕೆ ಅವರಿಗೆ ನಾನು ಆಭಾರಿ ಆಗಿದ್ದೇನೆ. ಪುಟವಿನ್ಯಾಸ ಮಾಡಿದ ಪೇಜ್ ಡಿಸೈನರ್ಸ್‌ನವರಿಗೆ, ಮುಖಪುಟ ರಚಿಸಿದ ಚಂದ್ರಶೇಖರ್ ಹಾಗೂ ಅಂದವಾಗಿ ಮುದ್ರಿಸಿದ ಸೋಮಶೇಖರ್‌ರವರಿಗೆ ನನ್ನ ವಂದನೆಗಳು.

ಓದುಗರು ಲೋಪದೋಷಗಳನ್ನು ತಿಳಿಸಿದ್ದಲ್ಲಿ ಮುಂದಿನ ಮುದ್ರಣದಲ್ಲಿ ತಿದ್ದಿಕೊಳ್ಳಲು ಸಾಧ್ಯವಾಗುತ್ತದೆ.

ಈ ರತ್ನಾಕರವರ್ಣಿ ಶತಕತ್ರಯವನ್ನು ಕನ್ನಡ ಸಾಹಿತ್ಯಾಭ್ಯಾಸಿಗಳು, ಜೈನಬಾಂಧವರು ಕೊಂಡೋದಿ ಪ್ರೋತ್ಸಾಹಿಸಬೇಕೆಂದು ಕೋರುತ್ತೇನೆ.

೧೫-೦೧-೨೦೨೩ **ಜಿ. ಅಶ್ವತ್ಥನಾರಾಯಣ**
ಬೆಂಗಳೂರು ಸಂಪಾದಕ ಮತ್ತು ಅನುವಾದಕ

ಪ್ರಸ್ತಾವನೆ

ರತ್ನಾಕರ ಕವಿ – ಮೂರು ಶತಕಗಳು

ಕನ್ನಡ ಸಾಹಿತ್ಯದ ಕಾವ್ಯ ಜಗತ್ತಿನಲ್ಲಿ ಜೈನ ಮಹಾಕವಿಗಳು ಕೆಲವೇ ಮಂದಿ ಪಂಪ, ರನ್ನ, ಜನ್ನ, ಪೊನ್ನ, ನೇಮಿಚಂದ್ರ ಇವರ ಸಾಲಿಗೆ ಸೇರಿದವನು ರತ್ನಾಕರ ಮಹಾಕವಿ. ಪ್ರತಿಯೊಬ್ಬ ಮಹಾಕವಿ ಹಲವಾರು ಕೃತಿಗಳನ್ನು ರಚಿಸಿದ್ದರೂ ಪ್ರಕಟವಾಗಿ ಪ್ರಸಿದ್ಧವಾದ ಕೃತಿಗಳು ಒಂದೋ ಎರಡೋ. ಉದಾಹರಣೆಗೆ ಪಂಪನ 'ಆದಿಪುರಾಣ, ವಿಕ್ರಮಾರ್ಜುನ ವಿಜಯ'; ಜನ್ನನ 'ಯಶೋಧರ ಚರಿತ'; ನೇಮಿಚಂದ್ರನ 'ನೇಮಿಪುರಾಣ'; ಅಂತೆಯೇ ರತ್ನಾಕರ ಎಂದೊಡನೆ ಭರತೇಶ ವೈಭವ ಮಹಾಕಾವ್ಯ. ಇದರ ಜತೆಗೆ ರತ್ನಾಕರನ ಜನಪ್ರಿಯ ಕೃತಿಗಳೆಂದರೆ ಶತಕತ್ರಯ 'ರತ್ನಾಕರಶತಕ, ಅಪರಾಜಿತ ಶತಕ, ತ್ರಿಲೋಕ ಶತಕಗಳು'.

ನೂರಾರು ವರ್ಷಗಳಿಂದ ಜನಮಾನಸದಲ್ಲಿ ನೆಲೆಗೊಂಡ ಶತಕಗಳ ಪೈಕಿ ಸೋಮನಾಥನ ಸೋಮೇಶ್ವರ ಶತಕ, ವೀರಶೈವ ಕವಿ ಹರಿಹರನ ಶತಕಗಳಂತೆ ಜೈನಕವಿ ರತ್ನಾಕರನ ಶತಕಗಳು ಪಠ್ಯ ಗ್ರಂಥಗಳಲ್ಲಿ ಪದೇ ಪದೇ ಸಂಗ್ರಹರೂಪದಲ್ಲಿ ಪ್ರಕಟವಾಗುತ್ತಾ ಜನರ ನಾಲಿಗೆಯ ಮೇಲೆ ನಲಿದಾಡುತ್ತಿದೆ. ಆ ಪೈಕಿ ರತ್ನಾಕರ ಶತಕ ಪ್ರಸಿದ್ಧವಾಗಿದೆ. ಉಳಿದೆರಡು ಶತಕಗಳು ಇಷ್ಟೊಂದು ಜನಪ್ರಿಯವಿಲ್ಲ. ಏಕೆಂದರೆ ರತ್ನಾಕರನ ಶತಕದಲ್ಲಿ ಕಂಡುಬರುವ ಧರ್ಮಬೋಧೆ ಹಾಗೂ ಅಂತಸ್ಸತ್ವ ಉಳಿದ ಎರಡು ಶತಕಗಳಿಗಿಂತ ಅಧಿಕವಾಗಿದೆ.

ರತ್ನಾಕರನ ಶತಕತ್ರಯವನ್ನು ಮೊದಲಿಗೆ ಬೆಳಕಿಗೆ ಅನುವಾದದೊಡನೆ ತಂದವರು ಪ್ರಸಿದ್ಧ ಜೈನ ವಿದ್ವಾಂಸರಾದ ನ್ಯಾಯತೀರ್ಥ ಎ. ಶಾಂತಿರಾಜ ಶಾಸ್ತ್ರಿಗಳು. ೧೯೨೨ರಲ್ಲಿ ಶತಕತ್ರಯದಲ್ಲಿ ಎರಡನ್ನು ಅನುವಾದದೊಡನೆ ಇನ್ನೊಂದನ್ನು ಕಠಿಣ ಶಬ್ದಾರ್ಥಗಳೊಡನೆ (ತ್ರಿಲೋಕ ಶತಕ) ಪ್ರಕಟಿಸಿದರು. ೧೯೪೦ರಲ್ಲಿ ಶತಕತ್ರಯವನ್ನು ಪರಿಷ್ಕರಿಸಿ ೩ ಶತಕಗಳಿಗೂ ತಾತ್ಪರ್ಯ ಬರೆದು ಪ್ರಕಟಿಸಿದರು. ಆದರೆ ಮೊದಲ ಮುದ್ರಣದಲ್ಲಿ

ತಮಗೆ ದೊರೆತ ೩ ತಾಳೆಗರಿ ಪ್ರತಿಗಳಿಂದ ಪಾಠಾಂತರಗಳನ್ನು ಕೊಟ್ಟಿದ್ದರು. ಅದನ್ನು ನಂತರದ ಮುದ್ರಣಗಳಲ್ಲಿ ಕೈಬಿಟ್ಟಿದ್ದಾರೆ.

ಶಾಂತಿರಾಜಶಾಸ್ತ್ರಿಗಳು ತಮಗೆ ದೊರೆತ ೩ ಓಲೆಗರಿಗಳ ಪಾಠಾಂತರಗಳನ್ನು ಗಮನಿಸಿ, ಸೂಕ್ತವೆನಿಸಿದ ಪಾಠಗಳನ್ನು ತಮ್ಮ ಪಠ್ಯಕ್ಕೆ ಆರಿಸಿಕೊಂಡಿದ್ದಾರೆ. ಕೆಲವು ಪಾಠಾಂತರಗಳನ್ನು ತಾವೇ (ಊಹಾಪಾಠವಾಗಿ, ಶುದ್ಧಪಾಠವೆಂದು) ಕೊಟ್ಟಿದ್ದಾರೆ. ಆ ಪಾಠಗಳನ್ನು ಆಯಾ ಪುಟದಡಿ ಕೊಡುವಾಗ ಗ್ರಂಥಸಂಪಾದನಾ ಶಾಸ್ತ್ರಾನುಸಾರ, ಓಲೆಗರಿಗಳಿಗೆ ಸಂಕೇತಾಕ್ಷರ ನೀಡಿ ಯಾವ ಯಾವ ಓಲೆಯ ಪಾಠಗಳ ಯಾವುವು ಸ್ವೀಕೃತ ಪಾಠ ಯಾವುವು ಎಂಬುದನ್ನು ಖಚಿತಪಡಿಸಿಲ್ಲ. ಬಹುಶಃ ಆಧುನಿಕ ಗ್ರಂಥಸಂಪಾದನಾಶಾಸ್ತ್ರ ಅವರಿಗೆ ಪರಿಚಯವಾಗಿರಲಿಲ್ಲ. ಅವರಿಂದ ಈಚೆಗೆ ಯಾರೂ ಇನ್ನಷ್ಟು ರತ್ನಾಕರ ವರ್ಣಿಯ ಶತಕಗಳ ಹಸ್ತಪ್ರತಿಗಳನ್ನು ಸಂಪಾದಿಸಿ ಶುದ್ಧ ಪಾಠಗಳನ್ನು ನೀಡಲು ಪ್ರಯತ್ನಿಸಿಲ್ಲ. ಆದರೆ ಜಿ.ಬ್ರಹ್ಮಪ್ಪನವರು ರತ್ನಾಕರನ ಶತಕಗಳ ವಿಶೇಷ ಅಧ್ಯಯನ ಮಾಡಿ, ಶಾಂತಿರಾಜ ಶಾಸ್ತ್ರಿಗಳ ಪಾಠಗಳನ್ನು ಪುನರ್ವಿಮರ್ಶಿಸಿದ್ದಾರೆ. ತಮ್ಮ ಪಠ್ಯದಲ್ಲಿ ತಮ್ಮದೇ ಆದ ಕೆಲವು ಪಾಠಗಳನ್ನು ನೀಡಿದ್ದಾರೆ. ಕೆಲವು ಕಡೆ ಓಲೆಗರಿಪಾಠವನ್ನು ಒಪ್ಪಿದ್ದಾರೆ. ಆದರೆ ಇವುಗಳನ್ನು ಸ್ಪಷ್ಟಪಡಿಸಿಲ್ಲ. ಬಹುಮಟ್ಟಿಗೆ ಶಾಂತಿರಾಜ ಶಾಸ್ತ್ರಿಗಳ ಪಾಠವನ್ನೇ ಅಂಗೀಕರಿಸಿದ್ದಾರೆ. ನಾನು ಇದೆಲ್ಲವನ್ನು ಗಮನಿಸಿ, ನನಗೆ ಸೂಕ್ತವೆನಿಸಿದ ಪಾಠವನ್ನು ಅಂಗೀಕರಿಸಿದ್ದೇನೆ. ಸಾಕಷ್ಟು ಟಿಪ್ಪಣಿಗಳನ್ನು ಪದ್ಯಗಳ ಬಗ್ಗೆ ನೀಡಿದ್ದೇನೆ. ಶಾಂತಿರಾಜ ಶಾಸ್ತ್ರಿಗಳ ೨ನೇ ಮುದ್ರಣದ (೧೯೪೧) ಪಠ್ಯವನ್ನು ಆಧಾರ ಪಠ್ಯವಾಗಿಟ್ಟುಕೊಂಡಿದ್ದೇನೆ. ಮೊದಲ ಬಾರಿಗೆ ಮೂರು ಶತಕಗಳಿಗೂ ಪದ್ಯಾನುಕ್ರಮಣಿಕೆಗಳನ್ನೂ, ಅಕಾರಾದಿಗಳನ್ನೂ ಸಿದ್ಧಪಡಿಸಿದ್ದೇನೆ. ಶಾಂತಿರಾಜ ಶಾಸ್ತ್ರಿಗಳು ಪಠ್ಯದ ಸಾಲಿನ ಕೊನೆಯಲ್ಲಿ ಪದವಿಚ್ಛೇದವಿದ್ದಾಗ – ಗೆರೆ ಎಳೆದಿದ್ದಾರೆ. ಈ ಕ್ರಮವನ್ನು ಅನುಸರಿಸಿದ್ದೇನೆ. ಜಿ.ಬ್ರಹ್ಮಪ್ಪನವರು ಈ ಕ್ರಮವನ್ನು ಅನುಸರಿಸಿಲ್ಲ.

ಶಾಂತಿರಾಜ ಶಾಸ್ತ್ರಿಗಳ ಈ ಶತಕಗಳ ಅನುವಾದದ ಬಗೆಗೆ ಹೇಳಿದ ಮಾತುಗಳಿವು: "ಪಠ್ಯಗಳಲ್ಲಿರುವ ಪದಗಳನ್ನೂ ಅವುಗಳ ವಿಭಕ್ತಿಗಳನ್ನೂ ಅನುಸರಿಸಿ ಪದಶಃ ಅರ್ಥಮಾಡಿಕೊಳ್ಳುವುದಕ್ಕೆ ಅನುಕೂಲವಾಗುವಂತೆ ಅಭಿಪ್ರಾಯವು (ತಾತ್ಪರ್ಯ) ಬರೆಯಲ್ಪಟ್ಟಿದೆ". ಮೂರನೆಯ ಶತಕ ತ್ರಿಲೋಕ ಶತಕವು ಕಂದರೂಪವಾಗಿದ್ದು ಗ್ರಂಥವು ಸುಲಭ ಶೈಲಿಯಲ್ಲಿ ಇರುವುದರಿಂದ ಇದಕ್ಕೆ ತಾತ್ಪರ್ಯವನ್ನು ಬರೆಯುವುದಕ್ಕೆ ನಾವು ಪ್ರಯತ್ನಪಡಲಿಲ್ಲ. ಆದರೆ ಕೆಲವು ಕಠಿಣ ಪದಗಳಿಗೆ ಮಾತ್ರ ಪ್ರತಿಪದಗಳನ್ನು ಬರೆದಿರುತ್ತೇನೆ." (ಮೊದಲ ಮುದ್ರಣ ೧೯೨೨ ಉಪೋದ್ಘಾತ) ೧೯೨೨ರ ಪ್ರತಿಯನ್ನು ಪರಿಷ್ಕರಿಸಿ ಶತಕತ್ರಯವನ್ನು ತಾತ್ಪರ್ಯಗಳೊಡನೆ ೧೯೪೧ರಲ್ಲಿ ದ್ವಿತೀಯ ಮುದ್ರಣ ಪ್ರಕಟಿಸಿದರು. ಇದನ್ನು ಅನುಕರಿಸಿ ಅನಂತರ ಹಲವಾರು ಪುನರ್ಮುದ್ರಣಗಳಾಗಿವೆ.

ಪ್ರಕೃತ ನಾನು ರತ್ನಾಕರನ ಮೂರು ಶತಕಗಳನ್ನು ಅನುವಾದಿಸುವಲ್ಲಿ ಶಾಂತಿರಾಜ ಶಾಸ್ತ್ರಿಗಳ ೧ ಮತ್ತು ೨ನೆಯ ಮುದ್ರಣಗಳ ಅನುವಾದಕ್ಕೆ ಋಣಿ ಆಗಿದ್ದೇನೆ. ಜಿ. ಬ್ರಹ್ಮಪ್ಪ ಮತ್ತು ಎ.ಆರ್. ನಾಗರಾಜ್ ಮೊದಲಾದವರ ಅನುವಾದಗಳ ನೆರವನ್ನೂ ಪಡೆದಿದ್ದೇನೆ. ಅವರಿಗೆ ನನ್ನ ವಂದನೆಗಳು.

ರತ್ನಾಕರ ಶತಕತ್ರಯ : ರತ್ನಾಕರನ ಭರತೇಶ ವೈಭವ ಮಹಾಕಾವ್ಯ ಕನ್ನಡಕ್ಕೆ ರತ್ನಾಕರ ನೀಡಿದ ಅಪೂರ್ವ ಕೊಡುಗೆಯಾಗಿದೆ. ಇದು ಬೃಹತ್ತಿನಲ್ಲೂ ಮಹತ್ತಿನಲ್ಲೂ ಅಸದೃಶವಾಗಿದೆ. ಜನಪ್ರಿಯವೂ ಆಗಿದೆ. ಪುನರ್ಮುದ್ರಣಗಳಾಗಿವೆ. ಪಠ್ಯವಾಗಿದೆ.

ಇನ್ನು ಶತಕ ಸಾಹಿತ್ಯದಲ್ಲಿ ಪ್ರಸಿದ್ಧವೂ ಜನಪ್ರಿಯವೂ ಆದ ಶತಕವೆಂದರೆ ರತ್ನಾಕರಶತಕ, ರತ್ನಾಕರನ ಇನ್ನೆರಡು ಶತಕಗಳು (ಅಪರಾಜಿತ ಶತಕ, ತ್ರಿಲೋಕ ಶತಕ) ತಮ್ಮದೇ ಆದ ವೈಶಿಷ್ಟ್ಯವನ್ನು ಹೊಂದಿವೆ.

ರತ್ನಾಕರನು ಮಹಾಕಾವ್ಯ, ಶತಕಗಳನ್ನಲ್ಲದೆ ಹಾಡುಗಳನ್ನೂ ಬರೆದಿದ್ದಾನೆ. ಅಣ್ಣನ ಹಾಡುಗಳು, ರತ್ನಾಕರನ ಅಣ್ಣನ ಪದಗಳು ಎಂದು ಪ್ರಸಿದ್ಧವಾದ ಈ ಹಾಡುಗಳಲ್ಲಿ ವಚನಕಾರರ ಪದಗಳ, ದಾಸರ ಕೀರ್ತನೆಗಳ ಪ್ರಭಾವ ನಿಚ್ಚಳವಾಗಿ ಕಾಣುತ್ತದೆ. ಒಟ್ಟಿನಲ್ಲಿ ೧ ಮಹಾಕಾವ್ಯ, ೩ ಶತಕಗಳು, ೧ ಕೀರ್ತನೆಗಳ ಸಂಗ್ರಹ – ಹೀಗೆ ಪಂಚಕೃತಿಗಳಿಂದ ರತ್ನಾಕರ ಪ್ರಸಿದ್ಧನಾಗಿದ್ದಾನೆ.

ರತ್ನಾಕರನ ಶತಕಗಳ ಶೈಲಿ ಮನಸೆಳೆಯುತ್ತದೆ. ಎ. ಶಾಂತಿರಾಜ ಶಾಸ್ತ್ರಿಗಳು ಈ ಬಗೆಗೆ ಹೇಳುವ ಮಾತುಗಳಿವು: "ಈ ಶತಕದ ಕವಿತೆಗಳು ದ್ರಾಕ್ಷಾಪಾಕದಂತಿದೆ. ಲಲಿತ ಪದಗಳ ಗುಂಫನವೂ, ಶ್ರುತಿಮಧುರವೂ, ಅರ್ಥಪೂರ್ಣವೂ ಆಗಿದ್ದು ಬರಹ, ಭಾಷಣ, ಸಂಭಾಷಣ, ಸಂದರ್ಭಗಳಿಗೆ ತಕ್ಕಂತೆ ಸೂಕ್ತಿ ನುಡಿಗಳನ್ನಾಗಿ ಬಳಸುವಂತೆ ನುಡಿಗಳಿಂದ ಕೂಡಿದೆ. ಓದಲು ವಿಶೇಷ ಶೋಭೆಯಿಂದ ಮನೋರಂಜಕತೆ ಉಂಟುಮಾಡುತ್ತದೆ. ಈ ಮಾತಿಗೆ ನಿದರ್ಶನವಾಗಿ ಒಂದೆರಡು ಪದ್ಯಗಳನ್ನು ಗಮನಿಸಬಹುದು.

ತ್ರಿಜಗತ್ಸ್ವಾಮಿ ಜಿನೇಂದ್ರ ಸಿದ್ಧ ಶಿವಲೋಕಾರಾಧ್ಯ ಸರ್ವಜ್ಞ ಶಂ
ಭು ಜಗನ್ನಾಥ ಜಗತ್ಪಿತಾಮಹ ಹರ ಶ್ರೀಕಾಂತ ವಾಣೀಶ ವಿ
ಷ್ಣು, ಜಿತಾನಂಗ ಜಿನೇಶ ಪಶ್ಚಿಮ ಸಮುದ್ರಾಧೀಶ್ವರ ಬೇಗದಿಂ
ನಿಜಮಂ ತೋರು ದಯಾಳುವೇ ತಳುವಿದೇಂ? ರತ್ನಾಕರಾಧೀಶ್ವರಾ

[ರತ್ನಾಕರಶತಕ ಪದ್ಯ ೧೨೬]

ಚೆಲುವರ ಚೆಲ್ವ, ಚೆನ್ನಿಗರ ಚೆನ್ನ, ಸುವೀರರ ವೀರ, ಸತ್ಕಲಾ
ಬಲರ ಬಲಾಢ್ಯ, ಬಲ್ಲಿದರ ಬಲ್ಲಿದ, ದೇವರ ದೇವ, ನೀತಿ ನಿ

ರ್ಮಲರ ನಿಧಾನ, ನಿಚ್ಚ ಮದುವಕ್ಕಳ ಮಾಣಿಕ ಕಾಂತಿ, ಶಾಂತಿ ಶೀ
ತಲರ ಶಿರೋಮಣಿ, ನಿನಗೆ ಪಾಸಟಿ ಯಾರಪರಾಜಿತೇಶ್ವರಾ ?

[ಅಪರಾಜಿತ ಶತಕ ಪದ್ಯ ೧೨೩]

ಪ್ರಣವ ಸ್ವರೂಪ ತೇ ನಮ
ರಣದೂರ ನಮೋ ನಮೋ ನಮೋಸ್ತು ಸ್ವಾಹಾ,
ಗುಣಗುಣಿಯೋಗಾಯ ನಮೋ,
ಮಣಿತ್ರಯೈಕಾರ್ಥನೇ ಚಿದಂಬರ ಪುರುಷಾ

[ತ್ರಿಲೋಕಶತಕ ಪದ್ಯ ೧೨೬]

ಛಂದಸ್ಸು : ಪ್ರತಿಯೊಂದು ಶತಕದಲ್ಲೂ ೧೨೮ ಪದ್ಯಗಳಿವೆ. ರತ್ನಾಕರ ಶತಕವನ್ನು ವೈರಾಗ್ಯ ನೀತಿ ಆತ್ಮವಿಚಾರಗಳನ್ನು ಶಾರ್ದೂಲ ವಿಕ್ರೀಡಿತ ಮತ್ತು ಮತ್ತೇಭ ವಿಕ್ರೀಡಿತ ವೃತ್ತಗಳ ಛಂದಸ್ಸಿನಲ್ಲಿ ರಚಿಸಲಾಗಿದೆ.

ಅಪರಾಜಿತ ಶತಕವನ್ನು ಉತ್ಪಲಮಾಲಾ ಮತ್ತು ಚಂಪಕಮಾಲಾ ವೃತ್ತಗಳಲ್ಲಿ ರಚಿಸಲ್ಪಟ್ಟಿದೆ.

ತ್ರಿಲೋಕಶತಕವು ತ್ರಿಲೋಕಾಕೃತಿ – ಭೂಗೋಳವನ್ನು ಬಲು ಸೊಗಸಾಗಿ ಕಂದ ಪದ್ಯಗಳಲ್ಲಿ ರಚಿಸಲಾಗಿದೆ.

ಧರ್ಮ ಸಾದೃಶ್ಯ : ರತ್ನಾಕರ ಶತಕ ಬಹು ಜನಪ್ರಿಯವಾಗಲು ಹಲವು ಕಾರಣಗಳಲ್ಲಿ ಒಂದೆಂದರೆ ಅದರಲ್ಲಿ ಕಂಡುಬರುವ ಧರ್ಮಸಹಿಷ್ಣುತೆ, ಅನ್ಯಮತ ಖಂಡನೆ ಕಂಡುಬರದಿರುವುದು. ಉದಾಹರಣೆಗೆ: ಜೈನ ವೈದಿಕ ಧರ್ಮಗಳ ಸಾದೃಶ್ಯಾಂಶಗಳ ಉಲ್ಲೇಖಗಳನ್ನು ಗಮನಿಸಬಹುದು.

ಪದ್ಯ ೧೨೬ರಲ್ಲಿ ತ್ರಿಜಗತ್ಸ್ವಾಮಿ, ಜಿನೇಂದ್ರ ಸಿದ್ಧ, ಶಿವಲೋಕಾರಾಧ್ಯ ಸರ್ವಜ್ಞ, ಶಂಭು ಜಗನ್ನಾಥ.... ಎಂಬ ಮಾತಿಗೂ ಕೈದಾಳ ಶಾಸನ ಪದ್ಯದಲ್ಲಿ ಕಂಡುಬರುವ "ಶಿವಾಯಧಾತ್ರೇ, ಸುಗತಾಯ ವಿಷ್ಣುವೇ, ಜಿನಾಯ ತಸ್ಮೈ, ಸಕಲಾತ್ಮನೇ ನಮಃ" ಮಾತಿಗೆ ಸಾದೃಶ್ಯವಿರುವುದನ್ನು ಕಾಣಬಹುದು.

ಇನ್ನೊಂದು ನಿದರ್ಶನವೆಂದರೆ: "ಬಿಸಲಿಂ ಕಂದದ, ಬೆಂಕಿಯಿಂ ಸುಡದ, ನೀರಿನಿಂ ನಂದದ... ಎಂಬ ಮಾತು (ರತ್ನಾಕರಶತಕ ಪದ್ಯ ೮) ಭಗವದ್ಗೀತೆಯ "ನೈನಂ ಛಿಂದಂತಿ ಶಸ್ತ್ರಾಣಿ ನೈನಂದಹತಿ ಪಾವಕಃ ...... (ಗೀತೆ ಅ ಶ್ಲೋ) ಎಂಬ ಶ್ಲೋಕಕ್ಕೆ ಸದೃಶವಾಗಿದೆ.

ಜಿ. ಬ್ರಹ್ಮಪ್ಪನವರು ಹೇಳಿದ ಮಾತು ಗಮನಿಸುವಂತಿದೆ: "೧೨ನೇ ಶತಮಾನ ದಿಂದೀಚೆಗೆ ಬಂದ ಕನ್ನಡ ಕವಿಗಳಲ್ಲಿ ಅನ್ಯಧರ್ಮವನ್ನು ಅವಹೇಳನ ಮಾಡದೇ ಸ್ವಧರ್ಮದ ಮಹಿಮೆಯನ್ನು ಎಲ್ಲ ಮತೀಯರೂ ತಲೆದೂಗುವಂತೆ ಬಿತ್ತರಿಸಿದ ಪುಣ್ಯಾತ್ಮ ರತ್ನಾಕರ" ಎಂದಿರುವ ಮಾತು ಸಮಂಜಸವಾಗಿದೆ.

ಅಪರಾಜಿತಶತಕ ರತ್ನಾಕರಶತಕದ ನಂತರ ರಚಿಸಿದ್ದೆಂದು ಹೇಳಲಾಗಿದೆ. ಆತ್ಮಾನುಸಂಧಾನದಲ್ಲಿ ತನ್ಮಯನಾಗಿರುವ ಸ್ಥಿತಿಯಲ್ಲಿದ್ದಾಗ ರತ್ನಾಕರ ಬರೆದ ಶತಕವಿದು ಎಂದು ವಿದ್ವಾಂಸರ ಅಭಿಪ್ರಾಯ. ಜಿ. ಬ್ರಹ್ಮಪ್ಪನವರು ಹೇಳುವಂತೆ "ರತ್ನಾಕರನ ಶತಕ ಸಾಗಾರ ಶತಕವಾದರೆ ಅಪರಾಜಿತ ಶತಕ ಅನಾಗಾರ ಶತಕವಾಗಿದೆ. ಗೃಹಸ್ಥರ ಚಾರಿತ್ರದಲ್ಲಿ ಕಂಡುಬರುವ ಕುಂದುಕೊರತೆಗಳನ್ನು ತಿದ್ದಲು ಬರೆದದ್ದು ರತ್ನಾಕರ ಶತಕ. ಅಪರಾಜಿತ ಶತಕದಲ್ಲಾದರೋ ಉದ್ದಕ್ಕೂ ಪರಮಾತ್ಮಕ ಸಂದರ್ಶನಕ್ಕೆ ಕಾತರಗೊಂಡ ಭಾವ ರಸಪೂರ್ಣವಾಗಿದೆ. ಅಪರಾಜಿತ ಶತಕದಲ್ಲಿ ಮುಖ್ಯವಾಗಿ ರತ್ನಾಕರನ ಹಂಸಾನುಭವ ಎದ್ದು ಕಾಣುತ್ತದೆ.

ತ್ರಿಲೋಕಶತಕವು ಕಂದಪದ್ಯ ರೂಪದಲ್ಲಿದ್ದರೆ ಈ ಶತಕದಲ್ಲಿ ಕವಿಯು ಜೈನ ಸಿದ್ಧಾಂತಾನುಸಾರ ಸಂಕ್ಷೇಪವಾಗಿ ಲೋಕವರ್ಣನೆ ಮಾಡಿದ್ದಾನೆ. ಕೇವಲ ಜೈನ ಸಿದ್ಧಾಂತವನ್ನೇ ನೇರವಾಗಿ ಈ ಗ್ರಂಥದಲ್ಲಿ ಪ್ರಸ್ತಾಪಿತವಾಗಿ ಶುದ್ಧಶಾಸ್ತ್ರ ಗ್ರಂಥ ಆದಕಾರಣ, ಉಳಿದೆರಡು ಶತಕಗಳಂತೆ ಜನಾದರಣೀಯವಾಗಲು ಸಾಧ್ಯವಾಗಿಲ್ಲ. ಕವಿರತ್ನಾಕರ ಭರತೇಶವೈಭವವನ್ನು ರಚಿಸಿದ ಮೇಲೆ ಸುಮಾರು ೨೫ ವರ್ಷಗಳ ನಂತರದಲ್ಲಿ ತ್ರಿಲೋಕಶತಕವನ್ನು ರಚಿಸಿದನೆಂದು ಹೇಳಲಾಗಿದೆ. ಉಳಿದೆರಡು ಶತಕಗಳಲ್ಲಿ ಕಂಡುಬರುವಂತೆ 'ಅಂಕಿತ ಬಳಕೆ' ಇಲ್ಲಿಲ್ಲ ೧೨೮ ಪದ್ಯಗಳ ಈ ಶತಕವನ್ನು (ಕ್ರಿ.ಶ. ೧೫೫೭ರಲ್ಲಿ ರಚಿತವಾದದ್ದು) ಮೊದಲು ಬರೆದಿದ್ದು ಎಂದು ಕೆಲವರ ಅಭಿಪ್ರಾಯವಾಗಿದೆ. ಇನ್ನು ಕೆಲವರು ಕವಿಯ ಅಪರವಯಸ್ಸಿನ ಕೊನೆಯ ರಚನೆಯೆಂದು ಹೇಳುತ್ತಾರೆ.

ಒಟ್ಟಿನಲ್ಲಿ ಹೇಳುವುದಾದರೆ – ಈ ೩ ಶತಕಗಳನ್ನು ರಚಿಸಿದವನು ರತ್ನಾಕರ. ಇವುಗಳಲ್ಲಿ ಲೋಕಪ್ರಿಯ ಶತಕ ರತ್ನಾಕರ ಶತಕ ಎಂದು ಹೇಳಲು ಅಡ್ಡಿಯಿಲ್ಲ.

ರತ್ನಾಕರನ ಕಾಲ : ರತ್ನಾಕರನ ಜನನ–ಮರಣ ಕಾಲ, ಕೃತಿಗಳ ರಚನಾಕಾಲ ಖಚಿತವಾಗಿ ತಿಳಿಯದು. ಕೆಲವು ಆಧಾರಗಳ ಮೇಲೆ ಸುಮಾರು ಕಾಲವನ್ನು ಅಂದಾಜು ಮಾಡಲಾಗಿದೆ. ಗೋವಿಂದ ಪೈ, ನರಸಿಂಹಾಚಾರ್ಯ, ಎಸ್.ಜಿ. ನರಸಿಂಹಾಚಾರ್ ಮೊದಲಾದವರು ತಮ್ಮದೇ ರೀತಿಯಲ್ಲಿ ರತ್ನಾಕರನ ಜೀವನ – ಕೃತಿಗಳ ಕಾಲವನ್ನು ನಿರ್ಧರಿಸಿದ್ದಾರೆ. ತ್ರಿಲೋಕ ಶತಕದ ಅಂತ್ಯದಲ್ಲಿ ಕಂಡುಬರುವ ಕೃತಿರಚನಾಕಾಲದ ಪದ್ಯವನ್ನು ವಿಶ್ಲೇಷಿಸಿ, ಎಸ್.ಜಿ. ನರಸಿಂಹಾಚಾರ್ ಮತ್ತು ಎಂ.ಎ. ರಾಮಾನುಜ

ಅಯ್ಯಂಗಾರ್, ೧೫ನೇ ಶತಮಾನದ ಅಂತ್ಯ – ೧೬ನೆಯ ಶತಮಾನದ ಆದಿಭಾಗದ ಅವಧಿಯಲ್ಲಿದ್ದವನು ರತ್ನಾಕರ ಎಂದಿದ್ದಾರೆ. ಆರ್. ನರಸಿಂಹಾಚಾರ್ ೧೫೫೭ ಎಂದರೆ, ತ.ಸು.ಶಾಮರಾವ್ ಕ್ರಿ.ಶ. ೧೪೫೭ ಎಂದಿದ್ದಾರೆ. ಹೀಗೆ ಕಾಲ ವಿಚಾರದಲ್ಲಿ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ.

ಜಿ. ಬ್ರಹ್ಮಪ್ಪನವರು ರತ್ನಾಕರನ ಜೀವನ–ಕೃತಿಗಳ ಬಗ್ಗೆ ವಿಶೇಷ ಅಧ್ಯಯನ ಮಾಡಿ, ರತ್ನಾಕರನ ಕೃತಿ–ಜೀವನ ಕಾಲವನ್ನು ಹೀಗೆ ನಿರ್ಧರಿಸಿದ್ದಾರೆ.

ಜೀವನಕಥಾ

ರತ್ನಾಕರನ ಜನನ	– ಕ್ರಿ.ಶ. ಸು. ೧೫೬೨
ರತ್ನಾಕರ ವೀರಶೈವನಾದುದು	– ಕ್ರಿ.ಶ. ಸು. ೧೫೭೨
ರತ್ನಾಕರ ಮತ್ತೆ ಜೈನನಾದುದು	– ಕ್ರಿ.ಶ. ಸು. ೧೫೭೫
ರತ್ನಾಕರನ ಮರಣ	– ಕ್ರಿ.ಶ. ಸು. ೧೬೦೦ ರ ನಂತರ

ಕೃತಿಗಳ ಕಾಲ :

ತ್ರಿಲೋಕ ಶತಕದ ರಚನೆ	– ಕ್ರಿ.ಶ. ಸು. ೧೫೫೭
ಭರತೇಶವೈಭವದ ರಚನೆ	– ಕ್ರಿ.ಶ. ಸು. ೧೫೬೭
ರತ್ನಾಕರ ಶತಕದ ರಚನೆ	– ಕ್ರಿ.ಶ. ಸು. ೧೫೭೭
ಅಪರಾಜಿತ ಶತಕದ ರಚನೆ	– ಕ್ರಿ.ಶ. ಸು. ೧೫೮೨
ಅಧ್ಯಾತ್ಮ ಗೀತೆಗಳ ರಚನೆ	– ಕ್ರಿ.ಶ. ಸು. ೧೫೮೭

ಒಟ್ಟಿನಲ್ಲಿ ರತ್ನಾಕರವರ್ಣಿ ಕ್ರಿ.ಶ. ಸು. ೧೬ನೇ ಶತಮಾನದ ಮಧ್ಯಭಾಗದಲ್ಲಿ ಭೈರಸ ಒಡೆಯರ ಆಶ್ರಯದಲ್ಲಿದ್ದನು ಎಂದು ಹೇಳಬಹುದು.

ರತ್ನಾಕರನ ಜೀವನ : ರತ್ನಾಕರನ ಜೀವನದ ಬಗ್ಗೆ ನಮಗೆ ಸಿಗುವ ಐತಿಹ್ಯಗಳು ಎರಡು: ಮುಖ್ಯವಾಗಿ ದೇವಚಂದ್ರಕವಿಯ ರಾಜಾವಳಿಯ ಕಥೆಯಲ್ಲಿ (ಕ್ರಿ.ಶ.ಸು. ೧೮೩೮) ಬರುವ ರತ್ನಾಕರನ ವಿಚಾರ. ಇನ್ನೊಂದು ಭರತೇಶ ವೈಭವವನ್ನು ಸಂಪಾದಿಸಿರುವ ಉಗ್ರಾಣ ಮಂಗೇಶರಾಯರು ತಮ್ಮ ಗ್ರಂಥದ ಮುನ್ನುಡಿಯಲ್ಲಿ ಹೇಳಿರುವ ಪ್ರಸಂಗ. ಇವುಗಳಷ್ಟೇ ರತ್ನಾಕರನ ಜೀವನದ ಬಗ್ಗೆ ಕೆಲವು ಸಂಗತಿಗಳನ್ನು ಹೇಳುತ್ತವೆ: ದೇವಚಂದ್ರನು ತನ್ನ ರಾಜಾವಳಿ ಗ್ರಂಥದಲ್ಲಿ ರತ್ನಾಕರನ ಬಗ್ಗೆ ಹೇಳಿರುವ ಸಂಗತಿಗಳಿವು:

"ರತ್ನಾಕರನು ಸೂರ್ಯವಂಶದ ಕ್ಷತ್ರಿಯ ಪುತ್ರ ದೇವರಾಜನ ಮಗ. ಕಾರ್ಕಳದ ಭೈರಸವೊಡೆಯರ ಆಸ್ಥಾನದಲ್ಲಿ ಆಶ್ರಯ ಪಡೆದನು. ಶೃಂಗಾರ ಕವಿ ಎಂದು ಹೆಸರು ಗಳಿಸಿದನು. ಭೈರಸ ಒಡೆಯರ ಮಗಳನ್ನೇ ಮೋಹಿಸಿ ಅವಳೊಡನೆ ಕೂಡಿದನು. ಇದನ್ನು ತಿಳಿದ ಅರಸನು ಅವನನ್ನು ಸೆರೆಹಿಡಿಯಲು ಯತ್ನಿಸಿದಾಗ ತಲೆಯುಳಿಸಿಕೊಳ್ಳಲು ಹುಂಚಕ್ಕೆ ಹೋಗಿ ಮಹೇಂದ್ರಕೀರ್ತಿಗಳ ಕಾಲಿಗೆ ಬಿದ್ದು ಅಣು ವ್ರತಧಾರಿಯಾದನು. ಆಗ ವಿಜಯಣ್ಣನೆಂಬ ವಿಜಯ ಕೀರ್ತಿಗಳೆಂಬ ಪಟ್ಟಾಚಾರ್ಯರ ಶಿಷ್ಯನು ದ್ವಾದಶಾನುಪ್ರೇಕ್ಷೆಯೆಂಬ ಕನ್ನಡದ ಸಂಗೀತ ಕಾವ್ಯವನ್ನು ರಚಿಸಿದ್ದನ್ನು ಆನೆಯ ಮೇಲೆ ಮೆರವಣಿಗೆ ಮಾಡಿದರು. ಅದನ್ನು ಕಂಡ ರತ್ನಾಕರನು ಆ ಕಾವ್ಯವನ್ನು ಮೀರಿಸುವಂತೆ ಭರತೇಶ ವೈಭವ ಸಾಂಗತ್ಯ ಕಾವ್ಯವನ್ನು ರಚಿಸಿ ಗುರುಗಳ ಮುಂದಿಟ್ಟನು. ತನ್ನ ಕಾವ್ಯ ಅವನ ಕಾವ್ಯಕ್ಕೆ ಮಿಗಿಲಾದುದೆಂದು ಆನೆ ಮೆರವಣಿಗೆ ಮಾಡಬೇಕೆಂದು ಹೇಳಿದಾಗ ಈ ಭರತೇಶ ವೈಭವ ಕೃತಿಯಲ್ಲಿ ೩ ವಾಕ್ಯಗಳು ಪುರಾಣಕ್ಕೆ ವಿರೋಧವಾಗಿರುವುದರಿಂದ ಸಾಧ್ಯವಿಲ್ಲವೆಂದಾಗ ಆ ಬಗ್ಗೆ ವಾದ-ವಿವಾದಗಳಾಗಿ ಪಟ್ಟಾಚಾರ್ಯರು ರತ್ನಾಕರನಿಗೆ ಬಹಿಷ್ಕಾರ ಹಾಕಿ ೭೦೦ ಶ್ರಾವಕರ ಗೃಹಗಳಲ್ಲಿ ಚರಿಗೆಯಂ ಮಾಡದಿರಲು ನಿಜಾನುಜೆಯಿಂದಾಹಾರಮಂ ಕೊಳ್ಳುತ್ತೆ ಕೋಪಗೊಂಡು ಆತ್ಮಜ್ಞಾನಿಗೆ ಯಾವ ಕುಲವಾದರೇನೆಂದು ಲಿಂಗಮಂ ಕಟ್ಟಿಕೊಂಡು ವೀರಶೈವ ಶಾಸ್ತ್ರಂಗಳಂ ಬಸವಪುರಾಣಂ ಮೊದಲಾಗೆ ಮಾಡಿ ಕೆಲವು ದಿನಗಳ ನಂತರ ಉಪಶಮವಂ ತಾಳಿ ಸನ್ಮಾರ್ಗದೊಳ್ ನಡೆದು ಶತಕತ್ರಯ ಆಧ್ಯಾತ್ಮ ಗೀತೆಗಳಂ ರಚಿಸಿದನು." ದೇವಚಂದ್ರ ಹೇಳುವ ಈ ಘಟನೆಗಳ ಸತ್ಯಾಸತ್ಯತೆ ಬಗ್ಗೆ ಖಚಿತ ಸಂಶೋಧನೆಗಳಾಗಿಲ್ಲ. ಐತಿಹ್ಯಗಳಾಗಿಯೇ ಉಳಿದಿದೆ.

ಭರತೇಶ ವೈಭವವನ್ನು, ಸಂಪಾದಿಸಿದ ಉಗ್ರಾಣ ಮಂಗೇಶರಾಯರು ಅದರ ಮುನ್ನುಡಿಯಲ್ಲಿ ದೇವಚಂದ್ರನು ಹೇಳುವ ಕಥೆಗಿಂತ ಭಿನ್ನವಾಗಿ ರತ್ನಾಕರನ ಬಗ್ಗೆ ಹೇಳುತ್ತಾರೆ. "ಚಾರುಕೀರ್ತಿ ಯೋಗಿಯಿಂದ ಕೀರ್ತಿ ಗಳಿಸಿದ ರತ್ನಾಕರನಿಗೆ ಅಸೂಯೆಯಿಂದ ಕೆಲವು ಕುಹಕಿಗಳು ವೇಶ್ಯೆಯೊಬ್ಬಳನ್ನು ರತ್ನಾಕರನಿಗೆ ಗೊತ್ತಿಲ್ಲದ ಹಾಗೆ ಅವನ ಮನೆಯಲ್ಲಿ ಅಡಗಿಸಿ ಅಪಕೀರ್ತಿ ತಂದಾಗ ಅಪವಾದದಿಂದ ಬೇಸತ್ತ. ಬೇರೆ ಊರಿಗೆ ಹೋದಾಗ ಅಲ್ಲಿ ಶೈವಗ್ರಂಥವೊಂದನ್ನು ಆನೆ ಮೇಲೆ ಮೆರವಣಿಗೆ ಮಾಡಿದ್ದನ್ನು ಕಂಡು ಆ ಗ್ರಂಥ ನೀರಸವೆಂದು ಹೇಳಿ ಅದಕ್ಕೆ ಪ್ರತಿಸವಾಲಾಗಿ ಭರತೇಶವೈಭವ ರಚಿಸಿ ಮನ್ನಣೆ ಪಡೆದು ರಾಜನ ಕೋರಿಕೆಯಂತೆ ವೀರಶೈವ ಮತಾವಲಂಬಿಯಾದನೆಂದೂ; ಆದರೆ ತನ್ನ ಉತ್ತರಕ್ರಿಯೆ ಜೈನರೇ ನಡೆಸಬೇಕೆಂದು ಹೇಳಿದನೆಂದೂ" ಬರೆಯಲಾಗಿದೆ.

ಮೇಲಿನ ೨ ದಂತ ಕಥೆಗಳ ವಿನಾ ಅಧಿಕಾರಯುತವಾಗಿ ರತ್ನಾಕರನ ಜೀವನ ವೃತ್ತಾಂತಗಳು ತಿಳಿದುಬಂದಿಲ್ಲ.

ಒಟ್ಟಿನಲ್ಲಿ ರತ್ನಾಕರ ಮಹಾಕವಿಯಾಗಿ ಭರತೇಶವೈಭವ ಕಾವ್ಯವನ್ನು ಕನ್ನಡಕ್ಕೆ ಕೊಟ್ಟನು. ಶತಕತ್ರಯ ರಚಕನಾಗಿ ಕನ್ನಡದ ಶ್ರೇಷ್ಠ ಶತಕಕಾರನಲ್ಲಿ ಒಬ್ಬನಾಗಿದ್ದಾನೆ ಎಂದು ನಿಸ್ಸಂಶಯವಾಗಿ ಹೇಳಬಹುದು.

***

ಪ್ರಕಾಶಕರ ನುಡಿಕೆ

ಪ್ರೊಫೆಸರ್ ಜಿ. ಅಶ್ವತ್ಥನಾರಾಯಣರ ಮನೆಗೆ ಭೇಟಿಯಿತ್ತಾಗಲೆಲ್ಲ ನನ್ನಲ್ಲಿ ಮೂಡುವ ಸಂದೇಹವೆಂದರೆ, ಅವರ ನೆಲ ಅಂತಸ್ತಿನಲ್ಲಿರುವ ಪುಸ್ತಕಗಳಲ್ಲಿ ಹೆಚ್ಚು ವಿಷಯಗಳಿವೆಯೋ ಅಥವಾ ಅವರ ಮಸ್ತಕದಲ್ಲೋ ಎಂಬುದು. ಯಾವುದೇ ವ್ಯಕ್ತಿಯ, ವಿಷಯದ, ಸನ್ನಿವೇಶದ ಬಗ್ಗೆ ಕೇಳಿದರೂ ಉದಾಹರಣೆಗಳ ಸಹಿತ ವಿಸ್ತೃತವಾದ ವಿವರಣೆಯ ಮೂಲಕ ನಮ್ಮ ಸಂದೇಹಗಳನ್ನು ಇಲ್ಲವಾಗಿಸುವ ಅವರ ಜ್ಞಾನಭಂಡಾರಕ್ಕೆ ಬೆರಗಾಗಿದ್ದೇನೆ. ಕನ್ನಡದ ಸಾವಿರಾರು ಪದಗಳು ಅವರಿಗೆ ಕರತಲಾಮಲಕ. ಅವುಗಳ ವ್ಯುತ್ಪತ್ತಿಯಿಂದ ಹಿಡಿದು ಅವುಗಳು ಬಳಕೆಯಾಗಿರುವ ಗದ್ಯ, ಪದ್ಯ, ಚಂಪೂಗಳ ಪರಿಚಯವನ್ನು ತತ್ಕಾಲವೇ ಮಾಡಿಕೊಡುವ ಇವರ ನೆನಪಿನ ವಿಸ್ತಾರವೂ ಶ್ಲಾಘ್ಯವೇ.

ಅನಾಜಿ ಎಂದೇ ಖ್ಯಾತರಾದ ಪ್ರೊಫೆಸರ್ ಜಿ. ಅಶ್ವತ್ಥನಾರಾಯಣರು ಅನೇಕ ದಶಕಗಳಿಂದ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟ ಸಂಪರ್ಕ ಹೊಂದಿದವರು. ಪರಿಷತ್ತಿಗೆ ಭೇಟಿ ನೀಡುತ್ತಿದ್ದ ಸರ್ವ ಸಾಹಿತಿಗಳೂ ಅವರಿಗೆ ಪರಿಚಯವೇ. ಕಲ್ಲನ್ನೂ ಮಾತನಾಡಿಸಬಲ್ಲ ಅನಾಜಿಯವರಿಗೆ ಹಲವಾರು ಸಾಹಿತಿಗಳು ಹತ್ತಿರವಾದದ್ದು ಅಚ್ಚರಿಯೇನಲ್ಲ. ಅನಾಜಿ ಅವರ ಸಂಗಡ ಕಳೆದ ಸಮಯವನ್ನು ಅಲ್ಲಿಗೇ ಬಿಡದೆ ಅವುಗಳನ್ನೆಲ್ಲ ಮಸ್ತಕದಿಂದ ಪುಸ್ತಕಕ್ಕೆ ಇಳಿಸಿ, ಮುಂದಿನ ಪೀಳಿಗೆಗೆ ಆ ವ್ಯಕ್ತಿಗಳ ವಿಶೇಷತೆಗಳನ್ನು ಸಮರ್ಥವಾಗಿ ತಲುಪಿಸುವ ಕಾಯಕದಲ್ಲಿ ಹಲವಾರು ವರ್ಷಗಳಿಂದಲೂ ತೊಡಗಿಸಿಕೊಂಡಿದ್ದಾರೆ.

ಪ್ರಸ್ತುತ 'ಮೂರು ಶತಕಗಳು' ಅವರ ಅಧ್ಯಯನಶೀಲತೆ ಹಾಗೂ ಕಾರ್ಯತತ್ಪರತೆಗಳಿಗೆ ಹಿಡಿದ ದರ್ಪಣವಾಗಿದೆ. ಸರಿಸುಮಾರು ೧೯೭೦ರಲ್ಲಿಯೇ ಅಚ್ಚಿಗೆ ಸಿದ್ಧವಾಗಿದ್ದ ಪುಸ್ತಕವನ್ನು ಇನ್ನಷ್ಟು, ಮತ್ತಷ್ಟು ಪರಿಶೀಲಿಸಿ, ತಿದ್ದಿ, ತೀಡಿ ಈಗ ನಮ್ಮ ಪ್ರಕಾಶನದ ಅಡಿಯಲ್ಲಿ ಹೊರತರುತ್ತಿರುವುದು ನಮ್ಮ ಪ್ರಕಾಶನಕ್ಕೆ ಸಂದ ಗೌರವವೇ ಸೈ. ರತ್ನಾಕರನ ಶತಕತ್ರಯದ ಮೂಲ ಮತ್ತು ಟಿಪ್ಪಣಿ ಸಹಿತ ಸರಳಾನುವಾದ ಪ್ರಕಟಣೆ ಸುಲಭವಾಗಿ ಎಲ್ಲೆಡೆ ಮಾರುಕಟ್ಟೆಯಲ್ಲಿ ಸಿಗದಿರುವ ಕಾಲದಲ್ಲಿ ಮೂಲ,

ಅನುವಾದ, ವಿಸ್ತೃತ ಟಿಪ್ಪಣಿಗಳನ್ನು ಒಳಗೊಂಡ ಈ ಗ್ರಂಥವನ್ನು ಪ್ರೊ. ಜಿ. ಅಶ್ವತ್ಥನಾರಾಯಣ ರಚಿಸಿರುವುದು ಜೈನಸಾಹಿತ್ಯಾಸಕ್ತರಿಗೆ ರಸದೌತಣವೇ ಆಗುವುದು ನಿಶ್ಚಿತ. ಹಿಂದಿನ ಶತಕಗಳನ್ನು ಅತಿ ಸೂಕ್ಷ್ಮವಾಗಿ ಅಧ್ಯಯನ ಮಾಡಿ, ಅವುಗಳಲ್ಲಿ ಯಾವುದಾದರೂ ಛಂದಸ್ಸಿನ ಅಥವಾ ವ್ಯಾಕರಣದ ಲೋಪವು ಕಂಡುಬಂದಲ್ಲಿ ಅವುಗಳನ್ನು ಸಂಬಂಧಿತ ಪಂಡಿತರೊಡನೆ ಚರ್ಚಿಸಿ ಸರಿಪಡಿಸಿದ್ದಾರೆ. ಎಷ್ಟೋ ಟಿಪ್ಪಣಿಗಳಲ್ಲಿ ಇದ್ದ ಅಸ್ಪಷ್ಟ ಅಂಶಗಳನ್ನು ಸುಸ್ಪಷ್ಟಗೊಳಿಸಲು ಅವಶ್ಯವಾದ ಶ್ರಮ ವಹಿಸಿದ್ದಾರೆ.

ಜೈನಸಾಹಿತ್ಯದ ಪ್ರಮುಖ ಗ್ರಂಥಗಳ ಪೈಕಿ ಮಹಾಕವಿ ರತ್ನಾಕರವರ್ಣಿಯು ರಚಿಸಿದ ರತ್ನಾಕರಶತಕ, ಅಪರಾಜಿತೇಶ್ವರಶತಕ ಮತ್ತು ತ್ರಿಲೋಕಶತಕಗಳನ್ನು ಪದ್ಯಾನುಕ್ರಮಣಿಕೆಯಲ್ಲೂ, ಅಕಾರಾದಿಯಾಗಿಯೂ ಪರಿವಿಡಿಯಲ್ಲಿ ವಿಂಗಡಿಸಿರುವುದು ಈ ಹೊತ್ತಿಗೆಯ ವೈಶಿಷ್ಟ್ಯವಾಗಿದೆ. ಜೈನಸಾಹಿತ್ಯದ ಬಗ್ಗೆ ವಿಶೇಷ ಅಧ್ಯಯನವನ್ನು ಕೈಗೊಂಡು, ತತ್ಸಂಬಂಧಿತವಾಗಿ ಅನೇಕ ಉಪನ್ಯಾಸಗಳನ್ನು ನೀಡಿ, ಜೈನಸಾಹಿತ್ಯ ವಲಯದಲ್ಲಿ ತಮ್ಮದೇ ಛಾಪನ್ನು ಒತ್ತಿರುವ ಹಾಗೂ ಆ ಕ್ಷೇತ್ರದಲ್ಲಿ ಸುವಿಖ್ಯಾತರಾದ ಪ್ರೊ. ಜಿ. ಅಶ್ವತ್ಥನಾರಾಯಣ ಅವರ ಈ ತ್ರಿಶತಕಮಾಲಿಕೆಯು ಕನ್ನಡ ಸಾಹಿತ್ಯಲೋಕದ ಮುಕುಟಕ್ಕೆ ಸಂದ ಸುವರ್ಣ ಗರಿ.

ಎನ್. ರಾಮನಾಥ್

ಪ್ರಕಾಶಕರ ಪರವಾಗಿ

ಪರಿವಿಡಿ

೧. ಸಂಪಾದಕ–ಅನುವಾದಕರ ಅರಿಕೆ / ೫

೨. ಕವಿ–ಕಾವ್ಯ ಪರಿಚಯ / ೯

೩. ಪ್ರಕಾಶಕರ ನುಡಿಕೆ / ೧೭

೪. ರತ್ನಾಕರಶತಕ – ಪದ್ಯಾನುಕ್ರಮಣಿಕೆ / ೨೧

೫. ರತ್ನಾಕರಶತಕ – ಪದ್ಯಗಳ ಅಕಾರಾದಿ / ೨೪

೬. ಅಪರಾಜಿತೇಶ್ವರಶತಕ – ಪದ್ಯಾನುಕ್ರಮಣಿಕೆ / ೨೭

೭. ಅಪರಾಜಿತೇಶ್ವರಶತಕ – ಪದ್ಯಗಳ ಅಕಾರಾದಿ / ೩೦

೮. ತ್ರಿಲೋಕಶತಕ – ಪದ್ಯಾನುಕ್ರಮಣಿಕೆ / ೩೩

೯. ತ್ರಿಲೋಕಶತಕ – ಪದ್ಯಗಳ ಅಕಾರಾದಿ / ೩೬

೧೦. ರತ್ನಾಕರಶತಕ – ಪದ್ಯಗಳು ಮತ್ತು ಅನುವಾದ / ೩೯

೧೧. ಅಪರಾಜಿತೇಶ್ವರಶತಕ – ಪದ್ಯಗಳು ಮತ್ತು ಅನುವಾದ / ೮೫

೧೨. ತ್ರಿಲೋಕಶತಕ – ಪದ್ಯಗಳು ಮತ್ತು ಅನುವಾದ / ೧೩೧

೧೩. ಟಿಪ್ಪಣಿಗಳು ಮತ್ತು ಶಬ್ದಾರ್ಥ
(ರತ್ನಾಕರಶತಕ, ಅಪರಾಜಿತೇಶ್ವರಶತಕ, ತ್ರಿಲೋಕಶತಕ) / ೧೭೭

೧೪. ಅನುಬಂಧಗಳು

೧. ಸಹಾಯಕ ಸಾಹಿತ್ಯ / ೨೪೩

೨. ಸಂಪಾದಕರ–ಅನುವಾದಕರ ಪರಿಚಯ / ೨೪೫

I. ರತ್ನಾಕರಶತಕ
ಪದ್ಯಾನುಕ್ರಮಣಿಕೆ

೧. ಶ್ರೀರಾಗಂ ಸಿರಿಗಂಪುಮಾಲೆ
೨. ತತ್ತ್ವಪ್ರೀತಿ ಮನಕ್ಕೆ ಪುಟ್ಟಲದು
೩. ಮಿಗೆ ಷಡ್ದ್ರವ್ಯಮನಸ್ತಿಕಾಯಂ
೪. ಅರಿವಿಂದೀಕ್ಷಿಸಲಕ್ಕುಂ
೫. ಕಲ್ಲೊಳ್ತೋರ್ಪ ಪೊಗರ್
೬. ಮತ್ತಾಕಲ್ಲನೆ ಸೋದಿಸಲ್
೭. ಅಂಗುಷ್ಟಂ ಮೊದಲಾಗಿ
೮. ಬಿಸಿಲಿಂ ಕಂದದ ಬೆಂಕಿಯಿಂ
೯. ಒಡಲೆಂಬೀ ಜಡನಂ
೧೦. ಬೀಳ್ದಿರ್ಪಂ ತನುವೆಂಬ
೧೧. ಬೂರಂ ವಾರಿಯೊಳಳ್ದಿ
೧೨. ತನುವೇ ಸ್ಫಾಟಿಕಪಾತ್ರೆ
೧೩. ತನುವೇಂ ತಾಮ್ರನಿವಾಸಮೋ
೧೪. ಉಂಬೂಟಂ ಮಿಗಿಲಾಗೆ
೧೫. ಪುಲುವೀಡೊಳ್ಪಲವುಂ
೧೬. ದಾನಕ್ಕಿಲ್ಲ ತಪಕ್ಕೆ ಸಲ್ಲ
೧೭. ಸಾವಿಂಗಂಜಲದೇಕೆ
೧೮. ಪ್ರಾಣಂ ಮಾನವಜನ್ಮಮಂ
೧೯. ಧನಮಂ ಧಾನ್ಯಮನೂಟಮಂ
೨೦. ಪಡೆದತ್ತಿಲ್ಲವೆ ಪೂರ್ವದೊಳ್
೨೧. ಒರಗಿರ್ದಂ ಕನಸಿಂದೆ
೨೨. ಇಂದಾನಾದವನೇ ಸಮಂತು
೨೩. ನಾನಾಗರ್ಭದಿ ಪುಟ್ಟಿ ಪುಟ್ಟಿ
೨೪. ಅಯ್ಯೋ ಕುತ್ಸಿತಯೋನಿಯೊಳ್
೨೫. ದಾರಿದ್ರ್ಯ ಕವಿದಂದು ಸಾಯ್ದು
೨೬. ಮೆಯ್ಯೊಳ್ತೋರಿದ ರೋಗದಿಂ
೨೭. ತಾಯಂ ತಂದೆಯನಾಸೆವಟ್ಟಳುತ
೨೮. ಸ್ತ್ರೀಯಂ ಮಕ್ಕಳನೆಂತಗಲ್ವೆ
೨೯. ಆರಾರಲ್ಲದ ಗರ್ಭದೊಳ್
೩೦. ಕುಲಮಂ ಗೋತ್ರಮನುರ್ವಿಯಂ
೩೧. ಎಲೆಲೇ ಉಳ್ಳುದನಾಡೆ
೩೨. ಬಾಹ್ಯಾಪೇಕ್ಷೆಯಿನಾದೊಡಂ
೩೩. ಪಕ್ಷಂಗೊಂಡೊಡೆ ಕೊಳ್ಗೆ
೩೪. ಒಂದೊಂದಾತ್ಮನೆ ಶುದ್ಧದಿಂ
೩೫. ಪಾಪಂ ನಾರಕಭೂಮಿಗೆ
೩೬. ಸುಕೃತಂ ದುಷ್ಕೃತಮುಂ
೩೭. ದುರಿತಂ ತೀರ್ದೊಡೆ ಪುಣ್ಯದೊಳ್
೩೮. ಬಗೆಯಲ್ ದುಷ್ಕೃತಮೊರ್ಮೆ
೩೯. ಅದು ತಾನೆಂತೆನೆ ಮುನ್ನ
೪೦. ಪಡೆವಂ ಪೂರ್ವದ ಪುಣ್ಯದಿಂ
೪೧. ಅಘಪುಣ್ಯಂಗಳನಿಷ್ಟವೆಂದು
೪೨. ಪಡಿಯೇಂ ಜೀವ ದಯಾಮತಂ
೪೩. ತನುಮಂ ಸಂಘದ ಸೇವೆಯೊಳ್
೪೪. ಪುತ್ರೋತ್ಸಾಹದೊಳ್
೪೫. ಆಹಾರಾಭಯವೈದ್ಯಶಾಸ್ತ್ರಮೆನೆ
೪೬. ಪಿಡಿದೊಲ್ದರ್ಚಿಸೆ
೪೭. ಪುಣ್ಯಂಗೆಯ್ಯದೆ ಪೂರ್ವದೊಳ್
೪೮. ಆರಿತ್ತಾರ್ಕಳೆದರ್ ದರಿದ್ರಮಂ

೪೯. ಕುರುರಾಯಂ ಬಹು
೫೦. ಉಪಭೋಗಂ ಬರೆ ಭೋಗವೈತರೆ
೫೧. ಸಿಹಿಯುಂ ಕಾರಮುಂ
೫೨. ಘಟಿಕಾಪಾತ್ರಕನನ್ಯರೊಳ್
೫೩. ಪಿಡಿದಿರ್ದಾತನ ಕೈಗೆ ಸೂತ್ರವ
೫೪. ನಡೆವಾಗಳ್ನಡೆಕೊಂಕಿದಾಗಳ್
೫೫. ಎತ್ತೆತ್ತಂ ಲಲಿತಾಂಗಿಯರ್
೫೬. ಮೊದಲೊಳ್ಮುಗ್ಧವನಿಚ್ಛೆ
೫೭. ತಿಳಿವಿಲ್ಲಾಗಿ ಶಿಶುತ್ವದೊಳ್ತನಗೆ
೫೮. ಸುಖವೆಂಬರ್ ಸುಖವೆಂತೊ
೫೯. ಏನೊಂದುಗ್ರಮೊ ನೋಡ
೬೦. ಮದವೆರ್ದ್ದಾನೆಗೆ ಕಲ್ಲಪೊಯ್ವುದು
೬೧. ತನುವೇಳ್ಳೆಂಬವನೌಷಧಕ್ಕೆಳಸನೇ?
೬೨. ವಿಷಮೋದ್ರೇಕದ ಜವ್ವನಂದಳೆದೊಡಂ
೬೩. ಮರ್ದು ಮಾನಿನಿಯುಂ ಸಮಾನಂ
೬೪. ಧಾರಾಪೂರ್ವಕಮಾದಪೆಣ್ಗಳೊಳ್
೬೫. ಸತ್ಯಾಧಿಷ್ಠಿತ ಧರ್ಮಮಂ
೬೬. ಮೊಲೆಯುಂಮುದ್ದು ಮೊಗಂ
೬೭. ಪೆರರಂ ಪೇಳ್ದೊಡೆ ನೋವರ್
೬೮. ಗುರುಮಾತಾಪಿತರಂ ಪತಿವ್ರತೆಯರಂ
೬೯. ಕವಿತಾಶಕ್ತಿಯೆಕಲ್ಪವಲ್ಲಿಯದನಾ
೭೦. ಒಡಲಂ ರಕ್ಷಿಸಲನ್ಯರಂ
೭೧. ವೀಣಾಕಿನ್ನರಿವೇಣುತಾಳಮುರಜಾ
೭೨. ಏತಕ್ಕಾಡುವರಯ್ಯ ಹಮ್ಮನಕಟಾ
೭೩. ತರ್ಕಂ ಬಂದೊಡೆ ದೃಷ್ಟದಿಂ
೭೪. ಶಾಸ್ತ್ರಂ ಬಂದೊಡೆ ಶಾಂತಿ ಸೈರಣೆ
೭೫. ಭೂನಾಥರ್ಕಳ ಬಾಳ್ಕೆ
೭೬. ಪಡೆಯೊಳ್ಬಲ್ಲಿದನಾದೊಡಾ
೭೭. ತಮ್ಮಂ ಕೀರ್ತಿಸೆ ನಲ್ಮೆಯೊಲ್ಮೆ
೭೮. ಆರಿಂದಾದುದೊ ರಾಜ್ಯಲಕ್ಷ್ಮಿಯಿದು
೭೯. ಅಣುಮಾತ್ರಂ ವ್ರತಮಲ್ಪಕಾಲಮಿರೆ
೮೦. ಭೃತ್ಯಂ ತನ್ನನದೆಂತು ಕಾಣ್ಬನ್
೮೧. ಸುರಪಂ ತನ್ನಿಭವಿತ್ತು
೮೨. ದೊರೆಯೇನಂ ಪಿಡಿದಿಪೇನಂತದನೆ
೮೩. ನರರೊಳ್ಪುಟ್ಟಿ ನರೇಂದ್ರನಾದ
೮೪. ಎಷ್ಟೆಷ್ಟೈಸಿರಿ ಪೆರ್ಚುಗುಂ
೮೫. ವ್ರತಮಂ ಮಾಣ್ದೊಡೆ
೮೬. ಭೂಕಂಪಂ ಗ್ರಹಣಂ ಬರಂ
೮೭. ದೀಕ್ಷಾಗ್ರಾಹಿಗಳಂ
೮೮. ಹೊರಮಿಂಚಿಂ ಹೊಲೆವೆಣ್ಗೆ
೮೯. ಶೃಂಗಾರಂ ಕಲಿನೀತಿಗೆಂದು
೯೦. ಚೇತೋರಂಗದೊಳಿಟ್ಟು
೯೧. ಭರತಂಗಂ ಸಭೆಗೆಯ್ದೆ
೯೨. ರಾಜಶ್ರೀಯೊಳನೇಕ ಕಾಮಿನಿಯರ್
೯೩. ಅಂದೇಂ ತಂದನೆ ಗರ್ಭದಿಂ
೯೪. ಭಂಡಾರಂ ಬರುವನ್ನಮಿರ್ಪನೆ?
೯೫. ಆವಾವಂಗನೆಯಲ್ಲಿ ಕೂಡಿದೊಡಂ
೯೬. ಭರತಂಬೊಲ್ ಸಗರಂಬೊಲಾ
೯೭. ಉಳಿಯಿಂಗೆಯ್ಯದ
೯೮. ಆವಂ ಮಾಡಿದ ಭಾವಪೂಜೆಯಿಂ
೯೯. ಮುನಿಗಳ್ಮಾಡುವ ಭಾವಪೂಜೆ
೧೦೦. ಪೂಜಾತಂತ್ರದೆ ವಸ್ತುವಂ
೧೦೧. ಉಪಹಾರಂಸ್ತವನಂ
೧೦೨. ಮೋಕ್ಷಶ್ರೀ ಸುಖ ವಿಶ್ವನಾಥಂ
೧೦೩. ಉಪಚಾರಕ್ಕುಡಲೀವವಂಗೆ
೧೦೪. ವಿಜ್ಞಾನಂ ಕ್ಷಮೆ ಶಕ್ತಿ ಭಕ್ತಿ
೧೦೫. ಒಡಲಂ ದಂಡಿಸುತಿಂದ್ರಿಯಂಗಳ
೧೦೬. ಕಡೆಗಿನ್ನೆಂತೊ ಭವಾಗ್ನಿತಾಪವಕಟಾ

೧೦೭. ಶ್ರುತಮಂ ನೋಳ್ಪ ತದರ್ಥಮಂ
೧೦೮. ಪರಸಂತೋಷಮೆ ಸೌಖ್ಯಂ
೧೦೯. ವ್ಯವಹಾರಂ ವ್ಯವಸಾಯಂ
೧೧೦. ವಿಂಧ್ಯಾಕುಕ್ಕುಟನೊಂದು
೧೧೧. ಅಸ್ತಾದ್ರಿಸ್ಥಳದಲ್ಲಿಕಂಡು
೧೧೨. ಸಿಂಹಂನಾಸ್ತಿ ಭಟಾಳಿ
೧೧೩. ಗರುಡೋಚ್ಚಾರಣ ಮಂತ್ರದಿಂ
೧೧೪. ಗೆಡೆಗೊಂಡಾಡುವ ಲೋಕವಾರ್ತೆ
೧೧೫. ವಣಿಜಂ ಪಂಚಸರಂಗಳಂ
೧೧೬. ಮೂವತ್ತೈದು ಶುಭಾಕ್ಷರಂ
೧೧೭. ನಳಿನೀನಾಳಕೆ ಮೂಲದಿಂ
೧೧೮. ನರರಾತ್ಮಂ ಸ್ಫಟಿಕೋಪಮಂ
೧೧೯. ಸ್ವಚ್ಛಾಕಾರದ ಜೀವನೀ
೧೨೦. ನೆಲದಿಂ ಮೇಲೊಗೆದ್ದೈದು
೧೨೧. ಜೊನ್ನಂಬೊಲ್ ನಯನಕ್ಕೆ
೧೨೨. ಕ್ಷಮೆಮಾಳ್ಪಂತೆ ವಿರೋಧಮೇಂ
೧೨೩. ನಿನ್ನಂ ಚಿಂತಿಸುತಿರ್ಪವಂಗೆ
೧೨೪. ನೀನಾನೆಂಬರಿವಾಗೆ ಸಾಕು
೧೨೫. ನಡೆದೆಂ ಚಿತ್ತಲೆ ಬಂದವೊಲ್
೧೨೬. ತ್ರಿಜಗತ್ಸ್ವಾಮಿ ಜಿನೇಂದ್ರಸಿದ್ಧ
೧೨೭. ತ್ರಾಹಿ ತ್ರೈಭುವನೇಂದ್ರಮಸ್ತಕ
೧೨೮. ವೈರಾಗ್ಯನೀತಿಯಾತ್ಮವಿಚಾರಂ

I. ರತ್ನಾಕರಶತಕ
ಪದ್ಯಗಳ ಅಕಾರಾದಿ

	ಪದ್ಯಸಂಖ್ಯೆ
ಅ	
ಅಂಗುಷ್ಠಂ ಮೊದಲಾಗಿ	೭
ಅಘಪುಣ್ಯಂಗಳನಿಷ್ಟಮೆಂದು	೪೧
ಅಣುಮಾತ್ರಂವ್ರತಮಲ್ಪಕಾಲಮಿರೆ	೭೯
ಅದುತಾನೆಂತೆನೆ	೩೯
ಅಂದೇಂ ತಂದನೆ	೯೩
ಅಯ್ಯೋ ಕುತ್ಸಿತಯೋನಿಯೊಳ್	೨೪
ಅರಿವಿಂದೀಕ್ಷಿಸಲಕ್ಕುಂ	೪
ಅಸ್ತಾದ್ರಿ ಸ್ಥಳದಲ್ಲಿ ಕಂಡು	೧೧೧
ಆ	
ಆರಾರಲ್ಲದ ಗರ್ಭದೊಳ್	೨೯
ಆರಿತ್ತಾರ್ಕಳೆದರ್ ದರಿದ್ರಮಂ	೪೮
ಆರಿಂದಾದುದೊ ರಾಜ್ಯಲಕ್ಷ್ಮಿಯಿದು	೭೮
ಆವಾವಂಗನೆಯಲ್ಲಿ ಕೂಡಿದೊಡಂ	೯೫
ಆವಂಮಾಡಿದ ಭಾವಪೂಜೆಯಿಂ	೯೮
ಆಹಾರಾಭಯವೈದ್ಯಶಾಸ್ತ್ರಮೆನೆ	೪೫
ಇ	
ಇಂದಾನಾದವನೇ ಸಮಂತು	೨೨
ಉ	
ಉಪಚಾರಕ್ಕುಡಲೀವವಂಗೆ	೧೦೩
ಉಪಭೋಗಂಬರೆ ಭೋಗವೈತರೆ	೫೦
ಉಪಹಾರಂಸ್ತವನಂ	೧೦೧
ಉಂಬೂಟಂ ಮಿಗಿಲಾಗೆ	೧೪
ಉಳಿಯಿಂಗೆಯ್ಯದ	೯೭

	ಪದ್ಯಸಂಖ್ಯೆ
ಎ	
ಎತ್ತೆತ್ತಂ ಲಲಿತಾಂಗಿಯರ್	೫೫
ಎಲೆಲೇ ಉಳ್ಳುದನಾಡೆ	೩೧
ಎಷ್ಟೆಷ್ಟೈಸಿರಿ ಪೆರ್ಚುಗುಂ	೮೪
ಏ	
ಏತಕ್ಕಾಡುವರಯ್ಯ ಹಮ್ಮನಕಟಾ!	೭೨
ಏನೊಂದುಗ್ರಮೊ ನೋಡ	೫೯
ಒ	
ಒಡಲಂದಂಡಿಸುತ್ತಿಂದ್ರಿಯಗಳ	೧೦೫
ಒಡಲಂ ರಕ್ಷಿಸಲನ್ಯರಂ	೭೦
ಒಡಲೆಂಬೀ ಜಡನಂ	೯
ಒಂದೊಂದಾತ್ಮನೆ ಶುದ್ಧ	೩೪
ಒರಗಿರ್ದ ಕನಸಿಂದೆ	೨೧
ಕ	
ಕಡೆಗಿನ್ನೆಂತೊಭವಾಗ್ನಿತಾಪವಕಟಾ	೧೦೬
ಕ್ಷಮೆಮಾಳ್ಪಂತೆ ವಿರೋ	೧೨೨
ಕಲ್ಲೊಳ್ ತೋರ್ಪರ್ಪೊಗದ್	೫
ಕವಿತಾಶಕ್ತಿಯೆ ಕಲ್ಪವಲ್ಲಿ	೬೯
ಕುರುರಾಯಂ ಬಹು	೪೯
ಕುಲಮಂ ಗೋತ್ರಮನು	೩೦
ಗ	
ಗರುಡೋಚ್ಚಾರಣಮಂತ್ರದಿಂ	೧೧೩
ಗುರುಮಾತಾಪಿತರಂ	೬೮
ಗೆಡೆಗೊಂಡಾಡುವ ಲೋಕವಾರ್ತೆ	೧೧೪

ಘ

ಘಟಿಕಾಪಾತ್ರಕನನ್ಯರೊಳ್ ೫೨

ಚ

ಚೇತೋರಂಗದೊಳಿಟ್ಟು ೯೦

ಜ

ಜೊನ್ನಂಬೊಲ್ ನಯನಕ್ಕೆ ೧೨೧

ತ

ತತ್ವಪ್ರೀತಿಮನಕ್ಕೆ ಪುಟ್ಟಲದು ೨
ತನುವಂಸಂಘದ ಸೇವೆಯೊಳ್ ೪೩
ತನುವೇಸ್ಫಾಟಿಕ ಪಾತ್ರೆ ೧೨
ತನುವೇಳ್ಕೆಂಬವನೌಷಧಕ್ಕೆಳಸನೇ? ೬೧
ತನುವೇಂ ತಾಮ್ರನಿವಾಸಮೋ ೧೩
ತಮ್ಮಂ ಕೀರ್ತಿಸೆ ನಲ್ಮೆಯೊಲ್ಮೆ ೭೭
ತರ್ಕಂ ಬಂದೊಡೆದೃಷ್ಟದಿಂ ೭೩
ತಾಯಂ ತಂದೆಯನಾಸೆವಟ್ಟಳುತೆ ೨೭
ತ್ರಾಹಿ ತ್ರೈಭುವನೇಂದ್ರ ೧೨೭
ತ್ರಿಜಗತ್ಸ್ವಾಮಿ ಜಿನೇಂದ್ರ ೧೨೬
ತಿಳಿವಿಲ್ಲಾಗಿ ಶಿಶುತ್ವದೊಳ್ ೫೭

ದ

ದಾನಿಕ್ಕಿಲ್ಲ ತಪಕ್ಕೆ ಸಲ್ಲ ೧೬
ದಾರಿದ್ರ್ಯಂ ಕವಿದಂದು ೨೫
ದೀಕ್ಷಾಗ್ರಾಹಿಗಳಂ ೮೭
ದುರಿತಂ ತೀರ್ದೊಡೆ ಪುಣ್ಯದೊಳ್ ೩೭
ದೊರಯೇನಂ ಪಿಡಿದಿಪೇನಂತದನೆ ೮೨

ಧ

ಧನಮಂ ಧಾನ್ಯಮನೂಟಮಂ ೧೯
ಧಾರಾಪೂರ್ವಕಮಾದ ಪೆಣ್ಗಳೊಳ್ ೬೪

ನ

ನಡೆದೆಂ ಚಿತ್ಕಲೆ ಬಂದವೊಲ್ ೧೨೫
ನಡೆವಾಗಳ್ನಡೆ ಕೊಂಕಿದಾಗಳ್ ೫೪
ನರರಾತ್ಮಂಸ್ಫಟಿಕೋಪಮಂ ೧೧೮
ನರರೊಳ್ಪುಟ್ಟಿ ನರೇಂದ್ರನಾದ ೮೩
ನಳಿನೀನಾಳಕೆ ಮೂಲದಿಂ ೧೧೭
ನಾನಾಗರ್ಭದಿ ಪುಟ್ಟಿ ಪುಟ್ಟಿ ೨೩
ನಿನ್ನಂಚಿಂತಿಸುತಿರ್ಪವಂಗೆ ೧೨೩
ನೀನಾನೆಂಬರಿವಾಗೆ ಸಾಕು ೧೨೪
ನೆಲದಿಂ ಮೇಲೊಗೆದ್ಯೆದು ೧೨೦

ಪ

ಪಕ್ಷಂಗೊಂಡೊಡೆ ಕೊಳ್ಗೆ ೩೩
ಪಡಿಯೇಂ ಜೀವದಯಾಮತಂ ೪೨
ಪಡೆದತ್ತಿಲ್ಲವೆ ಪೂರ್ವದೊಳ್ ೨೦
ಪಡೆಯೊಳ್ಪಲ್ಲಿದನಾದೊಡಾ ೭೬
ಪಡೆವಂ ಪೂರ್ವದ ಪುಣ್ಯದಿಂ ೪೦
ಪರಸಂತೋಷಮೆಸೌಖ್ಯಂ ೧೦೮
ಪ್ರಾಣಂ ಮಾನವ ಜನ್ಮಮಂ ೧೮
ಪಾಪಂ ನಾರಕಭೂಮಿ ೩೫
ಪಿಡಿದೊಲ್ದರ್ಚಿಸೆ ೪೬
ಪುಣ್ಯಂಗೆಯ್ಯದೆ ಪೂರ್ವದೊಳ್ ೪೭
ಪುತ್ರೋತ್ಸಾಹದೊಳ್ ೪೪
ಪುಲುವೀಡೊಳ್ಪಲವುಂ ೧೫
ಪೂಜಾತಂತ್ರದೆ ವಸ್ತುವಂ ೧೦೦
ಪೆರರಂ ಪೇಳ್ದೊಡೆ ನೋವರ್ ೬೭

ಬ

ಬಗೆಯಲ್ದುಷ್ಕೃತಮೊರ್ಮೆ ೩೮
ಬಾಹ್ಯಾಪೇಕ್ಷೆಯಿನಾದೊಡಂ ೩೨
ಬಿಸಿಲಿಂ ಕಂದದ ಬೆಂಕಿಯಿಂ ೮
ಬೀಳ್ದಿರ್ಪಂ ತನುವೆಂಬ ೧೦
ಬೂರಂವಾರಿಯೊಳಳ್ದಿ ೧೧

ಭ

ಭಂಡಾರಂ ಬರುವನ್ನಮಿರ್ಪನೆ? ೯೪
ಭರತಂಗಂ ಸಭೆಗೆಯ್ದೆ ೯೧

ಭರತಂಬೊಲ್ಸಗರಂಬೊಲಾ ೯೬
ಭೂಕಂಪಂ ಗ್ರಹಣಂ ಬರಂ ೮೬
ಭೂನಾಥರ್ಕಳ ಬಾಳ್ಕೆ ೭೫
ಭೃತ್ಯಂ ತನ್ನನದೆಂತು ಕಾಣ್ಬನ್ ೮೦

ಮ

ಮತ್ತಾಕಲ್ಲನೆ ಸೋದಿಸಲ್ ೬
ಮದವೆದ್ದಾನೆಗೆ ಕಲ್ಲ ಪೊಯ್ವುದು ೬೦
ಮರ್ದುಂ ಮಾನಿನಿಯುಂ ಸಮಾನಂ ೬೩
ಮಿಗೆಷಡ್ದ್ರವ್ಯಮನಸ್ತಿಕಾಯಂ ೩
ಮುನಿಗಳ್ಮಾಡುವ ಭಾವಪೂಜೆ ೯೯
ಮೂವತ್ತೈದು ಶುಭಾಕ್ಷರಂ ೧೧೬
ಮೆಯ್ಯೊಳ್ ತೋರಿದ ರೋಗದಿಂ ೨೬
ಮೊದಲೊಳ್ಮುಗ್ಗುವನಿಚ್ಛೆ ೫೬
ಮೊಲೆಯುಂ ಮುದ್ದುಮೊಗಂ ೬೬
ಮೋಕ್ಷಶ್ರೀಸುಖವಿಶ್ವನಾಥಂ ೧೦೨

ರ

ರಾಜಶ್ರೀಯೊಳನೇಕ ಕಾಮಿನಿಯರ್ ೯೨

ವ

ವಣಿಜಂ ಪಂಚಸರಂಗಳಂ ೧೧೫
ವ್ಯವಹಾರಂ ವ್ಯವಸಾಯಂ ೧೦೯
ವ್ರತಮಂ ಮಾಣ್ದೊಡೆ ೮೫
ವಿಜ್ಞಾನಂ ಕ್ಷಮೆ ಶಕ್ತಿ ಭಕ್ತಿ ೧೦೪
ವಿಂಧ್ಯಾಕುಕ್ಕುಟನೊಂದು ೧೧೦
ವಿಷಮೋದ್ರೇಕದ ಜವ್ವನಂದಳೆದೊಡಂ ೬೨
ವೀಣಾಕಿನ್ನರಿ ವೇಣುತಾಳಮುರಜಾ ೭೧
ವೈರಾಗ್ಯನೀತಿಯಾತ್ಮವಿಚಾರಂ ೧೨೮

ಶ

ಶಾಸ್ತ್ರಂಬಂದೊಡೆ ಶಾಂತಿ ಸೈರಣೆ ೭೪
ಶ್ರೀರಾಗಂ ಸಿರಿಗಂಪುಮಾಲೆ ೧
ಶೃಂಗಾರಂ ಕಲಿನೀತಿಗೆಂದು ೮೯
ಶ್ರುತಮಂ ನೋಳ್ಪತದರ್ಥಮಂ ೧೦೭

ಸ

ಸ್ವಚ್ಛಾಕಾರದ ಜೀವನೀ ೧೧೯
ಸತ್ಯಾಧಿಷ್ಠಿತಧರ್ಮಮಂ ೬೫
ಸಾವಿಗಂಜಲದೇಕೆ ೧೭
ಸಿಹಿಯುಂ ಕಾರಮುಂ ೫೧
ಸಿಂಹಂನಾಸ್ತಿ ಭಟಾಳಿ ೧೧೨
ಸ್ತ್ರೀಯಂ ಮಕ್ಕಳನೆಂತಗಲ್ವೆ ೨೮
ಸುಖವೆಂಬರ್ಸುಖವೆಂತೊ ೫೮
ಸುಕೃತಂದುಷ್ಕೃತಮುಂ ೩೬
ಸುರಪಂ ತನ್ನಿಭವಿತ್ತು ೮೧

ಹ

ಹೊರಮಿಂಚಿಂ ಹೊಲೆವೆಣ್ಗೆ ೮೮

II. ಅಪರಾಜಿತೇಶ್ವರ ಶತಕ

ಪದ್ಯಾನುಕ್ರಮಣಿಕೆ

೧. ಶ್ರೀಕುಲಮಾಪ್ತಗೋತ್ರಂ
೨. ನಂಬುವುದೇಳು ತತ್ತ್ವಮಂ
೩. ಮೂಜಗವೆಂಬ ಗೇಹದೊಳೆ
೪. ಬಳಿಕಣುಪೆಕ್ಕೆ ಪನ್ನೆರಡರಲ್ಲಿ
೫. ಆಪದದೊಳ್ ಕ್ಷಣಕ್ಷಣಕೆ
೬. ಅದು ಲಘುಕರ್ಮ್ಮಗಾತ್ಮ
೭. ಭೇದವಿಚಾರಮೆಂತೊ
೮. ಪೊರಗಿದು ಧಾತುರೂಪದೊಡಲ್
೯. ಆಗುತಪೋಗುತಿರ್ಪುದಿದು
೧೦. ಕಳೆದು ಸಮಸ್ತಬಾಹ್ಯರತಿಯಂ
೧೧. ತನುಜಿನಗೇಹವೆಂಬುದೊಳಗಿರ್ದ
೧೨. ಮೊದಮೊದಲಾಸರಪ್ಪುದು
೧೩. ನುಡಿ ಕಿರಿದಪ್ಪುದೂಟದೊಳ್
೧೪. ಪೊರಗೆ ತಪಂಗಾಳರರ
೧೫. ಮೆಯ್ಯೊಳಗೆನ್ನಗಂ
೧೬. ತನುಪಗೆಯೆಂಬವಂ
೧೭. ಉಂಬನಿತರ್ಕ ಕೊಟ್ಟು
೧೮. ಉಂಬುದು ನೀರಸಂ
೧೯. ತನ್ನೊಳೆ ತನ್ನನೋಳ್ಪ
೨೦. ಬಿಡದೆ ಕಷಾಯಮಂ
೨೧. ಪುರು ಪರಮೇಶನಾದಿಯೆನೆ
೨೨. ಓದಿದ ತತ್ತ್ವಮಿಲ್ಲ ಪರಿದಿಟ್ಟ
೨೩. ಬೋಧಿಪೆನೆಂಬೆನೆಲ್ಲರುಮಂ
೨೪. ಭೂರಿಮತಂಗಳಂ ತಿಳಿವುದುಂ
೨೫. ಕುಡುವ ಸಮರ್ಥರಾರ್
೨೬. ಪುಟವಿಡುವಲ್ಲಿ ಕಿಚ್ಚಿನುರಿಗೆ
೨೭. ರಾಗಕೆ ರೋಷಕಾಗಿ ಲಲನಾದಿ
೨೮. ಪೋಗದೆ ಪೋದ ಪೋದ
೨೯. ಹೇವರಮಂ ಕ್ಷಣಾಂತರಕೆ ತೋರ್ಪ
೩೦. ರೋಗಿಗಪಥ್ಯಮೇ ರುಚಿಯೆನಿಪ್ಪುದು
೩೧. ನಾಗನರಾಮರೇಂದ್ರರ ಸುಖಂ
೩೨. ಮುಕ್ತಿಯೊಳಲ್ಲದಿಲ್ಲ ಸುಖವಂತದು
೩೩. ಶಕ್ತಿಗೆ ತಕ್ಕದಾನ ಗುರುಪೂಜನ
೩೪. ಮಾಡುವುದರ್ಕೆ ಶಕ್ತಿ
೩೫. ಹವಣಿಸಿ ಕೊಂಬುದೊಯ್ಯನೆ
೩೬. ಮಿಕ್ಕಪರಿಗ್ರಹಗ್ರಹಿತಂ
೩೭. ಗ್ರಹವೆಡೆಗೊಂಡವಂಗೆ
೩೮. ಸೊರ್ಕಿಶರೀರನಾರಿಧನವು
೩೯. ರಚ್ಚೆಯಸಂಭ್ರಮಕ್ಕೆ ಕುಣಿದು
೪೦. ಪಿಂದಣ ಜನ್ಮಜನ್ಮದೊಳಗೆ
೪೧. ಇತ್ತೊಡೆ ಬರ್ಪುದೇ ಬಡತನಂ
೪೨. ನಿನ್ನ ಪದಾಬ್ಜಭಕ್ತಿವಿಷಯಾರ್ಥ
೪೩. ನಿನ್ನೊಳಗಾದ ಭಕ್ತಿಗಡ
೪೪. ನಾಲಗೆಗಾವುದಿಚ್ಚೆ
೪೫. ತೊಗಲ ಪಸುಂಬೆಯೊಳ್
೪೬. ಮಾಸು ಮುಸುಂಕಿ ತಾಯೊಡಲೊಳ್
೪೭. ಪಗೆಯ ವಶಕ್ಕೆ ಸಿಲ್ಕಿ ಸೆರೆಯಿರ್ದ
೪೮. ಓದುವ ಪೇಳ್ವ ಕೇಳ್ವ
೪೯. ನುಡಿವೊಡೆ ದೇವನಿಮ್ಮಯ
೫೦. ಲೋಕದ ವಾರ್ತೆಯೊಳ್‌ಬಧಿರನ್
೫೧. ನೋಡಿದೊಡೆಲ್ಲಿಯುಂ

೫೨. ಕಣ್ಮಲರಳ್ಕರಿಂದೊಸರೆ
೫೩. ಮಾತಿನ ಮಾಲೆಯೇಕೆ ಜಿನ
೫೪. ಆವನುಮಕ್ಕೆ ನಿಮ್ಮಡಿಗಳಂ
೫೫. ಲೋಕಮಿದೆಲ್ಲವುಂ
೫೬. ಮೊನ್ನೆಬರುತ್ತೆಕಂಡೆನವನಂ
೫೭. ಎಲೆಯೆಲೆ ಇತ್ತಲಿರ್ದ
೫೮. ಪೇಳವೆ ವೇಳೆವೇಳೆಗಿಳಿವ
೫೯. ಪೊಕ್ಕು ಸಮಾನಚಿತ್ತವನೆಸಾಧಿಸಿ
೬೦. ತುಟ್ಟಿದಪಟ್ಟಣಕ್ಕೆ ಪಯಣಂ
೬೧. ಆವನೊಳಾದೊಡಂ ಕುಮತಿ
೬೨. ಗುಣಿಯೆನಿಸುತ್ತೆ ತಾಂ
೬೩. ಸರ್ವಗುಣಂಗಳೊಳ್‌ಸುಲಭರಾರ್
೬೪. ದುರ್ವಿಷಯಂಗಳೆಂಬ ವಿಷಮಂ
೬೫. ಅರಿಯಲೆ ಚಿತ್ತಮೀಯದ
೬೬. ಗಳಿಸುವನೆಯ್ದೆ ಪಾಪಸುಕೃತಂಗಳ್
೬೭. ಕರ್ಮನಿಬಂಧನಾಗಿಯುಂ
೬೮. ಏಕನನೇಕನಲ್ಪಧಿಕಂ
೬೯. ಮಾನವರಾತ್ಮತತ್ತ್ವ ಮರಿಯಲ್ಕೆ
೭೦. ವ್ಯವಹೃತಿಯೆಂದು ನಿಶ್ಚಯತೆಯೆಂದು
೭೧. ಮೊದಲೊಳ್ ತತ್ತ್ವಸಪ್ತಕದಿ ಪೇಳ್ದು
೭೨. ನಿಶ್ಚಯದಿಂದವಾತ್ಮನೆ
೭೩. ನಿನ್ನನೆ ನಂಬು ನಂಬಿದೊಡೆ
೭೪. ವರಗುರುಪಂಚಕಂ
೭೫. ಅರಿವರಿವಿಂಗಡರ್ಪುಂ
೭೬. ಅದನರಿದಾತನೆಲ್ಲ ಮರಿದಾತಂ
೭೭. ಉದ್ಗತದೃಷ್ಟಿಯಿಂ ಸಕಲಮಂ
೭೮. ತಡೆತಡೆದೋಡುತಿರ್ಪಮನಮಂ
೭೯. ಮನಮನಿದೊಂದನೇ ತನುವಿನೊಳ್
೮೦. ಮನದ ವಿಕಲ್ಪಮಿಂದ್ರಿಯ ಕಷಾಯಮಂ
೮೧. ಮನದ ಕುಭಾವಮೇ ದುರಿತಂ
೮೨. ಇಷ್ಟವರುಮೆನ್ನೊಳಿರ್ದಪರ್
೮೩. ಅರಸುವೆನೆನ್ನದೇಹದೊಳಗೆ
೮೪. ಬಾಗದೆ ತೂಗದೋರೆ ಪುಗದೆ
೮೫. ಚೇತನನಾತ್ಮನಾಗಸಮಚೇತನಂ
೮೬. ಸಿದ್ಧರರೂಪಿನೊಳ್ಮೊದಲೆ ನೋಟದ
೮೭. ನಾಸಿಕದಗ್ರದೊಳ್ನೆಲಸಿ
೮೮. ಕಲಿಗೆಮಹಾಬಲಂಗೆ ಮುಖ
೮೯. ಆಸನಸಂಕುಲಂಗಳ
೯೦. ಪೊಳೆಕೆರೆಯೊತ್ತುವಾರ್ಧಿತಟಂ
೯೧. ಬಾರದ ಜಾನಮಂಬರಿಸಿಕೊಂಬ
೯೨. ರಂಭೆಯೆ ಬಂದು ತಾಂಕೊರಲಂ
೯೩. ಇರುತಿರುತಿರ್ದು ಚಿಂತಿಸಿ
೯೪. ಒಪ್ಪಿಸಿದೇಹಮಂ ತಪದ ತಾಪಕೆ
೯೫. ಆದಿಯ ವಜ್ರಕಾಯದವರ್ಗಲ್ಲದೆ
೯೬. ನರಕದೊಳಟ್ಟಿ ಮೆಟ್ಟಿ ಕಡುಕಾಸುವ
೯೭. ಸ್ವಾಮಿಕುಮಾರನಾ ಗಜಕುಮಾರಕನಾ
೯೮. ಮೆಯ್ಯನಿರಾಸೆ ಘೋರತಪಂ
೯೯. ಕವಿದ ಮುಗಿಲ್ಗಳೇಪರೆಯಲೆಂದುರೆ
೧೦೦. ಶುದ್ಧ ನಿಜಾತ್ಮನಂ ಬಿಡದೆ ಕಾಣ್ಬ
೧೦೧. ಚಿಂತೆಯೊಳೊಂದಿದಾವ ಬರ್ದುಕುಂ
೧೦೨. ನೋಡಿದು ಚಿತ್ರಮೀಕ್ಷಿಸುವುದೆನ್ನ
೧೦೩. ಚಿಂತಿಸವೇಳ್ಪೊಡಂ ಬಿಡದೆ ಚಿಂತಿಕೆ
೧೦೪. ಅಳೆದಿರಿಸಿರ್ದುದಂ ಕುಡುವನಂತೆ
೧೦೫. ಮಳೆ ಸುರಿದಾಗಳೆಂತು ಪನಿ
೧೦೬. ನೀಡು ದಿನಂ ನಿಜಾತ್ಮನನೆ ಭಾವಿಸಿ
೧೦೭. ಸಿರಿಯೊಳಗಂತದೇ ಸಿರಿ ಸುಖಕ್ಕದೆ
೧೦೮. ಬಹುವಚನಂಗಳೇಕೆ ಭುವನತ್ರಯಸಾರಂ
೧೦೯. ಆವತಪಂಗಳುಂ ಶ್ರುತಮುಂ

೧೧೦. ಭವ್ಯನಭವ್ಯನೀರ್ವರುಂ
೧೧೧. ಮನೆಯೊಳ್ ಪೂಳ್ದ
ತನ್ನೊಡವೆಯಂ
೧೧೨. ಅಶುಭಶುಭಂಗಳೆಂಬೆರಡು
೧೧೩. ವ್ರತತಿಯಿಲ್ಲದಂದು ಪವಣಿಲ್ಲ
೧೧೪. ಅಧ್ಯಯನಂಗಳಿಂ
ವ್ರತಚಿಂತನೆಯಿಂ
೧೧೫. ಪಗರಣದಾಟಮೆಂದು ಜಗಮಂ
೧೧೬. ಮೂರು ಶರೀರದೊಳ್ತಡೆಯದೆ
೧೧೭. ನೋಡುವ ನೋಡಿ ಲಾಲಿಸುವ
೧೧೮. ಇಂಗಡಲೊಳ್ಮುಳುಂಗಿದವೊಲಿರ್ಪುದು
೧೧೯. ಅವನ ಬರ್ದುಂಕೆ ತಾಂ ಬರ್ದುಕು
೧೨೦. ತನುವಿನೊಳಿರ್ದ
ಸಿದ್ಧಸದೃಶಾತ್ಮನಂ
೧೨೧. ರವಿನಡೆದತ್ತಲೆಲ್ಲ ಬೆಳಗಲ್ಲದೆ
೧೨೨. ಆರಿದನೊಲ್ದು ಕೈವಿಡಿದರಾರ್
೧೨೩. ಚೆಲುವರ ಚೆಲ್ವ ಚೆನ್ನಿಗರ ಚೆನ್ನ
೧೨೪. ಜಡಮತಿಯೈಸೆನಾಂ ಪರಮ
೧೨೫. ಬಂದೊಲವಿಂದೆ
ನಿನ್ನದಿರೊಳೊಪ್ಪದೆ
೧೨೬. ಮುನ್ನಮನೇಕರಂ ಭವದಿನೆತ್ತಿ
೧೨೭. ಶ್ರೀಶುಭವೆತ್ತಮೇರುನಗದ
೧೨೮. ತ್ರಿಜಗತ್ಸ್ವಾಮಿಗಳಿರ್ದಪರ್

II. ಅಪರಾಜಿತೇಶ್ವರ ಶತಕ
ಪದ್ಯಗಳ ಅಕಾರಾದಿ

ಪದ್ಯಸಂಖ್ಯೆ

ಅ

ಅದು ಲಘುಕರ್ಮಿಗಾತ್ಮ ೬
ಅರಿಯಲೆ ಚಿತ್ತಮೀಯದ ೬೫
ಅರಿವರಿ ವಿಂಗಡಪ್ಪುಂ ೭೫
ಅದನರಿದಾತನೆಲ್ಲಮರಿದಾತಂ ೭೬
ಅರಸುವೆನೆನ್ನ ದೇಹದೊಳಗೆ ೮೩
ಅಳೆದಿರಿಸಿರ್ದುದಂ ಕುಡವನಂತೆ ೧೦೪
ಅಶುಭ ಶುಭಂಗಳೆಂಬೆರಡು ೧೧೨
ಅಧ್ಯಯನಂಗಳಿಂ ವ್ರತಚಿಂತನೆಯಿಂ ೧೧೪
ಅವನ ಬರ್ದುಂಕೆ ತಾಂ ಬರ್ದುಕು ೧೧೯
ಅರಿದನೊಲ್ದು ಕೈವಿಡಿದರಾರ್ ೧೨೨

ಆ

ಆಪದದೊಳ್ ಕ್ಷಣ ಕ್ಷಣಕೆ ೫
ಆಗುತ ಪೋಗುತಿರ್ಪುದಿದು ೯
ಆವನುಮಕ್ಕೆ ನಿಮ್ಮಡಿಗಳಂ ೫೪
ಆವನೊಳಾದೊಡಂ ಕುಮತಿ ೬೧
ಆಸನ ಸಂಕುಲಂಗಳನುಬಂಧದಿ ೮೯
ಆದಿಯ ವಜ್ರಕಾಯದವರ್ಗಲ್ಲದೆ ೯೫
ಆವ ತಪಂಗಳುಂ ಶ್ರುತಮುಂ ೧೦೯

ಇ

ಇತ್ತೊಡೆ ಬರ಼್್ಪುದೇ ಬಡತನಂ ೪೧
ಇಷ್ಟರುಮೆನ್ನೊಳಿರ್ದಪರ್ ೮೨
ಇರುತಿರುತಿರ್ದು ಚಿಂತಿಸಿ ೯೩
ಇಂಗಡಲೊಳ್ಮುಳುಂಗಿದವೊಲಿರ್ಪುದು ೧೧೮

ಪದ್ಯಸಂಖ್ಯೆ

ಉ

ಉಂಬುದು ನೀರಸಂ ೧೮
ಉದ್ಗತ ದೃಷ್ಟಿಯಿಂ ಸಕಲಮಂ ೭೭

ಎ

ಎಲೆಯೆಲೆ ಇತ್ತಲಿರ್ದ ೫೭

ಏ

ಏಕನನೇಕನಲ್ಪನಧಿಕಂ ೬೮

ಒ

ಒಪ್ಪಿಸಿ ದೇಹಮಂ ತಪದ ತಾಪಕೆ ೯೪

ಓ

ಓದಿದ ತತ್ತ್ವಮಿಲ್ಲ ಪರಿದಿಟ್ಟ ೨೨
ಓದುವ ಪೇಳ್ವ ಕೇಳ್ವ ೪೮

ಕ

ಕಳೆದು ಸಮಸ್ತಬಾಹ್ಯರತಿಯಂ ೧೦
ಕುಡುವ ಸಮರ್ಥರಾರ್ ೨೫
ಕಣ್ಮಲರಳ್ಕರಿಂದೊಸರೆ ೫೨
ಕರ್ಮನಿಬಂಧನಾಗಿಯುಂ ೬೭
ಕಲಿಗೆ ಮಹಾಬಲಂಗೆ ಮುಖ ೮೮
ಕವಿದ ಮುಗ್ಗಿಲ್ಗಳೇ ಪರೆಯಲೆಂದುರೆ ೯೯

ಗ

ಗ್ರಹವೆಡೆಗೊಂಡವಂಗೆ ೩೭
ಗುಣಿಯೆನಿಸುತ್ತೆ ತಾಂ ೬೨
ಗಳಿಸುವನೆಯ್ದೆ ಪಾಪಸುಕೃತಂಗಳ್ ೬೬

ಚ
ಚೇತನನಾತ್ಮನಾಗಸಮಚೇತನಂ ೮೫
ಚಿಂತೆಯೊಳೊಂದಿದಾವ ಬರ್ದುಕುಂ ೧೦೧
ಚಿಂತಿಸವೇಳ್ಪೊಡಂ ಬಿಡದೆ ಚಿಂತಿಕೆ ೧೦೩
ಚೆಲುವರ ಚೆಲ್ವ ಚೆನ್ನಿಗರ ಚೆನ್ನ ೧೨೩

ಜ
ಜಡಮತಿಯೈಸೆ ನಾಂ ಪರಮ ೧೨೪

ತ
ತನು ಜಿನಗೇಹವೆಂಬುದೊಳಗಿರ್ದು ೧೧
ತನುಪಗೆಯೆಂಬವಂ ೧೬
ತನ್ನೊಳೆ ತನ್ನನೋಳ್ಪ ೧೯
ತೊಗಲ ಪಸುಂಬೆಯೊಳ್ ೪೫
ತುಟ್ಟಿದ ಪಟ್ಟಣಕ್ಕೆ ಪಯಣಂ ೬೦
ತಡೆತಡೆದೋಡುತಿರ್ಪ ಮನಮಂ ೭೮
ತನುವಿನೊಳಿರ್ದ ಸಿದ್ಧಸದೃಶಾತ್ಮನಂ ೧೨೦
ತ್ರಿಜಗತ್ಸ್ವಾಮಿಗಳಿರ್ದಪರ್ ೧೨೮

ದ
ದುರ್ವಿಷಯಂಗಳೆಂಬ ವಿಷಮಂ ೬೪

ನ
ನಂಬುವುದೇಳು ತತ್ತ್ವಮಂ ೨
ನುಡಿಕಿರಿದಪ್ಪುದೂಟದೊಳ್ ೧೩
ನಾಗನರಾಮರೇಂದ್ರರಸುಖಂ ೩೧
ನಿನ್ನ ಪದಾಬ್ಜ ಭಕ್ತಿವಿಷಯಾರ್ಥ ೪೨
ನಿನ್ನೊಳಗಾದ ಭಕ್ತಿಗಡ ೪೩
ನಾಲಗೆಗಾವುದಿಚ್ಛೆ ೪೪
ನುಡಿವೊಡೆ ದೇವ ನಿಮ್ಮಯ ೪೯
ನೋಡಿದೊಡೆಲ್ಲಿಯುಂ ೫೧
ನಿಶ್ಚಯದಿಂದಮಾತ್ಮನೆ ೭೨
ನಿನ್ನನೆ ನಂಬು ನಂಬಿದೊಡೆ ೭೩
ನಾಸಿಕದಗ್ರದೊಳ್ನೆಲಸಿ ೮೭
ನರಕದೊಳಟ್ಟಿ ಮೆಟ್ಟಿ ಕಡು ಕಾಸುವ ೯೬
ನೋಡಿದು ಚಿತ್ರಮೀಕ್ಷಿಸುವುದೆನ್ನ ೧೦೨
ನೀಡುಂ ದಿನಂ ನಿಜಾತ್ಮನನೆ ಭಾವಿಸಿ ೧೦೬
ನೋಡುವ ನೋಡಿ ಲಾಲಿಸುವ ೧೧೭

ಪ
ಪೊರಗಿದು ಧಾತುರೂಪದೊಡಲ್ ೮
ಪೊರಗೆ ತಪಂಗಳಾರರ ೧೪
ಪುರುಪರಮೇಶನಾದಿಯೆನೆ ೨೧
ಪುಟವಿಡುವಲ್ಲಿ ಕಿಚ್ಚಿನುರಿಗೆ ೨೬
ಪೋಗದೆ ಪೋದ ಪೋದ ೨೮
ಪಿಂದಣ ಜನ್ಮಜನ್ಮದೊಳಗೆ ೪೦
ಪಗೆಯ ವಶಕ್ಕೆ ಸಿಲ್ಕಿ ಸೆರೆಯಿರ್ದ ೪೭
ಪೇಳವೆ ವೇಳೆ ವೇಳೆಗಿಳಿವ ೫೮
ಪೊಕ್ಕು ಸಮಾನಚಿತ್ತವನೆ ಸಾಧಿಸಿ ೫೯
ಪೊಳೆ ಕೆರೆಯೊತ್ತುವಾರ್ಧಿತಟಂ ೯೦
ಪಗರಣದಾಟಮೆಂದು ಜಗಮಂ ೧೧೫

ಬ
ಬಳಿಕಣುಪೆಕ್ಕೆ ಪನ್ನೆರಡರಲ್ಲಿ ೪
ಬಿಡದೆ ಕಷಾಯಮಂ ೨೦
ಬೋಧಿಪೆನೆಂಬೆನೆಲ್ಲರುಮಂ ೨೩
ಬಾಗದೆ ತೂಗದೋರೆ ಪುಗದೆ ೮೪
ಬಾರದ ಜಾನಮಂ ಬರಿಸಿಕೊಂಬ ೯೧
ಬಹುವಚನಂಗಳೇಕೆ ೧೦೮
ಬಂದೊಲವಿಂದೆ ನಿನ್ನಿದಿರೊಳೊಪ್ಪದೆ ೧೨೫

ಭ
ಭೇದವಿಚಾರಮೆಂತೊ ೭
ಭೂರಿಮತಂಗಳಂ ತಿಳಿವುದುಂ ೨೪
ಭವ್ಯನಭವ್ಯನೀರ್ವರುಂ ೧೧೦

ಮ
ಮೂಜಗವೆಂಬ ಗೇಹದೊಳೆ ೩
ಮೊದಮೊದಲಾಸರಪ್ಪುದು ೧೨
ಮೆಯ್ಯೊಳಗೆನ್ನೆಗಂ ೧೫
ಮುಕ್ತಿಯೊಳಲ್ಲದಿಲ್ಲ ಸುಖವಂತದು ೩೨
ಮಾಡುವುದರ್ಕೆ ಶಕ್ತಿ ೩೪
ಮಿಕ್ಕ ಪರಿಗ್ರಹಗ್ರಹಿತಂ ೩೬
ಮಾಸು ಮುಸುಂಕಿ
ತಾಯೊಡಲೊಳ್ ೪೬
ಮಾತಿನ ಮಾಲೆಯೇಕೆ ಜಿನ ೫೩
ಮೊನ್ನೆ ಬರುತ್ತೆ ಕಂಡೆನವನಂ ೫೬
ಮಾನವರಾತ್ಮತತ್ತ್ವಮರಿಯಲ್ಕೆ ೬೯
ಮೊದಲೊಳೆ ತತ್ತ್ವಸಪ್ತಕದಿ ಪೇಳ್ದು ೭೧
ಮನಮನಿದೊಂದನೇ ತನುವಿನೊಳ್ ೭೯
ಮನದ ವಿಕಲ್ಪಮಿಂದ್ರಿಯ
ಕಷಾಯಮಂ ೮೦
ಮನದ ಕುಭಾವಮೇದುರಿತಂ ೮೧
ಮೆಯ್ಯ ನಿರಾಶೆ ಘೋರತಪಂ ೯೮
ಮಳೆ ಸುರಿದಾಗಳೆಂತು ಪನಿ ೧೦೫
ಮನೆಯೊಳೆಪೂಳ್ದ ತನ್ನೊಡವೆಯಂ
೧೧೧
ಮೂರು ಶರೀರದೊಳ್ತಡೆಯದೆ ೧೧೬
ಮುನ್ನಮನೇಕರಂ ಭವದಿನೆತ್ತಿ ೧೨೬

ರ
ರಾಗಕೆ ರೋಷಕಾಗಿ ಲಲನಾದಿ ೨೭
ರೋಗಿಗಪಥ್ಯಮೇ ರುಚಿಯೆನಿಪ್ಪುದು ೩೦
ರಚ್ಚೆಯ ಸಂಭ್ರಮಕ್ಕೆ ಕುಣಿದು ೩೯
ರಂಭೆಯೆ ಬಂದು ತಾಂ ಕೊರಲಂ ೯೨
ರವಿ ನಡೆದತ್ತಲೆಲ್ಲ ಬೆಳಗಲ್ಲದೆ ೧೨೧

ಲ
ಲೋಕದ ವಾರ್ತೆಯೊಳ್ಬಧಿರನ್ ೫೦
ಲೋಕಮಿದೆಲ್ಲವುಂ ೫೫

ವ
ವ್ಯವಹೃತಿಯೆಂದು ನಿಶ್ಚಯತೆಯೊಂದು೭೦
ವರಗುರುಪಂಚಕಂ ೭೪
ವ್ರತತತಿಯಿಲ್ಲದಂದು ಪವಣಿಲ್ಲ ೧೧೩

ಶ
ಶ್ರೀಕುಲಮಾಪ್ತಗೋತ್ರ ೧
ಶಕ್ತಿಗೆ ತಕ್ಕದಾನ ಗುರುಪೂಜನ ೩೩
ಶುದ್ಧನಿಜಾತ್ಮನಂ ಬಿಡದೆಕಾಣ್ಬ ೧೦೦
ಶ್ರೀ ಶುಭವೆತ್ತಮೇರುನಗದ ೧೨೭

ಸ
ಶರೀರ ನಾರಿಧನವು ೩೮
ಸರ್ವಗುಣಂಗಳೊಳ್ಸುಲಭರಾರ್ ೬೩
ಸಿದ್ಧರ ರೂಪಿನೊಳ್ಮೊದಲೆ ನೋಟದ೮೬
ಸ್ವಾಮಿ ಕುಮಾರನಾ ಗಜಕುಮಾರಕನಾ
೯೭
ಸಿರಿಯೊಳಗಂತದೇಸಿರಿಸುಖಕ್ಕದೆ ೧೦೭

ಹ
ಹೇವರಮಂ ಕ್ಷಣಾಂತರಕೆ ತೋರ್ಪ ೨೯
ಹವಣಿಸಿ ಕೊಂಬುದೊಯ್ಯನೆ ೩೫

III. ತ್ರಿಲೋಕ ಶತಕ
ಪದ್ಯಾನುಕ್ರಮಣಿಕೆ

೧. ಪೂರ್ವವಿದೇಹದೊಳೆಸಕಂ
೨. ತೆರಪಾದ ಶಾಸ್ತ್ರದೊಳ್
೩. ಕಡೆಯಿಲ್ಲದೆಸೆವ ಗಗನದ
೪. ಜೀವಾವಳಿ ಪುದ್ಗಲಚಯ
೫. ಓತೊಂದೇ ಸಮಯಕೆ
೬. ಅಡಿಯಿಂ ತುದಿಗೀ ಲೋಕಂ
೭. ತಳಗೇಳು ರಜ್ಜು ಮಧ್ಯದೊಳ್
೮. ಮರದೊಳ್ ಕೆಚ್ಚೆಂತಿಹುದಾ
೯. ತ್ರಸಮೆನೆ ಚರಿಸುವ ಜೀವಂ
೧೦. ಈಕ್ಷಿಸೆ ಮೇರುವಿನಗ್ರದೆ
೧೧. ಅಡಿಜಕ್ಕಳಮೆಂಬಂದಂ
೧೨. ಕೇಳಗೇಳುನಿರಯಭೂಮಿಗೆ
೧೩. ಇಳಿಯೊಳ್ಬಿಡೆ ನಿಡುಲೋಹಾ
೧೪. ನೆಲನೆಲ್ಲಂ ದುರ್ಗಂಧದೆ
೧೫. ಆ ನರಕಭೂಮಿಗಳೊಳ್
೧೬. ಓರ್ವರನೋರ್ವರ್ಕೆಡಪುವ
೧೭. ಸುಡುವರ್ಕಳ್ಬಿದೆ ಬಿಡದುರೆ
೧೮. ಲೋಹದ ಪೆಣ್ಬುತ್ತಳಿಯಂ
೧೯. ಮೊರೆಯಿಡುವರ್ಗೋಳಿಡುವರ್
೨೦. ಕಡಿದೊಂದು ಬಾರಿ ತನುವಂ
೨೧. ನಿಡುಬೆಟ್ಟದನಿತುಕೊಳುಂ
೨೨. ನರಕಮೆ ದುಃಖಂ ಮತ್ತಾ
೨೩. ಇಪ್ಪತ್ತೈದುಂ ಸಮಯಕೆ
೨೪. ಮೊದಲಿಂ ಕೆಳಗೇಳುಂ
೨೫. ಎವೆಯಿಕ್ಕುವನಿತು ಕಾಲಮು
೨೬. ಆ ನರಕೋರ್ವರೆಯಿಂ
೨೭. ನೆರೆದೇಳ್ಕೋಟಿಯುಂ
೨೮. ಆ ಭವನಲೋಕದಿಂ
೨೯. ಇದು ಜಂಬೂದ್ವೀಪಂ
೩೦. ಆ ಲವಣಾಂಭೋನಿಧಿಗೆ
೩೧. ಕಾಲೋದಕಾಬ್ಧಿಗಿರ್ಮಡಿ
೩೨. ಆ ಗಿರಿಯ ಬಳಸಿ ಪಲವುಂ
೩೩. ವರಮಾನುಷೋತ್ತರಾಚಳ
೩೪. ಮನುಜಕ್ಷೇತ್ರದ ತೆರಪೆನಿತು
೩೫. ಈ ಜಂಬೂದ್ವೀಪದೊಳಭಿ
೩೬. ಅದರ ಸರಿತದೊಳ್ ಮಾಡಲ್
೩೭. ಎಂಬತ್ತುನಾಲ್ಕು ಸಾಸಿರ
೩೮. ಆ ಹೇಮಪರ್ವತಂಗಳ
೩೯. ಮೇರುಗಳ ತೆಂಕ ಬಡಗಲ್
೪೦. ಭೋಗಮಹಿ ಲೇಸು ಮತ್ತಾ
೪೧. ಭರತಮುಮೈರಾವತಂ
೪೨. ಪೂರ್ವಾಪರಮೆಂಬ
೪೩. ವಿಜಯಾರ್ಧಗಿರಿಗಳಿರ್ಕುಂ
೪೪. ವ್ರತದಾನ ಪೂಜೆಯುಂಟು
೪೫. ನರಕಲೋಕದ ವಾರ್ತೆಯದು
೪೬. ಆ ಮಾತಂತಿರಲಿನ್ನೀ
೪೭. ಮೊತ್ತಮೊದಲಿಂದೆ ತುದಿಗದು
೪೮. ತೋರುವ ತಾರಾಗಣಮಂ
೪೯. ಇರ್ಪುದು ರತ್ನವಿಮಾನಂ
೫೦. ಪದಿನಾರುಂ ಕಲ್ಪಂಗಳ
೫೧. ಸಂದಾಗ್ರೈವೇಯಕದಿಂ
೫೨. ಮತ್ತದರ ಮೇಲೆ ಪಂಚಾಣು

೫೩. ಅಲ್ಲಿಂದ ಮೇಲೆ ಸಗ್ಗಂಗಳ್
೫೪. ಸಗ್ಗಮೆ ಸುಖವಹುದಂತಾ
೫೫. ನರಕಕ್ಕೆ ಮೇಗಣಿಂ ಕೆಳ
೫೬. ಮೊದಲಿಂ ಯುಗ್ಮಂಗಳೆರಡು
೫೭. ಗ್ರೈವೇಯಕದಿಂದೊಂದೊಂದು
೫೮. ಅಸುರರ್ಗೊಂದೆಂಬುಧಿ
೫೯. ಸಾಗರಮಂ ಸುಜ್ಞಾನದೆ
೬೦. ಎಂಬತ್ತನಾಲ್ಕುಲಕ್ಷಾ
೬೧. ಐರಾವತ ಭರತಜನ
೬೨. ಮತ್ತೈರಾವತ ಭರತದ
೬೩. ಇನ್ನುಳಿದ ವಿದೇಹಂಗಳ
೬೪. ಭವನ ಜ್ಯೋತಿರ್ವ್ಯಂತರ
೬೫. ಮುಟ್ಟಿ ಕೆಲರ್ನೋಡಿ ಕೆಲರ್
೬೬. ಮೇಲೆ ಪೆಣ್ಣಿಲ್ಲವಿಲ್ಲದೊಡೆ
೬೭. ಹೋಹೋ ಸ್ವರ್ಗದ ವಾರ್ತೆಯ
೬೮. ಅದರೊಳ್ನಾಲ್ದೆಸೆಗಳೊಳಂ
೬೯. ಆ ನಂದೀಶ್ವರದ್ವೀಪಕೆ
೭೦. ಅವು ಮಾನುಷೋತ್ತರದ್ರಿಯೊಳ್
೭೧. ಅರಿದಿಹುದವನಿಂ ನಾಂ ಮೊದಲ್
೭೨. ನೀರೆಲ್ಲಂ ಕಬ್ಬಿನ ರಸದ
೭೩. ಒಂದೇ ಕಾಲೊಂದೇ ಕೆಯ್
೭೪. ಪಾಸುಂಗಿವಿ ಪೊದೆಕಿವಿಗಳ್
೭೫. ಮುನ್ನ ಕುಪಾತ್ರಕೆ ಭಕ್ತಿಯೊಳ್
೭೬. ಆ ನುಡಿಯಂತಿರಲೀ ಬಳಿಕ್ಕೆ
೭೭. ಸ್ಕಂಧಮುಮಂಡರಮಾವಾಸಂ
೭೮. ಆರುಂ ಸಾಸಿರದೊಡನೀ
೭೯. ನರಕದ ದುಃಖಕ್ಕಂ ಕಡು
೮೦. ಸಾಗರಮನಿತೆನಿತೆಂದೊಡದು
೮೧. ಎಂದಾದೊಡಂ ತ್ರಸತ್ವಕೆ
೮೨. ನುಡಿವಾಗಳೆನ್ನ ಮೆಯ್ನುಡ
೮೩. ಸರ್ವಾರ್ಥಸಿದ್ಧಿಯಿಂ
೮೪. ಕಡುಬಿಳಿದು ಬಟ್ಟಿತದು
೮೫. ಮಿಗೆಸಿದ್ಧಶಿಲೆಯಮೇಲೀ
೮೬. ಅರೆಗಾವುದಂ ಘನೋದಧಿ
೮೭. ಆ ಮೂರು ಗಾಳಿಗಳೊಳ್
೮೮. ಕಾಯೋತ್ಸರ್ಗಂ ಪಲ್ಯಂಕ
೮೯. ಕುಂದಿದೊಡೆ ಮೂರುವರೆ
೯೦. ಕುಂದು ಪೆರ್ಚುದ್ದದೊಳಗುಂ
೯೧. ಕರುಹೋರಿಯೆತ್ತುಗಳ್
೯೨. ತಮ್ಮೊಳ್ತಾಮೊಳಪೊಕ್ಕೊಡಂ
೯೩. ಮೈಯ್ಯುಳ್ಳವರಿಟ್ಟಣಿಸಿದೊಡೆ
೯೪. ಪಲವುಂ ದೀಪಂಗಳ್
೯೫. ಗಾಳಿಯೊಳಿರುತಿಪರಿರ್ದುಂ
೯೬. ತನುವವರ್ಗಿಲ್ಲ ಸುಬೋಧಮೆ
೯೭. ವರ್ಣಂಗಳೈದುಮಿಲ್ಲಂ
೯೮. ಜ್ಞಾನಾಕ್ಷಿಗೆ ತೋರುವರ್
೯೯. ಆಕಾರಮೆಯಹುದೊರ್ಮೆ
೧೦೦. ತಿಳಿವೆಳ್ದಿಂಗಳ್ನೋಟಕೆ
೧೦೧. ತುಂಬಿದ ಚಿದ್ಗುಣಮಂಬರಂ
೧೦೨. ಆಕಾಶದಂತೆ ಬಹಲಹುದು
೧೦೩. ಸಮ್ಯಕ್ತ್ವಂ ಮೊದಲಾದ ಸುರಮ್ಯ
೧೦೪. ತಲೆಯಿಂದಡಿಮುಟ್ಟಂ
೧೦೫. ಮೂಲೋಕದೊಳಗು
ಹೊರಗುಮಂ
೧೦೬. ತ್ರಿಜಗವನೆತ್ತುವ ವೀರ್ಯಂ
೧೦೭. ನಾಗಜ್ಯೋತಿರ್ವ್ಯಂತರ
೧೦೮. ಪಂಚಾಣುತ್ತರೆಯಿಂ
೧೦೯. ನರಕನಿಗೋದಂಗಳ
೧೧೦. ಕೇಡಿಲ್ಲದ ಸುಖಮಾವುದು?
೧೧೧. ಆವುಜ್ಜುಗಮೇನೆಂದೊಡೆ
೧೧೨. ಸಲೆಭೇದಭಕ್ತಿಯೆಂತುಟು
೧೧೩. ಶ್ರೀಸಮವಸರಣದೊಳ್ಜಿನರ್

೧೧೪. ಮತ್ತಾ ಜಿನರಂ ಸಿದ್ಧರಂ
೧೧೫. ದೇವನ ಬೇರಿಟ್ಟೊಲವಿಂ
೧೧೬. ಭೇದದ ಭಕ್ತಿಯ ಮೊದಲೊಳಗೆ
೧೧೭. ಜಿನರಂತೆ ಸಿದ್ಧರಂತೀ
೧೧೮. ಶಿಲೆಯಕಂಚುಂ ಲೆಪ್ಪವಂ
೧೧೯. ಅಪವಿತ್ರದೊಡಲೊಳಿರ್ದುಂ
೧೨೦. ಮರದೊಳಿಹುದಗ್ನಿ ಹೊಸೆದೊಡೆ
೧೨೧. ಮುಂಪೇಳ್ದ ಸಿದ್ಧರೆಲ್ಲರುಂ
೧೨೨. ಲೋಕತ್ರಯಮದನರಿಯಲ್
೧೨೩. ಕೆಲರೆಲ್ಲ ಸಲ್ಲದೆಂಬರ್
೧೨೪. ಆಸನ್ನಭವ್ಯರಾತ್ಮನಂ
೧೨೫. ಧ್ಯಾನಿಗೆ ಮೂರೇ ಭವಂ
೧೨೬. ಪ್ರಣವಸ್ವರೂಪ ತೇ ನಮ
೧೨೭. ಸಿದ್ಧಾಯನಮಃ
೧೨೮. ಮಣಿಶೈಲಂ ಗತಿಯಿಂದು (ವೃತ್ತ)

ತ್ರಿಲೋಕ ಶತಕ
ಪದ್ಯಗಳ ಅಕಾರಾದಿ

	ಪದ್ಯಸಂಖ್ಯೆ
ಅ	
ಅಡಿಜಕ್ಕಳಮೆಂಬಂದಂ	೧೧
ಅಡಿಯಿಂ ತುದಿಗೀಲೋಕಂ	೬
ಅದರ ಸರಿತದೊಳ್ ಮಾಡಲ್	೩೬
ಅದರೊಳ್ನಾಲ್ದೆಸೆಗಳೊಳಂ	೬೮
ಅಪವಿತ್ರದೊಡಲೊಳಿರ್ದುಂ	೧೧೯
ಅರಿದಿಹುದವನಿಂ ನಾಂ ಮೊದಲ್	೭೧
ಅರೆಗಾವುದಂ ಘನೋದಧಿ	೮೬
ಅಲ್ಲಿಂದ ಮೇಲೆಸಗ್ಗಂಗಳ್	೫೩
ಅವುಮಾನುಷೋತ್ತರಾದ್ರಿಯೊಲ್	೭೦
ಅಸುರಗೊಂದಂಬುಧಿ	೫೮
ಆ	
ಆಕಾರಮೆಯಹುದೊರ್ಮೆ	೯೯
ಆಕಾಶದಂತೆ ಬಹಲಹುದು	೧೦೨
ಆ ಗಿರಿಯ ಬಳಸಿಪಲವುಂ	೩೨
ಆ ನರಕಭೂಮಿಗಳೊಳ್	೧೫
ಆ ನರಕೋರ್ವ್ವರೆಯಿಂ	೨೬
ಆ ನಂದೀಶ್ವರ ದ್ವೀಪಕೆ	೬೯
ಆ ನುಡಿಯಂತಿರಲೀ ಬಳಿಕ್ಕೆ	೭೬
ಆ ಭವನಲೋಕದಿಂ	೨೮
ಆ ಮಾತಂತಿರಲಿನ್ನೀ	೪೬
ಆ ಮೂರು ಗಾಳಿಗಳೊಳ್	೮೭
ಆರುಂ ಸಾಸಿರದೊಡನೀ	೭೮
ಆ ಲವಣಂಭೋನಿಧಿಗೆ	೩೦
ಆವುಜ್ಜುಗಮೇನೆಂದೊಡೆ	೧೧೧
ಆಸನ್ನಭವ್ಯರಾತ್ಮನಂ	೧೨೪
ಆ ಹೇಮಪರ್ವತಂಗಳ	೩೮
ಇ	
ಇದು ಜಂಬೂದ್ವೀಪಂ	೨೯
ಇನ್ನುಳಿದ ವಿದೇಹಂಗಳ	೬೩
ಇಪ್ಪತ್ತೈದುಂ ಸಮಯಕೆ	೨೩
ಇರ್ಪುದು ರತ್ನವಿಮಾನಂ	೪೯
ಇಳಿಯೊಳ್ಬಿಡೆ ನಿಡುಲೋಹಾ	೧೩
ಈ	
ಈಕ್ಷಿಸೆ ಮೇರುವಿನಗ್ರದೆ	೧೦
ಈ ಜಂಬೂದ್ವೀಪದೊಳಭಿ	೩೫
ಎ	
ಎಂದಾದೊಡಂ ತ್ರಸತ್ವಕೆ	೮೧
ಎಂಬತ್ತನಾಲ್ಕು ಲಕ್ಷಾ	೬೦
ಎಂಬತ್ತನಾಲ್ಕು ಸಾಸಿರ	೩೭
ಎವೆಯಿಕ್ಕುವನಿತುಕಾಲಮು	೨೫
ಐ	
ಐರಾವತಭರತಜನ	೬೧
ಒ	
ಒಂದೇ ಕಾಲೊಂದೇ ಕೆಯ್	೭೩
ಓ	
ಓತೊಂದೇ ಸಮಯಕೆ	೫
ಓರ್ವರನೋರ್ವರ್ಕೆಡಪುವ	೧೬

ಕ
ಕಡಿದೊಂದು ಬಾರಿ ತನುವಂ ೨೦
ಕಡು ಬಿಳಿದು ಬಟ್ಟಿತದು ೮೪
ಕಡೆಯಿಲ್ಲದೆಸೆವ ಗಗನದ ೩
ಕರುಹೋರಿಯೆತ್ತುಗಳ್ ೯೧
ಕಾಯೋತ್ಸರ್ಗಂ ಪಲ್ಯಂಕ ೮೮
ಕಾಲೋದಕಾಬ್ಧಿಗಿರ್ಮಡಿ ೩೧
ಕುಂದಿದೊಡೆಮೂರುವರೆ ೮೯
ಕುಂದುಪೆರ್ಚುದ್ದದೊಳಗುಂ ೯೦
ಕೆಲರೆಲ್ಲ ಸಲ್ಲದೆಂಬರ್ ೧೨೩
ಕೆಳಗೇಳು ನಿರಯಭೂಮಿಗೆ ೧೨
ಕೇಡಿಲ್ಲದ ಸುಖಮಾವುದು? ೧೧೦

ಗ
ಗಾಳಿಯೊಳಿರುತಿಹರಿರ್ದುಂ ೯೫
ಗ್ರೈವೇಯಕದಿಂದೊಂದೊಂದು ೫೭

ಜ
ಜಿನರಂತೆ ಸಿದ್ಧರಂತೀ ೧೧೭
ಜೀವಾವಳಿ ಪುದ್ಗಲಚಯ ೪
ಜ್ಞಾನಾಕ್ಷಿಗೆ ತೋರುವರ್ ೯೮

ತ
ತನುವವರ್ಗಿಲ್ಲ ಸುಬೋಧಮೆ ೯೬
ತಲೆಯಿಂದಡಿ ಮುಟ್ಟಂ ೧೦೪
ತಳಗೇಳು ರಜ್ಜುಮಧ್ಯದೊಳ್ ೭
ತಮ್ಮೊಳ್ತಾಮೊಳಪೊಕ್ಕೊಡಂ ೯೨
ತಿಳಿವೆಳ್ದಿಂಗಳ್ನೋಟಕೆ ೧೦೦
ತುಂಬಿದ ಚಿದ್ಗುಣಮಂಬರಂ ೧೦೧
ತೆರಪಾದ ಶಾಸ್ತ್ರದೊಳ್ ೨
ತೋರುವ ತಾರಾಗಣಮಂ ೪೮
ತ್ರಸಮೆನೆ ಚರಿಸುವ ಜೀವಂ ೯
ತ್ರಿಜಗವನೆತ್ತುವ ವೀರ್ಯಂ ೧೦೬

ದ
ದೇವನ ಬೇರಿಟ್ಟೊಲವಿಂ ೧೧೫

ಧ
ಧ್ಯಾನಿಗೆ ಮೂರೇ ಭವಂ ೧೨೫

ನ
ನರಕಕ್ಕೆ ಮೇಗಣಿಂ ಕೆಳ ೫೫
ನರಕದ ದುಃಖಕ್ಕಂ ಕಡು ೭೯
ನರಕನಿಗೋದಂಗಳ ೧೦೯
ನರಕಮೆ ದುಃಖಂ ಮತ್ತಾ ೨೨
ನರಕಲೋಕದ ವಾರ್ತೆಯದು ೪೫
ನಿಡುಬೆಟ್ಟದನಿತುಕೊಳುಂ ೨೧
ನೀರೆಲ್ಲಂ ಕಬ್ಬಿನ ರಸದ ೭೨
ನುಡಿವಾಗಳೆನ್ನ ಮೆಯ್ನಡ ೮೨
ನೆರೆದೇಳ್ಕೋಟಿಯುಂ ೨೭
ನೆಲನೆಲ್ಲಂ ದುರ್ಗಂಧದೆ ೧೪

ಪ
ಪದಿನಾರುಂ ಕಲ್ಪಂಗಳ ೫೦
ಪಲವುಂ ದೀಪಂಗಳ್ ೯೪
ಪಂಚಾಣುತ್ತರೆಯಿಂ ೧೦೮
ಪಾಸುಂಗಿವಿ ಪೊದೆಕಿವಿಗಳ್ ೭೪
ಪೂರ್ವವಿದೇಹದೊಳೆಸಕಂ ೧
ಪೂರ್ವಾಪರಮೆಂಬ ೪೨
ಪ್ರಣವ ಸ್ವರೂಪ ತೇ ನಮ ೧೨೬

ಭ
ಭವನ ಜ್ಯೋತಿರ್ವ್ಯಂತರ ೬೪
ಭರತಮುಮೈರಾವತಂ ೪೧
ಭೇದದೆ ಭಕ್ತಿಯ ಮೊದಲೊಳಗೆ ೧೧೬
ಭೋಗಮಹಿ ಲೇಸು ಮತ್ತಾ ೪೦

ಮ
ಮಣಿಶೈಲಂ ಗತಿಯಿಂದು ೧೨೮
ಮತ್ತದರ ಮೇಲೆ ಪಂಚಾಣು ೫೨

ಮತ್ತಾ ಜಿನರಂ ಸಿದ್ಧರಂ ೧೧೪
ಮತ್ತೈರಾವತ ಭರತದ ೬೨
ಮನುಜಕ್ಷೇತ್ರದ ತೆರಪೆನಿತು ೩೪
ಮರದೊಳ್ ಕೆಚ್ಚೆಂತಿಹುದಾ ೮
ಮರದೊಳಿಹುದಗ್ನಿ ಹೊಸೆದೊಡೆ ೧೨೦
ಮಿಗೆಸಿದ್ಧಶಿಲೆಯಮೇಲೀ ೮೫
ಮುಟ್ಟಿ ಕೆಲನೋರ್ಡಿ ಕೆಲರ್ ೬೫
ಮುನ್ನ ಕುಪಾತ್ರಕೆ ಭಕ್ತಿಯೊಳ್ ೭೫
ಮುಂಪೇಳ್ದ ಸಿದ್ಧರೆಲ್ಲರುಂ ೧೨೧
ಮೂಲೋಕದೊಳಗು ಪೊರಗುಮಂ ೧೦೫
ಮೇಲೆ ಪೆಣ್ಣಿಲ್ಲವಿಲ್ಲದೊಡೆ ೬೬
ಮೇರುಗಳ ತೆಂಕಬಡಗಲ್ ೩೯
ಮೈಯ್ಯುಳ್ಳವರಿಟ್ಟಣಿಸಿದೊಡೆ ೯೩
ಮೊತ್ತಮೊದಲಿಂದೆ ತುದಿಗದು ೪೭
ಮೊದಲಿಂ ಕೆಳಗೇಳುಂ ೨೪
ಮೊದಲಿಂ ಯುಗ್ಮಂಗಳ್ಗೆರಡು ೫೬
ಮೊರೆಯಿಡುವರ್ಗೋಳಿಡುವರ್ ೧೯

ಲ

ಲೋಕತ್ರಯಮದನರಿಯಲ್ ೧೨೨
ಲೋಹದ ಪೆಣ್ಬುತ್ತಳಿಯಂ ೧೮

ವ

ವರಮಾನುಷೋತ್ತರಾಚಳ ೩೩
ವರ್ಣಂಗಳೈದುಮಿಲ್ಲಂ ೯೭
ವ್ರತದಾನ ಪೂಜೆಯುಂಟು ೪೪
ವಿಜಯಾರ್ಧಗಿರಿಗಳಿರ್ಕುಂ ೪೩

ಶ

ಶಿಲೆಯಂ ಕಂಚುಂ ಲೆಪ್ಪವಂ ೧೧೮
ಶ್ರೀ ಸಮವಸರಣದೊಳ್ ಜಿನರ್ ೧೧೩

ಸ

ಸಗ್ಗಮೆ ಸುಖವಹುದಂತಾ ೫೪
ಸಂದಾಗ್ರೈವೇಯಕದಿಂ ೫೧
ಸಲೆಭೇದಭಕ್ತಿಯೆಂತುಟು ೧೧೨
ಸಮ್ಯಕ್ತ್ವಂ ಮೊದಲಾದ ಸುರಮ್ಯ ೧೦೩
ಸಾಗರಮಂಸುಜ್ಞಾನದೆ ೫೯
ಸಾಗರಮನಿತೆನಿತೆಂದೊಡದು ೮೦
ಸ್ಕಂದಮುಮಂಡರಮಾವಾಸಂ ೭೭
ಸರ್ವಾರ್ಥಸಿದ್ಧಿಯಿಂ ೮೩
ಸಿದ್ಧಾಯ ನಮಃ ೧೨೭
ಸುಡುವರ್ಕಳ್ಳಿದೆ ಬಿಡದುರೆ ೧೭

ಹ

ಹೋಹೋ ಸ್ವರ್ಗದ ವಾರ್ತೆಯ ೬೭

೧. ರತ್ನಾಕರಶತಕಂ

೧. ರತ್ನಾಕರಶತಕಂ

ಶ್ರೀರಾಗಂ ಸಿರಿಗಂಪು ಮಾಲೆ ಮಣಿಹಾರಂ ವಸ್ತ್ರಮಂಗಕ್ಕಲಂ-।
ಹಾರಂ ಹೇಯಮಿವಾತ್ಮ ತತ್ತ್ವರುಚಿ ಬೋಧೋದ್ಯಚ್ಚರಿತಂಗಳೀ॥
ತ್ರೈರತ್ನಂ ಮನಸಿಂಗೆ ಸಿಂಗರಮುಪಾದೇಯಂಗಳೆಂದಿತ್ತೆ ಶೃಂ-।
ಗಾರಶ್ರೀಕವಿಹಂಸರಾಜನೊಡೆಯಾ ರತ್ನಾಕರಾಧೀಶ್ವರಾ॥ ॥೧॥

ಚಂದನಾದಿ ಸುಗಂಧ ಲೇಪನಗಳು, ಪರಿಮಳಭರಿತ ಪುಷ್ಪಹಾರಗಳು, ನವರತ್ನಯುಕ್ತ ಮಣಿಹಾರಗಳು, ವರ್ಣಮಯ ವಸ್ತ್ರಾದಿಗಳು ದೇಹಕ್ಕೆ ಅಲಂಕಾರ ಯೋಗ್ಯವು; ಆದ್ದರಿಂದ ಇವು ಹೇಯವು. ಆತ್ಮತತ್ವ, ರುಚಿಬೋಧೆ, ಶ್ರೇಷ್ಠಚಾರಿತ್ರ ಎಂಬ ಸಮ್ಯಕ್‌ದರ್ಶನ ಜ್ಞಾನ ಚಾರಿತ್ರಗಳು ಮನೋಶೃಂಗಾರಗಳಾಗಿವೆ, ಇವು ಸ್ವೀಕಾರ ಯೋಗ್ಯವಾಗಿವೆ. ಇಂಥ ಸ್ವೀಕರಿಸಲು ಯೋಗ್ಯರತ್ನಗಳನ್ನು ನೀನು ಇತ್ತಿರುವೆ.

ತತ್ತ್ವಪ್ರೀತಿ ಮನಕ್ಕೆ ಪುಟ್ಟಲದು ಸಮ್ಯಗ್ದರ್ಶನಂ ಮತ್ತಮಾ।
ತತ್ತ್ವಾರ್ಥಂಗಳನೊಲ್ದು ಭೇದಿಪುದು ಸಮ್ಯಗ್ಜ್ಞಾನಮಾ ಬೋಧದಿಂ॥
ಸತ್ತ್ವಂಗಳ್ಕಿಡದಂತುಟೋವಿ ನಡೆಯಲ್ಸಮ್ಯಕ್ಚರಿತ್ರಂ ಸುರ-।
ತ್ನತ್ವಂ ಮೂರಿವು ಮುಕ್ತಿಗೆಂದರುಪಿದೈ! ರತ್ನಾಕರಾಧೀಶ್ವರಾ॥ ॥೨॥

ಜೀವಾದಿ ತತ್ತ್ವಗಳಲ್ಲಿ ಶ್ರದ್ಧೆ ಹುಟ್ಟುವುದೇ ಸಮ್ಯಕ್ ದರ್ಶನ; ಇನ್ನು ಆ ತತ್ತ್ವಾರ್ಥಗಳನ್ನು ಆಸಕ್ತಿಯಿಂದ ಅಭ್ಯಸಿಸಿ ಅರಿಯುವುದೇ ಸಮ್ಯಕ್ ಜ್ಞಾನ; ಹೀಗೆ ಉಂಟಾದ ಜ್ಞಾನದಿಂದ ಜೀವಹಿಂಸೆಯಾಗದಂತೆ ನಡೆದುಕೊಳ್ಳುವುದೇ ಸಮ್ಯಕ್ ಜ್ಞಾನ; ಹೀಗೆ ಉಂಟಾದ ಜ್ಞಾನದಿಂದ ಜೀವಹಿಂಸೆಯಾಗದಂತೆ ನಡೆದುಕೊಳ್ಳುವುದೇ ಸಮ್ಯಕ್ ಚಾರಿತ್ರ; ಇಂಥ ರತ್ನತ್ರಯ, ಮುಕ್ತಿಗೆ ಸಾಧನವಾಗಿವೆ ಎಂದು ಬೋಧಿಸಿರುವೆ.

ಮಿಗೆ ಷಡ್ದ್ರವ್ಯಮನಸ್ತಿಕಾಯಮೆನಿಪ್ಪೈದಂ ತತ್ತ್ವವೇಳಂ ಮನಂ।
ಬುಗಲೊಂಬತ್ತು ಪದಾರ್ಥಮಂ ತಿಳಿದೊಡಂ ತನ್ನಾತ್ಮನೀ ಮೈಯ ದಂ-॥
ದುಗದಿಂ ಬೇರೊಡಲೇನಚೇತನಮೇ ಜೀವಂ ಚೇತನಂ ಜ್ಞಾನರೂ-।
ಪಿಗಡಾಯೆಂದರಿದಿರ್ದನೇ ಸುಖಿಯಲಾ! ರತ್ನಾಕರಾಧೀಶ್ವರಾ॥ ॥೩॥

ಆರು ದ್ರವ್ಯಗಳನ್ನೂ ಐದು ಆಸ್ತಿಕಾಯಗಳನ್ನೂ ಏಳು ತತ್ತ್ವಗಳನ್ನೂ ಒಂಬತ್ತು ಪದಾರ್ಥಗಳನ್ನೂ ಮನಸ್ಸಿಗೆ ನಾಟುವಂತೆ ತಿಳಿದರೆ ಸಾಲದು; ತನ್ನ ಆತ್ಮನು ಈ ದೇಹದ ಕಷ್ಟಗಳಿಂದ ಬೇರೆ ಆದವನು; ಒಡಲು ಅಚೇತನ; ನಶ್ವರ; ಜೀವ ಚೈತನ್ಯರೂಪಿ ಮತ್ತು ಜ್ಞಾನರೂಪಿ, ಹೀಗೆಂದು ತಿಳಿದವನೇ ಪರಮಸುಖಿ, ಎಂದರೆ ಭೇದವಿಜ್ಞಾನದಿಂದ ಆತ್ಮಜ್ಞಾನಿ ಆದವನೇ ಪರಮಸುಖಿ.

ಅರಿವಿಂದೀಕ್ಷಿಸಲಕ್ಕುಮಾತ್ಮನಿರವಂ ದೇಹಂಬೊಲೀ ಕಣ್ಗೆ ತಾಂ।
ಗುರಿಯಾಗಂ ಸಿಲೆಯೊಳ್ಸುವರ್ಣಮರಲೊಳ್ಸೌರಭ್ಯಮಾ ಕ್ಷೀರದೊಳ್॥
ನರು ನೆಯ್ಕಾಷ್ಠದೊಳಗ್ನಿಯಿರ್ಪತೆರದಿಂದಿಳಿ ಮೈಯೊಳೊಂದಿರ್ಪನೆಂ –।
ದರಿದಭ್ಯಾಸಿಸೆ ಕಾಣ್ಬುಗುಮೆಂದರುಪಿದೈ! ರತ್ನಾಕರಾಧೀಶ್ವರಾ॥ ॥೪॥

ಆತ್ಮಸ್ವರೂಪವನ್ನು ಜ್ಞಾನಚಕ್ಷುಗಳಿಂದ ಕಾಣಲು ಶಕ್ಯ; ಶರೀರದ ಚರ್ಮಚಕ್ಷುಗಳಿಗೆ ಕಾಣುವುದಿಲ್ಲ; ಆದ್ದರಿಂದ ಕಲ್ಲಿನಲ್ಲಿ ಚಿನ್ನ, ಹೂವಿನಲ್ಲಿ ಕಂಪು, ಹಾಲಿನಲ್ಲಿ ಸವಿದುಪ್ಪ, ಕಟ್ಟಿಗೆಯಲ್ಲಿ ಬೆಂಕಿ ಅಡಗಿಕೊಂಡಿರುವಂತೆ, ದೇಹದಲ್ಲಿ ಆತ್ಮನಿದ್ದಾನೆ ಎಂದು ತಿಳಿದವನಿಗೆ ಆತ್ಮದರ್ಶನ ಆಗುತ್ತದೆ.

ಕಲ್ಲೊಳ್ತೋರ್ಪಪೊಗರ್ಸು ವರ್ಣದ ಗುಣಂ ಕಾಷ್ಠಂಗಳೊಳ್ತೋರ್ಪ ಕೆ–।
ಚ್ಚೆಲ್ಲಾ ಕಿಚ್ಚಿನ ಚಿಹ್ನವಾ ಕೆನೆಯಿರಲ್ಪಾಲೊಳ್ಘೃತಚ್ಛಾಯೆಯೆಂ–॥
ದೆಲ್ಲರ್ಬಣ್ಣಿಪರಂತುಟೀ ತನುವಿನೊಳ್ ಚೈತನ್ಯಮುಂ ಬೋಧಮುಂ।
ಸೊಲ್ಲುಂ ಜೀವಗುಣಂಗಳೆಂದರುಪಿದೈ! ರತ್ನಾಕರಾಧೀಶ್ವರಾ॥ ॥೫॥

ಕಲ್ಲಿನಲ್ಲಿ ತೋರುವ ಕಾಂತಿಯು ಚಿನ್ನದ ಗುಣ; ಸೌದೆಯಲ್ಲಿ ಕಾಣುವ ಗಟ್ಟಿತನ ಬೆಂಕಿಯ ಲಕ್ಷಣ; ಹಾಲಿನ ಕೆನೆಯು ತುಪ್ಪದ ಚಿಹ್ನೆ; ಎಂಬುದಾಗಿ ಎಲ್ಲರೂ ಹೇಳುವವರು. ಹಾಗೆಯೇ ಚೇತನ, ಜ್ಞಾನ, ವಚನ ರೂಪಗಳಲ್ಲಿ ಜೀವದ ಅಸ್ತಿತ್ವವಿದೆ.

ಮತ್ತಾಕಲ್ಲನೆ ಸೋದಿಸಲ್ಕನಕಮಂ ಕಾಣ್ಬಂತೆ ಪಾಲಂ ಕ್ರಮಂ।
ಬೆತ್ತೊಳ್ಪಿಂ ಮಥನಂಗೆಯಲ್ಘೃತಮುಮಂ ಕಾಣ್ಬಂತೆ ಕಾಷ್ಠಂಗಳಂ॥
ಒತ್ತಂಬಂ ಪೊಸೆದಗ್ನಿ ಕಾಣ್ಬತೆರದಿಂ ಮೈ ಬೇರೆ ಬೇರಾನೆನು–।
ತ್ತಿತ್ತಭ್ಯಾಸಿಸಲೆನ್ನ ಕಾಣ್ಬುದರಿದೆ? ರತ್ನಾಕರಾಧೀಶ್ವರಾ॥ ॥೬॥

ಆದ್ದರಿಂದ ಸೂಕ್ತಕ್ರಮದಲ್ಲಿ ಕಲ್ಲನ್ನು ಶೋಧಿಸಿದರೆ ಚಿನ್ನವನ್ನು ಕಾಣಬಹುದು; ಹಾಲನ್ನು ಕ್ರಮವಾಗಿ ಮೊಸರು ಮಾಡಿ ಕಡೆದರೆ ಬೆಣ್ಣೆ ಬಂದು ತುಪ್ಪವನ್ನು ಪಡೆಯಬಹುದು; ಕಟ್ಟಿಗೆಯನ್ನು ಬಲವಾಗಿ ಉಜ್ಜಿದಾಗ ಬೆಂಕಿಯನ್ನು ಪಡೆಯಬಹುದು; ಅದೇ ರೀತಿ ಭೇದವಿಜ್ಞಾನದಿಂದ "ದೇಹ ಬೇರೆ; ನಾನು ಬೇರೆ"ಎಂದು ಅರಿತರೆ ಆತ್ಮನನ್ನು ತಿಳಿಯುವುದು ಸಾಧ್ಯ.

ಅಂಗುಷ್ಠಂ ಮೊದಲಾಗಿ ನೆತ್ತಿವರೆಗಂ ಸರ್ವಾಂಗಸಂಪೂರ್ಣನು-।
ತ್ತುಂಗಜ್ಞಾನಮಯಂ ಸುದರ್ಶನಮಯಂ ಚಾರಿತ್ರತೇಜೋಮಯಂ॥
ಮಾಂಗಲ್ಯಂ ಮಹಿಮಂ ಸ್ವಯಂಭು ಸುಖಿ ನಿರ್ಬಾಧಂ ನಿರಾಪೇಕ್ಷಿ ನಿ-।
ಮ್ಮಂಗಂಬೊಲ್ವರಮಾತ್ಮನೆಂದರುಪಿದೈ! ರತ್ನಾಕರಾಧೀಶ್ವರಾ॥ ॥೭॥

ಪರಮಾತ್ಮನು ನಮ್ಮ ಶರೀರದ ಹಾಗೆ ಕಾಲಿನ ಹೆಬ್ಬೆರಳಿನಿಂದ ನೆತ್ತಿಯವರೆಗೆ ಸರ್ವಾಂಗಭರಿತನಾಗಿದ್ದಾನೆ. ಶ್ರೇಷ್ಠಜ್ಞಾನಿ; ಸಮ್ಯಕ್‌ದರ್ಶನ ಸ್ವರೂಪಿ; ಸಮ್ಯಕ್ ಚಾರಿತ್ರ ಪ್ರಕಾಶರೂಪಿ; ಮಂಗಳಸ್ವರೂಪಿ; ಸ್ವಯಂಭು; ಸುಖರೂಪಿ; ನಿರ್ಬಾಧನು; ವಿಷಯಾಸಕ್ತಿರಹಿತನು; ಆಗಿದ್ದಾನೆ.

ಬಿಸಿಲಿಂ ಕಂದದ ಬೆಂಕಿಯಿಂ ಸುಡದ ನೀರಿಂ ನಾಂದದುಗ್ರಾಸಿ ಭೇ-।
ದಿಸಲುಂಬಾರದ ಚಿನ್ಮಯಂ ಮರೆದು ತನ್ನೊಳ್ಪಂ ಪರಧ್ಯಾನದಿಂ॥
ಪಸಿವಿಂದೀ ಬಹುಬಾಧೆಯಿಂ ರುಜೆಗಳಿಂ ಕೇಡಾಗುವೀ ಮೆಯ್ಗೆ ಸಂ-।
ದಿಸಿದಂ ತನ್ನನೆ ಚಿಂತಿಸಲ್ಸುಖಿಯಲಾ ರತ್ನಾಕರಾಧೀಶ್ವರಾ॥ ॥೮॥

ಬಿಸಿಲಿಗೆ ಕಂದದವನು; ಬೆಂಕಿಯಲ್ಲಿ ಸುಡದವನು; ನೀರಿನಲ್ಲಿ ನೆನೆಯದವನು; ಕ್ರೂರಖಡ್ಗದ ಪ್ರಹಾರಕ್ಕೆ ಸಿಲುಕದವನು ಆದ ಚಿನ್ಮಯರೂಪಿ; ಆತನು ಸ್ವಸ್ವರೂಪವನ್ನು ಮರೆತು ಇತರ ವಸ್ತುಗಳ ಆಸೆಯಿಂದ ಹಸಿವಿನಿಂದ ಕಂಗೆಟ್ಟು ನಾನಾಬಾಧೆಗಳಿಂದ ಬವಣೆಪಟ್ಟು, ರೋಗರುಜಿನಗಳಿಂದ ಕೇಡುಹೊಂದಿ, ನಶ್ವರವಾದ ದೇಹವನ್ನೇ ನಂಬಿ ಬಳಲುತ್ತಿದ್ದಾನೆ; ಇದರ ಬದಲು ತನ್ನ ಸ್ವಸ್ವರೂಪಚಿಂತನೆ ಮಾಡಿದರೆ ಸುಖಿಯಾಗುತ್ತಾನೆ.

ಒಡಲೆಂಬೀ ಜಡನಂ ಲಯಪ್ರಕರನಂ ನಿಶ್ಚೇಷ್ಟನಂ ದುಷ್ಟನಂ।
ಪಡಿಮಾತೇಂ ಪೆಣನಂ ಮಹಾತ್ಮನಹಹಾ ತನ್ನೊಂದು ಚೈತನ್ಯದಿಂ॥
ನಡೆಯಿಪ್ಪಂ ರಥಿಕಂಬೋಲೇಂ ನುಡಿಯಿಪಂ ಮಾರ್ದಂಗಿಕಂಬೊಲ್ಬಿಸು-।
ಳ್ಬಿಡುವಂ ಜೋಹಟಿಗಂಬೋಲೇಂ ಕುಶಲನೋ ರತ್ನಾಕರಾಧೀಶ್ವರಾ॥ ॥೯॥

ಮಹಾತ್ಮನಾದ ಆತ್ಮನು ನಾಶಹೊಂದುವವನೂ, ವ್ಯಾಪಾರರಹಿತನೂ ದೋಷಯುಕ್ತನೂ, ಹೆಚ್ಚೇನು ಹೇಳುವುದಿದೆ, ಹೆಣವೇ ಆದ ಶರೀರವೆಂಬ ಜಡನನ್ನು ತನ್ನ ಚೈತನ್ಯದಿಂದ ರಥಿಕನಂತೆ ಆಡಿಸುತ್ತಾನೆ; ಮದ್ದಲಿಗನಂತೆ ನುಡಿಸುತ್ತಾನೆ ವೇಷಧಾರಿಯಂತೆ ಬಿಸಾಡುತ್ತಾನೆ, ದೇಹವನ್ನು ಮನಬಂದಂತೆ ಆಡಿಸುವ ಆತ್ಮನು ಅದೆಂಥ ಅದ್ಭುತ ಕುಶಲಿ!

ಬೀಳ್ದಿರ್ಪಂ ತನುವೆಂಬ ಪಂದೊವಲ ಕೂರ್ಪಾಸಂಗಳಂ ತೊಟ್ಟು ತಾ-।
ನೇಳ್ದಿರ್ಪಂ ತನುಗೂಡಿ ಸಂಚರಿಪನಾ ಮೈಗೂಡಿ ತನ್ನೊಳ್ಪುಮಂ॥
ಕೇಳ್ದಿರ್ಪಂ ತನುಗೂಡಿ ತತ್ತನುಗೆ ಜೀವಂ ಪೇಸಿ ಸುಜ್ಞಾನದಿಂ।
ಪೊಳ್ದಿರ್ಪಂ ಶಿವನಾಗಿಯೇಂ ಚದುರನೋ ರತ್ನಾಕರಾಧೀಶ್ವರಾ॥ ॥೧೦॥

ಜೀವನು ಶರೀರವೆಂಬ ಹಸಿಚರ್ಮದ ಕವಚತೊಟ್ಟು ಬಿದ್ದಿರುವವನು; ಶರೀರದೊಡನೆ ಎದ್ದಿರುವವನು; ತನುವಿನೊಡನೆಯೇ ಸಂಚರಿಸುವವನು; ಶರೀರಿಯಾಗಿಯೇ ತನ್ನ ಸ್ವರೂಪವನ್ನು ತಿಳಿಯವನು ತನ್ನ ಶರೀರಕ್ಕೆ ಹೇಸಿ ಸುಜ್ಞಾನದ ಬಲದಿಂದ ಪರಮಾತ್ಮನಾಗುವನು; ಜೀವನಂಥ ಸುಕೃತಶಾಲಿ ಇನ್ನುಂಟೇ?

ಬೂರಂ ವಾರಿಯೊಳಳ್ದಿಯೂರ್ಧ್ವಗಮನಂಗೆಟ್ಟುರ್ವಿಯೊಳ್ಬಿಳ್ದು ದೂ-।
ಳ್ಭಾರೈಸಲ್ಸುಳಿಗಾಳಿಯಿಂದುರುಳ್ವವೊಲ್ಕರ್ಮಂಗಳಿಂ ನಾಂದು ಮೆ॥
ಯ್ಭಾರಂದಾಳ್ದುರೆ ಕರ್ಮಮೊಯ್ದೆಡೆಗೆ ಸುತ್ತುತ್ತಿರ್ಪೆನಂತಲ್ಲದಾ-।
ನಾರೀ ಸಂಸೃತಿಯಾರೊ ಮೋಕ್ಷಕನೆನಾಂ ರತ್ನಾಕರಾಧೀಶ್ವರಾ॥ ॥೧೧॥

ಬೂರಗದ ಹತ್ತಿ ನೀರಿನಲ್ಲಿ ನೆನೆದು ಮೇಲೇರುವ ಶಕ್ತಿಯನ್ನು ಕಳೆದುಕೊಂಡು ಭೂಮಿಗೆ ಬಿದ್ದು ಧೂಳು ತುಂಬಿಕೊಂಡು ಸುಳಿಗಾಳಿಗೆ ಸಿಲುಕಿ ಉರುಳುವಂತೆ ಕರ್ಮಗಳೆಂಬ ನೀರಿಂದ ನೆನೆದು ಶರೀರಭಾರವೆಮಬ ಧೂಳಿಂದ ತುಂಬಿ ಕರ್ಮವೆಂಬ ಸುಳಿಗಾಳಿಗೆ ಸಿಕ್ಕಿ ಅದು ಕೊಂಡೊಯ್ದ ಕಡೆಗೆ ಹೋಗುತ್ತಾ ತೊಳಲಾಡುತ್ತಿರುವೆನು. ಹಾಗಲ್ಲದಿದ್ದರೆ ನಾನು ಯಾರು? ಈ ಸಂಸಾರ ಯಾವುದು? ನನಗೆ ಮೋಕ್ಷವುಂಟೇ? ತಿಳಿಸು.

ತನುವೇ ಸ್ಫಾಟಿಕಪಾತ್ರೆಯಿಂದ್ರಿಯದ ಮೊತ್ತಂ ತಾನೆ ಸದ್ವರ್ತಿ ಜೀ-।
ವನವೇ ಜ್ಯೋತಿಯದರ್ಕೆ ಪಜ್ಜಳಿಸುವಾ ಸುಜ್ಞಾನಮೇ ರಶ್ಮಿಯಿಂ-॥
ತಿನಿತುಂ ಕೂಡಿದೊಡೇನೊ ರಶ್ಮಿಯೊದವಿಂಗೇಂ ದೇವ! ನಿನ್ನೆನ್ನ ಚಿಂ-।
ತನೆಗಳ್ನೋಡೆ ಘೃತಂಬೊಲೆಣ್ಣೆವೊಲಲಾ! ರತ್ನಾಕರಾಧೀಶ್ವರಾ॥ ॥೧೨॥

ಶರೀರ ಶುಭ್ರ ಸ್ಪಟಿಕಶಿಲಾಪಾತ್ರೆ; ಇಂದ್ರಿಯಗಳ ಸಮೂಹವೇ ಒಳ್ಳೆಯ ಬತ್ತಿ; ಪ್ರಾಣಧಾರಣೆಯೆ ದೀಪಕಾಂತಿ; ಹೊಳೆಯುವ ಸಮ್ಯಕ್‌ಜ್ಞಾನವೇ ಕಿರಣಾವಳಿ, ಇಷ್ಟೆಲ್ಲ ಇದ್ದರೂ ಪ್ರಯೋಜನವಿಲ್ಲ. ಬೆಳಕು ಬರಲು, ದೀಪ ಬೆಳಗಲು ವಿಚಾರ ಮಾಡಿದರೆ ನಿನ್ನನ್ನು ಕುರಿತ ಧ್ಯಾನತಪಗಳಿಗೆಲ್ಲಾ ಪರಮಾತ್ಮನ ಚಿಂತನೆಯೆಂಬ ಎಣ್ಣೆ-ತುಪ್ಪಗಳು ಅಗತ್ಯವಲ್ಲವೇ?

ತನುವೇಂ ತಾಮ್ರನಿವಾಸಮೋ ಮಳಲಬೆಟ್ಟೋಳ್ತೋಡಿ ಬೀಡಂ ಮರು-।
ಳ್ಮನವೊಲ್ದಿರ್ಪವೊಲಿಂದೊ ನಾಳೆಯೋ ತೊಡಂಕೇಂ ನಾಳಿದೋ ಈಗಳೋ॥
ಘನದೊಡ್ಡೆಂಬವೊಲೊಡ್ಡಿಯೊಡ್ಡಳಿವ ಮೈಯೊಳ್ಮೋಸವೇಕಿರ್ದಪೈ।
ನೆನೆದಿರ್ಜೀವನೆ ಮೇಲನೆಂದರುಪಿದೈ ರತ್ನಾಕರಾಧೀಶ್ವರಾ॥ ॥೧೩॥

ಶರೀರವು ತಾಮ್ರದ ಮನೆಯೇ? ಅಲ್ಲ. ಬಾಳಿಕೆ ತಾಳಿಕೆ ಇರುವುದಿಲ್ಲ. ಮರಳಿನ ಗುಡ್ಡದಲ್ಲಿ ಮನೆಯನ್ನು ಪಾಯ ತೋಡಿಕಟ್ಟಿ ಹುಚ್ಚು ಮನಸ್ಸು ನಂಬಿದಂತೆ ಆಗಿದೆ ಈ ದೇಹಕ್ಕೆ ಅಪಾಯವು ಈಗಲೋ ನಾಳೆಯೋ ನಾಳಿದ್ದೋ ಕಾದಿದೆ. ಮೋಡಗಳ ಗುಂಪು ಸೇರಿದ ಹಾಗೆ ಸೇರಿ ಸೇರಿ ಚೆದರಿ ನಾಶವಾಗುವ ಶರೀರದಲ್ಲಿ ವಂಚನೆ ಅಡಗಿದೆ; ಆದ್ದರಿಂದ ಸುಮ್ಮನಿರಬೇಡ; ಎಚ್ಚೆತ್ತು ಆತ್ಮೋನ್ನತಿಯನ್ನು ನೆನೆದು ಸಾಧಿಸು.

ಉಂಬೂಟಂ ಮಿಗಿಲಾಗೆ ಯೇರುವ ಹಯಂ ಬೆಚ್ಚಲ್ಕೆ ನೀರ್ಮೂಗಿನೊ-।
ಳ್ತುಂಬಲ್ಪೋಗುತೆ ಮುಗ್ಗಿಯುಂ ಮರಣಮಕ್ಕುಂ ಜೀವಕೀ ದೇಹವೆ-॥
ಷ್ಟಂ ಬಾಳ್ದಷ್ಟದು ಲಾಭವೀ ಕಿಡುವ ಮೈಯ್ಯಂ ಕೊಟ್ಟು ನಿತ್ಯತ್ವವಾ-।
ದಿಂಬಂ ಧರ್ಮದೆ ಕೊಂಬವಂ ಚದುರನೈ ರತ್ನಾಕರಾಧೀಶ್ವರಾ॥ ॥೧೪॥

ಮಾಡುವ ಊಟ ಸ್ವಲ್ಪ ಅತಿಯಾದರೆ, ಹತ್ತುವ ಕುದುರೆ ಬೆದರಿದರೆ ನೀರು ಮೂಗಿನಲ್ಲಿ ತುಂಬಿಕೊಂಡರೆ, ಅಷ್ಟೇಕೆ ನಡೆಯುತ್ತಾ ಮುಗ್ಗರಿಸಿದರೂ ಸರಿಯೆ, ಸಾವು ಸಿದ್ಧ. ಜೀವಕ್ಕೆ ಈ ದೇಹದಿಂದ ಎಷ್ಟು ಲಾಭ ಎಂದರೆ ಬದುಕಿದಷ್ಟೇ ಕಾಲ ಲಾಭ. ಆದ್ದರಿಂದ ಸ್ಥಿರವಲ್ಲದ ಈ ದೇಹವನ್ನು ತ್ಯಜಿಸಿ ನಿತ್ಯತ್ವಕ್ಕೆ ನೆಲೆಯಾದ ಮುಕ್ತಿಯನ್ನು ಧರ್ಮಮಾರ್ಗದಲ್ಲಿ ಪಡೆಯುವವನೇ ಜಾಣನಲ್ಲವೆ?

ಪುಲುವೀಡೊಳ್ಬಲವುಂ ಪಗಲ್ಪರದನಿರ್ದಾದಾಯಮಮಂ ಪೆತ್ತು ಬಾ-।
ಳ್ವೆಲೆಯುಳ್ಳೊಂದೆಡೆಗೈದಲಾ ನೆಲೆಯವರ್ನೋವಂತೆ ಪಾಳ್ಮೈಯ್ಯೊಳಿ-॥
ರ್ದೊಲವಿಂ ಪುಣ್ಯಮನೀ ಮನಂ ಗಳಿಸಿಕೊಂಡಾ ದೇವಲೋಕಕ್ಕೆ ಪೋ-।
ಗಲೊಡಂ ನೋವರವಂಗೊ ನೋವು ತಮಗೋ ರತ್ನಾಕರಾಧೀಶ್ವರಾ॥ ॥೧೫॥

ಹುಲ್ಲು ಮನೆಯಲ್ಲಿ ಕೆಲವು ಕಾಲ ವ್ಯಾಪಾರಿಯೊಬ್ಬನು ವಾಸ ಮಾಡಿದ್ದು ಲಾಭವನ್ನು ಗಳಿಸಿ ಬಾಳಲು ಯೋಗ್ಯವಾದ ಒಂದು ದೊಡ್ಡ ಮನೆಗೆ ಹೋಗುವಂತೆ, ನಶಿಸುವ ಈ ಶರೀರದಲ್ಲಿ ನೆಲೆಸಿದ್ದು ಪ್ರೀತಿಯಿಂದ ಪುಣ್ಯವನ್ನು ಆತ್ಮನು ಸಂಪಾದಿಸಿಕೊಂಡು ಸ್ವರ್ಗಕ್ಕೆ ಹೋದರೆ, (ಮುಕ್ತಿ ಹೊಂದಿದರೆ) ಬಂಧುಗಳು ದುಃಖಿಸುವರು. ಈ ದುಃಖವವು ಸ್ವರ್ಗವೇರಿದ ಜೀವಾತ್ಮನನ್ನು ತಾಗುತ್ತದೋ? ನಮಗೆ ತಾಗುತ್ತದೋ? ಎಂದರೆ ಅದು ನಮಗೆ. ಆದ್ದರಿಂದ ಹಾಗೆ ದುಃಖಿಸುವುದು ವ್ಯರ್ಥ. ಏಕೆಂದರೆ ಮರಣವೇ ಮಹಾನವಮಿ; ಮೃತ್ಯುವೇ ಮಹೋತ್ಸವ!

ದಾನಕ್ಕಿಲ್ಲ ತಪಕ್ಕೆ ಸಲ್ಲ ಮರಣಂಗಾಣ್ಬಂದು ನಿಮ್ಮಕ್ಷರ–।
ಧ್ಯಾನಕ್ಕೊಲ್ಲೆನೆನಿಪ್ಪವಂ ಮಡಿಯೇ ನೋಯಲ್ತಕ್ಕುದಿಷ್ಟಾದಿಗಳ್॥
ದಾನಂಗೈಯ್ದು ತಪಕ್ಕೆ ಪಾಯ್ದು ಮರಣಂಗಾಣ್ಬಂದು ನಿಮ್ಮಕ್ಷರ–।
ಧ್ಯಾನಂಗೈಯ್ದಳಿದಂಗೆ ಶೋಕಿಪರದೇಂ? ರತ್ನಾಕರಾಧೀಶ್ವರಾ॥ ॥೧೬॥

ದಾನ ಮಾಡದೆ, ತಪವೆಸಗದೆ, ಸಾಯುವ ಕಾಲದಲ್ಲಿ ನಿಮ್ಮ ನಾಮಧ್ಯಾನಕ್ಕೆ (ನಾಮ ಸ್ಮರಣೆಗೆ) ಅಪೇಕ್ಷಿಸದೆ ಇದ್ದವನು ಸಾಯಲು, ಅವನಿಗಾಗಿ (ಹೀಗಾದನಲ್ಲಾ) ಎಂದು ದುಃಖಿಸುವುದು ನ್ಯಾಯ. ಆದರೆ ದಾನವನ್ನು ಮಾಡಿ ತಪಸ್ಸಿಗೆ ಹೋಗಿ ನಿಮ್ಮ ನಾಮಸ್ಮರಣೆಯಲ್ಲಿ ಸಾವನ್ನಪ್ಪಿದವನಿಗೆ (ಆತ್ಮಕಲ್ಯಾಣ ಹೊಂದಿದವನಿಗೆ) ಶೋಕಿಸುವುದು ಸರಿಯಲ್ಲ.

ಸಾವಿಗಂಜಲದೇಕೆ ಸಾವು ಪೆರತೇ ಮೆಯ್ದಾಳ್ದಿದರ್ಗಂಜಲಾ।
ಸಾವೇಂ ಮಾಣ್ಗುಮೆ ಕಾವರುಂಟೆಯಕಟಾ! ಈ ಜೀವನೇನೆಂದುವುಂ॥
ಸಾವಂ ಕಂಡವನಲ್ಲವೇ ಮರಣವಾಗಲ್ಮುಂದದೇಂ ಪುಟ್ಟನೇ।
ನೀವೆನ್ನೊಳ್ನಿಲೆ ಸಾವುದುಂ ಸುಖವಲ್ತೆ! ರತ್ನಾಕರಾಧೀಶ್ವರಾ॥ ॥೧೭॥

ಸಾವಿಗೆ ಹೆದರುವುದೇಕೆ? ಶರೀರಧಾರಿಗಳಿಗೆ ಸಾವು ಹೊಸದೇ? ಹೆದರಿದರೆ ಮರಣ ತಪ್ಪುವುದೇ? ಸಾವಿನಿಂದ ಕಾಪಾಡುವವರು ಯಾರಿದ್ದಾರೆ? ಅಯ್ಯೋ! ಈ ಜೀವನಾದರೋ ಮರಣವನ್ನು ಯಾವತ್ತೂ ಕಂಡಿಲ್ಲವೇ? ಸತ್ತರೇನಾಯಿತು? ಮತ್ತೆ ಹುಟ್ಟುವುದಿಲ್ಲವೆ? ಇಷ್ಟಕ್ಕೂ ನೀವು (ಜಿನದೇವ) ನನ್ನಲ್ಲಿ ನೆಲೆಸಿದಾಗ ಸಾವೂ ಸುಖಕರವಲ್ಲವೇ? ಹೌದು.

ಪ್ರಾಣಂ ಮಾನವಜನ್ಮಮಂ ಪಡೆದ ಮೈಯೊಳ್ನಿಚ್ಚಲುಂ ಪಂಚಕ–।
ಲ್ಯಾಣಂ ಪಂಚಗುರುಸ್ತವಂ ಪರಮಶಾಸ್ತ್ರಂ ಮೋಕ್ಷಸಂಧಾನ ಚಿ–॥
ತ್ತ್ರಾಣಂ ಚಿತ್ತಿನ ರತ್ನಮೂರಿವನಲಂಪಿಂ ಚಿಂತನಂ ಗೆಯ್ವನೇ।
ಜಾಣಂ ಮತ್ತಿನ ಚಿಂತಕರ್ಮರುಳರೈ! ರತ್ನಾಕರಾಧೀಶ್ವರಾ॥ ॥೧೮॥

ತೀರ್ಥಂಕರರ ಪಂಚಕಲ್ಯಾಣಧ್ಯಾನ, ಪಂಚಪರಮೇಷ್ಠಿಗಳ ಸ್ತೋತ್ರ ಪಠಣ; ಪರಮಶಾಸ್ತ್ರಾಭ್ಯಾಸ; ಮೋಕ್ಷಸಂಧಾನದ ಆತ್ಮಸ್ವರೂಪ ರಕ್ಷಣೆ; ಆತ್ಮನ ರತ್ನತ್ರಯ ಸಾಧನೆ; ಇವು ಮಾನವ ಜನ್ಮವನ್ನು ಹೊಂದಿದ ಜೀವಿಗಳಲ್ಲಿ ಸದಾ ಇರಬೇಕಾದ ಪಂಚಪ್ರಾಣಗಳು. ಇವುಗಳನ್ನು ಪ್ರೀತಿ ವಿಶ್ವಾಸದಿಂದ ಮನನ ಮಾಡುವವನೇ ಜಾಣನು. ಇನ್ನುಳಿದ ವಿಷಯಗಳ ಚಿಂತನೆ ಮಾಡುವವರು ಮರುಳರು.

ಧನಮಂ ಧಾನ್ಯಮನೂಟಮಂ ವನಿತೆಯಂ ಭಂಗಾರಮಂ ವಸ್ತ್ರವಾ-।
ಹನರಾಜ್ಯಾದಿಗಳಂ ಸದಾ ಬಯಸುವೀ ಭ್ರಾಂತಾತ್ಮರಾ ಪಾಟಿಯೊಳ್॥
ಜಿನರಂ ಸಿದ್ಧರನಾರ್ಯವರ್ಯರನುಪಾಧ್ಯಾಯರ್ಕಳಂ ಸಾಧುಪಾ-।
ವನರಂ ಚಿಂತಿಸಿ ಮುಕ್ತಿಗೇಕೊದಗರೋ! ರತ್ನಾಕರಾಧೀಶ್ವರಾ॥ ॥೧೯॥

ಭ್ರಾಂತಾತ್ಮರು ದ್ರವ್ಯ, ಧಾನ್ಯ, ಭೋಜನ, ವನಿತೆ, ಬಂಗಾರ, ವಸ್ತ್ರ, ವಾಹನ, ರಾಜ್ಯ, ಮೊದಲಾದುವನ್ನು ಸದಾ ಅಪೇಕ್ಷಿಸುತ್ತಾರೆ. ಅದೇ ರೀತಿಯಲ್ಲಿ ಜಿನೇಶ್ವರರು, ಸಿದ್ಧರು, ಅಚಾರ್ಯರು, ಉಪಾಧ್ಯಾಯರು, ಸಾಧುಗಳು ಎಂಬ ಪಂಚಪರಮೇಷ್ಠಿಗಳನ್ನು ಚಿಂತನೆ ಮಾಡಿ ಮೋಕ್ಷ ಪಡೆಯಲು ಸಿದ್ಧರಾಗುವುದಿಲ್ಲವಲ್ಲಾ!

ಪಡೆದತ್ತಿಲ್ಲವೆ ಪೂರ್ವದೊಳ್ಧನವಧೂರಾಜ್ಯಾದಿ ಸೌಭಾಗ್ಯಮಂ-।
ಪಡೆದೆಂ ತನ್ಮಮಕಾರದಿಂ ಪಡೆದೆನೀ ಸಂಸಾರಸಂವೃದ್ಧಿಯಂ॥
ಪಡೆದತ್ತಿಲ್ಲ ನಿಜಾತ್ಮತತ್ತ್ವರುಚಿಯಂ ತದ್ಬೋಧಚಾರಿತ್ರಮಂ।
ಪಡೆದಂದಾಗಳೆ ಮುಕ್ತಿಯಂ ಪಡೆಯೆನೇ ರತ್ನಾಕರಾಧೀಶ್ವರಾ॥ ॥೨೦॥

ಪೂರ್ವದಲ್ಲಿ ಧನ, ವಧೂ ರಾಜ್ಯಾದಿವೈಭವಗಳನ್ನು ಹೊಂದಿದೆನು. ಈಗಲೂ ಪಡೆದೆನು. ಇವುಗಳ ಮಮಕಾರದಿಂದ ಈ ಸಂಸಾರದ ಸಮೃದ್ಧಿಯನ್ನು ಹೊಂದಿದೆನು. ಆದರೆ ತನ್ನ ಆತ್ಮಸ್ವರೂಪದ ದರ್ಶನ, ಜ್ಞಾನ ಚಾರಿತ್ರಗಳನ್ನು ಪಡೆಯಲಿಲ್ಲ. ಇವುಗಳನ್ನು ಈಗಲಾದರೂ ಪಡೆದು ಮುಕ್ತಿಯನ್ನು ಹೊಂದಲಾರನೇ? (ಹೊಂದಬೇಕೆಂಬ ಆಸೆ ನನ್ನದು)

ಒರಗಿರ್ದಂ ಕನಸಿಂದೆ ದುಃಖಸುಖದೋಳ್ಬಾಳ್ವಂತೆ ತಾನೆಳ್ದು ಕ-।
ಣ್ದೆರೆದಾಗಳ್ಬಯಲಪ್ಪವೋಲ್ನರಕತಿರ್ಯಙ್ಮರ್ತ್ಯದೇವತ್ವದೊಳ್॥
ತರಿಸಂದೊಪ್ಪುವ ಬಾಳ್ಕೆಯಿಾ ಬಯಲಬಾಳಂ ನಚ್ಚಿ ನಿತ್ಯತ್ವಮಂ।
ಮರೆವಂತೇಕೆಯೋ ನಿಮ್ಮ ನಾಂ ಮರೆದೆನೋ! ರತ್ನಾಕರಾಧೀಶ್ವರಾ ॥೨೧॥

ಮಲಗಿದ್ದವನು ಕನಸಿನಲ್ಲಿ ಸುಖದುಃಖಗಳನ್ನು ಅನುಭವಿಸುವಂತೆ ಕಂಡು ಆಮೇಲೆ ಎಚ್ಚರಗೊಂಡು ಕಣ್ಣುಬಿಟ್ಟಾಗ ಎಲ್ಲವೂ ಮರೆಯಾಗುವಂತೆ, ನರಕ, ತಿರ್ಯಕ್, ಮಾನುಷ್ಯ, ದೇವಗತಿಗಳಲ್ಲಿ ಅಲೆದಾಡಿ ಅಪ್ಪುವ ಬಾಳಿನ ನಶ್ವರದ ಬದುಕನ್ನು ನಂಬಿ, ಆತ್ಮನು ಶಾಶ್ವತ ರೂಪವನ್ನು ಮರೆತುಬಿಡುವ ಹಾಗೆ, ನಾನು ನಿಮ್ಮನ್ನು ಮರೆತುಹೋದೆನು.

ಇಂದಾನಾದವನೇ ಸಮಂತು ಬರಿಸಂ ನೂರೊಂದಹಂ ಕೋಟಿಯಿಂ।
ಹಿಂದತ್ತತ್ತಲನೇಕ ಕೋಟಿಯುಗದಿಂದತ್ತತ್ತಲಂಬೋಧಿಯಿಂ॥
ಬಂದತ್ತತ್ತಲನಾದಿಕಾಲದಿನನಂತಾಕಾರದಿಂ ತಿರ್ರನೆಲ್।
ಬಂದೆಂ ನೊಂದೆನನಾಥಬಂಧು! ಸಲಹೋ ರತ್ನಾಕರಾಧೀಶ್ವರಾ॥ ॥೨೨॥

ಇಂದಿನ ಜನ್ಮದಲ್ಲಿ ಈ ರೂಪದಲ್ಲಿರುವ ನಾನೇ ಹಾಗೆಯೇ ಹತ್ತು ವರ್ಷವೋ, ಕೋಟಿ ವರ್ಷಗಳೋ, ಹಿಂದಿನ ಜನ್ಮಗಳಲ್ಲಿ ಹುಟ್ಟಿ ಅನೇಕ ಕೋಟಿ ಯುಗಗಳಿಗೂ ಪೂರ್ವದಲ್ಲಿ, ಅದಕ್ಕೂ ಹಿಂದೆ, ಸಾಗರ ವರ್ಷಗಳ ಕಾಲ ಜನ್ಮವೆತ್ತಿ ಬಂದು, ಇನ್ನೂ ಹಿಂದಿನ ಭವಗಳಲ್ಲಿ ಅನಾದಿ ಕಾಲದಿಂದಲೂ ನಾನಾ ರೀತಿಯ ದೇಹಸ್ವರೂಪ ಧರಿಸಿ, ತಿರ್ರನೆ ತಿರುಗಿಬಂದು ನೊಂದಿದ್ದೇನೆ. ಅನಾಥ ಬಂಧುವೆ, ಕಾಪಾಡು!

ನಾನಾಗರ್ಭದಿ ಪುಟ್ಟಿಪುಟ್ಟಿ ಪೊರೆಮಟ್ಟೆಂ ರೂಪುಜೋಹಂಗಳಂ।
ನಾನಾಭಾವದೆ ತೊಟ್ಟುತೊಟ್ಟು ನಡೆದೆಂ ಮೆಯ್ಮೆಚ್ಚಿದೂಟಂಗಳಂ॥
ನಾನಾಭೇದದೊಳುಂಡುಮುಂಡು ತಣಿದೆಂ ಚಿಃ ಸಾಲದೇ ಕಂಡುಮಿಂ–।
ತೇನಯ್ಯಾ! ತಳುಮಾಳ್ಪರೇ? ಕರುಣಿಸಾ! ರತ್ನಾಕರಾಧೀಶ್ವರಾ॥ ॥೨೩॥

ಅನೇಕ ಬಗೆಯ ಜೀವಿಗಳ ಹೊಟ್ಟೆಯಲ್ಲಿ ಹುಟ್ಟಿಹುಟ್ಟಿ ಬಂದೆನು. ನಾನಾ ರೀತಿಯಲ್ಲಿ ವೇಷಾಕಾರಗಳನ್ನು ಧರಿಸಿಧರಿಸಿ ಕಾಲ ಕಳೆದನು. ದೇಹಕ್ಕೆ ಹಿತವೆನಿಸಿದ ಆಹಾರಗಳನ್ನು ನಾನಾಪರಿಯಲ್ಲಿ ತಿಂದುತಿಂದು ಸಂತಸಪಟ್ಟೆನು. ಛೇ! ಇಷ್ಟಾದರೂ, ಹೀಗಿರುವುದನ್ನು ಕಂಡೂ, ದೇವಾ! ತಡ ಮಾಡಬಹುದೇ? ಬೇಗ ಆತ್ಮಜ್ಞಾನವನ್ನು ಅನುಗ್ರಹಿಸು.

ಅಯ್ಯೋ! ಕುತ್ಸಿತಯೋನಿಯೊಳ್ನುಸುಳ್ವುದೆತ್ತಾನೆತ್ತ ಚಿಃ ನಾರುವೀ–।
ಮೈಯ್ಯೆತ್ತೆನ್ನಯ ನಿರ್ಮಲ ಪ್ರಕೃತಿಯೆತ್ತೀ ದೇಹಜವ್ಯಾಧಿಯಿಂ॥
ಪುಯ್ಯಲ್ವೆತ್ತಿಹುದೆತ್ತಲೆನ್ನ ನಿಜವೆತ್ತೊಯ್ದೆನ್ನ ನಿಮ್ಮತ್ತ ದ–।
ಮ್ಮಯ್ಯಾ ರಕ್ಷಿಸು ರಕ್ಷಿಸಾ ತಳುವಿದೇಂ ರತ್ನಾಕರಾಧೀಶ್ವರಾ॥ ॥೨೪॥

ದೂಷ್ಯವಾದ ಯೋನಿಯಲ್ಲಿ ನುಸುಳುವುದೆಲ್ಲಿ? ನಾನೆಲ್ಲಿ? ಛೆ ದುರ್ಗಂಧಯುಕ್ತ ದೇಹವೆಲ್ಲಿ? ನನ್ನ ಪರಿಶುದ್ಧವಾದ ಸ್ವಭಾವವೆಲ್ಲಿ? ಈ ದೇಹದಲ್ಲಿ ಹುಟ್ಟಿಬರುವ ರೋಗರುಜಿನಗಳ ದುಃಖವೆಲ್ಲಿ? ನನ್ನ ಯಥಾರ್ಥ ಸ್ವರೂಪವೆಲ್ಲಿ? ಒಂದು ಉತ್ತರಧ್ರುವವಾದರೆ ಇನ್ನೊಂದು ದಕ್ಷಿಣಧ್ರುವದಷ್ಟು ಅಂತರ. ಆತ್ಮ–ಜ್ಞಾನ–ದೇಹಜ್ಞಾನಕ್ಕೆ, ಧರ್ಮಾತ್ಮಾ, ಧರ್ಮಾಧೀಶ, ನಿನ್ನ ಕಡೆ ನನ್ನನ್ನು ಕರೆದುಕೊಂಡು ರಕ್ಷಿಸು, ರಕ್ಷಿಸು, ತಡಮಾಡಬೇಡ; ಬೇಗ ಕಾಪಾಡು.

ದಾರಿದ್ರ್ಯಂ ಕವಿದಂದು ಪಾಯ್ದು ಪಗೆಗಳ್ಮಾಸಂಕೆಗೊಂಡಂದು ದು-।
ರ್ವಾರವ್ಯಾಧಿಗಳೊತ್ತಿದಂದು ಮನದೊಳ್ ನಿರ್ವೇಗಮಕ್ಕುಂ ಬಳಿ-॥
ಕ್ಕಾ ರೋಗಂ ಕಳೆದಂದು ವೈರಿ ಲಯವಾದಂದರ್ಥವಾದಂದಿದೇಂ।
ವೈರಾಗ್ಯಂ ತಲೆದೋರದಂಡಿಸುವುದೋ! ರತ್ನಾಕರಾಧೀಶ್ವರಾ॥ ॥೨೫॥

ಬಡತನ ಬಂದಕಾಲದಲ್ಲಿ, ಶತ್ರುಗಳು ಮೇಲೆಬಿದ್ದು ತಾನಂಜಿದಾಗ, ನಿವಾರಿಸಲಶಕ್ಯವಾದ ರೋಗಗಳು ತಗುಲಿದಾಗ, ಮನಸ್ಸಿನಲ್ಲಿ ವೈರಾಗ್ಯ ಮೂಡುತ್ತದೆ; ಆಮೇಲೆ ರೋಗಗಳು ವಾಸಿಯಾದಾಗ, ಶತ್ರುಗಳು ನಾಶವಾದಾಗ ದ್ರವ್ಯಸಂಪ್ರಾಪ್ತಿಯಾದಾಗ ಆ ವೈರಾಗ್ಯವು ಕಾಣಿಸದೆ ಅದೆಲ್ಲೋ ಅವಿತುಕೊಳ್ಳುವುದಲ್ಲಾ!

ಮೈಯ್ಯೊಳ್ತೋರಿದ ರೋಗದಿಂ ಮನಕ್ಕೆ ಬಂದಾಯಾಸದಿಂ ಭೀತಿವ-।
ಟ್ಟೆಯ್ಯೋ! ಯೆಂದೊಡೆ ಸಿದ್ಧಿಯೇಂ ಜನಕನಂ ತಾಯಂ ಪಲುಂಬಲ್ಕದೇ॥
ಗೈಯ್ಯಲ್ಕಾರ್ಪರೊ ತಾವು ಮುಮ್ಮಳಿಸುವರ್ಕೂಡೆಂದೊಡಾ ಜಿಹ್ವೆಯೆ॥
ಮ್ಮಯ್ಯಾ! ಸಿದ್ಧ ಜಿನೇಶಯೆಂದೊಡೆ ಸುಖಂ ರತ್ನಾಕರಾಧೀಶ್ವರಾ॥ ೨೬॥

ದೇಹದಲ್ಲಿ ಕಾಯಿಲೆ ಕಾಣಿಸಿಕೊಂಡಾಗ, ಮನಸ್ಸಿಗೆ ದಣಿವಾದಾಗ ಹೆದರಿ, ಅಯ್ಯೋ! ಎಂದು ಗೋಳಾಡಿದರೆ ಬಂದ ಪೀಡೆ ತೊಲಗೀತೇ? ತಂದೆಯನ್ನೂ ತಾಯಿಯನ್ನೂ ನೆನೆದರೆ ಅವರಾದರೂ ಏನು ಮಾಡಲು ಶಕ್ಯ? ಅವರೂ ನಮ್ಮ ಜತೆ ಜಗಳವಾಡಬಹುದು. ಆದ್ದರಿಂದ ಎಲ್ಲೈ, ನಾಲಿಗೆಯೇ! "ನನ್ನೊಡೆಯಾ, ಸಿದ್ಧ, ಜಿನೇಶಾ" ಎಂದು ಹೇಳಿದರೆ ಸುಖ ದೊರೆಯುತ್ತದೆ.

ತಾಯಂ ತಂದೆಯನಾಸೆವಟ್ಟಳುತೆ ಸಾವಂ ಸತ್ತು ಬೇರನ್ಯರಾ।
ಕಾಯಂಬೊಕ್ಕೊಗೆವಂ ಬಳಿಕ್ಕವರುಮಂ ತಾಯ್ತಂದೆಯೆಂದಪ್ಪಿಕೊಂ-॥
ಡಾಯೆಂದಾಡುವನ್ನಿತ್ತಲಂದು ಪಡೆದರ್ಗಿಚ್ಛೆ ೖಸನಾತ್ಮಂಗಿದೇಂ।
ಮಾಯಾಮೋಹಮೊ ಪೇಳ್ವುದೇನನಕಟಾ! ರತ್ನಾಕರಾಧೀಶ್ವರಾ॥ ॥೨೭॥

ಮನುಷ್ಯ ಮರಣಕಾಲದಲ್ಲಿ ತಾಯಿಯನ್ನೂ ತಂದೆಯನ್ನೂ ಪ್ರೀತಿಸಿ ಅಳುತ್ತಾ ಸಾಯುತ್ತಾನೆ. ಸತ್ತಮೇಲೆ ಬೇರೆಯವರ ಶರೀರವನ್ನು ಸೇರಿ ಜನಿಸುವನು; ಆಗ ಅವರುಗಳನ್ನು ತಾಯಿತಂದೆಯವರೆಂದು ತಬ್ಬಿಕೊಂಡು ಸಂತೋಷದಿಂದ ನಲಿಯುವನು. ಈ ಕಡೆ ಇದಕ್ಕೆ ಮೊದಲು ತನ್ನನ್ನುಪಡೆದ ತಾಯಿತಂದೆಯರಿಗೆ ಆಸೆಪಡುವುದಿಲ್ಲ. ಆತ್ಮನಿಗೆ ಎಂಥ ಮಾಯಾಮೋಹ ಆವರಿಸುತ್ತದೆ; ಏನು ಹೇಳೋಣ ಇದಕ್ಕೆ? ಅಯ್ಯೋ!

ಸ್ತ್ರೀಯಂ ಮಕ್ಕಳನೆಂತಗಲ್ವೆನಿವರ್ಗಾರುಂಟೆಂದು ಗೋಳಿಟ್ಟು ಕ–।
ಣ್ಬಾಯಂ ಬಿಟ್ಟಳಿವಂ ಬಳಿಕ್ಕುದಯಿಪಂ ತಾನತ್ತ ಬೇರನ್ಯರೊಳ್॥
ಪ್ರಾಯಂದಾಳ್ದು ವಿವಾಹಮಾಗಿ ಸುತರಂ ಮುದ್ದಾಡುವಂ ಮುನ್ನಿನಾ॥
ಸ್ತ್ರೀಯಂ ಮಕ್ಕಳನಾಗಲೇಕೆ ನೆನೆಯಂ ರತ್ನಾಕರಾಧೀಶ್ವರಾ॥ ॥೨೮॥

ಅಂತೆಯೇ ಆತ್ಮನು ಹೆಂಡತಿಯನ್ನೂ ಮಕ್ಕಳನ್ನೂ ಹೇಗೆ ಬಿಟ್ಟು ಹೋಗಲಿ? ಇವರಿಗೆ ಗತಿಯಾರು? ಎಂದು ಗೋಳಾಡಿ ಕಣ್‌ಕಣ್ ಬಿಟ್ಟು ಬಾಯ್ ಬಾಯ್ ಬಿಟ್ಟು ಸಾಯುತ್ತಾನೆ. ತರುವಾಯ ಬೇರೆ ಭವದಲ್ಲಿ ಇತರರಲ್ಲಿ ಜನಿಸುತ್ತಾನೆ; ಯುವಕನಾಗುತ್ತಾನೆ; ಮದುವೆಯಾಗಿ ಮಕ್ಕಳನ್ನು ಪಡೆದು ಮುದ್ದಾಡುತ್ತಾನೆ. ಮೊದಲಿನಜನ್ಮದ ಹೆಂಡತಿ ಮಕ್ಕಳನ್ನು ಆಗ ಸ್ಮರಿಸುವುದಿಲ್ಲ.

ಅರಾರಲ್ಲದ ಗರ್ಭದೊಳ್ಬೆಳೆಯನಾರಾರೊಂದು ಮೂತ್ರಾಧ್ವದೊಳ್।
ಬಾರಂ ಬಂದುರೆ ಬಂಧುಗಳ್ಪಿತೃಗಳೆಂದೆನ್ನಂಗನಾನೀಕಮೆಂ–॥
ದಾರಾರೆಂಜಲನುಣ್ಣನಾತ್ಮಜರೆನುತ್ತಾರಾರ ದುರ್ಗಂಧದಿಂ॥
ಚಾರಿತ್ರಂಗಿಡನಾತ್ಮನೇಂ ಭ್ರಮಿತನೋ ರತ್ನಾಕರಾಧೀಶ್ವರಾ॥ ॥೨೯॥

ಆತ್ಮನು ಯಾರಾರದೋ ನೀಚಗರ್ಭದಲ್ಲಿ ಹುಟ್ಟಿಬರುತ್ತಾನೆ. ಯಾರಾರದೋ ನೀಚಮಾರ್ಗದಲ್ಲಿ ಹೊರಬರುತ್ತಾನೆ. ಆ ನೀಚಮಾರ್ಗದಲ್ಲಿ ಹುಟ್ಟಿ "ನನ್ನ ಬಂಧುಗಳು, ನನ್ನ ಜನಕರು, ನನ್ನ ಸತಿಯರು ಎಂದು ಯಾರಾರ ಎಂಜಲನ್ನೋ ತಿನ್ನುತ್ತಾನೆ. "ನನ್ನ ಮಕ್ಕಳು" ಎಂದು ಯಾರಾರ ದುರ್ಗಂಧದಿಂದ ತನ್ನ ಚಾರಿತ್ರ್ಯವನ್ನು ಕೆಡಿಸಿಕೊಳ್ಳುತ್ತಾನೆ. ಅಯ್ಯೋ ದೇವರೇ, ಆತ್ಮನು ಭ್ರಮಿತನಾದನಲ್ಲಾ!

ಕುಲಮಂ ಗೋತ್ರಮನುರ್ವಿಯಂ ಬಿರುದುಮಂ ಪಕ್ಷೀಕರಂಗೊಂಡು ತಾ।
ನೊಲಿವಂ ತನ್ನವೆನುತ್ತೆ ಲೋಗರವೆನುತ್ತಂ ನಿಂದಿಪಂ ಜೀವನಂ–॥
ಡಲೆದೆಂಬತ್ತರ ನಾಲ್ಕುಲಕ್ಷಭವದೊಳ್ಬಂದಲ್ಲಿ ತಾನಾವುದ–।
ಕ್ಕೊಲಿವಂ ನಿಂದಿಪನಾವುದಂ ನಿರವಿಸಾ ರತ್ನಾಕರಾಧೀಶ್ವರಾ॥ ॥೩೦॥

ಜೀವವು ತಾನು ತನ್ನ ವಂಶವನ್ನು ಗೋತ್ರವನ್ನು ದೇಶವನು ಪ್ರಶಸ್ತಿಗಳನ್ನು ಸೇರಿಸಿಕೊಂಡು "ಇವು ನನ್ನವು" ಎಂದು ಮರೆಯುತ್ತಾನೆ. ಆದರೆ ಬೇರೆಯವರ ವಂಶಗೋತ್ರಾದಿಗಳನ್ನು "ಇವು ಸಾಮಾನ್ಯರದು" ನನ್ನದಲ್ಲ ಎನ್ನುತ್ತ ನಿಂದಿಸುತ್ತಾನೆ. ಎಂಬತ್ತನಾಲ್ಕು ಲಕ್ಷ ಭವಗಳಲ್ಲಿ ದುಃಖಪಟ್ಟು ಬಳಲುವ ತಾನು ಯಾವುದನ್ನು ಪುರಸ್ಕರಿಸುತ್ತಿದ್ದೇನೆ. ಯಾವುದನ್ನು ತಿರಸ್ಕರಿಸುತ್ತಿದ್ದೇನೆ ಎಂಬುದನ್ನು ಹೇಳಬಲ್ಲನೇ? ತಿಳಿಸು.

ಎಲೆಲೇ ಉಳ್ಳುದನಾಡೆ ಕೊಳ್ಳಿಗೊಳುವರ್ನೋಡೆಂಬ ನಾಣ್ಣುಡಿದೇಂ।
ಸಲೆ ಸತ್ಯಂ ಬಹುಯೋನಿಯೊಳ್ಬಲವು ತಾಯುಂ ತಂದೆಯೊಳ್ಪುಟ್ಟಿದಾ॥
ಮಲಶುಕ್ಲಂಗಳೊಳಾಳ್ದು ಬಾಳ್ದು ಮನಮನ್ಯರ್ನ್ನೊಂದು ಬೈವಲ್ಲಿ ತಾಂ।
ಪಲರ್ಗಂ ಪುಟ್ಟಿದೆಯೆಂದೊಡೇಂ ಕುದಿವುರೋ ರತ್ನಾಕರಾಧೀಶ್ವರಾ॥ ॥೩೧॥

'ಅರರೆ!, ಇದ್ದುದನ್ನು ಇದ್ದಹಾಗೆ ಹೇಳಿದರೆ ಕೊಳ್ಳಿಯನ್ನು ಕೈಗೆತ್ತಿಕೊಳ್ಳುತ್ತಾರೆ ನೋಡಿ" ಎಂಬ ಗಾದೆ ಅದೆಷ್ಟು ಸತ್ಯ! ಅನೇಕ ಜನ್ಮಗಳಲ್ಲಿ ಹಲವಾರು ತಾಯಿತಂದೆಯರಿಗೆ ಹುಟ್ಟಿ ಬಂದು ಮಲವೀರ್ಯಗಳಲ್ಲಿ ತೇಲಿ ಮುಳುಗಿ ಬೆಳೆದು ಬಂದಿರುವಾಗ ಅನ್ಯರು ತನ್ನಿಂದ ಮನನೊಂದು ಎಷ್ಟು ಜನಕ್ಕೆ ಹುಟ್ಟಿದವನೋ! ಎಂದು ಬೈದರೆ, ಅದಕ್ಕೇಕೆ ಕೋಪಗೊಳ್ಳುವರು?

ಬಾಹ್ಯಾಪೇಕ್ಷೆಯಿನಾದೊಡಂ ಕುಲಬಲಸ್ಥಾನಾದಿಪಕ್ಷಂ ಮನಃ-।
ಸಹ್ಯಂ ನಿಶ್ಚಯದಿಂದಮಾತ್ಮನಕುಲಂ ನಿರ್ಗೋತ್ರಿ ನಿರ್ನಾಮಿ ನಿ-॥
ರ್ಗುಹ್ಯೋದ್ಭೂತನನಂಗನಚ್ಯುತನನಾದ್ಯಂ ಸಿದ್ಧನೆಂದೆಂಬುದೇ।
ಗ್ರಾಹ್ಯಂ ತತ್ಪರಿಭಾವಮೇ ಭವಹರಂ ರತ್ನಾಕರಾಧೀಶ್ವರಾ॥ ॥೩೨॥

ವ್ಯವಹಾರ ದೃಷ್ಟಿಯಿಂದ ಆತ್ಮನಿಗೆ 'ವಂಶ, ಬಲ, ಸ್ಥಾನಮಾನ ಮೊದಲಾದವುಗಳಲ್ಲಿ ಆಸಕ್ತಿಯೆಂಬುದು ಮನಸ್ಸಿಗೆ ಸರಿ ಕಾಣಬಹುದು. ಆದರೆ ನಿಶ್ಚಯ ದೃಷ್ಟಿಯಲ್ಲಿ ನೋಡಿದರೆ "ಆತ್ಮನು ಅಕುಲನು, ಗೋತ್ರರಹಿತನು, ನಾಮರಹಿತನು, ಜನ್ಮವಿಲ್ಲದವನು, ನಿರ್ದೇಹಿ, ಶಾಶ್ವತನು, ಅಚ್ಯುತ, ಅನಾದಿಸಿದ್ಧಸ್ವರೂಪನು ಆಗಿದ್ದಾನೆ' ಹೀಗೆಂದು ಭಾವಿಸುವುದೇ ಯೋಗ್ಯ. ಈ ರೀತಿ ಪರಿಭಾವಿಸಿದರೆ ಭವನಾಶ ಖಂಡಿತ.

ಪಕ್ಷಂಗೊಂಡೊಡೆ ಕೊಳ್ಗೆ ಜೀವಹಿತಮುಳ್ಳಾಚಾರಮುಳ್ಳಗ್ರದೊಳ್।
ಮೋಕ್ಷಕ್ಕೈದಿಸಲಾರ್ಪ ಸತ್ಕುಲಸುಧರ್ಮಶ್ರೀಯನಂತಲ್ಲದು-॥
ರ್ಭಕ್ಷದ್ವೇಷದೆ ಕೊಲ್ವ ಕುತ್ಸಿತದ ಶೀಲಂ ತಳ್ತು ಸಾರ್ದಾತ್ಮರಂ।
ಭಿಕ್ಷಂಗೆಯ್ವವನಾತ್ಮನೇಕೆ ಪಿಡಿವಂ ರತ್ನಾಕರಾಧೀಶ್ವರಾ॥ ॥೩೩॥

ಜೀವಹಿತವುಳ್ಳ, ಸದಾಚಾರಯುಕ್ತವಾದ ಮುಕ್ತಿ ದೊರಕಲು ನೆರವಾಗುವ ಶಕ್ತಿಯುಳ್ಳ ಸತ್ಕುಲವನ್ನೂ ಸದ್ಧರ್ಮವನ್ನೂ ಸಂಪತ್ತನ್ನೂ ಪಡೆಯುವುದಾದರೆ ಪಡೆಯಲಿ ಅಭ್ಯಂತರವಿಲ್ಲ. ಅದು ಬಿಟ್ಟು ಹೊಟ್ಟೆಪಾಡಿಗೆ ಹೆಚ್ಚಿಗೆ ತಿನ್ನುವುದಕ್ಕಾಗಿ, ಭಿಕ್ಷೆಗೈಯುವುದಕ್ಕಾಗಿ, ದ್ವೇಷದಿಂದ ಗೈಯುವುದಕ್ಕಾಗಿ, ಹಿಂಸೆ ಗೈಯುವ ದುಷ್ಟ ಚಾರಿತ್ರ ಹೊಂದಿ, ಮೇಲೆ ಬಿದ್ದು ಜೀವಹಿತವನ್ನು ಬೋಧಿಸಿದವರನ್ನು ಏಕೆ ಹಿಡಿಯುತ್ತಾನೆ?

ಒಂದೊಂದಾತ್ಮನೆ ಶುದ್ಧದಿಂ ತ್ರಿಜಗದಾಪೂರ್ಣಾಂಕೃತಂಗಳ್ಜಗ-।
ದ್ವಂದೋತ್ಕಂಪಿತಶಕ್ತಿಗಳ್ಪರರ್ಗಶಕ್ಯಂಗಳ್ಜಗತ್ಕರ್ತೃಗಳ್॥
ತಂದಿಂತೆಲ್ಲವನಾರ್ದ್ರಚರ್ಮದೊಡಲೋಲ್ತಳ್ತಾನೆ ಪೆಣ್ಣಶ್ವವಾ-।
ಳೆಂದೇಂ ಮಾರ್ಗುಮೊ ಪಾಪಪುಣ್ಯಯುಗಳಂ ರತ್ನಾಕರಾಧೀಶ್ವರಾ॥ ॥೩೪॥

ಶುದ್ಧ ನಿಶ್ಚಯ ನಯದಿಂದ ನೋಡುವುದಾದರೆ ಒಬ್ಬೊಬ್ಬ ಆತ್ಮನೇ ಮೂರು ಲೋಕಗಳನ್ನೂ ಆವರಿಸಬಲ್ಲ ಆಕಾರವುಳ್ಳವನು; ಲೋಕಗಳನ್ನೇ ಅಲುಗಾಡಿಸಬಲ್ಲ ಬಲಶಾಲಿ; ಅನ್ಯರಿಗೆ ಜಯಿಸಲಶಕ್ಯನು; ಲೋಕಕರ್ತನು; ಇಂಥ ಆತ್ಮರನ್ನೆಲ್ಲ ಪಾಪ–ಪುಣ್ಯಗಳು ಕರತಂದು ಒಳಗಾಗಿಸಿ, ಹಸಿಮಾಂಸದ ತೊಗಲಿನ ದೇಹದಲ್ಲಿ ಸೇರಿಸಿ. ಆನೆ, ಹೆಣ್ಣುಕುದುರೆ, ಆಳು ಎಂದೆಲ್ಲಾ ಹುಟ್ಟಿಸುತ್ತವೆ, ಏನಚ್ಚರಿ!

ಪಾಪಂ ನಾರಕಭೂಮಿಗೊಯ್ವುದಸುವಂ ಪುಣ್ಯಂ ದಿವಕ್ಕೊಯ್ವುದಾ।
ಪಾಪಂ ಪುಣ್ಯಮಿವೊಂದುಗೂಡಿದೊಡೆ ತಿರ್ಯಙ್ಮರ್ತ್ಯಜನ್ಮಂಗಳೊಳ್॥
ರೂಪಂ ಮಾಳ್ಕುಮಿವೆಲ್ಲಮಧ್ರುವಮಿವೇ ಜನ್ಮಕ್ಕೆ ಸಾವಿಂಗೊಡಲ್।
ಪಾಪಂ ಪುಣ್ಯಮಿವಾತ್ಮಬಾಹ್ಯಕವಲಾ ರತ್ನಾಕರಾಧೀಶ್ವರಾ॥ ॥೩೫॥

ಜೀವನವನ್ನು ಪಾಪವು ನರಲೋಕಕ್ಕೆ ಒಯ್ಯುತ್ತದೆ; ಪುಣ್ಯವು ಸ್ವರ್ಗಕ್ಕೆ ಒಯ್ಯುತ್ತದೆ; ಪಾಪ ಪುಣ್ಯಗಳೆರಡೂ ಕೂಡಿಕೊಂಡು ತಿರ್ಯಕ್ ಜನ್ಮದಲ್ಲೂ ಮನುಷ್ಯ ಜನ್ಮದಲ್ಲೂ ಆತ್ಮನನ್ನು ಬರಿಸುತ್ತವೆ. ಇವೆಲ್ಲವೂ ನಶ್ವರವಾದವು. ಈ ಪಾಪಪುಣ್ಯಗಳೇ ಹುಟ್ಟು ಸಾವಿಗೆ ಕಾರಣವಾಗಿವೆ. ಇವು ಆತ್ಮದಿಂದ ಬೇರೆಯಾದವು.

ಸುಕೃತಂ ದುಷ್ಕೃತಮುಂ ಸಮಾನಮದನನ್ಯರ್ಮೆಚ್ಚರೇಕೆಂದೊಡಾ।
ಸುಕೃತಂ ಸ್ವರ್ಗಸುಖಕ್ಕೆ ಕಾರಣಮೆನಲ್ತತ್ಸೌಖ್ಯಮೇಂ ನಿತ್ಯಮೋ॥
ವಿಕೃತಂಗೊಂಡಳಿವಂದಳಲ್ಜನಿಸದೋ ಸ್ವಪ್ನಂಬೊಲೇಂ ಮಾಂಜದೋ।
ಪ್ರಕೃತಿಪ್ರಾಪ್ತಿಗೆ ನೂಂಕದೋ ಪಿರಿದದೇಂ ರತ್ನಾಕರಾಧೀಶ್ವರಾ॥ ॥೩೬॥

ಪಾಪಪುಣ್ಯಗಳೆರಡೂ ಸಮಾನವಾದವು. ಈ ಮಾತನ್ನು ಇತರರು ಒಪ್ಪರು; ಏಕೆಂದರೆ– ಆ ಪುಣ್ಯವು ಸ್ವರ್ಗಸುಖಕ್ಕೆ ಕಾರಣ ಎನ್ನುವ ಪಕ್ಷಕ್ಕೆ ಆ ಸ್ವರ್ಗಸುಖ ಸ್ಥಿರವೇ? ವಿಕಾರಗೊಂಡು ಸಾವನ್ನಪ್ಪಿದಾಗ ದುಃಖವುಂಟಾಗದೆ? ಸ್ವಪ್ನಸುಖದಂತೆ ಆ ಸ್ವರ್ಗಾನುಭವ ನಾಶವಾಗದೇ? ಕರ್ಮ ಪ್ರಕೃತಿಗೆ ಒಳಗು ಮಾಡುವುದಿಲ್ಲವೋ? ಹಾಗೆಂದಮೇಲೆ ಪುಣ್ಯ ಹೇಗೆ ಶ್ರೇಷ್ಠವಾಯಿತು?

ದುರಿತಂ ತೀರ್ದೊಡೆ ಪುಣ್ಯದೊಳ್ನಿಲುವನಾ ಪುಣ್ಯಂ ಕರಂ ತೀರ್ದೊಡಾ।
ದುರಿತಂಬೊರ್ದುವನಿತ್ತಲತ್ತಲೆಡೆಯಾಟಂ ಕುಂದದಾತ್ಮಂಗಿವಂ॥
ಸರಿಗಂಡಾತ್ಮವಿಚಾರಮೊಂದರೊಳೆ ನಿಂದಾನಂದಿಸುತ್ತಿರ್ಪನೇ।
ಸ್ಥಿರನಕ್ಕುಂ ಸುಖಿಯಕ್ಕುಮಕ್ಷಯನಲಾ ರತ್ನಾಕರಾಧೀಶ್ವರಾ॥ ॥೩೭॥

ಆತ್ಮನು ತನ್ನ ಪಾಪಗಳನ್ನು ಕಳೆದುಕೊಂಡರೆ ಪುಣ್ಯದಲ್ಲಿ ನಿಲ್ಲುವನು. ಆ ಪುಣ್ಯ ಮುಗಿದರೆ ಮತ್ತೆ ಪಾಪದಲ್ಲಿ ಮುಳುಗುವನು, ಹೀಗಾಗಿ ಆತ್ಮನಿಗೆ ಆಕಡೆ ಈಕಡೆ ಎಡೆತಾಗುವ ಆಟ ಮುಗಿಯದು; ಆದ್ದರಿಂದ ಈ ಪಾಪಪುಣ್ಯಗಳನ್ನು ಸಮಾನವಾಗಿ ಭಾವಿಸಿ ಆತ್ಮವಿಚಾರ ನಿರತನಾಗಿ ಆನಂದಪಡುವವನೂ ಸ್ಥಿರನೂ ಅಕ್ಷಯನೂ ಸುಖಿಯೂ ಆಗುತ್ತಾನೆ.

ಬಗೆಯಲ್ದುಷ್ಕೃತಮೋರ್ಮೆ ತಾಂ ಶುಭದಮಾತ್ಮಂಗೇಕೆನಲ್ಪುಣ್ಯವೃ-।
ದ್ಧಿಗೆ ತಾಂ ಮುಂದನುಬಂಧಮಾದ ಕತದಿಂ ಪುಣ್ಯಂ ಸುಪುಣ್ಯಾನುಬಂ॥
ಧಿಗೆ ಬಂದಂದದುವುಂ ಶುಭಂ ಸುಕೃತಮುಂ ಪಾಪಾನುಬಂಧಕ್ಕೆ ಮುಂ-।
ಪುಗೆ ಪಾಪಕ್ಕನುಬಂಧಿ ಪಾಪಮಶುಭಂ ರತ್ನಾಕರಾಧೀಶ್ವರಾ॥ ॥೩೮॥

ವಿಚಾರ ಮಾಡಿದರೆ ಪಾಪವು ಒಂದು ಕಾಲಕ್ಕೆ ಮುಂದೆ ಪುಣ್ಯವೃದ್ಧಿಗೆ ಸಂಬಂಧಿಸಿದ ಕಾರಣವಾಗಿರುವುದಾದರೆ ಅದು ಆತನಿಗೆ ಮಂಗಳಕರವು; ಪುಣ್ಯವು ಪಾಪಬಂಧಕ್ಕೆ ಮುಂದಾದರೆ ಅಮಂಗಳಕರವು. ಪಾಪವು ಪಾಪಬಂಧಕ್ಕೆ ಕಾರಣವಾದರೆ ಅದೂ ಅಮಂಗಳಕರವು.

ಅದು ತಾನೆಂತೆನೆ ಮುನ್ನೆಗೆಯ್ದ ದುರಿತಂ ದಾರಿದ್ರ್ಯದೊಳ್ತಳ್ತೊಡಂ।
ಸದಯಾಮೂಲಮತಕ್ಕೆ ಸಂದು ನಡೆವಂ ಮುಂದೆಯ್ದುವಂ ಪುಣ್ಯಸಂ-॥
ಪದಮಂ ತಾಂ ಸುಕೃತಾನುಬಂಧಿದುರಿತಂ ತನ್ನಿರ್ಧನಂ ಮಿಥ್ಯೆಯೊ-।
ಳ್ಪುದಿಯಲ್ತಾಂ ದುರಿತಾನುಬಂಧಿದುರಿತಂ ರತ್ನಾಕರಾಧೀಶ್ವರಾ॥ ॥೩೯॥

ಅದು ಹೇಗೆಂದರೆ – ಹಿಂದಿನ ಜನ್ಮಗಳಲ್ಲಿ ಮಾಡಿದ ಪಾಪವು ಬಡತನವನ್ನು ಉಂಟು ಮಾಡಿದ್ದರೂ ಅಹಿಂಸಾಧರ್ಮಕ್ಕೆ ಅನುಸಾರವಾಗಿ ನಡೆಯುವವಂತೆ. ಆದರೆ ಅಂಥವನು ಮುಂದೆ ಪುಣ್ಯಸಂಪತ್ತನ್ನು ಹೊಂದುತ್ತಾನೆ. ಅಂಥವನ ಪಾಪವು ಸುಕೃತಾನುಬಂಧಿದುರಿತವು. ಹಿಂದಿನ ಜನ್ಮದಿಂದ ಬಡವನಾದವನ ಪಾಪವು ಮಿಥ್ಯಾಮಾರ್ಗದಲ್ಲಿ ಆತನನ್ನು ನಡೆಸಿದರೆ ಅಂಥವನ ಪಾಪವು ದುರಿತಾನುಬಂಧಿದುರಿತವು.

ಪಡೆವಂ ಪೂರ್ವದ ಪುಣ್ಯದಿಂ ಸಿರಿಯನಾತಂ ಶ್ರೀದಯಾಮೂಲದೊ-।
ಳ್ನಡೆವಂ ತಾಂ ಸುಕೃತಾನುಬಂಧಿಸುಕೃತಂ ಮತ್ತಾ ಧನಾಢ್ಯಂ ಗುಣಂ॥
ಗಿಡೆ ಮಿಥ್ಯಾಮತದಲ್ಲಿ ವರ್ತಿಪನವಂ ಮುಂದೆಯ್ದುವಂ ದುಃಖಮಂ।
ನುಡಿಯಲ್ತಾಂ ದುರಿತಾನುಬಂಧಿಸುಕೃತಂ ರತ್ನಾಕರಾಧೀಶ್ವರಾ॥ ॥೪೦॥

ಪೂರ್ವಜನ್ಮದ ಪುಣ್ಯದಿಂದ ಸಂಪತ್ತನ್ನು ಗಳಿಸಿದವನು ಉತ್ತಮವಾದ ಅಹಿಂಸಾಧರ್ಮವನ್ನು ಆಚರಿಸುವವನಾದರೆ ಅಂಥವನ ಪುಣ್ಯ ಸುಕೃತಾನುಬಂಧಿಸುಕೃತವು; ಹಾಗಲ್ಲದೆ ಪೂರ್ವಜನ್ಮದ ಪುಣ್ಯದಿಂದ ಸಂಪತ್ತನ್ನು ಗಳಿಸಿದವನು ಮಿಥ್ಯಾ ಮಾರ್ಗದಲ್ಲಿ ನಡೆದರೆ ಅದರ ಫಲವಾಗಿ ಮುಂದೆ ದುಃಖಿಯಾಗುವನು. ಇಂಥಾ ಪುಣ್ಯವು ದುರಿತಾನುಬಂಧಿಸುಕೃತವು.

ಅಘಪುಣ್ಯಂಗಳನಿಷ್ಟಮೆಂದು ಬಳಿಕಂ ಲೇಸೆಂದೆನೇಕೆಂದೊಡಂ-।
ಗಘಟಂ ಪೊಕ್ಕ ಮನಂ ಸುಧರ್ಮಕೆ ಪುಗಲ್ಮುನ್ನಾದ ಪಾಪಂ ಕ್ರಮಂ॥
ಲಘುವಕ್ಕುಂ ಸುಕೃತಂ ಕ್ರಮಂಬಿಡಿದು ಭೋಗಪ್ರಾಪ್ತಿಯಿಂ ತೀರ್ದು ಮೂ-।
ರ್ತಿ ಘನಂಬೊಲ್ಬಯಲಾಗಿ ಮುಕ್ತಿವಡೆಗುಂ ರತ್ನಾಕರಾಧೀಶ್ವರಾ॥ ॥೪೧॥

ಹಿಂದಿನ ಪದ್ಯಗಳಲ್ಲಿ ಪಾಪಪುಣ್ಯಗಳನ್ನು ದುರಿತಗಳೆಂದು ಹೇಳಿ ಅನಂತರ ಸುಕೃತಗಳೆಂದು ಹೇಳಿದೆ. ಏಕೆಂದರೆ ದೇಹವೆಂಬ ಗಡಿಗೆಯನ್ನು ಪ್ರವೇಶಿಸುವ ಮನಸ್ಸು ಶ್ರೇಷ್ಠಧರ್ಮಕ್ಕೆ ಪ್ರವೇಶಿಸಿದರೆ ಮೊದಲುಪ್ರಾಪ್ತವಾದ ಪಾಪವು ಕ್ರಮೇಣ ಕುಗ್ಗುತ್ತದೆ; ಪುಣ್ಯವು ಕ್ರಮೇಣ ಸುಖಪ್ರಾಪ್ತಿಯಿಂದ ಮುಗಿದು ದೇಹವು ಮೋಡದಂತೆ ಮಾಯವಾಗಿ ಜೀವನು ಪಾಪಪುಣ್ಯಗಳೆರಡರಿಂದ ಕರ್ಮನಿರ್ಜರೆಯಾಗಿ ಮುಕ್ತಿಹೊಂದುತ್ತಾನೆ.

ಪಡಿಯೇಂ ಜೀವದಯಾಮತಂ ಪರಮಧರ್ಮಂ ತನ್ಮತಂಬೊರ್ದಿ ಮುಂ-।
ಗಡೆ ನಿರ್ಗ್ರಂಥರಥಕ್ಕೆ ಸಂದ ಯತಿ ಸೂರ್ಯಂಬೊಲ್ಭವಾಂಬೋಧಿಯಂ॥
ಕಡುವೇಗಂ ಪರಿಲಂಘಿಪಂ ಸುಕೃತಕೃದ್ಗಾರ್ಹಸ್ಥ್ಯನುಂ ಧರ್ಮದಾ।
ಪಡಗಿಂ ಮೆಲ್ಲನೆ ದಾಂಟದೇಯಿರನಲಾ ರತ್ನಾಕರಾಧೀಶ್ವರಾ॥ ॥೪೨॥

ಅಹಿಂಸಾಧರ್ಮಕ್ಕೆ ಸಮಾನವಾದ ಮತ ಬೇರಿಲ್ಲ. ಈ ಮತವೇ ಶ್ರೇಷ್ಠವಾದುದು. ಇಂಥಾ ಮತವನ್ನು ಅವಲಂಬಿಸಿ ಮುಂದುವರೆದು ನಿರ್ಗ್ರಂಥವೆಂಬ ರಥವೇರುವ ಯತಿಯು ಸೂರ್ಯನಂತೆ ಇರುವನು. ಈತನು ಸಂಸಾರ ಸಾಗರವನ್ನು ಬಹುಬೇಗನೆ ದಾಟುತ್ತಾನೆ. ಪುಣ್ಯ ಗೈಯುವನು, ಸಜ್ಜನಸಂಸಾರಧರ್ಮಿ ಆದವನು ಧರ್ಮದ ಹಡಗಿನಿಂದ ಮೆಲ್ಲನೆ ಸಂಸಾರಸಾಗರವನ್ನು ದಾಟುತ್ತಾನೆ.

ತನುವಂ ಸಂಘದ ಸೇವೆಯೊಳ್ಮನಮನಾತ್ಮಧ್ಯಾನದಭ್ಯಾಸದೊಳ್।
ಧನಮಂ ದಾನಸುಪೂಜೆಯೊಳ್ದಿನಮನರ್ಹದ್ಧರ್ಮಕಾರ್ಯಪ್ರವ-॥
ರ್ತನೆಯೊಳ್ಪರ್ವವನೊಲ್ದು ನೋಂಪಿಗಳೊಳಿರ್ದಾಯುಷ್ಯಮಂ ಮೋಕ್ಷಚಿಂ-।
ತನೆಯೊಳ್ತೀರ್ಚುವ ಸದ್ಗೃಹಸ್ಥನನಘಂ ರತ್ನಾಕರಾಧೀಶ್ವರಾ॥ ॥೪೩॥

ದೇಹವನ್ನು ಮುನಿಸಂಘದ ಚತುರ್ವಿಧ ಸೇವೆಯಲ್ಲಿಯೂ, ಮನಸ್ಸನ್ನು ಆತ್ಮಧ್ಯಾನದ ಅಭ್ಯಾಸದಲ್ಲಿಯೂ, ಧನವನ್ನು ದಾನಪೂಜೆಗಳಲ್ಲೂ, ದಿನವನ್ನು ಜಿನಧರ್ಮ ಕಾರ್ಯಾಚರಣೆಯಲ್ಲೂ, ಪರ್ವತಿಥಿಗಳ ಆಸಕ್ತಿಯನ್ನು ನೋಂಪಿಗಳಲ್ಲೂ ಕಳೆಯುತ್ತಾ ಇರುವ ಆಯುಷ್ಯವನ್ನು ಮೋಕ್ಷಚಿಂತನೆಯಲ್ಲಿ ಸವೆಸುವ ಉತ್ತಮಗೃಹಸ್ಥನು ಪಾಪರಹಿತನು ಎನ್ನಿಸುತ್ತಾನೆ.

ಪುತ್ರೋತ್ಸಾಹದೊಳಕ್ಷರಾದಿ ಸಕಲಪ್ರಾರಂಭದೊಳ್ವ್ಯಾಧಿಯೊಳ್।
ಯಾತ್ರಾಸಂಭ್ರಮದೊಳ್ಪ್ರವೇಶದೆಡೆಯೊಳ್ವೈವಾಹದೊಳ್ನೋವಿನೊಳ್॥
ಛತ್ರಾಂದೋಳಗೃಹಾದಿಸಿದ್ಧಿಗಳೊಳರ್ಹತ್ಪೂಜೆಯುಂ ಸಂಘಸ-।
ತ್ಪಾತ್ರಾರಾಧನೆಯುತ್ತಮೋತ್ತಮವಲಾ ರತ್ನಾಕರಾಧೀಶ್ವರಾ॥ ॥೪೪॥

ಪುತ್ರೋತ್ಸವದಲ್ಲಿ, ಅಕ್ಷರಾಭ್ಯಾಸ ಮೊದಲಾದ ಕಾರ್ಯಗಳ ಪ್ರಾರಂಭ, ಸಮಾರಂಭಗಳಲ್ಲಿ, ರೋಗಕಾಲದಲ್ಲಿ ಯಾತ್ರೆಗೆ ಹೊರಡುವಲ್ಲಿ, ವಧೂ ಆಗಮನ, ಗೃಹಪ್ರವೇಶ ಇತ್ಯಾದಿ ಪ್ರವೇಶಕಾಲದಲ್ಲಿ, ವಿವಾಹಕಾಲದಲ್ಲಿ, ಬಾಧೆಕಾಲದಲ್ಲಿ, ನೂತನಛತ್ರ, ಹೊಸತೊಟ್ಟಿಲು, ಹೊಸಮನೆ ಮೊದಲಾದುವುಗಳ ಸಿದ್ಧಿಕಾಲಗಳಲ್ಲಿ ಅರ್ಹಂತರಪೂಜೆ, ಸಂಘಸೇವೆ, ಸತ್ಪಾತ್ರಾರಾಧನೆ ಮಾಡುವುದು ಸರ್ವಶ್ರೇಷ್ಠಕರವಾದುದು.

ಆಹಾರಾಭಯವೈದ್ಯಶಾಸ್ತ್ರಮೆನೆ ಚಾತುರ್ದಾನದಿಂ ಸೌಖ್ಯಸಂ-।
ದೋಹಂ ಶ್ರೀಶಿಲೆ ಲೇಪ್ಯಕಾಂಸ್ಯರಜತಾಷ್ಟಾಪಾದ ರತ್ನಂಗಳಿಂ॥
ದೇಹಾರಂ ಗೆಯಲಂಗಸೌಂದರಬಲಂ ತಚ್ಚೈತ್ಯಗೇಹಪ್ರತಿ।
ಷ್ಠಾಹರ್ಷಂ ಗೆಯೆ ಮುಕ್ತಿಸಂಪದವಲಾ ರತ್ನಾಕರಾಧೀಶ್ವರಾ॥ ॥೪೫॥

ಆಹಾರ, ಅಭಯ, ಔಷಧ, ಶಾಸ್ತ್ರಗಳೆಂಬ ನಾಲ್ಕು ಬಗೆಯ ದಾನಗಳಿಂದ ಅಪಾರ ಸುಖವೂ, ಕಾಂತಿಯುಕ್ತಶಿಲೆ, ಲೆಪ್ಪ, ಕಂಚು, ಬೆಳ್ಳಿ, ಚಿನ್ನ, ರತ್ನ ಇವುಗಳಿಂದ ದೇವಾಲಯ ನಿರ್ಮಿಸಿದರೆ ಸುರಸುಂದರರೂ, ಶಕ್ತಿಸಂಪನ್ನರೂ ಆಗುವರು. ಆ ದೇವಾಲಯದಲ್ಲಿ ಸಂತಸಚಿತ್ತರಾಗಿ ಬಿಂಬಪ್ರತಿಷ್ಠಾಪನೆ ಮಾಡಿದರೆ ಮೋಕ್ಷ ಸಂಪತ್ತು ದೊರೆಯುತ್ತದೆ.

ಪಿಡಿದೊಲ್ದರ್ಚಿಸೆ ನೋನೆ ದಾನವನಲಂಪಿಂ ಮಾಡೆ ತತ್ಪುಣ್ಯದಿಂ।
ಕುಡುಗುಂ ನಿಮ್ಮಯ ಧರ್ಮಮೊಂದೆ ನೃಪರೊಳ್ಪಂ ಭೋಗಭೂಲಕ್ಷ್ಮಿಯಂ॥
ಬಿಡುಗಣ್ಣೈಸಿರಿಯಂ ಬಳಿಕ್ಕೆ ಸುಕೃತಂ ಭೋಗಂಗಳೊಳ್ತೀರ್ದೊಡಂ।
ಕುಡುಗುಂ ಮುಕ್ತಿಯನಿಂತದಾರ್ಕುಡುವರೋ ರತ್ನಾಕರಾಧೀಶ್ವರಾ॥ ॥೪೬॥

ಜಿನನನ್ನು ನಂಬಿ ಭಕ್ತಿಯಿಂದ ಪೂಜಿಸಿದರೆ, ವ್ರತಗಳನ್ನಾಚರಿಸಿದರೆ ಸಂತೋಷದಿಂದ ದಾನ ಮಾಡಿದರೆ, ಆ ಪುಣ್ಯದಿಂದ ದೊರಕುವ ನಿಮ್ಮ ಪಾಲಿನ ಧರ್ಮ ರಾಜಾನುಗ್ರಹವನ್ನೂ, ಭೋಗಭೂಮಿಯ ಸಂಪದವನ್ನೂ ಅಮರಲೋಕದ ಅಷ್ಟೈಶ್ವರ್ಯವನ್ನೂ ಕೊಡುತ್ತದೆ. ಅನಂತರ ಪುಣ್ಯವು ಸುಖಪ್ರಾಪ್ತಿಯಲ್ಲಿ ತೀರಿಹೋದರೂ ಮೋಕ್ಷ ದೊರೆಯುತ್ತದೆ. ಇಷ್ಟೊಂದು ಅನುಗ್ರಹವನ್ನು ಮತ್ತಾರು ಮಾಡಬಲ್ಲರು?

ಪುಣ್ಯಂಗೈಯದೆ ಪೂರ್ವದೊಳ್ಬರಿದೆ ತಾನೀಗಳ್ಮನಂ ನೋಡೆ ಲಾ–।
ವಣ್ಯಕ್ಕಾಭರಣಕ್ಕೆ ಭೋಗಕೆನಸುಂ ರಾಗಕ್ಕೆ ಚಾಗಕ್ಕೆ ತಾ–॥
ರುಣ್ಯಕ್ಕಗ್ಗದ ಲಕ್ಷ್ಮಿಗಂ ಬಯಸಿ ಬಾಯಂ ಬಿಟ್ಟು ಕಾಂಕ್ಷಾಮಹಾ–।
ರಣ್ಯಂಬೊಕ್ಕಕಟೇಕೆ ಚಿಂತಿಸುವುದೋ ರತ್ನಾಕರಾಧೀಶ್ವರಾ॥ ॥೪೭॥

ವಿಚಾರ ಮಾಡಿದರೆ ಹಿಂದೆ ಯಾವ ಪುಣ್ಯಕಾರ್ಯವನ್ನೂ ಮಾಡದೆ ವ್ಯರ್ಥವಾಗಿ ತಾನೀಗ ಮನಸ್ಸಿನಲ್ಲಿ ಶರೀರದ ಕಾಂತಿಗೆ, ಒಡವೆಗೆ, ಭೋಗಭಾಗ್ಯಗಳಿಗೆ, ಸುಗಂಧಲೇಪನ ದ್ರವ್ಯಗಳ ಸುಖಕ್ಕೆ, ದಾನಕ್ಕೆ, ಯೌವನಕ್ಕೆ ಹಿರಿದಾದ ಸಂಪತ್ತಿಗೆ ಇಷ್ಟಪಟ್ಟು ಬಾಯಿಬಿಟ್ಟು ಆಸೆಯೆಂಬ ಅರಣ್ಯವನ್ನು ಹೊಕ್ಕು ಏಕೆ ವ್ಯಥೆಪಡಬೇಕು?

ಆರಿತ್ತಾರ್ಕಳೆದರ್ದರಿದ್ರಮನದಾವಂಗಾವನೇನೊಂದು ಸ–।
ತ್ಕಾರಂ ಗೈಯದೆ ಭಾಗ್ಯಮಂ ಕಿಡಿಸಿದಂ ಪೂರ್ವಾರ್ಜಿತಪ್ರಾಪ್ತಿಯಿಂ॥
ದಾರಿದ್ರ್ಯಂ ಧನಮೆಂಬೆರಳ್ಸಮನಿಕುಂ ಮತ್ತೇಕೆ ಧೀರತ್ವಮಂ।
ದೂರಂ ಮಾಡಿ ಮನಂ ಸದಾ ಕುದಿವುದೋ ರತ್ನಾಕರಾಧೀಶ್ವರಾ॥ ॥೪೮॥

ಯಾರಿಗೆ ಯಾರು ಬಡತನ ಕೊಟ್ಟರು? ಯಾರು ಬಡತನವನ್ನು ದೂರಮಾಡಿದರು? ಏನೊಂದೂ ಸತ್ಕಾರ್ಯ ಮಾಡದವನಿಗೆ ಯಾರು ಸಂಪತ್ತನ್ನು ನಾಶಮಾಡಿದರು? ಯಾರಿಗೆ ಯಾರೂ ಇಲ್ಲ. ಪೂರ್ವದಲ್ಲಿ ಅವರವರು ಮಾಡಿದ ಪಾಪಪುಣ್ಯಗಳಿಗೆ ತಕ್ಕಂತೆ ಬಡತನ ಸಿರಿತನಗಳೆರಡೂ ಲಭಿಸುತ್ತವೆ. ಹೀಗಿದ್ದರೂ ಅದೇತಕ್ಕೋ, ಈ ಮನಸ್ಸು ಧೈರ್ಯ ಕಳೆದುಕೊಂಡು ಸದಾ ಸಂತಾಪಪಡುತ್ತದೆ.

ಕುರುರಾಯಂ ಬಹುವಿತ್ತಮಂ ಕುಡುವನಾ ಕರ್ಣಂಗೆ ಮತ್ತಾ ಸಹೋ-
ದರಗಾ ಪಾಂಡವರ್ಗೇನುಮಂ ಕುಡನದೇಂ ಪಿಂಬೊಳ್ತಿನೊಳ್ಕರ್ಣನು-॥
ರ್ವರೆ ದಾರಿದ್ರ್ಯನೆನಲ್ಕೆ ಸಂದನರರೇ ಧರ್ಮರ್ಧರಾಧೀಶರಾ।
ದರಿದೇಂ ಪಾಪಶುಭೋದಯಕ್ರಿಯೆಯಲಾ ರತ್ನಾಕರಾಧೀಶ್ವರಾ॥ ॥೪೯॥

ದುರ್ಯೋಧನನು ಆ ಕರ್ಣನಿಗೆ ತುಂಬುಸಿರಿಯನ್ನು ಕೊಡುತ್ತಿದ್ದನು; ಆದರೆ ಆ ಅನುಜರಾದ ಪಾಂಡವರಿಗೆ ಬಿಡಿಕಾಸನ್ನು ಕೊಡುತ್ತಿರಲಿಲ್ಲ; ಆದರೇನು, ಕಡೆಯಲ್ಲಿ ಕರ್ಣನು ಕಡುಬಡವನೆಂಬ ಕೀರ್ತಿಗೆ ಪಾತ್ರನಾದನು. ಅರೆರೇ! ಏನೂ ಇಲ್ಲದ ಧರ್ಮರಾಯ ಮೊದಲಾದವರು ಭೂಪತಿಗಳಾದರು! ಇವೆಲ್ಲಾ ಪಾಪ ಶುಭೋದಯ ಕ್ರಿಯೆಯಾಗಿದೆ.

ಉಪಭೋಗಂ ಬರೆ ಭೋಗವೃತರೆ ಮನೋರಾಗಂಗಳಿಂ ಭೋಗಿಪಂ-।
ತುಪಸರ್ಗಂ ಬರೆ ಮೇಣ್ದರಿದ್ರವಡಸಲ್ಸಂತೋಷಮಂ ತಾಳ್ದು ನಿ-।
ಮ್ಮ ಪದಾಂಭೋಜಯುಗಂ ಸದಾ ಶರಣೆನುತ್ತಿಚ್ಛೈಸುವಂಗಾ ಗೃಹ-।
ಸ್ಥಪದಂ ತಾನೆ ಮುನೀಂದ್ರಪದ್ಧತಿಯಲಾ ರತ್ನಾಕರಾಧೀಶ್ವರಾ॥ ॥೫೦॥

ಉಪಭೋಗ ಸಿಗಲು, ಭೋಗವುಂಟಾಗಲು ಅನುರಾಗದಿಂದ ಅನುಭವಿಸುವ ರೀತಿಯಲ್ಲೇ, ಉಪಸರ್ಗವುಂಟಾಗಲು ಮತ್ತು ಬಡತನ ಬರಲು ಅವುಗಳನ್ನೂ ಅಷ್ಟೇ ಸಂತೋಷದಿಂದ ಅನುಭವಿಸುತ್ತಾ ನಿಮ್ಮ ಪಾದ ಕಮಲಗಳೆರಡನ್ನೂ ಬಿಡದೆ ವಂದಿಸುವಂಥಾ ಸಂಸಾರಿಗೆ ತನ್ನ ಗೃಹಸ್ಥ ಪದವಿಯೇ ಮುನಿಶ್ರೇಷ್ಠರ ಪದವಿಯಾಗಿರುತ್ತದೆ.

ಸಿಹಿಯುಂ ಕಾರಮುಮಾಮ್ಲಮುಂ ತೊಗರುವುಪ್ಪುಂ ಕೈಪೆಯುಂಬೇರೆವೇ।
ರೆ ಹಿತಂದೋರ್ಕುಮೆನುತ್ತವಕ್ಕೊಲಿವವೋಲ್ ಶ್ರೀಗಂ ದರಿದ್ರಾದುರಾ-॥
ಗ್ರಹಕಂ ಭೋಗಕೆ ರೋಗಕಂ ಪಳಿಕೆಗಂ ಕೇಡಿಂಗೆಯುಂ ಬಾಧೆಗು।
ತ್ಸಹಮಂ ಮಾಳ್ಪ ಗೃಹಸ್ಥನುಂ ಸುಖಿಯಲಾ ರತ್ನಾಕರಾಧೀಶ್ವರಾ॥ ॥೫೧॥

ಸಿಹಿ, ಕಾರ, ಹುಳಿ, ಒಗರು, ಉಪ್ಪು, ಕಹಿ ಎಂಬ ಷಡ್ರಸಗಳು ಬೇರೆ ಬೇರೆ ರುಚಿ ನೀಡುತ್ತವೆ ಎಂದು ಅವುಗಳಿಗೆ ಇಷ್ಟಪಡುವ ಹಾಗೆ, ಸಿರಿತನಕ್ಕೆ, ಬಡತನಕ್ಕೆ, ದುರಾಗ್ರಹಕ್ಕೆ, ಭೋಗಕ್ಕೆ, ರೋಗಕ್ಕೆ, ನಿಂದೆಗೆ, ಕೇಡಿಗೆ, ಬಾಧೆಗೆ ಅಷ್ಟೇ ಇಷ್ಟವನ್ನು ವ್ಯಕ್ತಪಡಿಸುವ ಗೃಹಸ್ಥನೇ ಪರಮಸುಖಿ.

ಘಟಿಕಾಪಾತ್ರಕನನ್ಯರೊಳ್ಕಥೆಯನೊಂದಂ ಸೂಚಿಸುತ್ತಿರ್ದೊಡಂ।
ಸ್ಫುಟದಿಂ ಚಿತ್ತಮುಮಕ್ಷಿಯುಂ ಪದಪದಕ್ಕಾ ಪಾತ್ರೆಯಂ ಸಾರ್ಗುಮೆಂ॥
ತುಟು ತಾನಂತುಟು ಬಾಹ್ಯದೊಳ್ನೆಗಳ್ದೊಡಂ ಧ್ಯಾನಂ ಕ್ಷಣಕ್ಕೊರ್ಮೆ ಸಂ।
ಘಟಿಸಲ್ನಿಮ್ಮಪದಂಗಳೊಳ್ಸುಖಿಯಲಾ ರತ್ನಾಕರಾಧೀಶ್ವರಾ॥ ॥೫೨॥

ಘಳಿಗೆಬಟ್ಟಲನ್ನು ನೋಡುತ್ತಿರುವವನು ಇತರರಿಗೆ ಕಥೆಯೊಂದನ್ನು ನೇರವಾಗಿ ಹೇಳುತ್ತಿದ್ದರೂ ಸಹ ಅಡಿಗಡಿಗೂ ಅವನ ಮನಸ್ಸೂ, ಕಣ್ಣೂ, ಆ ಘಳಿಗೆಬಟ್ಟಲ ಅತ್ತಲೇ ಹೇಗೆ ಚಲಿಸುತ್ತದೋ ಹಾಗೆಯೇ ಲೌಕಿಕದಲ್ಲಿ ಬಾಹ್ಯವಸ್ತುವಿನಲ್ಲಿ ಮನಸ್ಸು ಲೀನವಾಗಿದ್ದರೂ ಚಣಚಣಕ್ಕೂ ನಿಮ್ಮ ಪಾದಗಳಲ್ಲಿ ತಲ್ಲೀನವಾಗುತ್ತಿದ್ದರೆ ಅಂಥವನೇ ನಿಜಸುಖಿ.

ಪಿಡಿದಿರ್ದಾತನ ಕೈಗೆ ಸೂತ್ರವೆನಸುಂ ಸಿಲ್ಕಿರ್ದೊಡಂ ವ್ಯೋಮದೊಳ್।
ನಡೆಗುಂ ಗಾಳಿಪಟಂ ಸಮಂತದರವೊಲ್ಮೆಯ್ಯೊಳ್ಮನಂ ಜಂಜಂಡಂ॥
ಬಡೆದಿತ್ತಲ್ಸಿಲುಕಿರ್ದೊಡಂ ನೆನಹು ಲೋಕಾಗ್ರಕ್ಕೆ ಪಾಯ್ದತ್ತಲಾ।
ಗಡೆ ಸಿದ್ಧಾಂಘ್ರಿಗಳೊಳ್ಪಳಂಚೆ ಸುಖಿಯೈ ರತ್ನಾಕರಾಧೀಶ್ವರಾ॥ ॥೫೩॥

ಗಾಳಿಪಟದ ದಾರವು ಹಿಡಿದುಕೊಂಡವನ ಕೈಯಲ್ಲಿ ಎಷ್ಟೇ ಬಿಗಿಯಾಗಿ ಹಿಡಿತದಲ್ಲಿದ್ದರೂ ಪಟಮಾತ್ರ ಆಕಾಶದಲ್ಲಿ ಹಾರಾಡುತ್ತಿರುತ್ತದೆ. ಅಂತೆಯೇ ಮನಸ್ಸು ಕಷ್ಟಕ್ಕೊಳಗಾಗಿ ಇತ್ತ ಕಡೆ ದೇಹದಲ್ಲಿ ಬಂಧಿತವಾಗಿದ್ದರೂ ಅತ್ತಕಡೆ ಸ್ಮರಣೆಯಲ್ಲಿ ಲೋಕಾಗ್ರವನ್ನು ಸೇರಿ ಸಿದ್ಧರ ಪಾದಗಳನ್ನು ಮುಟ್ಟಿ ಸಂತಸ ಹೊಂದುತ್ತದೆ.

ನಡೆವಾಗಳ್ನಡೆ ಕೊಂಕಿದಾಗಳಿಳೆಯೊಳ್ಬೀಳ್ವಾಗಳೇಳ್ವಾಗಳುಂ।
ನುಡಿವಾಗಳ್ನುಡಿದಪ್ಪಿದಾಗಳೆರ್ದೆಗೆಟ್ಟಾಗಳ್ಸುಖಾವಾಪ್ತಿಯೊಳ್।
ಬಿಡದರ್ಹತ್ಪ್ರಭು ಸಿದ್ಧ ಶಂಕರ ಸಮುದ್ರಾಧೀಶ್ವರ ತ್ರಾಹಿ ಯೆಂ–।
ದೊಡನಭ್ಯಾಸಿಸುವಾತನೇ ಸುಖಿಯಲಾ ರತ್ನಾಕರಾಧೀಶ್ವರಾ॥ ॥೫೪॥

ನಡೆಯುವಾಗ, ಎಡವಿದಾಗ, ನೆಲದ ಮೇಲೆ ಬಿದ್ದಾಗ, ಎದ್ದಾಗ, ಸರಿ ಮಾತಾಡಿದಾಗ, ಮಾತು ತಪ್ಪಿದಾಗ, ದಿಕ್ಕೆಟ್ಟಾಗ, ಸುಖಪಟ್ಟಾಗ, ಸದಾಕಾಲವೂ "ಅರ್ಹತ್‌ಪ್ರಭು, ಸಿದ್ಧ, ಶಂಕರ, ಸಮುದ್ರಾಧೀಶ್ವರ, ರಕ್ಷಿಸು" ಎಂದು ಎಡೆಬಿಡದೆ ಹೇಳುವ ಅಭ್ಯಾಸ ಮಾಡುವಾತನೇ ನಿಜ ಸುಖಿ.

ಎತ್ತೆತ್ತಂ ಲಲಿತಾಂಗಿಯರ್ಸುೞಿದರತ್ತತ್ತಾಡುಗುಂ ಕಣ್ಗಳೆ-।
ತ್ತೆತ್ತಂ ಕಾಮಿನಿಯರ್ಮೊಗಂದೆಗೆದರತ್ತತ್ತೊಂದುಗುಂ ಜಿಹ್ವೆ ಮ-॥
ತ್ತೆತ್ತೆತ್ತಂ ಸರಿಮಿಂಡಿಯರ್ತೆಗೆದರತ್ತತ್ತೆಯ್ದುಗುಂ ಬುದ್ಧಿ ನಿ-।
ಮ್ಮತ್ತಂ ಬಾರದು ಕೆಟ್ಟೆನೇವೆನಕಟಾ ರತ್ನಾಕರಾಧೀಶ್ವರಾ॥ ॥೫೫॥

ಎಲ್ಲೆಲ್ಲಿ ಸುಂದರಿಯರು ಸುಳಿಯುತ್ತಾರೋ ಅಲ್ಲೆಲ್ಲಾ ಕಣ್ಣೋಡುತ್ತದೆ; ಯಾವ ಯಾವ ಕಡೆಗೆ ಕಾಮಿನಿಯರು ಮುಖ ಮಾಡುತ್ತಾರೋ ಆ ಕಡೆಗೆಲ್ಲಾ ನಾಲಗೆ ಚಪ್ಪರಿಸುತ್ತದೆ; ಎತ್ತೆತ್ತ ನವಯುವತಿಯರು ಸಂಚರಿಸುತ್ತಾರೋ ಅತ್ತತ್ತ ಬುದ್ಧಿಸಾಗುತ್ತದೆ ಏನು ಮಾಡಿದರೂ ಈ ಕಣ್ಣು ನಾಲಗೆ ಮನಗಳು ನಿನ್ನತ್ತ ಸುಳಿಯದು! ಅಯ್ಯೋ! ಕೆಟ್ಟೆನು! ಏನು ಮಾಡಲಿ?

ಮೊದಲೊಳ್ಮುಗ್ಗುವನಿಚ್ಚೆವಟ್ಟೊಡನೆ ತಾನುಚ್ಛ್ವಾಸಂ ಸನಿಃಶ್ವಾಸಪೂ- ।
ರದೆ ಕೈಯ್ಕಾಲ್ಬಡಿಗೊಂಬನಾ ಕಡೆಯೊಳುಂ ಶಕ್ತಿಕ್ಷಯಂದೋರೆ ತ-॥
ಬ್ಬಿದ ಪೆಣ್ಣಂ ಬಿಡುಗೆಯ್ದು ಕೂಡೆ ಕೆಲದೊಳ್ಬಿಳ್ದಳ್ಳೆವೊಯ್ವಂ ಮನ।
ಕ್ಕಿದು ಲೇಸೇ? ಸುಖವೇ? ಮರುಳ್ತನವಲಾ? ರತ್ನಾಕರಾಧೀಶ್ವರಾ॥ ॥೫೬॥

ಮೊದಲಿಗೆ ಆಸೆಪಟ್ಟು ಮುಗ್ಗರಿಸುತ್ತಾನೆ; ಮರುಗಳಿಗೆಯಲ್ಲೇ ಉಚ್ಛ್ವಾಸ ನಿಃಶ್ವಾಸಗಳಲ್ಲಿ ಏದುಸಿರಿನಲ್ಲಿ ಕಂಗೆಟ್ಟು ಕೈಕಾಲು ಬಡಿದುಕೊಂಡು ಒದ್ದಾಡುತ್ತಾನೆ. ಕೊನೆಗೆ ಶಕ್ತಿಗುಂದಲು ಆಲಿಂಗಿಸಿದ ಹೆಣ್ಣನ್ನು ಕೈಬಿಟ್ಟು ಜತೆಯಲ್ಲೇ ಪಕ್ಕದಲ್ಲಿ ಬಿದ್ದುಕೊಂಡು ಆಯಾಸಪಡುತ್ತಾನೆ; ಇದು ಮನಸ್ಸಿಗೆ ಸುಖವೇ? ಹುಚ್ಚುತನವಲ್ಲವೇ?

ತಿಳಿವಿಲ್ಲಾಗಿ ಶಿಶುತ್ವದೊಳ್ತನಗೆ ತಾಂ ತನ್ನೆಂಜಲೊಳ್ಮೂತ್ರದೊಳ್।
ಮುಳುಗಿರ್ದಂ ಬಳಿಕಂ ವಿವೇಕವೆರ್ದೆಯೊಳ್ಮೆಯ್ದೋರೆಯುಂಪ್ರಾಯದೊಳ್॥
ಎಳೆವೆಣ್ಣೆಂಜಲನುಂಡು ಮೂತ್ರಬಿಲದೊಳ್ ಚಿಃ ನಾರುವೀ ಶುಕ್ಲಮಂ।
ತುಳುಕಲ್ಮೋಹಿಪನಾತ್ಮನೇಂ ಭ್ರಮಿತನೋ ರತ್ನಾಕರಾಧೀಶ್ವರಾ॥ ॥೫೭॥

ಆತ್ಮನು ಮಗುವಾದಾಗ, ತನಗೆ ಬುದ್ಧಿಯಿಲ್ಲದೆ ತನ್ನ ಎಂಜಲು ಮೂತ್ರಗಳಲ್ಲಿ ಮುಳುಗಿದ್ದನು; ಆ ಮೇಲೆ ಹೃದಯದಲ್ಲಿ ವಿವೇಕ ಮೂಡಿದರೂ ಯೌವನದಲ್ಲಿ ಎಳೆಯ ಪ್ರಾಯದ ಯುವತಿಯ ಎಂಜಲು ತಿಂದು ಮೂತ್ರದ್ವಾರದಲ್ಲಿ ದುರ್ಗಂಧಮಯ ವೀರ್ಯವನ್ನು ಚೆಲ್ಲಲು ತವಕಿಸುತ್ತಾನೆ. ಛೇ! ಆತ್ಮನು ಎಂಥ ಭ್ರಾಂತಿಗೊಳಗಾದನಲ್ಲಾ?

ಸುಖವೆಂಬರ್ಸುಖವೆಂತೊ ನಿರ್ಮಲಬಲಂ ಸುಜ್ಞಾನಮುಂ ಕಾಣ್ಕೆ ಸ-।
ಮ್ಮುಖವಾದಂದದು ಸೌಖ್ಯವಂಗನೆಯ ಸಂಭೋಗಾಂತ್ಯದೊಲ್ ಹೇಯದು-॥
ನ್ಮುಖಮುಂ ಶಕ್ತಿವಿನಾಶಮುಂ ಮರವೆಯುಂ ನಿದ್ರಾಜಡಂದೋರೆಯುಂ।
ಸುಖವೆಂದೆಂಬರದೇನೊ ದುರ್ಮುಖರಲಾ ರತ್ನಾಕರಾಧೀಶ್ವರಾ॥ ॥೫೮॥

ರತಿಸುಖವನ್ನು ಸುಖವೆಂದು ಹೇಳುತ್ತಾರೆ? ಅದು ಹೇಗೆ? ನಿರ್ಮಲ ಶಕ್ತಿ, ಸುಜ್ಞಾನ, ದರ್ಶನ ಪ್ರಾಪ್ತವಾದರೆ ಅದು ನಿಜಸುಖ, ಸ್ತ್ರೀಸಂಭೋಗ ಸುಖದ ಅಂತ್ಯದಲ್ಲಿ ಹೇಯಬುದ್ಧಿಯಿಂದ ವಿಮುಖತೆಯೂ, ಶಕ್ತಿಕ್ಷಯವೂ ವಿಸ್ಮೃತಿಯೂ, ನಿದ್ರೆಯೂ, ಆಲಸ್ಯವೂ ತೋರಿದರೂ ಅಜ್ಞಾನಿಗಳು ಅದನ್ನೇ ಸುಖವೆನ್ನುತ್ತಾರಲ್ಲಾ? ಏನು ಹೇಳೋಣ!

ಏನೊಂದುಗ್ರಮೊ ನೋಡ ನೋಟವರಿವೇ ಮೆಯ್ಯಾದ ಶುದ್ಧಾತ್ಮನಂ।
ಮೀನಾಕ್ಷೀತನು ತನ್ನ ತಳ್ಕಿಸಲೊಡಂ ನೇತ್ರಂಗಳಂ ಕಟ್ಟಿ ಸು॥
ಜ್ಞಾನಂಗುಂದಿಸಿ ಮೂರ್ಛೆಗೆಯ್ಸಿ ಪೆಣನಂಬೊಲ್ಮಾಡುಗುಂ ಮತ್ತದ।
ಕ್ಕಾನಂದಂ ಮಿಗೆ ಮುಗ್ಗುವಂ ಮರುಳಲಾ ರತ್ನಾಕರಾಧೀಶ್ವರಾ॥ ॥೫೯॥

ದರ್ಶನ ಎಷ್ಟೊಂದು ಭಯಾನಕವಾದುದು; ಈ ಸಂಗತಿ ತಿಳಿ. ಜ್ಞಾನಗಳೇ ಮೈಯಾದ ಶುದ್ಧಾತ್ಮನನ್ನು ನೋಡು; ಮೀನಲೋಚನೆಯಾದ ಸುಂದರನಾರಿಯ ಮೈ ತನ್ನನ್ನು ಅಪ್ಪಿದೊಡನೆ ಕೂಡಲೆ ಕಣ್ಣಿಗೆ ಕತ್ತಲೆಕಟ್ಟಿ ಸುಜ್ಞಾನವನ್ನು ಹಿಂಗಿಸಿ ಮೂರ್ಛೆ ಬರಿಸಿ, ಹೆಣದಂತೆ ಮಾಡುವುದು ನೋಡು; ಇದೆಷ್ಟು ಭಯಂಕರವಾದುದು! ಆದರೂ ಸಹ ಮರುಳನು ಆನಂದಾತಿರೇಕದಿಂದ ಇಂಥಾ ಸುಂದರಿಯ ಅಪ್ಪುಗೆಗೆ ನುಗ್ಗಿ ಮುಗ್ಗರಿಸುತ್ತಿದ್ದಾನಲ್ಲಾ; ಇವನು ನಿಜಕ್ಕೂ ಹುಚ್ಚನಲ್ಲವೇ?

ಮದವೇದ್ದಾನೆಗೆ ಕಲ್ಲು ಪೊಯ್ವುದಿನಿದೇ? ಮೆಯ್ತಿಂಟೆಗಂ ಕಜ್ಜಿಗಂ।
ಬದಿಯಂ ತೋಡುವುದೊಳ್ಳಿತಲ್ತು ಬಗೆವಂದಾತ್ಮಂಗೆ ನಾರೀರತಂ॥
ಮುದವಲ್ಲಾದೊಡಮಂತದಂ ಬಿಡಲಶಕ್ಯಂ ಬಿಟ್ಟೊಡೀ ಯೌವನೋ-।
ನ್ಮದದುದ್ರೇಕವಡಂಗದೇವೆನಕಟಾ ರತ್ನಾಕರಾಧೀಶ್ವರಾ॥ ॥೬೦॥

ಮದ್ದಾನೆಗೆ ಕಲ್ಲೇಟು ಹಿತವೇ? ಮೈನವೆಗೂ ಕಜ್ಜಿಗೂ ಕೆಸರು ತೋಡಿ ಅದರಲ್ಲಿ ಕೂಡುವುದು ಸರಿಯೇ? ಅಲ್ಲ. ವಿಚಾರಮಾಡಿದರೆ ಆತ್ಮನಿಗೆ ಸ್ತ್ರೀಸಂಭೋಗ ಮುದವಲ್ಲ. ಆದರೂ ಸಹ ಅದನ್ನು ಬಿಡಲು ಅಸಾಧ್ಯವಾಗಿದೆ. ಏಕೆಂದರೆ ಅದನ್ನು ಬಿಟ್ಟರೆ ಯೌವನದ ಸೊಕ್ಕಿನ ಆವೇಶ ಅಡಗುವುದಿಲ್ಲ ಅಯ್ಯೋ! ಏನು ಮಾಡಲಿ?

ತನುವೇಳ್ಕೆಂಬವನೌಷಧಕ್ಕೆಳಸನೇ ಪಿತ್ತೋರ್ಜಿತಂ ದೇಹಶೋ।
ಧನೆಯಂ ಮಾಳ್ಪವೊಲಂಗನಾಸುರತದಿಂ ತನ್ನಿಂದ್ರಿಯಂ ಪೋಗೆ ಯೌ–॥
ವನತಾಪಂ ನಿಲುಗುಂ ನಿಲಲ್ಚರಿತೆ ಸಲ್ಗುಂ ಸದ್ಗೃಹಸ್ಥಂಗೆ ತ–।
ತ್ತನುಬೇಡೆಂಬ ಮುನೀಶ್ವರಂಗುಚಿತವೇ ರತ್ನಾಕರಾಧೀಶ್ವರಾ॥ ॥೬೧॥

ಶರೀರವನ್ನು ಉಳಿಸಿಕೊಳ್ಳಬೇಕೆನ್ನುವವನು ಔಷಧವನ್ನು ಅಪೇಕ್ಷಿಸದಿರುವನೇ? ಪಿತ್ತವೇರಿದಾಗ ವಮನಾದಿಗಳಿಂದ ದೇಹಶುದ್ಧಿ ಪಡೆಯುವಂತೆ, ಅಂಗನಾಸುರತದಿಂದ ವೀರ್ಯಾವೇಶ ಹೋಗಿ ಶರೀರದ ಮಲಿನತಾಪ ತಗ್ಗುವುದು, ಕಾಮಶಾಂತಿ ಆದನಂತರ ಸದ್ಗೃಹಸ್ಥನಿಗೆ ಸಚ್ಚಾರಿತ್ರಕ್ಕೆ ಅವಕಾಶವಾಗುವುದು. ಇದು ಗೃಹಸ್ಥನಿಗೆ ಯೋಗ್ಯಕರ್ಮವಾಯಿತು. ಆದರೆ ದೇಹದಮೋಹ ತ್ಯಾಜ್ಯಮಾಡಿದ ಮುನೀಶ್ವರನಿಗೆ ಈ ರತಿಸುಖ ಯೋಗ್ಯವಲ್ಲ!

ವಿಷಮೋದ್ರೇಕದ ಜವ್ವನಂದಳೆದೊಡಂ ತತ್ಪ್ರಾಯದಿಂ ಪೆಣ್ಗಳೊಳ್।
ವಿಷಯಕ್ಕಾಟಿಸನಾವಗಂ ಪರಮತತ್ತ್ವಜ್ಞಾನಸಂತುಷ್ಟಕಂ॥
ಋಷಿ ತಾನಕ್ಕೆಮ ಶಿಷ್ಯನಕ್ಕೆಮ ಅವಂ ಮಾನುಷ್ಯನಲ್ತಲ್ತು ನಿ.।
ರ್ವಿಷರೂಪಂ ನಿರಘಂ ನಿರಾವರಣನೈ ರತ್ನಾಕರಾಧೀಶ್ವರಾ॥ ॥೬೨॥

ವಿಪರೀತ ಯೌವನಾವೇಶವನ್ನು ಹೊಂದಿದ್ದರೂ ಆ ಯೌವನಕಾಲದಲ್ಲಿ ಸ್ತ್ರೀಸುಖಕ್ಕೆ ಎಂದೂ ಆಶಿಸದವನು ಪರಮತತ್ತ್ವಜ್ಞಾನದಿಂದ ಸಂತೋಷಿಸುವನು ಮುನಿಯಾಗಿರಲಿ, ಶಿಷ್ಯನಾಗಿರಲಿ ಅವನು ಮನುಷ್ಯನಂತೂ ಅಲ್ಲ (ಎಲ್ಲರಂತೆ ಸಾಮಾನ್ಯನಲ್ಲ) ವಿಷಸಮಾನವಾದ ವಿಷಯಾಸಕ್ತಿಯಿಂದ ದೂರನಾದವನು ಪಾಪರಹಿತನು ಘಾತಿಅಘಾತಿಗಳೆಂಬ ಅಷ್ಟಾವರಣ ಕಶ್ಮಲಗಳಿಂದ ಮುಕ್ತನಾದ ನಿರಾವರಣನು ಆಗಿರುತ್ತಾನೆ.

ಮರ್ದುಂ ಮಾನಿನಿಯುಂ ಸಮಾನಮರಿವಂಗಂತಲ್ಲದೇಂ ಪೆಣ್ಣೊಳೊಂ।
ದಿರ್ದುಂ ಶ್ರೀಜಿನದತ್ತನುಂ ಕಪಿಲಮಿತ್ರಂ ವಾರಿಷೇಣಾದಿಗಳ್॥
ಸಾರ್ದಿರ್ಪರ್ಸುಡುಗಾಡನೇಕೆ? ತಪವೇಕಾ ಪರ್ವದೊಳ್ಮತ್ತೆ ಪೆ।
ಣ್ಣಿರ್ದತ್ತೈದುವರೆಯ್ದಿದಿಯುಂ ಭ್ರಮಿತರೋ ರತ್ನಾಕರಾಧೀಶ್ವರಾ॥ ॥೬೩॥

ವಿಚಾರವಂತನಿಗೆ ಔಷಧವೂ ಸ್ತ್ರೀಯೂ ಒಂದೇ. ಬೇರೆ ಬೇರೆ ಅಲ್ಲ; ಹಾಗಲ್ಲದಿದ್ದರೆ ಹೆಂಡತಿಯರನ್ನು ಹೊಂದಿದ್ದರೂ ಶ್ರೀಜಿನದತ್ತ ಕಪಿಲಮಿತ್ರ, ವಾರಿಷೇಣ ಮೊದಲಾದವರು ಆತ್ಮಜ್ಞಾನಿಗಳು ಸ್ಮಶಾನವಾಸಿಗಳೇಕಾದರು? ಪರ್ವತಿಥಿಕಾಲಗಳಲ್ಲಿ ತಪವೇಕೆಗೈದರು? ಮತ್ತೆ ಮನೆಗೆ ಮರಳಿದರೂ ಹೆಣ್ಣಿನಲ್ಲಿ ಮೋಹಿತರಾದರೇ? ಇಲ್ಲ.

ಧಾರಾಪೂರ್ವಕಮಾದ ಪೆಣ್ಗಳೊಳವರ್ ಪ್ರತ್ಯೇಕಮೇಕೈ ಪ–।
ತ್ನೀರಾಗವ್ರತಿಕರ್ ಮದಕ್ಷಯನಿಮಿತ್ತಂ ಕಾಮಮಂ ತೀರ್ಚುವರ್॥
ವಾರಸ್ತ್ರೀ ಬಹುಲಾಂಗನಾ ಪರವಧೂ ಚೇಟೀರತಕ್ಕಾಟಿಸರ್।
ಸಾರಾತ್ಮರ್ಜಿನದತ್ತಮುಖ್ಯರಘರೇ? ರತ್ನಾಕರಾಧೀಶ್ವರಾ॥ ॥೬೪॥

ಜಿನದತ್ತ ಮೊದಲಾದವರು ಪ್ರತಿಯೊಬ್ಬರೂ ತಮಗೆ ಧಾರೆಯೆರೆದು ಕೊಟ್ಟ ನಾರಿಯರಲ್ಲಿ ಏಕಪತ್ನೀವ್ರತಸ್ಥರಾಗಿ ಮೋಹದ ಸೊಕ್ಕು ಅಡಗಲು ಕಾಮಬಾಧೆ ನಿವಾರಿಸಿಕೊಂಡರು. ವೇಶ್ಯಾಸ್ತ್ರೀ, ಬಹುಪತ್ನೀ, ಪರನಾರೀ, ದಾಸೀಜನ ಮೊದಲಾದವರಲ್ಲಿ ರತಿಸುಖವನ್ನಾಶಿಸಲಿಲ್ಲ. ಇಂಥ ಪವಿತ್ರಾತ್ಮರಾದ ಜಿನದತ್ತಾದಿಗಳು ಪಾಪಾತ್ಮರೇ? ಅಲ್ಲ.

ಸತ್ಯಾಧಿಷ್ಠಿತಧರ್ಮಮಂ ತಿಳಿದು ಜೀವಂ ತನ್ನನೀ ಕಾಮವ–।
ಪ್ರತ್ಯಾಖ್ಯಾನಕಷಾಯಸಂಭವದೆ ಸುತ್ತಿತ್ತೆಂದು ಪೆಣ್ಗೂಡಿಯುಂ॥
ರತ್ಯಂತೋದ್ಭವಹೇಯಮಂ ನೆನೆಯುತಂ ಪೋಗಲ್ಜಯಂ ಪೆಣ್ಗೆ ತಾ–।
ನತ್ಯಂತಪ್ರಿಯಬದ್ಧನಾಗೆ ಕಿಡನೇ ರತ್ನಾಕರಾಧೀಶ್ವರಾ॥ ॥೬೫॥

ಸ್ತ್ರೀಯಲ್ಲಿ ಸಂಭೋಗಸುಖವನ್ನು ಅನುಭವಿಸಿದರೂ ಜೀವ ನಿಜವಾದ ಧರ್ಮವನ್ನು ಅರಿತು ನನ್ನ ಈ ಕಾಮವು "ಅಪ್ರತ್ಯಾಖ್ಯಾನ ಕ್ರೋಧ ಮಾನ ಮಾಯಾ ಲೋಭ"ಗಳೆಂಬ ಕಷಾಯಗಳ ಉದಯದಿಂದ ಉಂಟಾಗಿದೆ ಎಂದು ತಿಳಿದು, ಸಂಭೋಗಾಂತ್ಯದ ಹೇಯದ ಅವಸ್ಥೆಯನ್ನು ಮೆಲುಕುಹಾಕುತ್ತಾ ಸಾಗಿದರೆ ಅವನು ಮೋಹವನ್ನು ಗೆಲ್ಲುತ್ತಾನೆ. ಅದು ಬಿಟ್ಟು ಸ್ತ್ರೀಗೆ ಪರವಶನಾಗಿ ಬಿಟ್ಟರೆ ಅವನನಾಶ ಖಂಡಿತ.

ಮೊಲೆಯುಂ ಮುದ್ದುಮೊಗಂ ಬೆಡಂಗೆಸೆಯೆ ಪೆಣ್ಣಿಂತಿರ್ದಳಿಂತಿರ್ದಳೆಂ।
ದೊಲವಿಂ ಭಾವಿಸಿ ಕಾಣ್ಬುದೇ ನರಕಮಬ್ಧಿಪ್ರಾಂತಮಗ್ನಾದ್ರಿಯೊಳ್॥
ಸಲಿಲಂ ತನ್ನುಡೆಮುಟ್ಟೆ ತೋರ್ಪನದೆ ಪಲ್ಯಂಕಾಸನಂ ಸ್ಫಾಟಿಕೋ।
ಜ್ಜ್ವಲನೆಂದಾಗಳೆ ನಿಮ್ಮ ಕಂಡೊಡೆ ಸುಖಂ ರತ್ನಾಕರಾಧೀಶ್ವರಾ॥ ॥೬೬॥

ಮೊಲೆಯೂ ಮುದ್ದುಮೊಗವೂ ವಿಲಾಸವನ್ನು ಸೂಸುತ್ತಿರಲು ಹೆಣ್ಣು ಎಷ್ಟು ಚೆನ್ನಿದ್ದಳು! ಅಷ್ಟು ಚೆನ್ನಿದ್ದಳು! ಇಷ್ಟು ಚೆನ್ನಿದ್ದಳು, ಎಂದೆಲ್ಲಾ ಮೋಹಾಸಕ್ತಿಯಿಂದ ಭಾವಿಸಿ ಕಾಣಲು ಆಶಿಸುವುದೇ ನರಕ. ಪದ್ಮಾಸನಸ್ಥಿತನೂ ಸ್ಫಟಿಕದಂತೆ ಉಜ್ವಲನೂ ಆದ ಸ್ವಾಮಿಯನ್ನು ಸಾಗರದ ಸನಿಹದಲ್ಲಿ ಮುಳುಗಿದ ಪರ್ವತದಲ್ಲಿ ಬಿಂಬದ ಸೊಂಟದ ತನಕ ನೀರಿರುವುದು ಕಾಣುತ್ತದೆಯೆಂದು ಭಾವಿಸಿ ಜಿನನನ್ನು ಕಾಣುವುದೇ ಸ್ವರ್ಗಸುಖ.

ಪೆರರಂ ಪೇಳ್ದೊಡೆ ನೋವರಾನೆನೆಗೆ ಪೇಳ್ವೆಂ ಕಾಮಿನೀ ಮೂತ್ರ ದೋ-
ಜ್ಜರಮೈಯಂ ಲತೆಯೆಂದು ಮಾಂಸಕುಚಮಂ ಹೇಮಾಬ್ಜಮೆಂದೆಂದು ನೆ-॥
ತ್ತರನುಂಡಾ ತುಟಿಯಂ ಸುಧಾರುಚಿಯೆನುತ್ತಾಂ ಬಿಳ್ದುದುಂ ಸಾಲದ।
ನ್ಯರನೊಯ್ದೆಂ ಕವಿಯೋ? ವಲಂ ಕಪಿಯೊ ನಾಂ? ರತ್ನಾಕರಾಧೀಶ್ವರಾ॥॥೬೭॥

ಇನ್ನೊಬ್ಬರನ್ನು ಕುರಿತು ಬೈದರೆ ಅವರಿಗೆ ದುಃಖವಾಗುತ್ತದೆ. ಅದಕ್ಕೋಸ್ಕರ ನನ್ನನ್ನು ನಾನೇ ನಿಂದಿಸಿಕೊಳ್ಳುವೆನು. ಕಾಮಿನಿಯ ಮೂತ್ರ ಪ್ರವಾಹದ ನಿವಾಸವಾದ ದೇಹವನ್ನು ಬಳುಕುವ ಬಳ್ಳಿಯೆಂದು, ಮಾಂಸಭರಿತವಾದ ಮೊಲೆಯನ್ನು ಚಿನ್ನದ ತಾವರೆಯೆಂದೂ ರಕ್ತರಂಜಿತವಾದ ಅಧರವನ್ನು ಅಮೃತದಂತೆ ರುಚಿಯುಳ್ಳದ್ದೆಂದೂ ಹೇಳುತ್ತಾ ನಾನು ಕೆಟ್ಟಿದ್ದು ಸಾಲದು ಎಂಬಂತೆ ಉಳಿದವರನ್ನೂ ಆ ಮಾರ್ಗಕ್ಕೆ ಸೆಳೆದೆನು. ನಾನು ಕವಿಯೋ, ಕಪಿಯೋ? ಏನೆಂದು ನನ್ನನ್ನು ಕರೆದುಕೊಳ್ಳಲಿ?

ಗುರುಮಾತಾಪಿತರಂ ಪತಿವ್ರತೆಯರಂ ಸಮ್ಯಕ್ತ್ವಸಂಪನ್ನರಂ।
ಪಿರಿದುಂ ಬಣ್ಣಿಸಿ ಪೇಳ್ಗೆ ತೀರ್ಥಕಕಥಾಶೃಂಗಾರಮಂ ಪೇಳ್ಗೆ ಮೇಣ್॥
ದುರಿತಸ್ತ್ರೀಯರನಾತ್ಮಬಾಹ್ಯರನದೇಂ ಪೇಳ್ವರ್ದಿನಂ ಸಗ್ಗದಂ।
ತಿರೆಯಂಧಂಗೆ ತಮಿಸ್ರೆಯಂ ನುಡಿವರೇ ರತ್ನಾಕರಾಧೀಶ್ವರಾ॥ ॥೬೮॥

ಕವಿಯಾದವನು, ಗುರುಗಳನ್ನು, ತಾಯಿತಂದೆಗಳನ್ನು, ಪತಿವ್ರತಾಶಿರೋಮಣಿ-ಗಳನ್ನು ಸಮ್ಯಕ್ತ್ವ ಸಂಪನ್ನರನ್ನು ವಿಶೇಷವಾಗಿ ವರ್ಣಿಸಲಿ; ತೀರ್ಥಂಕರರ ಪುರಾಣಕಥೆಗಳಲ್ಲಿ ಬರುವ ತಿಳಿಶೃಂಗಾರವನ್ನು ಎಷ್ಟು ಬೇಕಾದರೂ ವಿವರಿಸಲಿ; ಅದುಬಿಟ್ಟು ದುಷ್ಟಸ್ತ್ರೀಯರನ್ನು ಆತ್ಮಜ್ಞಾನಿಗಳಲ್ಲದವರನ್ನು ಎಷ್ಟೊಂದು ವರ್ಣಿಸುತ್ತಾರೆ! ಇದು ಸರಿಯಲ್ಲ. ಸ್ವರ್ಗದ ಹಾಗೆ ಬೆಳಕಿರಲು ಕುರುಡನಿಗೆ ಕತ್ತಲೆಯನ್ನು ವಿವರಿಸುವರೇ? ಆದ್ದರಿಂದ ಅಜ್ಞಾನಿಗಳಿಗೆ ಪುಣ್ಯಪುರುಷರ ಕಥೆ ಹೇಳಬೇಕು, ಪಾಪಿಷ್ಠರ ಕಥನವನ್ನಲ್ಲ.

ಕವಿತಾಶಕ್ತಿಯೆ ಕಲ್ಪವಲ್ಲಿಯದನಾಂ ಸದ್ಧರ್ಮಮೆಂದಂಬ ಮೇ-।
ರುವಿನೊಳ್ಬಿತ್ತಿ ಮನೋವಿಶುದ್ಧಿ ಬಲವೀರ್ಯಂ ಬುದ್ಧಿಸಾಫಲ್ಯಮಾ॥
ಕವಿಯುಂ ಸರ್ವರುಮುಣ್ಬರಾ ಫಲಮನಿತ್ತಲ್ಮಾಣ್ದು ಮಿಥ್ಯಾತ್ವಮಾ-।
ರವದೊಳ್ಬಿತ್ತಿ ಬಳಲ್ವರೇಕೆಯಕಟಾ ರತ್ನಾಕರಾಧೀಶ್ವರಾ॥ ॥೬೯॥

ಕವಿತಾಶಕ್ತಿ ಕಲ್ಪಲತೆ ಇದ್ದ ಹಾಗೆ! ಇದನ್ನು ಸದ್ಧರ್ಮವೆಂಬ ಮೇರು ಪರ್ವತದಲ್ಲಿ ನೆಡಬೇಕು; ಮನೋವಿಶುದ್ಧತೆ, ದೇಹಬಲ, ವೀರ್ಯಬಲ, ಬುದ್ಧಿ ಸಾಫಲ್ಯಗಳೆಂಬ ಫಲಗಳನ್ನು ಬೆಳೆಯಬೇಕು. ಆಗ ಅವುಗಳನು ಕವಿಯೂ, ಎಲ್ಲರೂ ಅನುಭವಿಸಬಲ್ಲರು. ಹೀಗೆ ಮಾಡದೆ ಮಿಥ್ಯಾತ್ಮವೆಂಬ ಮರುಭೂಮಿಯಲ್ಲಿ ಬಿತ್ತಿದರೆ ಬೆಳೆಯುವುದೇನಿದೆ? ಬರಿ ಬಳಲುವುದೇ. ಹೀಗೇಕೆ ಮಾಡಿ ಕೊರಗುತ್ತಾರೆ ಕವಿಗಳು?

ಒಡಲಂ ರಕ್ಷಿಸಲನ್ಯರಂ ನುತಿಸಿದಾ ಕೊಂಡಾಟಮಂ ಪೆಣ್ಗಳೊಳ್।
ಕಿಡೆಬಿಳ್ದಾಡಿದ ಲಂಪಟಭ್ರಮಣದಾ ಬಂಡಾಟಮಂ ಸರ್ವರೊಳ್॥
ನುಡಿದೇಕುರ್ಬುವರಯ್ಯ ಪುಣ್ಯಕಥೆಯೋ? ಅಧ್ಯಾತ್ಮಮೋ? ಕೊಳ್ಗೆಸ–।
ರ್ಮಡುವಂ ಪಾಲ್ಗಡಲೆಂದು ಕಂಡರಕಟಾ! ರತ್ನಾಕರಾಧೀಶ್ವರಾ॥ ॥೭೦॥

ಹೊಟ್ಟೆಪಾಡಿಗಾಗಿ ಕಂಡವರನ್ನು ಕೊಂಡಾಡಿದ ಸ್ತೋತ್ರವನ್ನೂ, ಹೆಣ್ಣಿನಲ್ಲಿ ವಿಷಯಸುಖದಿಂದ ಮತ್ತನಾಗಿ ಭ್ರಮಣೆಯ ಬಂಡಾಟವನ್ನು ಕುರಿತು ಆಡಿದ ಮಾತುಗಳನ್ನೂ ಎಲ್ಲರೂ ಹೇಳಿಕೊಂಡು ಏಕೆ ಉಬ್ಬುತ್ತಾರೆ? ಇವೆಲ್ಲಾ ಪುಣ್ಯಕಥೆಯೇ? ಪುರುಷಾರ್ಥವೇ? ಅಲ್ಲ. ಇವೆಲ್ಲಾ ಕೊಳೆತು ನಾರುವ ಕೆಸರಿನ ಗುಂಡಿಯನ್ನು ಕ್ಷೀರಸಾಗರವೆಂದು ಕಂಡಂತೆ! ಅಜ್ಞಾನದ ಫಲ! ಅಪಾರ್ಥದ ಪರಿಣಾಮ!

ವೀಣಾ ಕಿನ್ನರಿ ವೇಣು ತಾಳ ಮುರಜಾಳಾಪಾದಿ ಸಂಸಿದ್ಧಿ ಗೀ–।
ರ್ವಾಣ ಪ್ರಾಕೃತವಾಕ್ಯಸಿದ್ಧಿ ಸುಕವಿತ್ವಂ ಸುಸ್ವರಂ ಸತ್ಕುಲಂ॥
ತ್ರಾಣಂ ಶ್ರೀಚೆಲುವಕ್ಕೆಯಾದೊಡಮದೇನಾ ಲೀಲೆಗಂ ನಿಮ್ಮ ಕ–।
ಲ್ಯಾಣಾರಾಧನೆಯಕ್ಕೆ ಚಿತ್ತವಿಸದಂ ರತ್ನಾಕರಾಧೀಶ್ವರಾ॥ ॥೭೧॥

ವೀಣೆ, ಕಿನ್ನರಿ, ಕೊಳಲು, ತಾಳ, ಮದ್ದಲೆ, ಗಾಯನ ಮೊದಲಾದವುಗಳ ಸಂಸಿದ್ಧಿಯೂ, ಸಂಸ್ಕೃತ, ಪ್ರಾಕೃತ ಭಾಷಾಸಿದ್ಧಿ, ಕಾವ್ಯರಚನಾ ಶಕ್ತಿ, ಕಲಕಂಠಪ್ರಾಪ್ತಿ, ಸತ್ಕುಲ, ದೇಹಶಕ್ತಿ, ಸಂಪತ್ತು, ಸೌಂದರ್ಯ, ಇವೆಲ್ಲಾ ದೊರಕಲಿ. ಆದರೆ ಅವುಗಳು ವಿಲಾಸಕ್ಕೆ ಬಳಕೆ ಆದರೇನು ಪ್ರಯೋಜನ? ಆದಕಾರಣ ನಿಮ್ಮ ಪಂಚಕಲ್ಯಾಣಗಳ ಆರಾಧನೆಗೆ ಅವೆಲ್ಲಾ ಮೀಸಲಾಗುವಂತೆ ಅನುಗ್ರಹಿಸು.

ಏತಕ್ಕಾಡುವರಯ್ಯ ಹಮ್ಮನಕಟಾ! ತಮ್ಮಲ್ಲಿ ವಿದ್ಯಾಕಳಾ–।
ವ್ರಾತಂ ತಳ್ತುದನಾ ಕವಿತ್ವಮುಸಿರ್ಗುಂ ಸುಜ್ಞಾನಮಂ ತತ್ಪರಂ॥
ಜ್ಯೋತಿರ್ವ್ಯಕ್ತಿಯ ಯುಕ್ತಿಯೇ ನುಡಿಗುಮಿನ್ನಂತಲ್ಲದಲ್ಲಲ್ಲಿ ಯ–
ದ್ವಾ ತದ್ವಾ ಬಹುಭಾಷೆಯಿಂ ಫಲವದೇಂ ರತ್ನಾಕರಾಧೀಶ್ವರಾ॥ ॥೭೨॥

ವ್ಯರ್ಥವಾಗಿ ಜನರು ಏಕೆ ಗರ್ವದ ನುಡಿಗಳನ್ನಾಡುವರು? ಅವರು ವಿದ್ಯಾಸಂಪನ್ನರೂ, ಸಕಲಪ್ರವೀಣರೂ, ಆಗಿರುವುದನ್ನು ಅವರು ರಚಿಸುವ ಕವಿತೆಯೇ ಸಾರುವುದು; ಪರಂಜ್ಯೋತಿಸ್ವರೂಪನಾದ ಪರಮಾತ್ಮನನ್ನು ಮೆಚ್ಚಿಸುವ ಅವನ ಯುಕ್ತಿಯೇ ಅವರ ಸುಜ್ಞಾನಕ್ಕೆ ಸಾಕ್ಷಿಯಾಗಿರುತ್ತದೆ, ಹಾಗಲ್ಲದೆ ಎಲ್ಲೆಂದರಲ್ಲಿ ಯದ್ವಾತದ್ವಾ ಹರಟೆ ಕೊಚ್ಚಿದರೆ ಏನು ಬಂದೀತು?

ತರ್ಕಂ ಬಂದೊಡೆ ದೃಷ್ಟದಿಂ ಶ್ರುತನಿಟ್ಟೂಹಾನುಮಾನಂಗಳಿಂ।
ಬೇರ್ಕೆಯ್ದಾತ್ಮನನೆಲ್ಲರುಂ ನೆರೆಯೆ ಕಂಡಂತಾಗೆಯಾಸ್ಥಾನ ಪಾ॥
ಲರ್ಕೊಂಡಾಡೆ ಕುವಾದಿಯುಂ ತಿಳಿಯೆ ಪೇಳಲ್ಬಲ್ಲನೇ ಬೋಧಮಾ।
ಲಾರ್ಕಂ ಶುಷ್ಕವಿವಾದಿ ತಾನಧಿಕನೇ ರತ್ನಾಕರಾಧೀಶ್ವರಾ॥ ॥೭೩॥

ತರ್ಕಶಾಸ್ತ್ರ ಪ್ರವೀಣನಾದರೆ ಪ್ರತ್ಯಕ್ಷ ಪ್ರಮಾಣ ಮತ್ತು ಅನುಮಾನ ಪ್ರಮಾಣಗಳಿಂದ ಮತ್ತು ತರ್ಕಪ್ರಮಾಣಗಳಿಂದಲೂ, ಸಭೆ ಸೇರಿದವರೆಲ್ಲಾ ಅರಿವಂತಾಗಬೇಕು; ರಾಜನು ಹೊಗಳುವಂತಾಗಬೇಕು; ದುಷ್ಟ ಪ್ರತಿವಾದಿಗಳೂ ಮನಗಾಣಬೇಕು; ಈ ರೀತಿಯಲ್ಲಿ ಆತ್ಮನ ಅಸ್ತಿತ್ವವನ್ನು ಪ್ರತಿಪಾದಿಸಲು ಬಲ್ಲವನೇ ಶ್ರೇಷ್ಠಜ್ಞಾನಿ; ಜ್ಞಾನಭಾಸ್ಕರನು. ಹೀಗಿಲ್ಲದ ಶುಷ್ಕವಾದಿಯನ್ನು ಬಲ್ಲವನು, ಶ್ರೇಷ್ಠನೆಂದು ಯಾರೂ ಹೇಳರು.

ಶಾಸ್ತ್ರಂ ಬಂದೊಡೆ ಶಾಂತಿ ಸೈರಣೆ ನಿಗರ್ವಂ ನೀತಿ ಮೇಲ್ವಾತು ಮು–
ಕ್ತಿಸ್ತ್ರೀಚಿಂತೆ ನಿಜಾತ್ಮಚಿಂತೆ ನಿಲವೇಳ್ಕಂತಲ್ಲದಾ ಶಾಸ್ತ್ರದಿಂ॥
ದುಸ್ತ್ರೀಚಿಂತನೆ ದುರ್ಮುಖಂ ಕಲಹಮುಂ ಗರ್ವಂ ಮನಂಗೊಂಡೊಡಾ–।
ಶಾಸ್ತ್ರಂ ಶಸ್ತ್ರಮೆ ಶಾಸ್ತ್ರಿ ಶಸ್ತ್ರಿಕನಲಾ? ರತ್ನಾಕರಾಧೀಶ್ವರಾ॥ ॥೭೪॥

ಶಾಸ್ತ್ರಜ್ಞಾನವಿದ್ದವನಿಗೆ ಶಾಂತಿ–ಸಮಾಧಾನಗಳಿರಬೇಕು; ನಿರಹಂಕಾರ ನೀತಿ ಧರ್ಮ ಇರಬೇಕು; ಮೃದು–ವಚನ–ಸದುವಿನಯ ಇರಬೇಕು; ಮೋಕ್ಷಚಿಂತನೆ, ಸ್ವಾತ್ಮಚಿಂತನೆ ಹಾಗಿಲ್ಲದೆ ಶಾಸ್ತ್ರಜ್ಞಾನ ಪಡೆದವನಿಗೆ ದುಷ್ಟ ಸ್ತ್ರೀಚಿಂತನೆ, ಕ್ರೋಧಾದಿಗಳಿಂದ ಕೂಡಿದ ವಿಕಾರಭಾವನೆ, ಕಲಹಸ್ವಭಾವ, ಅಹಂಕಾರಭಾವನೆ, ಇವುಗಳು ಮನದಲ್ಲಿ ನೆಲೆನಿಂತರೆ ಅಂಥ ಶಾಸ್ತ್ರಜ್ಞಾನವು ಶಸ್ತ್ರವೇ ಸೈ! ಅಂಥ ಶಾಸ್ತ್ರಜ್ಞನು ಶಸ್ತ್ರಜ್ಞನೇ ಹೌದು.

ಭೂನಾಥರ್ಕಳ ಬಾಳ್ಕೆ ಚಿತ್ತಕೆ ಸದಾ ತಳ್ಳಂಕವೆಷ್ಟೆಷ್ಟು ಧಾ–।
ತ್ರೀ ನಾರೀ ಧನ ಸೇನೆ ಸಾರ್ದೊಡಮದುಂ ಸಾಲ್ದುಪ್ಪುದೇ? ಮತ್ತೆ ದು–॥
ರ್ಧ್ಯಾನಾಪೇಕ್ಷೆಯೆ ಪೆರ್ಚುಗುಂ ಬಗೆಯಲಂತಾ ಚಿಂತೆಯೇ ವ್ಯಾಧಿ ಸು।
ಜ್ಞಾನೈಶ್ವರ್ಯಕೆ ಸಾಟಿ ಸೌಖ್ಯಮೊಳವೇ? ರತ್ನಾಕರಾಧೀಶ್ವರಾ॥ ॥೭೫॥

ದೊರೆಗಳ ಬಾಳು ಸದಾ ಆತಂಕಕಾರಿಯಾದುದು; ರಾಜ್ಯ, ರಮಣಿ, ಸಿರಿ, ಸೇನೆ ಇವು ಎಷ್ಟೆಷ್ಟು ಹೆಚ್ಚಿದರೂ ಅವರಿಗೆ ಸಾಕಾಗದು; ತೃಪ್ತಿಯಾಗದು. ಮತ್ತೆ ದುರಾಲೋಚನೆ, ದುರಾಸೆ ಹೆಚ್ಚುತ್ತದೆ. ಇದಕ್ಕೆ ಕೊನೆ ಮೊದಲೇ ಇಲ್ಲ. ಒಂದು ರೀತಿಯಲ್ಲಿ, ಈ ಬಗ್ಗೆ ಚಿಂತೆಯೇ ವ್ಯಾಧಿ; ಆದ್ದರಿಂದ ಸುಜ್ಞಾನವೆಂಬ ಸಂಪತ್ತಿಗೆ ಸಮಾನವಾದ ಸುಖವಿನ್ನಿಲ್ಲ. ರಾಜಪದವಿಯಂತೂ ಇದರ ಮುಂದೆ ಏನೂ ಇಲ್ಲ.

ಪಡೆಯೊಳ್ಬಲ್ಲಿದನಾದೊಡಾ ಪಡೆಯಿನೇಂ ಪಾಪಾರಿಯಂ ಗೆಲ್ವನೇ?।
ಕಡುಪಿಂದಂ ಜವನಂ ತೆರಳ್ಚುವನೆ? ಬಲ್ಪಿಂ ಮೋಕ್ಷಮಂ ಕೊಂಬನೇ?॥
ಕಡೆಗಾ ಭೂಪನ ಶಕ್ತಿ ನಾಲ್ಗಳಿಗೆ ಸಲ್ಗುಂ ಮರ್ತ್ಯಕೀಟಂಗಳೊಳ್।
ಬಿಡು ಯೋಗೀಂದ್ರನ ಶಕ್ತಿಗಾವುದು ಸಮಂ ರತ್ನಾಕರಾಧೀಶ್ವರಾ॥ ॥೭೬॥

ರಾಜನು ಸೇನಾಸಂಪತ್ತಿನಿಂದ ಸಶಕ್ತನಾದ ಮಾತ್ರಕ್ಕೆ ಆ ಸೇನಾ ಸಹಾಯದಿಂದ ಪಾಪವೆಂಬ ಶತ್ರುವನ್ನು ಜಯಿಸಬಲ್ಲನೇ? ತಾನೆಷ್ಟೇ ಪರಾಕ್ರಮಶಾಲಿಯಾದರೂ ಯಮನನ್ನು ಗೆಲ್ಲಬಲ್ಲನೇ? ತನ್ನ ಶಕ್ತಿಯಿಂದ ಮುಕ್ತಿಯನ್ನು ಪಡೆಯಬಲ್ಲನೇ? ಹೆಚ್ಚೇನು, ನರಕೀಟಗಳ ನಡುವೆ ನಾಲ್ಕು ಘಳಿಗೆ ನಲಿದಾಡುವುದರಲ್ಲಿ, ನಾಡಿನೊಡೆಯನ ಶಕ್ತಿ ಮುಗಿಯುವುದು, ಇವೆಲ್ಲಾ ಕಂಡಾಗ ಯೋಗೀಶ್ವರರ ಶಕ್ತಿಗೆ ಮಿಗಿಲಾದುದು ಮತ್ತೊಂದಿಲ್ಲ ಎಂಬುದು ಸತ್ಯ.

ತಮ್ಮಂ ಕೀರ್ತಿಸೆ ನಲ್ಮೆಯೊಲ್ಮೆ ಕಡುಚಾಗಂ ಕೂಡೆ ಸಂಭಾಷಣಂ।
ನಿಮ್ಮಂ ಕೀರ್ತಿಸಲಡ್ಡಮೋರೆ ಬಡಚಾಗಂ ಮೌನಮಾ ಭೂಮಿಪರ್॥
ತಮ್ಮಂ ಕೊಲ್ವ ನರೇಂದ್ರನಂ ಪೊಗಳಲಳ್ಕಿಂ ಮನ್ನಿಪರ್ ನಿಮ್ಮೊಳೇಂ।
ಹಮ್ಮಂ ತೋರ್ಪರೊ ಕಾವನೊಳ್ಕಲಹವೇ? ರತ್ನಾಕರಾಧೀಶ್ವರಾ॥ ॥೭೭॥

ರಾಜನ ಮುಂದೆ, ಅವನನ್ನು ಹೊಗಳಿದರೆ ಪ್ರೀತಿ ವಿಶ್ವಾಸ ತೋರಿಸುತ್ತಾನೆ, ಅಧಿಕಧನ ಕೊಟ್ಟು ಮೆಚ್ಚಿಗೆ ಸೂಸಿ ಸಂಭಾಷಿಸುತ್ತಾನೆ; ಜಿನನನ್ನು ಕೀರ್ತಿಸಿದರೆ ಮೋರೆ ತಿರುಗಿಸುವನು; ಮೌನ ಧರಿಸುವನು; ಕಿಂಚಿತ್ ದಾನ ನೀಡುತ್ತಾ ತನ್ನನ್ನು ಕೊಲ್ಲಬಲ್ಲ ರಾಜನನ್ನು ಹೊಗಳಿದರೆ ಅಂಜಿಕೆಯಿಂದ ಅಂಥವರನ್ನು ಮನ್ನಿಸುವನು. ಆದರೆ ತಮ್ಮನು ರಕ್ಷಿಸಬಲ್ಲ ಜಿನನ ಬಗೆಗೆ ಹೆಮ್ಮೆ ತೋರುವುದಿಲ್ಲ. ರಕ್ಷಕನಲ್ಲಿ ಕಲಹವೇ? ಸಲ್ಲದು, ಸಲ್ಲದು.

ಆರಿಂದಾದುದೊ ರಾಜ್ಯಲಕ್ಷ್ಮಿಯದು ನಿಮ್ಮಿಂದಾದುದೆಂತೆಂದೊಡಾ-।
ಚಾರಂ ಮುನ್ನಣುಮಾತ್ರಮಿರ್ದ ಫಲದಿಂದಾ ಜೀವಕೀ ಜನ್ಮದೊಳ್॥
ಸೇರಿತ್ತಾಚರಣಕ್ಕೆ ನೀನೆ ಪತಿ ನಿನ್ನಂ ಮಾಣ್ದವಂ ಕಷ್ಟಸಂ-।
ಸಾರಾಂಬೋಧಿಯ ದಾಂಟಲೇನರಿವನೇ ರತ್ನಾಕರಾಧೀಶ್ವರಾ॥ ॥೭೮॥

ರಾಜನಿಗೆ ರಾಜ್ಯಸಂಪತ್ತು ಯಾರಿಂದ ದೊರೆಯಿತು? ನಿಮ್ಮಿಂದ ಆಯಿತು. ಹೇಗೆಂದರೆ ಪೂರ್ವಜನ್ಮದಲ್ಲಿ ಗೈದ ವ್ರತಾಚರಣೆಯನ್ನು(ಅತ್ಯಲ್ಪಕಾಲ) ಮಾಡಿದ ಫಲದಿಂದ ಜೀವಾತ್ಮನಿಗೆ ಈ ಜನ್ಮದಲ್ಲಿ ರಾಜ್ಯಸಂಪತ್ತು ಸೇರಿದೆ. ಆ ವ್ರತಾಚರಣೆಯ ಪತಿಯಾದ ನಿನ್ನನ್ನೇ ಮರೆತವನು, ದುಃಖಕರವಾದ ಸಂಸಾರಸಾಗರವನ್ನು ದಾಟಲು ಅರಿಯನು.

ಅಣುಮಾತ್ರಂ ವ್ರತಮಲ್ಪಕಾಲಮಿರೆ ಮುನ್ನಂ ತತ್ಫಲಪ್ರಾಪ್ತಿಯಿಂ।
ಪ್ರಣುತಕ್ಷ್ಮಾಪತಿಯಾದೆನಿನ್ನನುದಿನಂ ಸಮ್ಯಗ್ವ್ರತಾಚಾರನುದಿನಂ ಲ–॥
ಕ್ಷಣಮಂ ಶಾಶ್ವತವಾಂತು ದೇವಪದಮಂ ಕೈವಲ್ಯಮಂ ಕೊಂಬೆನೆಂ–।
ದೆಣಿಸುತ್ತುಜ್ಜುಗಿಪಾತನೇ ಸುಖಿಯಲಾ ರತ್ನಾಕರಾಧೀಶ್ವರಾ॥ ॥೭೯॥

ಪೂರ್ವಜನ್ಮದಲ್ಲಿ ಗೈದ ಸ್ವಲ್ಪವಾದ ವ್ರತಾಚರಣೆಯನ್ನು ಅಲ್ಪಕಾಲ ಮಾಡಿದ್ದರ ಫಲವಾಗಿ ಸ್ತುತ್ಯನಾದ ಭೂಪತಿಯಾದೆನು; ಇನ್ನುಮುಂದೆ ಸದಾಕಾಲ ಸಮ್ಯಕ್ ವ್ರತಾಚಾರವನ್ನು ಕೈಗೊಂಡು ಸ್ವರ್ಗಪದವಿಯನ್ನೂ ಸ್ಥಿರಪದವಿಯನ್ನೂ. ಮೋಕ್ಷವನ್ನೂ ಪಡೆಯುತ್ತೇನೆ, ಎಂದು ಚಿಂತಿಸುತ್ತ ಧರ್ಮಾಚರಣೆಗೆ ಪ್ರಯತ್ನಪಡುವವನೇ ಪರಮಸುಖಿ.

ಭೃತ್ಯಂ ತನ್ನನದೆಂತು ಕಾಣ್ಬನವನಂತುರ್ವೀಶ್ವರಂ ನಿಮ್ಮ ಕಂ–।
ಡತ್ಯಾನಂದದೆ ಕಾಣ್ಕೆ ಕೆಯ್ಮುಗಿತಮಷ್ಟಾಂಗಾನತಂ ಸಮ್ಮುಖ॥
ಸ್ತೌತ್ಯಂ ಸೇವೆಗಳೆಂಬಿವಂ ನೆಗಳುತುಂ ನಂಬಿರ್ದೊಡಾತಂಗೆ ತ–।
ತ್ಪ್ರತ್ಯರ್ಥಿಕ್ಷಿತಿಪಾಲರೇನೆರಗರೇ? ರತ್ನಾಕರಾಧೀಶ್ವರಾ॥ ॥೮೦॥

ಸೇವಕರು ರಾಜನನ್ನು ಹೇಗೆ ಭಕ್ತಿಯಿಂದ ಕಾಣುತ್ತಾನೋ ಹಾಗೆಯೇ ರಾಜನು ಜಿನನನ್ನು ಕಂಡು ಭಯಭಕ್ತಿಯಿಂದ ಕೈಮುಗಿದು, ಸಂತೋಷದಿಂದ ವರ್ತಿಸಿ, ಸಾಷ್ಟಾಂಗ ನಮಸ್ಕಾರ ಮಾಡಿ, ಸಮ್ಮುಖದಲ್ಲಿ ಸ್ತೋತ್ರಮಾಡಿ, ಸೇವೆಮಾಡುತ್ತಾ ನಂಬಿಕೊಂಡಿದ್ದರೆ ಅಂಥ ರಾಜನಿಗೆ ಶತ್ರುರಾಜರು ಶರಣಾಗುವರು.

ಸುರಪಂ ತನ್ನಿಭವಿತ್ತು ಮಾವತಿಗನಪ್ಪಂ ಕಾಂತೆಯಿಂ ಪಾಡಿಪಂ।
ಸುರಸೈನ್ಯಂ ಸಹವಾಗಿ ನಿಮ್ಮ ಭಿಷವಕಕ್ಕೊಲ್ದೋಳಿಗಂ ಮಾಳ್ಪನಾ–॥
ದರದಿಂ ಛತ್ರಮನೆತ್ತುವಂ ನಟಿಸುವಂ ಪಲ್ಲಕ್ಕಿಯಂ ತಾಳ್ವನೀ।
ನರಕೀಟಾದಿಗಳೇಕೆ ಗರ್ವಿಸುವರೋ! ರತ್ನಾಕರಾಧೀಶ್ವರಾ॥ ॥೮೧॥

ಹೇ ದೇವಾ! ನಿನಗೆ ದೇವೇಂದ್ರನು ತನ್ನ ಐರಾವತವನ್ನೇ ಇತ್ತು ತಾನೇ ಮಾವಟಿಗನಾಗುತ್ತಾನೆ; ತನ್ನ ಪತ್ನಿ ಶಚಿದೇವಿಯಿಂದ ಹಾಡಿಸುತ್ತಾನೆ; ಸುರಸೇನಾ ಸಮೇತನಾಗಿ ಬಂದು ಪ್ರೀತಿಯಿಂದ ಅಭಿಷೇಕ ಮಾಡಿ ಸೇವೆ ಸಲ್ಲಿಸುವನು. ಪ್ರೀತಿಯಿಂದ ಛತ್ರವನ್ನು ಎತ್ತಿ ಹಿಡಿಯುವನು. ನರ್ತಿಸುವನು; ಪಲ್ಲಕ್ಕಿ ಹೊರುವನು; ಎಂದಮೇಲೆ ನಿನ್ನ ವೈಭವದ ಮುಂದೆ ಉಳಿದವರದು ಯಾವ ಲೆಕ್ಕ? ಎಂದ ಮೇಲೆ ನರಕೀಟಗಳೇತಕ್ಕೆ ಗರ್ವಿಪರು?

ದೊರೆಯೇನಂ ಪಿಡಿದಿರ್ಪನಂತದನೆ ಲೋಕಂ ಮೆಚ್ಚುಗುಂ ತದ್ಧರಾ-।
ವರನಾ ದುರ್ಮತದತ್ತ ತಾನೆಳಸಿದಂತಾ ಸಾರ್ದರಂ ತನ್ನುವಂ॥
ನರಕಕ್ಕಿಕ್ಕಿದನೊಲ್ದು ನಿಮ್ಮ ಮತದತ್ತಿಚ್ಛೈಸಿದಂದಾತನು-।
ದ್ಧರಿಸಲ್ತಾನೆ ಸಮರ್ಥನಾದ ನರರೇ! ರತ್ನಾಕರಾಧೀಶ್ವರಾ॥ ॥೮೨॥

ರಾಜನು ಯಾವುದನ್ನು ಮೆಚ್ಚುತ್ತಾನೋ ಅದನ್ನೇ ಜನ ಮೆಚ್ಚುತ್ತಾರೆ. ಆ ರಾಜನು ದುರ್ಮತದತ್ತ ಒಲಿದರೆ ತಾನೂ ತನ್ನನ್ನು ನಂಬಿದವರನ್ನೂ ನರಕಕ್ಕೆ ತಳ್ಳುವನು. ಆದರೆ ನಿಮ್ಮ ಮತವನ್ನು ಒಲಿದವನು ತಾನೇ, ತನ್ನ ಪ್ರಜೆಗಳನ್ನೂ ಉದ್ಧರಿಸಲು ಸಮರ್ಥನಾಗುವನು.

ನರರೊಳ್ಪುಟ್ಟಿ ನರೇಂದ್ರನಾದ ದಿನದೊಳ್ಸದ್ಧರ್ಮಮಂ ಸನ್ಮುನೀ-।
ಶ್ವರರಂ ಭವ್ಯರನೊಲ್ದು ಮನ್ನಿಸಿಯನಾಥರ್ಗಾಶ್ರಿತರ್ಗೀವುತುಂ॥
ಪರಿವಾರಪ್ರಜೆಗಳ್ಗೆ ತಾಯ ತೆರದಿಂದೋವುತ್ತಮಿರ್ಪಂ ಧರಾ-।
ವರನಿಂದಾ ಬರ್ದಿಲಕ್ಕೆ ನಾಳಿನವನ್ನೈ ರತ್ನಾಕರಾಧೀಶ್ವರಾ॥ ॥೮೩॥

ನರಜನ್ಮವನ್ನು ಹೊಂದಿ ನರೇಂದ್ರನಾದವನು ಪಟ್ಟಾಭಿಷಿಕ್ತನಾದ ಮೇಲೆ ಸದ್ಧರ್ಮ ಮಾಡಿ, ಸನ್ಮುನೀಶ್ವರರನ್ನು ಸತ್ಕರಿಸಿ, ಭವ್ಯರನ್ನು ಪ್ರೀತಿಯಿಂದ ಉಪಚರಿಸಿ, ಅನಾಥರಿಗೂ ಆಶ್ರಿತರಿಗೂ ದಾನಮಾಡಿ, ಪರಿವಾರವನ್ನೂ, ಪ್ರಜೆಗಳನ್ನೂ ಮಾತೆಯಂತೆ ಪರಿಪಾಲನೆ ಮಾಡಿದರೆ, ಇಂದು ಧರಾಧಿಪತಿಯಾದವನು ನಾಳೆ ಸ್ವರ್ಗಾಧಿಪತಿಯಾಗುತ್ತಾನೆ.

ಎಷ್ಟೆಷ್ಟೈಸಿರಿ ಪೆರ್ಚುಗುಂ ತನಗೆ ತಾನಷ್ಟಷ್ಟು ಸದ್ಧರ್ಮಕು-।
ತ್ಕೃಷ್ಟಂ ಮಾಡಲೆವೇಳ್ಕು ನೋಂಪಿಗಳನಾ ನಿರ್ಗ್ರಂಥರಂ ನಿಚ್ಚ ಸಂ-॥
ತುಷ್ಟಂ ಮಾಡಲೆವೇಳ್ಕು ಧಾರ್ಮಿಕಜನಕ್ಕಾಧಾರವಾಗಲ್ಕೆ ವೇ-।
ಳ್ಕಿಷ್ಟಂ ತಾಂ ಸುಕೃತಾನುಬಂಧಿಸುಕೃತಂ ರತ್ನಾಕರಾಧೀಶ್ವರಾ॥ ॥೮೪॥

ಎಷ್ಟೆಷ್ಟು ಸಂಪತ್ತು ಹೆಚ್ಚುತ್ತದೋ ಅಷ್ಟಷ್ಟು ಧರ್ಮಾಭಿವೃದ್ಧಿ ಮಾಡಬೇಕು. ನೋಂಪಿಗಳನ್ನು ನಡೆಸಬೇಕು; ನಿರ್ಗ್ರಂಥರನ್ನು ನಿರಂತರವೂ ಸಂತುಷ್ಟಗೊಳಿಸಬೇಕು; ಧರ್ಮಾತ್ಮರಿಗೆ ನೆರವಾಗಬೇಕು. ಇಂಥ ಕಾರ್ಯಗಳನ್ನೆಲ್ಲ ಸುಕೃತಾನುಬಂಧಿಸುಕೃತ ಎನ್ನುವರು.

ವ್ರತಮಂ ಮಾಣ್ದೊಡೆ ಸೇವೆ ಮಾಣ್ಬುದರಿದೇ? ಶೀಲೋಪಸವಾಸಕ್ಕೆ ಬೆ-।
ಚ್ಚುತಿರಲ್ವಿಕ್ರಮಲಕ್ಷ್ಮಿ ಜಾರ್ವುದರಿದೇ? ಸತ್ಪಾತ್ರದಾನಂ ವಿವ-॥
ರ್ಜಿತಮಾಗಲ್ಸಿರಿ ಕುಂದಿವರ್ಪುದರಿದೇ? ನಿಮ್ಮರ್ಚನಾಸಂಭ್ರಮಂ।
ಚ್ಯುತಮಾಗಲ್ನೃಪವೈಭವಂ ಸಡಿಲದೇ? ರತ್ನಾಕರಾಧೀಶ್ವರಾ॥ ॥೮೫॥

ತಾನು ಮಾಡುವ ವ್ರತ ಪೂಜಾದಿಗಳನ್ನು ಕೈಬಿಟ್ಟರೆ ತನಗೆ ಭೃತ್ಯರ ಸೇವೆಯು ಕೈಬಿಟ್ಟು ಹೋಗುವುದು ಕಷ್ಟವೇ? ಸತ್ಪಾತ್ರದಾನವನ್ನು ತೊರೆದರೆ ಸಿರಿಸಂಪತ್ತು ಕುಂದುವುದಿಲ್ಲವೇ? ವ್ರತ ಆಚರಣೆ, ಉಪವಾಸ, ನೋಂಪಿಗೆ ಅಂಜಿದರೆ ಸಾಹಸಲಕ್ಷ್ಮಿ ಸರಿಯದಿರುವಳೇ? ನಿಮ್ಮ ಪೂಜೋತ್ಸಾಹಗಳು ಲೋಪಗೊಂಡರೆ ರಾಜ್ಯಸಂಪತ್ತು ನಶಿಸುವುದಿಲ್ಲವೇ?

ಭೂಕಂಪಂ ಗ್ರಹಣಂ ಬರಂ ಗ್ರಹದನಿಷ್ಟಂ ವ್ಯಂತರೋಗ್ರಂ ರುಜಾ।
ಶೋಕಂ ದುಃಸ್ಥಿತಿ ಗವ್ಯಮರ್ತ್ಯಗಜವಾಹೋನ್ಮಾರಿದುಃಸ್ವಪ್ನನಾ-॥
ನಾಕಷ್ಟಕ್ಕೆ ಮಹಾಭಿಷೇಕ ಕಲಿಕುಂಡಾದ್ಯರ್ಚನಂ ಸಂಘಪೂ-।
ಜಾಕಾರ್ಯಂ ದೊರೆ ಮಾಳ್ಪ ಶಾಂತಿಕವಲಾ ರತ್ನಾಕರಾಧೀಶ್ವರಾ॥ ॥೮೬॥

ಭೂಕಂಪ, ಗ್ರಹಣ, ಕ್ಷಾಮ, ಗ್ರಹಪೀಡೆ, ವ್ಯಂತರ ದೇವತೆಗಳ ಭೀತಿ, ರೋಗದ ದುಃಖ, ದುರ್ಗತಿ, ಗೋವುಗಳಿಗೆ ರೋಗ, ಮನುಷ್ಯರಿಗೆ ಪೀಡೆ, ಆನೆಗಳಿಗೆ ರುಜಿನ, ಕುದುರೆಗಳಿಗೆ ವ್ಯಾಧಿ, ಕೆಟ್ಟ ಕನಸುಗಳು, ನಾನಾ ಸಂಕಷ್ಟಗಳು ಇವುಗಳ ಪರಿಹಾರಾರ್ಥವಾಗಿ ರಾಜನು ಮಹಾಭಿಷೇಕ, ಕಲಿಕುಂಡ ಮೊದಲಾದ ಯಂತ್ರಾರಾಧನೆ; ಸಂಘ ಪೂಜಾಕಾರ್ಯ ಇವುಗಳನ್ನು ಕೈಗೊಂಡರೆ ಅನಿಷ್ಟ ಪರಿಹಾರವಾಗಿ ಶಾಂತಿಯಾಗುತ್ತದೆ.

ದೀಕ್ಷಾಗ್ರಾಹಿಗಳಂ ದಯಾಶ್ರುತಮನಾ ಯಕ್ಷರ್ಕಳಂ ನಿಮ್ಮ ಸ-।
ಲ್ಲಕ್ಷದ್ಬಿಂಬಮನಾನೆಯಂದಣಗಳೊಳ್ಪಲ್ಲಕ್ಕಿಯೊಳ್ತೇರೊಳಿ-॥
ಟ್ಟಕ್ಷೂಣೋತ್ಸವದಿಂ ಪ್ರಭಾವನೆಗಳಂ ಮಾಳ್ಪಂ ನಿರಾಯಾಸದಿಂ।
ಮೋಕ್ಷಶ್ರೀಗಧಿನಾಥನಪ್ಪುದರಿದೇ? ರತ್ನಾಕರಾಧೀಶ್ವರಾ॥ ॥೮೭॥

ಮುನಿಗಳನ್ನೂ, ಜಿನಾಗಮವನ್ನೂ, ಶಾಸನ ದೇವತೆಗಳನ್ನೂ ಸಲ್ಲಕ್ಷಣವಾದ ಜಿನಬಿಂಬವನ್ನು ಅಂಬಾರಿಗಳಲ್ಲಿಯೂ, ಪಲ್ಲಕ್ಕಿಗಳಲ್ಲಿಯೂ, ರಥಗಳಲ್ಲಿಯೂ ಇರಿಸಿ, ಪರಿಪೂರ್ಣ ಉತ್ಸಾಹದಿಂದ ಮೆರವಣಿಗೆ ಮಾಡುವವನು, ನಿರಾಯಾಸವಾಗಿ ನಿರ್ವಾಣ ಲಕ್ಷ್ಮಿಗೆ ಒಡೆಯನಾಗುವುದು ಅಸಾಧ್ಯವೇ?

ಹೊರಮಿಂಚಿಂ ಪೊಲೆವೆಣ್ಗೆ ಸೋಲ್ವತೆರದಿಂ ಶೃಂಗಾರವೀರಕ್ಕೆ ಬಾ-।
ಯೊರೆದೀ ತಸ್ಕರಜಾರವೀರವಿಟವೇಶ್ಯಾಕಾವ್ಯಮಂ ಕೇಳ್ದು ಮೆ-॥
ಯ್ಮರೆವರ್ಪುಣ್ಯಪುರಾಣದತ್ತೆಳಸರಯ್ಯೋ! ಭೂಪರೊಲ್ದಾಮ್ಲಮಂ।
ಸುರಿವರ್ಪಾಲ್ಗುಡಿಯೆಂದರಂ ಜಡಿವರೈ ರತ್ನಾಕರಾಧೀಶ್ವರಾ॥ ॥೮೮॥

ಮೇಲಿನ ಥಳುಕಿಗೆ ಮರುಳಾಗಿ ಹೊಲೆನಾರಿಯರಿಗೆ ಒಲಿಯುವ ರೀತಿಯಲ್ಲಿ, ಶೃಂಗಾರ-ವೀರ ರಸಗಳಿಗೆ ಮಾರುಹೋಗಿ ಜಾರ-ಚೋರರ, ವೀರ-ಅಧಿವೀರರ, ವಿಟ-ವೇಶ್ಯೆಯರ ಕಾವ್ಯಗಳಿಗೆ ಕಿವಿಗೊಟ್ಟು ಮೈಮರೆಯುವರು. ಪುಣ್ಯಪುರುಷರ ಪುಣ್ಯಕಥೆಯಲ್ಲಿ ಪಾಲ್ಗೊಳ್ಳರು! ಎಂಥ ರಾಜರಪ್ಪಾ! ಹುಣಿಸೇಹುಳಿಯನ್ನು ಚಪ್ಪರಿಸುತ್ತಾರೆ; ಹಾಲನ್ನು ಕುಡಿಯೆನ್ನುವವರನ್ನು ಅಪ್ಪಳಿಸುತ್ತಾರೆ.

ಶೃಂಗಾರಂ ಕಲಿನೀತಿಗೆಂದವನಿಪರ್ದುಷ್ಕಾವ್ಯಕೇಕೊಲ್ವರಾ।
ಶೃಂಗಾರಂ ಕಲಿನೀತಿಗಳ್ಕಡಮೆಯೇ ಸತ್ಕಾವ್ಯದೊಳ್? ಲೌಕಿಕಂ॥
ಪೊಂಗಿರ್ದಗ್ಗಳ ನೇಮಿ ರನ್ನ ಕುಮುದೇಂದು ಶ್ರೀಜಿನಾಚಾರ್ಯಕಾ-।
ವ್ಯಂಗಳ್ಮಾಡವೆ ಮೋಹಮಂ ಮುಕುತಿಯಂ? ರತ್ನಾಕರಾಧೀಶ್ವರಾ॥ ॥೮೯॥

ವೀರನೀತಿಯನ್ನು ಅರಿಯಬೇಕು; ಶೃಂಗಾರರಸವನ್ನು ಪಡೆಯಬೇಕು ಎಂದು ದುಷ್ಟಕಾವ್ಯಗಳಿಗೆ ಏಕೆ ಇಷ್ಟಪಡುವರು? ಸತ್ಕಾವ್ಯದಲ್ಲಿ ವೀರನೀತಿ, ಶೃಂಗಾರರಸವೂ ಕಡಿಮೆಯಿರುವುದೇ? ಶ್ರೇಷ್ಠರಾದ ಅಗ್ಗಳ ನೇಮಿಚಂದ್ರ (ನೇಮಿನಾಥಪುರಾಣ), ರನ್ನ(ಅಜಿತನಾಥಪುರಾಣ), ಕುಮುದೇಂದು(ಜಿನರಾಮಾಯಣ), ಶ್ರೀ ಜಿನಸೇನಾಚಾರ್ಯ (ಮಹಾಪುರಾಣ) ಮೊದಲಾದವರ ಕಾವ್ಯಗಳಿಂದ ಅನುರಾಗವೂ ಮೋಕ್ಷವೂ ಸಿಗುವುದಿಲ್ಲವೇ?

ಚೇತೋರಂಗದೊಳಿಟ್ಟು ನಿಮ್ಮಡಿಗಳಂ ಬಂದೋಲಗಂಗೊಟ್ಟೊಡಂ।
ಪ್ರಾತಃಕಾಲದ ರಾಗದೊಳ್ಪದದೊಳಂ ಪದ್ಯಂಗಳೊಳ್ವೀಣೆಯೊಳ್॥
ಶ್ರೀತೀರ್ಥಂಕರ ನಿಮ್ಮ ಪಾಡಿಸುತೆ ಪಾಡುತ್ತಳ್ತಿಯಂ ಮಾಡುತಿ-।
ರ್ಪಾತಂ ಭೂಪನೆ? ಪಾಪಲೋಪಕನಲಾ! ರತ್ನಾಕರಾಧೀಶ್ವರಾ॥ ॥೯೦॥

ಅಂತರಂಗದಲ್ಲಿ ಜಿನೇಂದ್ರನ ಪಾದಗಳನ್ನು ನೆಲೆಗೊಳಿಸಿಕೊಂಡು ಸಭೆ ನಡೆಸುವವನು, ಸಭೆಯಲ್ಲಿ, ಉದಯರಾಗದಲ್ಲಿ ಪದಗಳನ್ನು ಹಾಡಿಸಿ, ಕಾವ್ಯವಾಚನ ಮಾಡಿಸಿ, ವೀಣೆಯಲ್ಲಿ ನುಡಿಯಿಸಿ, ತೀರ್ಥಂಕರರನ್ನು ಕೊಂಡಾಡಿಸಿ, ತಾನೂ ಕೊಂಡಾಡುತ್ತಾ ಭಕ್ತಿ ವ್ಯಕ್ತಪಡಿಸುವ ರಾಜನು ಪಾಪವಿಧ್ವಂಸಕನಾಗಿರುತ್ತಾನೆ.

ಭರತಂಗಂ ಸಭೆಗೆಯ್ದೆ ಚಿತ್ತಕಲುಷಂ ನಿರ್ಮ್ಮಾಲಯಕ್ಕೆಯ್ದೆ ಸ-।
ತ್ಪರಿಣಾಮಂ ಪರಿದೆಯ್ದುತಂ ಪರೆಯುತಂ ಬೆಂಕೊಂಡಿರಲ್ಕಂಡು ತ-॥
ದ್ಭರತಂ ನಿಮ್ಮನೆ ಪೊರ್ದಿ ಸಾರ್ದನಮೃತಶ್ರೀಸೌಖ್ಯಮಂ ನಿಮ್ಮನೀ।
ನರನಾಥರ್ಮರೆದೇಕೆ ನೋವರಕಟಾ! ರತ್ನಾಕರಾಧೀಶ್ವರಾ॥ ॥೬೧॥

ಭರತಚಕ್ರವರ್ತಿಗೆ ರಾಜಸಭೆಗೆ ತೆರಳಲು ಚಿತ್ತಕ್ಲೇಶವೂ, ಜಿನಾಲಯಕ್ಕೆ ಹೋಗಲು ಸತ್ಪರಿಣಾಮವೂ ಉಂಟಾಗುತ್ತಿತ್ತು; ಹಾಗೆಯೇ ಮಾಡುತ್ತಾ ನಿಮ್ಮಲ್ಲಿಯೇ ಆಸಕ್ತನಾಗಿರಲು ಆ ಭರತನು ನಿಮ್ಮನ್ನು ಆಶ್ರಯಿಸಿ ಅಮೃತಸಮಾನ ಮೋಕ್ಷಸುಖವನ್ನು ಪಡೆದನು. ಇದನ್ನು ತಿಳಿದೂ ಅನ್ಯರಾಜ್ಯರು ದೇವರನ್ನು ಮರೆತೇಕೆ ದುಃಖಿಸುತ್ತಾರೆ?

ರಾಜಶ್ರೀಯೊಳನೇಕಕಾಮಿನಿಯರುಂಟಾಳಾಪನೃತ್ಯಂಗಳುಂ-।
ಟಾ ಜಿಹ್ವಾರುಚಿಯುಂಟು ಕಾಮಿಸಿದವೆಲ್ಲಾವುಂಟು ಉಂಟಾದೊಡಂ॥
ರಾಜೀವಂ ಕೆಸರಲ್ಲಿಯಲ್ಲದವೊಲಿರ್ದೂರ್ಧ್ವಕ್ಕೆ ಕಣ್ಣಿಟ್ಟೊಡಾ।
ರಾಜಂ ರಾಜನೆ? ತಾನೆ ರಾಜಋಷಿಯೈ ರತ್ನಾಕರಾಧೀಶ್ವರಾ॥ ॥೬೨॥

ರಾಜಸಂಪತ್ತಿನಲ್ಲಿ ಸುಂದರ ಸ್ತ್ರೀಸಮೂಹವುಂಟು. ಸಂಗೀತ ನರ್ತನಗಳುಂಟು, ನಾಲಗೆಗೆ ರುಚಿಕರವಾದ ಭಕ್ಷ್ಯಭೋಜ್ಯಗಳುಂಟು. ಬಯಸಿದ್ದೆಲ್ಲಾ ಉಂಟು; ಇಷ್ಟೆಲ್ಲಾ ಇದ್ದರೂ, ಕೆಸರಿನಲ್ಲಿದ್ದರೂ ಕೆಸರು ತಾಗದಂತೆ ಇರುವ ಕಮಲದಂತೆ ಮೋಕ್ಷಮಾರ್ಗಕ್ಕೆ ಮನ ನೆಟ್ಟರೆ ಅಂತಹವನು ಎಲ್ಲರಂತೆ ರಾಜನಲ್ಲ! ರಾಜರ್ಷಿ ಆತನು.

ಅಂದೇಂ ತಂದನೆ ಗರ್ಭದಿಂ ಪರರ ದೇಶಂ ಲಕ್ಷ್ಮಿ ಸೈನ್ಯಂಗಳಂ।
ಮುಂದೇನೊಯ್ವನೆ ತಳ್ತ ಪೆಣ್ಬಡೆದ ಮಕ್ಕಳ್ಪೊತ್ತ ದೇಹಂಗಳಂ॥
ಬಂದಿತ್ತೊಂದು ವಿನೋದಗೋಷ್ಠಿಯದು ನಿಮ್ಮಂ ಮುನ್ನ ಕಂಡಿರ್ದ ಸೈ-।
ಪಿಂದಂ ಮತ್ತಮದೇಕೆ ತಾಂ ಮರೆವನೋ ರತ್ನಾಕರಾಧೀಶ್ವರಾ॥ ॥೬೩॥

ರಾಜನು ಹುಟ್ಟಿದಾಗ ಜತೆಯಲ್ಲೇ ರಾಜ್ಯ, ಕೋಶ, ಸೈನ್ಯಾದಿಗಳನ್ನು ತೆಗೆದುಕೊಂಡು ಬಂದನೇ? ಅಥವಾ ತಾನು ಪಡೆದ ಹೆಣ್ಣು, ಹೆತ್ತ ಮಕ್ಕಳು, ಹೊತ್ತ ದೇಹ ತೆಗೆದುಕೊಂಡು ಹೋಗುವನೇ? ಇಲ್ಲ. ಪೂರ್ವಜನ್ಮದಲ್ಲಿ ದೇವರನ್ನು ಕಂಡು ಪೂಜಿಸಿದ ಪುಣ್ಯದಿಂದ ಅವನಿಗೆ ಈ ಸಮಸ್ತಸುಖಗಳ ವಿನೋದಗೋಷ್ಠಿ ಲಭಿಸಿದೆ. ಇದನ್ನು ತಿಳಿದೂ ಸಹ ಅದೇಕೆ ನಿನ್ನನ್ನು ಮರೆಯುತ್ತಾನೆ?

ಭಂಡಾರಂ ಬರುವನ್ನಮಿರ್ಪನೆ?ವಧೂಸಂಭೋಗದೊಳ್ಸಾಕೆನಲ್।
ಕಂಡೇಂ ಪೋಪನೆ?ಯಳ್ಕರಿಂ ಪಡೆದ ರಾಜ್ಯಶ್ರೀಯನೇನಂತ್ಯದೊಳ್॥
ಕೊಂಡೊಯ್ದಪ್ಪನೆ? ನಾಸ್ತಿ ನಾಸ್ತಿ ಗುರುದೈವಕ್ಕೊಲ್ದು ಕೊಟ್ಟೈಸೆ ತಾ-।
ನುಂಡುಟ್ಟೈಸೆ ತನತ್ತು ಮತ್ತೆ ಬರಿದೈ ರತ್ನಾಕರಾಧೀಶ್ವರಾ॥ ॥೯೪॥

ರಾಜನು ಬೊಕ್ಕಸವು ತುಂಬುವವರೆಗೂ ಬದುಕಿರುವನೇ? ಸ್ತ್ರೀ ಸಂಭೋಗದಲ್ಲಿ ಸಾಕಾಯಿತು ಎಂಬಂತೆ ಅನುಭವಿಸಿ ಹೋಗುವನೇ? ಆಸೆಪಟ್ಟು ಸಂಪಾದಿಸಿದ ರಾಜ್ಯಸಂಪತ್ತನ್ನು ಅಂತ್ಯಕಾಲದಲ್ಲಿ ಹೊತ್ತು ಹೋಗುವನೇ? ಇಲ್ಲ; ಇಲ್ಲ; ಗುರುಗಳಿಗೆ, ದೇವರಿಗೆ ಭಕ್ತಿಯಿಂದ ಕೊಟ್ಟಷ್ಟೇ ಲಾಭ; ತಾನು ಉಂಡಷ್ಟೇ ಲಭ್ಯ; ಉಳಿದೆಲ್ಲ ವ್ಯರ್ಥ.

ಆವಾವಂಗನೆಯಲ್ಲಿ ಕೂಡಿದೊಡಮಾ ಪಾಡಲ್ಲದೇಂ ಕಂಡನೇ?।
ಆವಾವೂಟಮನುಂಡೊಡಂ ಸವಿಗಳೊಳ್ಬೇರೊಂದನೇನುಂಡನೇ?॥
ಆವಾವಾಭರಣಂಗಳಂ ತೊಡೆ ತೊವಲ್ಪೊನ್ನಾದುದೇ! ಕಂಡುಮಿ-।
ಜೀವಂ ಕಾಣದೊ, ಉಂಡುಮೇಂ ದಣಿಯದೋ ರತ್ನಾಕರಾಧೀಶ್ವರಾ॥ ॥೯೫॥

ಕಂಡಕಂಡ ಕನ್ನೆಯರಲ್ಲೆಲ್ಲಾ ಕಾಮಿಸಿ ಕೂಡಿದರೂ ಕಂಡದ್ದೇನು? ಅದೇ ಅವಸ್ಥೆ! ಬಗೆಬಗೆಯ ಭಕ್ಷ್ಯಭೋಜ್ಯಗಳನ್ನುಂಡರೂ ರುಚಿಯಲ್ಲಿ ಬೇರೇನು ರುಚಿಕಂಡನು? ನಾನಾ ರೀತಿಯ ಒಡವೆಗಳನ್ನು ಧರಿಸಿದರೂ ಮೈಚರ್ಮ ಚಿನ್ನವಾಯಿತೇ? ಇದನ್ನೆಲ್ಲಾ ಈ ಜೀವಾತ್ಮನು ಕಂಡೂ ಕಾಣದವನಾಗಿದ್ದಾನೆ; ಉಂಡೂ ದಣಿಯದವನಾಗಿದ್ದಾನೆ.

ಭರತಂಬೊಲ್ಸಗರಂಬೊಲಾ ದಶರಥಂಬೊಲ್ ಶ್ರೇಣಿಕಂಬೊಲ್ಮಹೇ-।
ಶ್ವರನುದ್ದಾಯನನಂತೆ ದಾನರುಚಿಯೊಳ್ ಶಾಸ್ತ್ರಾರ್ಥಿಯೊಳ್ಸತ್ಯದೊಳ್॥
ವಿರತಿಕ್ಷಾಂತಿಯೊಳರ್ಚನಾವಿಭವದೊಳ್ಸಂದೊಪ್ಪೆ ಭಾಗ್ಯಂ ಸುಖಾ-।
ಕರಮಂತಲ್ಲದೊಡೇನೊ ದುಷ್ಕರವಲಾ ರತ್ನಾಕರಾಧೀಶ್ವರಾ॥ ॥೯೬॥

ದಾನಾಸಕ್ತಿಯಲ್ಲಿ ಭರತೇಶನಂತೆ, ಸತ್ಯಸಂಧತೆಯಲ್ಲಿ ದಶರಥನಂತೆ, ವ್ರತನಿಷ್ಠೆ – ಸೈರಣೆಯಲ್ಲಿ ಶ್ರೇಣಿಕರಾಜನಂತೆ, ಶಾಸ್ತ್ರಪ್ರೀತಿಯಲ್ಲಿ ಸಗರ ಚಕ್ರವರ್ತಿಯಂತೆ, ಪೂಜಾವೈಭದಲ್ಲಿ ಉದ್ದಾಯನನಂತೆ ರಾಜನು ಆಸಕ್ತಿ ತಳೆದರೆ ಅಂತಹವನ ಸಂಪತ್ತು ಸುಖದಾಗರ! ಹಾಗಲ್ಲದಿದ್ದರೆ ಅಂತಹವನ ಸಿರಿ ದುಃಖಮೂಲ.

ಉಳಿಯಿಂ ಗೈಯದ ಚೈತ್ಯಮಂದಿರದೊಳಿಟ್ಟೀ ಯೋಗಿಗಳ್ತಾರದಾ-।
ಜಳದಿಂ ತೇಯದ ಗಂಧದಿಂ ತೊಳೆಯದೇ ನಾಂದಕ್ಕಿಯಿಂದೆತ್ತದಾ॥
ತಳಿರ್ಪೂವಿಂದಡದನ್ನದಿಂ ಸುಡದ ದೀಪೋದ್ಧೂಪದಿಂ ಕೊಯ್ಯದಾ।
ಫಳದಿಂದರ್ಘ್ಯದೆ ನಿಮ್ಮನರ್ಚಿಪರಹೋ ರತ್ನಾಕರಾಧೀಶ್ವರಾ॥ ॥೯೭॥

ಜಿನೇಂದ್ರನೇ, ದ್ರವ್ಯಪೂಜೆ ಶ್ರಾವಕರಿಗೆ ಮೀಸಲು. ಯೋಗಿಗಳು ದ್ರವ್ಯಪೂಜೆ ಮಾಡುವುದಿಲ್ಲ. ಮಾನಸಧ್ಯಾನ (ಭಾವಪೂಜೆ) ಮಾಡುತ್ತಾರೆ. ಆದ್ದರಿಂದಲೇ ಯೋಗಿಗಳು ಉಳಿಯಿಂದ ಕೆತ್ತದ ನಿನ್ನನ್ನು ಹೃದಯ ಮಂದಿರದಲ್ಲಿರಿಸಿಕೊಂಡು, ತಾರದ ನೀರಿನಿಂದ, ತೇಯದ ಗಂಧದಿಂದ, ತೊಳೆಯದಕ್ಕಿಯಿಂದ ಕೊಯ್ಯದ ಚಿಗುರು ಮತ್ತು ಹೂವಿಂದ, ನೆನೆಸದ ಅಕ್ಕಿಯಿಂದ, ಸುಡದ ದೀಪ ಧೂಪದಿಂದ, ಕೀಳದ ಫಲಗಳಿಂದ, ಅರ್ಘ್ಯದಿಂದ ನಿಮ್ಮನ್ನು ಪೂಜಿಸುತ್ತಾರೆ, ಅಚ್ಚರಿಯ ಸಂಗತಿಯಿದು!

ಆವಂ ಮಾಡಿದ ಭಾವಪೂಜೆಯಿನವಂಗೋರ್ವಂಗೆ ಲೇಸಲ್ಲಿಗಾ।
ಸಾವದ್ಯಂ ರಹಿತಂ ಸಮಂತು ಸುಜನರ್ಸದ್ವಸ್ತುವಿಂ ಪೂಜಿಸಲ್॥
ಸಾವದ್ಯಂ ಕಳೆಯಲ್ಕೆ ತೀರದೊಡಮೇಂ ತತ್ಪೂಜೆಯಂ ಕಂಡು ಕೇ-।
ಳ್ದೀವೇಳ್ವೆಂ ಪಲರುಂ ಸುಖಂಬಡೆಯರೇ? ರತ್ನಾಕರಾಧೀಶ್ವರಾ॥ ॥೯೮॥

ಯೋಗಿಯಾದವನು ಮಾಡುವ ಭಾವಪೂಜೆಯಿಂದ ಅವನಿಗೆ ಮಾತ್ರ ಶ್ರೇಯಸ್ಸುಂಟಾಗುತ್ತದೆ.ಸುಜನರು ಸದ್ವಸ್ತುಗಳಿಂದ ಪೂಜಿಸುತ್ತಾರೆ. ಇದರಲ್ಲಿ ಸ್ವಲ್ಪ ದೋಷವುಂಟಾದರೂ ಆ ಪೂಜೆಯನ್ನು ನೋಡಿ ಕೇಳಿ ಹಲವಾರು ಮಂದಿ ಸುಖಪಡುತ್ತಾರೆ ಅಲ್ಲವೇ? ಇದು ಸುಕೃತಾನುಬಂಧಿದುರಿತದಿಂದ ಕೂಡಿದ್ದು. ಆದ್ದರಿಂದ ಸಹ್ಯ.

ಮುನಿಗಳ್ಮಾಡುವ ಭಾವಪೂಜೆ ರುಚಿಯೋ? ಸದ್ಭವ್ಯಸಂತಾನವ-।
ರ್ಚನೆಗೆಯ್ವುತ್ತಮವಸ್ತುಪೂಜೆ ರುಚಿಯೋ? ಪೇಳಯ್ಯ ನೀನೇಕೆ ಸು-॥
ಮ್ಮನೆಯಿರ್ಪೈ ಯಿದರಂದಮಂ ತಿಳಿದೆನೈ ನಿಷ್ಕಾಂಕ್ಷಕಂ ನೀನವರ್।
ಮನಮಂ ನಿಮ್ಮೊಳಿಡಲ್ಕೆ ಸಾಧಿಪರಲಾ! ರತ್ನಾಕರಾಧೀಶ್ವರಾ॥ ॥೯೯॥

ಋಷಿಗಳು ಮಾಡುವ ಭಾವಪೂಜೆ ಹಿತವೋ? ಅಥವಾ ಭವ್ಯಾತ್ಮರು ಮಾಡುವ ಉತ್ತಮ ದ್ರವ್ಯಪೂಜೆ ಹಿತವೋ? ಹೇಳಯ್ಯಾ? ಏಕೆ ಮಾತನಾಡದಿರುವೆ? ನಿನ್ನ ರೀತಿ ತಿಳಿಯಿತು ಬಿಡು, ನಿನಗೆ ಯಾವುದೂ ಬೇಕಿಲ್ಲ. ಆದರೆ ಭವ್ಯರು ತಮ್ಮ ಮನಸ್ಸನ್ನು ನಿನ್ನಲ್ಲಿ ಸ್ಥಿರಗೊಳಿಸಲು ಇವುಗಳನ್ನೆಲ್ಲಾ ಕೈಗೊಳ್ಳುತ್ತಾರೆ. ಅಲ್ಲವೇ?

ಪೂಜಾತಂತ್ರದೆ ವಸ್ತುವಂ ನೆನೆಯುತಂ ಮತ್ತಂ ಸುಮಂತ್ರಾಕ್ಷರ–।
ಭ್ರಾಜದ್ಧ್ವಾನಮನಾಲಿಸುತ್ತೆ ತವ ಬಿಂಬಸ್ನಾನಮಂ ನೋಡಿ ನಾ–॥
ನಾಜೀವಂ ಸುಖಿಯಕ್ಕುಮಲ್ಲಿ ಬಹಿರಂಗಾಳೋಚನಂ ಮೋಚನಂ।
ಪೂಜಾರ್ಥಂ ಪುರುಷಾರ್ಥಮಾದುದದರಿಂ! ರತ್ನಾಕರಾಧೀಶ್ವರಾ॥ ॥೧೦೦॥

ಪೂಜೆಗೈಯಲು ಪೂಜಾವಸ್ತುಗಳನ್ನು ನೆನೆದು ಶ್ರೇಷ್ಠ ಮಂತ್ರಗಳಲ್ಲಿ ಇರುವ ಬೀಜಾಕ್ಷರಗಳ ಸ್ಪಷ್ಟದನಿ ಕೇಳುತ್ತಾ ಜಿನಬಿಂಬಾಭಿಷೇಕವನ್ನು ಕಣ್ತುಂಬ ನೋಡುತ್ತಾ ನಾನಾ ಜೀವಿಗಳು ನೆಮ್ಮದಿ ಹೊಂದುತ್ತವೆ. ಆ ಪೂಜಾವೇಳೆಯಲ್ಲಿ ಅನ್ಯ ಯೋಚನೆಗಳೆಲ್ಲಾ ದೂರ ಸರಿಯುವುದರಿಂದ ಪೂಜಾಫಲವು ಚತುರ್ವಿಧ ಪುರುಷಾರ್ಥವನ್ನು ದೊರಕಿಸಿ ಕೊಡುತ್ತದೆ.

ಉಪಹಾರಂ ಸ್ತವನಂ ಸುವಾದ್ಯನಿನದಂ ನೃತ್ಯಂ ಸುಗೀತಂಗಳಿಂ–।
ತುಪಚಾರಂಗಳಿವೈಸೆ ನಿಮ್ಮ ರುಚಿಯೇ ಅಲ್ತಲ್ತು ನಿಮ್ಮಲ್ಲಿ ಮು–॥
ಕ್ತಿಪದಂ ಸ್ವಲ್ಪಮೆ ವೃದ್ಧಿವೃದ್ಧಿ ಧನಿಕಂಗೊಂದಿತ್ತೆರಳ್ಕೊಂಬುದ।
ರ್ಕುಪಮಾನರ್ಮಿಗೆ ಕಾಣ್ಕೆಯೆಂದು ಕುಡರೇ? ರತ್ನಾಕರಾಧೀಶ್ವರಾ॥ ॥೧೦೧॥

ಕೈಗಾಣಿಕೆ, ಸ್ತುತಿ, ಮಂಗಳವಾದ್ಯವಾದನ, ನರ್ತನ, ಸಂಗೀತ, ಇತ್ಯಾದಿಗಳ ಮೇಲೆ ನಿಮಗಾಸಕ್ತಿಯೆ? ಇಲ್ಲ ಇಲ್ಲ! ಅಥವಾ ನಿಮ್ಮಲ್ಲಿ ಮೋಕ್ಷಸುಖಕ್ಕೆ ಕೊರತೆಯೇ? ಇಲ್ಲ. ಅಧಿಕಾಧಿಕವಾಗಿದೆ. ಹಣವಂತನಿಗೆ ಒಂದಿತ್ತು ಎರಡನ್ನು ಪಡೆಯುವಂತೆಯೇ, ಹೆಚ್ಚಿನ ಕಾಣಿಕೆಯನ್ನು ನಿನಗೆ ನೀಡುವುದಿಲ್ಲವೇ?

ಮೋಕ್ಷಶ್ರೀಸುಖವಿಶ್ವನಾಥನಿವನೆಂದಾರೋಪಿಸಲ್ಪೂಜೆಯೊಳ್।
ಯಕ್ಷರ್ದಿಕ್ಪ್ರಭುಗಳ್ ಗ್ರಹರ್ತಿಥಿವರರ್ನಾಗರ್ಸುರರ್ವ್ಯಂತರರ್॥
ನಕ್ಷತ್ರರ್ಮುನಿಗಳ್ಸುಮಂತ್ರವಿಧಿಯಿಂ ಸನ್ಮಾನಿಸಲ್ಪಟ್ಟರೀ–।
ದಾಕ್ಷಿಣ್ಯಂ ಭಜಕಂಗದೇನ ಕುಡದೋ ರತ್ನಾಕರಾಧೀಶ್ವರಾ॥ ॥೧೦೨॥

ಪೂಜೆಯ ಕಾಲದಲ್ಲಿ ಮೋಕ್ಷಲಕ್ಷ್ಮಿಯ ಸುಖಕ್ಕೆ ಈತನು ಸರ್ವಾಧಿಕಾರಿ ಎಂಬುದಾಗಿ ಸಂಬೋಧಿಸುವುದು; ಯಕ್ಷರು, ದಿಕ್ಪಾಲಕರು, ನವಗ್ರಹಗಳು, ತಿಥಿದೇವತೆಗಳು, ನಾಗದೇವತೆಗಳು, ಕಲ್ಪವಾಸಿ ದೇವತೆಗಳು, ವ್ಯಂತರ ದೇವತೆಗಳು, ಜ್ಯೋತಿಷ್ಕ ದೇವತೆಗಳು, ಮುನಿಗಳು ಇವರನ್ನೆಲ್ಲಾ ಶ್ರೇಷ್ಠ ಮಂತ್ರವಿಧಾನದಿಂದ ಭಕ್ತರು ಉಪಾಸನೆ ಮಾಡಿದರೆ ಇದಕ್ಕೆ ಪ್ರತಿಫಲವಾಗಿ ಭಕ್ತರಿಗೆ ಸಕಲಸುಖಗಳು ದೊರೆಯುತ್ತವೆ.

ಉಪಚಾರಕ್ಕುಡಲೀವವಂಗುಣವಿಡಲ್ಮತ್ತೇನನೊಲ್ದೀಯನೋ।
ಉಪಮಾತೀತನೆ ನಿಮ್ಮ ಬಿಂಬವನಲಂಪಿಂದರ್ಚಿಸಲ್ಸಂಪದಂ॥
ವಿಪುಳಾನಂದದೆ ನಿಮ್ಮ ರೂಪಿನ ಮುನೀಂದ್ರರ್ಗನ್ನಮಂ ನೀಡುವಂ-।
ಗಪವರ್ಗಂ ನಿಜದುರ್ಗಮಪ್ಪುದರಿದೇ? ರತ್ನಾಕರಾಧೀಶ್ವರಾ॥ ॥೧೦೩॥

ಉಪಚಾರ ಮಾಡಿದರೇನೆ ಉಡುಗೊರೆ(ಬಟ್ಟೆಬರೆ) ಕೊಡುವವನಿಗೆ ಊಟವನ್ನೇ ನೀಡಿದರೆ ಇನ್ನೇನನ್ನು ತಾನೇ ನೀಡುವುದಿಲ್ಲ? ಅಸಮಾನನೇ, ನಿನ್ನ ಬಿಂಬವನ್ನು ಭಕ್ತಿಯಿಂದ ಅರ್ಚಿಸಿದರೆ ಸಕಲಸಂಪತ್ತು ಸಿಗುವುವು. ನಿಮ್ಮಂತೆ ತ್ಯಾಗಮೂರ್ತಿಗಳಾದ ಮುನಿಶ್ರೇಷ್ಠರಿಗೆ ಬಹಳ ಸಂತೋಷದಿಂದ ಆಹಾರದಾನವಿತ್ತರೆ, ಮೋಕ್ಷವು ಆತ್ಮರಕ್ಷಣೆಯ ದುರ್ಗವಾಗುತ್ತದೆ ಇದೇನು ಅತಿಶಯೋಕ್ತಿಯಲ್ಲ.

ವಿಜ್ಞಾನಂ ಕ್ಷಮೆ ಶಕ್ತಿ ಭಕ್ತಿ ದಯೆ ನಿರ್ಲೋಭಂ ದೃಢಂಗೂಡಿಯಾ-।
ತ್ಮಜ್ಞಾನಾನ್ವಿತಯೋಗಿಗನ್ನಮನಲಂಪಿಂದಿತ್ತವಂ ಕೂಡೆ ತಾಂ॥
ಸುಜ್ಞಾನಂಬಡೆದಂ ಸುಖಂಬಡೆದನೊಳ್ಪಂ ಪೆತ್ತನೇಮಾತೊ ಸ-।
ರ್ವಜ್ಞಾ ನಿಮ್ಮನೆ ಕಂಡನಿನ್ನುಳಿದುವೇಂ? ರತ್ನಾಕರಾಧೀಶ್ವರಾ॥ ॥೧೦೪॥

ಆತ್ಮಜ್ಞಾನ, ಕ್ಷಮಾಶೀಲತೆ ಶಕ್ತಿಸಂಪನ್ನತೆ, ಭಕ್ತಾಗ್ರೇಸರತೆ, ದಯಾಶೀಲತೆ, ನಿರ್ಲೋಭ (ಆಶಾರಹಿತನಾಗಿರುವುದು) ಇವುಗಳನ್ನು ಒಳಗೊಂಡ ಪರಮಾತ್ಮ ಜ್ಞಾನಿಯಾದ ಮುನಿಗೆ ಮನಸಾರೆ ಆಹಾರ ನೀಡಿದವನು ನಿಂತ ನಿಲುವಿನಲ್ಲಿ ನಿರಂಜನ ಜ್ಞಾನಿಯಾಗುವನು; ನಿರಂತರ ಸೌಖ್ಯವನ್ನು ಪಡೆಯುವನು; ಹಿರಿಮೆಯನ್ನು ಪಡೆಯುವನು; ಸರ್ವಜ್ಞನೇ ನಿಮ್ಮನ್ನೇ ನೋಡಿದವನಾದನು ಎಂದ ಮೇಲೆ ಇನ್ನುಳಿದ ನುಡಿಗಳೇಕೆ? ಆಹಾರದಾನದ ಹಿರಿಮೆಯನ್ನು ಕವಿ ಈ ಪದ್ಯದಲ್ಲಿ ಸಾರಿದ್ದಾನೆ.

ಒಡಲಂ ದಂಡಿಸುತಿಂದ್ರಿಯಂಗಳ ಪೊಡರ್ಪಂ ಕುಂದಿಸುತ್ತಂ ಗುಣಂ-।
ಬಿಡಿಯುತ್ತಂ ಮನದೇಳ್ಗೆಯಂ ತಡೆಯುತಂ ತನ್ನಾತ್ಮನೊಳ್ತಾನೆ ಮಾ-॥
ರ್ನುಡಿಯುತ್ತಂ ಭಜಕರ್ಗೆ ಮುಕ್ತಿಪಥಮಂ ತೋರುತ್ತೆ ನೋವಳ್ತಿಯಿಂ।
ಪಡೆಗೆಯ್ದಾಚರಿಪಾತನೇ ಶಿವನಲಾ ರತ್ನಾಕರಾಧೀಶ್ವರಾ॥ ॥೧೦೫॥

ದೇಹವನ್ನು ದಂಡಿಸಿ, ಇಂದ್ರಿಯಗಳನ್ನು ಖಂಡಿಸಿ, ಸದ್ಗುಣಗಳನ್ನು ಸಂಗ್ರಹಿಸಿ, ಮನಸ್ಸಿನ ಮನಬಂದಂತಾಡುವ ಮರ್ಕಟಾಟವನ್ನು ಮರ್ದಿಸಿ ತನ್ನ ಆತ್ಮನೊಡನೆ ಸಂವಾದಿಸುತ್ತಾ, ತನ್ನನ್ನು ಭಜಿಸುವವರಿಗೆ ಮೋಕ್ಷಮಾರ್ಗ ತೋರಿಸುತ್ತಾ, ನೋವನ್ನು ಸ್ವಸಂತೋಷದಿಂದ ಸಹಿಸಿಕೊಂಡು ವರ್ತಿಸುವವನೇ ಸದಾಚಾರಸಂಪನ್ನನಾದವನೇ ಸನ್ಮಂಗಳ ಸ್ವರೂಪಿಯಾಗಿರುತ್ತಾನೆ.

ಕಡೆಗಿನ್ನೆಂತೊ ಭವಾಗ್ನಿತಾಪವಕಟಾ! ಕಾಮಾಗ್ನಿಯಂ ನೋಳ್ಪೊಡಾ।
ಸಿಡಿಲೇಂ ಶೇಷನ ದಾಡೆಯೇಂ ವಡಬನೇಂ ಕಾಲಾಗ್ನಿಯೇಂ ಶೃಂಗಿಯೇಂ॥
ತಡೆದಾಂತಗ್ಗಳೆಯಂ ಗಡಂ ಮದನನೇಂ ಪಾಪಾರಿಯೇಂ ಕಾಲನೇಂ।
ಮೃಡನೇಂ ಮೃತ್ಯುವದೇಂ ನಿಲಲ್ನೆರಗುಮೇ? ರತ್ನಾಕರಾಧೀಶ್ವರಾ॥ ॥೧೦೬॥

ಕಾಮಾಗ್ನಿಯ ತಾಪ ಅತಿ ಕ್ರೂರವಾದುದು; ಸಂಸಾರಾಗ್ನಿಯ ತಪ ಕಾಮಾಗ್ನಿಗಿಂತ ಮಿಗಿಲಾದುದು; ಸಂಸಾರತಾಪದ ಮುಂದೆ ಸಿಡಿಲಾಗಲಿ, ಶೇಷನ ಕೋರೆಹಲ್ಲಾಗಲಿ, ವಡಬಾನಲವಾಗಲಿ, ಪ್ರಳಯಕಾಲವಾಗಲಿ, ಕೊಂಬಿನ ಕ್ರೂರ ಮೃಗವಾಗಲಿ. ಸಂಸಾರಗಳನ್ನೆಲ್ಲ ಸೆರೆಹಿಡಿದ ಶೂರ ಮದನನಾಗಲಿ, ಪಾಪವೆಂಬ ಶತ್ರುವಾಗಲಿ, ಕಾಲಯಮನಾಗಲಿ, ರುದ್ರನಾಗಲಿ, ಸಾವಾಗಲೀ ಎದುರಿಗೆ ನಿಲ್ಲಲು ಸಾಧ್ಯವೇ? ಇಲ್ಲ, ಅಷ್ಟೊಂದು ಘೋರವಾದುದು ಸಂಸಾರಾಗ್ನಿ.

ಶ್ರುತಮಂ ನೋಳ್ಪ ತದರ್ಥಮಂ ತಿಳಿವ ತನ್ಮರ್ಯಾದೆಯೊಳ್ಪೋಪ ಸು-।
ವ್ರತಮಂ ಪಾಲಿಪ ಕಾಮಮಂ ತುಳಿದ ಮಾಯಾಜಾಡ್ಯಮಂ ಝಾಡಿಪು-
ನ್ನತ ಕಾರುಣ್ಯದೊಳಾಳ್ವ ಜೀವಹಿತಮಂ ಪೇಳ್ವಾತನೇ ಮದ್ಗುರು।
ಶ್ರುತಯೋಗೀಶ್ವರನಿಂದು ನಾಳಿನ ಶಿವಂ ರತ್ನಾಕರಾಧೀಶ್ವರಾ॥ ॥೧೦೭॥

ಓ! ಜಿನೇಂದ್ರನೇ, ಶಾಸ್ತ್ರವನ್ನು ಅಭ್ಯಾಸ ಮಾಡುವವನೂ ಅದರ ಅಂತರಾರ್ಥವನ್ನು ಗ್ರಹಿಸುವವನೂ, ಶಾಸ್ತ್ರಾನುಸಾರ ಆಚರಣೆ ಉಳ್ಳವನೂ ಶ್ರೇಷ್ಠ ವ್ರತಗಳನ್ನು ಪರಿಪಾಲಿಸುವವನೂ, ಕಾಮನಿಗ್ರಹ ಮಾಡುವವನೂ, ಅಜ್ಞಾನವೆಂಬ ರೋಗವನ್ನು ಒದ್ದೋಡಿಸುವವನೂ ಮಹಾಕರುಣಾಮಯಿಯಾಗಿ ಸಕಲ ಜೀವಿಗಳಿಗೆ ಲೇಸನೇ ಉಪದೇಶಿಸುವವನೂ ಆದ ಯತಿಯೇ ನನ್ನ ಗುರು; ಆತನು ಇಂದಿಗೆ "ಶ್ರುತ ಯೋಗೀಶ್ವರ" "ನಾಳೆಗೆ ಮುಕ್ತಿ ಪರಮೇಶ್ವರ".

ಪರಸಂತೋಷಮೆ ಸೌಖ್ಯಮೆಂಬ ಪರದುಃಖಂ ತನ್ನ ನೋವೆಂಬ ತಾಂ-।
ಪರನೆಂಬಂದಮನಿಂತುಟೆಂಬ ಪರಲೋಕಂ ತನ್ನ ನಾಡೆಂಬ ತ-॥
ತ್ವರಮಜ್ಞಾನಿ ಜಗದ್ಗುರು ಮಮಗುರುಂ ದೇವೇಂದ್ರಕೀರ್ತಿವ್ರತೀ-।
ಶ್ವರನಾತಂ ಪೆರನಲ್ತು ನೀನೆ ಪಲವೇಂ? ರತ್ನಾಕರಾಧೀಶ್ವರಾ॥ ॥೧೦೮॥

ಅನ್ಯರ ಸುಖವೇ ನನ್ನ ಸುಖವೆಂದು ತಿಳಿದವನು, ಅನ್ಯರ ದುಃಖವೇ ನನ್ನ ದುಃಖ ಎನ್ನುವವನು, ತಾನು ಈ ದೇಹವಲ್ಲ ಬೇರೆಯಾದವನು ಎಂದು ತಿಳಿದವನು ಸಿದ್ಧಲೋಕವೇ ನನ್ನ ಲೋಕವೆಂದು ಅರಿತವನು, ಪರಮಜ್ಞಾನಿ, ಜಗದ್ಗುರು ಆದವನು, ಆತನೇ ನನ್ನ ಗುರು ದೇವೇಂದ್ರಕೀರ್ತಿ ಮುನೀಶ್ವರರೇ ಅವರು. ಹೆಚ್ಚೇನು, ಹೇ ಜಿನೇಂದ್ರಾ, ನೀನೂ, ಅವರೂ ಭಿನ್ನರಲ್ಲ.

ವ್ಯವಹಾರಂ ವ್ಯವಸಾಯಮೋಲಗಮಿವಂ ಮಾಡೆಂಬರಂ ಮಾಡೆ ಮೆ-।
ಚ್ಚುವರಂ ಮಾಳ್ಪನೆಲ್ಲಿಯುಂ ಪಡೆಯಲುಂಟೂರೂರೊಳ್ನಿನ್ನಂತೆ ಮೋ-॥
ಕ್ಷವನೊಂದಂ ನೆಗಳೆಂಬರಂ ನೆಗಳೆ ಹೋ ಲೇಸೆಂಬರಂ ನಚ್ಚಿ ನೂ-।
ಳ್ಪವರಂ ನಿನ್ನವರಲ್ಲದೆಲ್ಲಿ ಪಡೆಯೆಂ ರತ್ನಾಕರಾಧೀಶ್ವರಾ॥ ॥೧೦೯॥

ವ್ಯವಹಾರ, ವ್ಯವಸಾಯ, ಸಭೆ ಇವುಗಳನ್ನು ಮಾಡೆಂದು ಹೇಳುವವರೂ ಮಾಡಿದರೆ ಮೆಚ್ಚುವವರೂ, ಹಾಗೆಯೇ ಮಾಡುವವರೂ, ಊರುಗಳಲ್ಲಿ, ಎಲ್ಲೆಂದರಲ್ಲಿ ಇದ್ದಾರೆ; ನೋಡಲು ಸಿಗುತ್ತಾರೆ; ಆದರೆ ನಿನ್ನ ಹಾಗೆ, ಮೋಕ್ಷಮಾರ್ಗವನ್ನು ಹಿಡಿ ಎನ್ನುವವರೂ, ಹಿಡಿದು ಸಾಧಿಸಿದರೆ ಭಲೇ ಎಂದು ಕೊಂಡಾಡುವವರೂ, ಅಂತೆಯೇ ನಂಬಿ ಮೋಕ್ಷಗಾಮಿಗಳಾದವರು ನಿನ್ನ ಭಕ್ತರೇ ಹೊರತು, ಬೇರೆಯವರನ್ನು ನಾ ಕಂಡಿಲ್ಲ.

ವಿಂಧ್ಯಾಕುಕ್ಕುಟನೊಂದು ಸಂಕ್ರಮಣಮಂ ಪಾರ್ದಲ್ಲಿ ಮೆಯ್ವಣ್ಣಮಂ।
ವಂಧ್ಯಂ ಮಾಡದೆ ಮಾಡಿಕೊಳ್ವುದು ಗಡಾ ಯೋಗೀಶ್ವರರ್ನಿಚ್ಚಲುಂ॥
ಸಂಧ್ಯಾಕಾಲಮನಾಸೆವಟ್ಟದರೊಳೀರ್ಯಾಶುದ್ಧಿಯಿಂ ಸ್ತೋತ್ರಜ-।
ಪ್ಯಂ ಧ್ಯಾನಂಗಳ ಮಾಡೆ ಸಿದ್ಧಿಯರಿದೇ? ರತ್ನಾಕರಾಧೀಶ್ವರಾ॥ ॥೧೧೦॥

ವಿಂಧ್ಯಪರ್ವತದಲ್ಲಿರುವ ಕಾಡುಕೋಳಿಯು ಮಕರಸಂಕ್ರಾತಿ ಕಾಲಬಂದುದನ್ನು ತಿಳಿದು, ಆ ಕಾಲವನ್ನು ವ್ಯರ್ಥಗೊಳಿಸದೆ ತನ್ನ ಮೈಯ ಬಣ್ಣವನ್ನು ಸುಂದರಗೊಳಿಸಿಕೊಳ್ಳುವುದು; ಅಂತೆಯೇ ಯೋಗೀಶ್ವರರು ಯಾವಾಗಲೂ ತ್ರಿಸಂಧ್ಯಾಕಾಲಗಳನ್ನು ನಿರೀಕ್ಷಿಸಿ, ಆ ಕಾಲಗಳಲ್ಲಿ ಈರ್ಯಾಪಥಶುದ್ಧಿಯಿಂದ ಸ್ತೋತ್ರ, ಜಪ, ಧ್ಯಾನಗಳನ್ನಾಚರಿಸಿದರೆ ಅವರಿಗೆ ಸಿದ್ಧಿ ದೊರೆಯುವುದು ಅಸಾಧ್ಯವಲ್ಲ.

ಅಸ್ತಾದ್ರಿಸ್ಥಳದಲ್ಲಿ ಕಂಡು ರವಿಯಂ ತಾರಾಳಿಯಂ ಕಾಣ್ಬೆನಂ।
ನಿಸ್ತೇಜಕ್ಕೆಡೆಯಾದ ತಾರೆಗಳ ಕಂಡರ್ಕೋದಯಂ ಕಾಣ್ಬೆನಂ॥
ವಿಸ್ತಾರಂಗಿಡೆ ಮೆಯ್ನೆಳಲ್ಮಗುಳೆ ವಿಸ್ತಾರಕ್ಕೆ ತೋರ್ಪನ್ನೆಗಂ।
ಸುಸ್ತೋತ್ರಂ ಗೆಯೆ ನಿಮ್ಮ ಕಾಣ್ಬುದರಿದೇ? ರತ್ನಾಕರಾಧೀಶ್ವರಾ॥ ॥೧೧೧॥

ಪಶ್ಚಿಮ ದಿಗ್ಭಾಗದಲ್ಲಿ ಸೂರ್ಯ ಮುಳುಗುವುದನ್ನು ನೋಡಿ, ನಕ್ಷತ್ರಗಳು ಕಂಡುಬರುವವರೆಗೆ (ಸಂಜೆ) ಸಾಯಂಸಂಧ್ಯೆಯನ್ನು ತಾರೆಗಳು ಕಾಂತಿಗುಂದಲು ತೊಡಗಿದ್ದನ್ನು ಕಂಡು ಸೂರ್ಯೋದಯವನ್ನು ನೋಡುವವರೆಗೆ (ಬೆಳಿಗ್ಗೆ) ಪ್ರಾತಃಸಂಧ್ಯೆಯನ್ನೂ, ದೇಹದ ನೆರಳೂ ಎಳೆಬಿಸಿಲಿಗೆ ಚಿಕ್ಕದಾಗುತ್ತಿರುವುದರಿಂದ ತೊಡಗಿ ಪುನಃ ದೊಡ್ಡದಾಗಿ ಕಾಣತೊಡಗುವವರಗೆ, ಮಧ್ಯಾಹ್ನದ ಸಂಧ್ಯೆಯನ್ನು ಮಾಡುವವನು ಎಂದರೆ ತ್ರಿಸಂಧ್ಯಾಕಾಲದಲ್ಲಿ ನಿಮ್ಮನ್ನು ಸ್ತೋತ್ರ ಮಾಡುವವರಿಗೆ ನಿಮ್ಮ ದರ್ಶನ ಅಸಾಧ್ಯವಲ್ಲ.

ಸಿಂಹಂ ನಾಸ್ತಿ ಭಟಾಳಿ ಸಿಂಹರವಮಂ ಮಾಡಲ್ಗಜಂ ಬೆರ್ಚುಗುಂ।
ಸಿಂಹಾಕಾರಮನಂಕಿಸಲ್ನರರ ಬೆನ್ನೊಳ್ ಹಸ್ತಿರೋಗಂ ಹರಂ॥
ಸಿಂಹಾರೂಢನೆ! ನಿಮ್ಮ ಮಂತ್ರದೆ ಭವಚ್ಛ್ರೀಬಿಂಬದೇಂ ಪೀಡೆಗಳ್।
ಸಂಹಾರಂಗಳನೆಯ್ದವೇ? ಸಕಲವೇಂ? ರತ್ನಾಕರಾಧೀಶ್ವರಾ॥ ॥೧೧೨॥

ಸಿಂಹವಿಲ್ಲ, ಆದರೂ, ಯುದ್ಧವೀರರು ಸಿಂಹನಾದ ಗೈದರೆ ಆನೆ ಹೆದರುವುದು, ಮನುಷ್ಯರ ಬೆನ್ನಮೇಲೆ ಸಿಂಹದ ಚಿತ್ರ ಬರೆದರೆ ಆನೆಗಜ್ಜಿ ರೋಗ ನಾಶ ಆಗುವುದು! ಸಿಂಹವಾಹನನೇ, ನಿಮ್ಮ ಮಂತ್ರ ಮತ್ತು ಮಂಗಳಸ್ವರೂಪದಲ್ಲಿ ಬಿಂಬದಿಂದ ಪೀಡೆಗಳೆಲ್ಲ ಪಲಾಯನವಾಗುತ್ತದೆ. ಬೇರೆ ಪರಿಹಾರೋಪಾಯಗಳೇಕೆ?

ಗರುಡೋಚ್ಚಾರಣಮಂತ್ರದಿಂ ವಿಷವಿನಾಶಂ ಯಕ್ಷಿಣೀಮಂತ್ರದಿಂ।
ದೊರೆಕೊಳ್ಗುಂ ಬಹುವಿದ್ಯೆಗಳ್ಗರುಡಯಕ್ಷರ್ ಪೂಜ್ಯಪಾದಾಬ್ಜನಂ॥
ಗುರುವೇ ನಿಮ್ಮನಲಂಪಿನಿಂ ನೆನೆವವಂಗಾವಾವ ಕಷ್ಟಂಗಳ।
ಲ್ಲಿರವಾವಾವ ಮನೋರಥಂ ಫಲಿಸದೋ? ರತ್ನಾಕರಾಧೀಶ್ವರಾ॥ ॥೧೧೩॥

ಗರುಡಮಂತ್ರ ಪಠನದಿಂದ ಹಾವಿನ ವಿಷನಾಶವಾಗುವುದು; ಯಕ್ಷಿಣೀ ಮಂತ್ರದಿಂದ ಅನೇಕ ವಿದ್ಯೆಗಳು ಸಿದ್ಧಿಸುವುವು. ಗರುಡರೆಂಬ ದೇವತೆಗಳಿಂದಲೂ ಯಕ್ಷದೇವತೆಗಳಿಂದಲೂ ಪೂಜಿಸಲ್ಪಡುತ್ತಿರುವ ಪಾದಕಮಲವುಳ್ಳ ನನ್ನ ಗುರುವೇ, ನಿನ್ನನ್ನು ಭಕ್ತಿಯಿಂದ ಧ್ಯಾನಿಸುವವನಿಗೆ ಯಾವ ಬಗೆಯ ಕಷ್ಟಗಳೂ ಬರಲಾರವು; ಅವನ ಎಲ್ಲಾ ಇಷ್ಟಾರ್ಥಗಳು ಸಿದ್ಧಿಸುವುವು.

ಗೆಡೆಗೊಂಡಾಡುವ ಲೋಕವಾರ್ತೆಗಳೊಳೆನ್ನಂಗಾಯತಂ ತುಂಬಿದಾ।
ಕೊಡದಂತಿರ್ಪುದು ನಿಮ್ಮ ಮಂತ್ರಜಪಮಂ ಮಾಳ್ಪಾಗಳುಂ ಮೀರ್ದ ಕ–॥
ಣ್ಬಿಡುನೀರ್ ಮೆಯ್ಮುರಿವಾಗುಳಿಕ್ಕೆಗಳಿವೇ ದುಷ್ಕರ್ಮಬಂಧಂ ಸಡಿ–।
ಲ್ದೊಡೆದೇ ಸೋರ್ದಪುದೆಂಬುದಂ ನುಡಿಯವೇ? ರತ್ನಾಕರಾಧೀಶ್ವರಾ॥ ॥೧೧೪॥

ಜನಪ್ರೀತಿಯಿಂದ ಆಡಿಕೊಳ್ಳುವ ಲೌಕಿಕ ವಿಚಾರಗಳಲ್ಲಿ ನನ್ನ ದೇಹವು ತುಂಬಿದ ಕೊಡದಂತೆ ಸುಮ್ಮನಿದೆ. ನಿಮ್ಮ ಮಂತ್ರದ ಜಪ ಮಾಡುವಾಗಲಂತೂ ಕಣ್ಣೀರು ಹೊರಹೊಮ್ಮುತ್ತದೆ; ಮೈಮುರಿತ ಆಕಳಿಕೆ ಉಂಟಾಗುತ್ತದೆ. ಇವೆಲ್ಲಾ ನನ್ನ ದುಷ್ಕರ್ಮದ ಕಟ್ಟು ಸಡಲಿ, ಒಡೆದು, ಕರ್ಮಪ್ರವಾಹ ಹೊರಗೆ ಹರಿಯುತ್ತದೆ ಎಂಬುದಕ್ಕೆ ಸಾಕ್ಷಿಯಲ್ಲವೇ?"

ವಣಿಜಂ ಪಂಚಸರಂಗಳಂ ಪಿಡಿದು ಮುಕ್ತಾಜಾಲಮಂ ತಾಂ ಪರೀ-।
ಕ್ಷಣೆಗೆಯ್ವಂತಿರೆ ಪಂಚಮಂತ್ರದೊಳೊಡಂಬಟ್ಟಕ್ಷರವ್ರಾತಮಂ॥
ಪಣೆಯೊಳ್ಧ್ಯಾನಿಸಿ ಚರ್ಮದೃಷ್ಟಿ ಮುಗಿಯಲ್ಸುಜ್ಞಾನಸದ್ದೃಷ್ಟಿಯಿಂ-।
ದೆಣಿಸುತ್ತಾಗಳೆ ಕಾಣ್ಬನೇ ರಿಸಿಯಲಾ? ರತ್ನಾಕರಾಧೀಶ್ವರಾ॥ ॥೧೧೫॥

ರತ್ನ ವ್ಯಾಪಾರಿ ಐದು ಮುತ್ತಿನ ಸರಗಳನ್ನು ತೆಗೆದುಕೊಂಡು ಅದರಲ್ಲಿನ ಮುತ್ತುಗಳನ್ನು ಪರೀಕ್ಷೆ ಮಾಡುವ ಹಾಗೆಯೇ, ಮುನಿಯಾದವನು ಪಂಚನಮಸ್ಕಾರದ ಮಂತ್ರದ ಅಕ್ಷರ ಸಮೂಹವನ್ನು ನಿಟಿಲದಲ್ಲಿ ಧ್ಯಾನಿಸಿ ಹೊರಗಿನ ಚರ್ಮದ ಕಣ್ಣನ್ನು ಮುಚ್ಚಿ ಒಳಗಿನ ಜ್ಞಾನದ ಕಣ್ಣನ್ನು ಬಿಚ್ಚಿ ಮಂತ್ರಾಕ್ಷರಗಳನ್ನು ಎಣಿಸುತ್ತಾ ಪರಮಾತ್ಮನನ್ನು ಕಾಣುತ್ತಾನೆ. ಅಲ್ಲವೇ?

ಮೂವತ್ತೈದು ಶುಭಾಕ್ಷರಂ ತುದಿಗೆ ಬಂದೋಂಕಾರಮೊಂದಾದಿಗಿಂ-।
ತೀ ವರ್ಣೋಕ್ತದೆ ಮೂಲಮಂತ್ರವದು ತಾನೇಳಂಗವಾಯ್ತಾದೊಡೆ-॥
ಲ್ಲಾವೊಂದೇ ಅಸಿಆಉಸಾ ಯೆನಲಿದೇ ಪಂಚಾಕ್ಷರಂ ಭಾವಿಸಲ್।
ಕೈವಲ್ಯಾಂಗನೆ ಕೂಡಿ ಕೆಯ್ವಿಡಿಯಳೇ? ರತ್ನಾಕರಾಧೀಶ್ವರಾ॥ ॥೧೧೬॥

ಶುಭಕರವಾದ ಮೂವತ್ತೈದು ಅಕ್ಷರಗಳು ಕೊನೆಗೆ ಬಂದು, ಓಂ ಕಾರವು ಮೊದಲಿಗೆ ಬರಬೇಕು. ಈ ಮೂವತ್ತೈದು ಅಕ್ಷರಗಳ ಮೂಲ ಮಂತ್ರವು ಮತ್ತೆ ಏಳು ಭೇದಗಳನ್ನು ಹೊಂದುತ್ತವೆ.

(೧) [ಓಂ, ಣಮೋ ಅರಹಂತಾಣಂ (೭); ಣಮೋ ಸಿದ್ಧಾಣಂ (೫); ಣಮೋ ಆಇರಿಯಾಣಂ(೭); ಣಮೋ ಉವಜ್ಝಾಯಾಣಂ (೭); ಣಮೋ ಲೋಏ ಸವ್ವಸಾಹೂಣಂ (೯); ಒಟ್ಟು ೩೫ ಅಕ್ಷರಗಳು (೨) ಅರಹಂತಸಿದ್ಧ ಆಇರಿಯಾ ಉವಜ್ಝಾಯಾ ಸಾಹು = ೧೬ ಅಕ್ಷರಗಳು. (೩) ಅರಹಂತಸಿಸಾ = ೭ ಅಕ್ಷರಗಳು; (೪) ಅಸಿಆಉಸಾ = ೫ ಅಕ್ಷರಗಳು. (೫) ಅಸಿಸಾಹು = ೪ ಅಕ್ಷರಗಳು, (೬) ಆಸಾ = ೨ ಅಕ್ಷರಗಳು, (೭) ಓಂ = ೧ ಅಕ್ಷರ, ಇವೇ ಮೂಲಮಂತ್ರದ ೭ ಭೇದಗಳು]

ಆದರೆ ಎಲ್ಲಾ ಒಂದೇ ಅರ್ಥವು "ಅಸಿಆಉಸಾ" ಎಂದು ಹೇಳಿದರೆ ಇದೇ ಪಂಚಾಕ್ಷರ ಮಂತ್ರವು, ಇದನ್ನು ಜಪಿಸಿದರೆ, ಮೋಕ್ಷಲಕ್ಷ್ಮಿ ತಕ್ಷಣ ಪ್ರತ್ಯಕ್ಷವಾಗಿ ವರಿಸುವಳು.

ನಳಿನೀನಾಳಕೆ ಮೂಲದಿಂ ತುದಿವರಂ ಸಂಪೂರ್ಣದಿಂ ಸ್ವಚ್ಛದಿಂ–।
ದೊಳಗೆಂತಿರ್ಪುದು ತಂತುವಂತೆ ನರರ್ಗಂ ಕೆಂಬಜ್ಜೆಯಿಂ ನೆತ್ತಿಮು–॥
ಟ್ಟಳೆತಂ ತಪ್ಪದೆ ಮೂರ್ತಿ ತುಂಬಿ ಪಳುಕಿಂ ಗೆಯ್ಸಿರ್ದ ನಿರ್ಮ್ಮೊಂದು ನಿ–।
ರ್ಮಳಬಿಂಬೋಪಮನಾತ್ಮನಿರ್ದಪನಲಾ ರತ್ನಾಕರಾಧೀಶ್ವರಾ॥ ॥೧೧೭॥

ಕಮಲದ ದಂಟಿಗೆ ಬುಡದಿಂದ ತುದಿತನಕ ಪೂರ್ತಿಯಾಗಿ ನಿರ್ಮಲವಾದ ನಾರಿರುತ್ತದೆ. ಹಾಗೆಯೇ, ಮನುಷ್ಯರಿಗೂ ಅಂಗಾಲಿನಿಂದ ನೆತ್ತಿಯ ತನಕ ಪರಿಮಾಣವು ತಪ್ಪದಂತೆ ಆತ್ಮದೇಹವ್ಯಾಪಿಯಾಗಿರುತ್ತಾನೆ. ನಿಮ್ಮ ನಿರ್ಮಲ ಸ್ಫಟಿಕ ಪ್ರತಿಬಿಂಬದಂತೆ ಆ ಆತ್ಮನಿರುತ್ತಾನೆ.

ನರರಾತ್ಮಂ ಸ್ಫಟಿಕೋಪಮಂ ಗಡಮದೇನಾಕಾರಮುಂ ಸ್ವಚ್ಛಮಾ–।
ಗಿರದೆಂಬರ್ಮಿಗೆ ಕೇಳಿಮಾ ಸ್ಫಟಿಕಮೆಂತೈವಣ್ಣಮುಂ ಸೋಂಕೆ ಯಾ॥
ಪರಿಯೊಳ್ತೋರುಗುಮಂತೆ ಮೈಯ್ಯ ತೊವಲುಂ ಕರ್ಪಾಗೆ ಕೆಂಪಾಗೆ ತಾಂ।
ಕರಿಯಂ ಕೆಂಪನೆನಿಪ್ಪನೆಂದರುಪಿದೈ ರತ್ನಾಕರಾಧೀಶ್ವರಾ॥ ॥೧೧೮॥

ನರರ ಆತ್ಮ ಸ್ಫಟಿಕದಂತೆ ಸ್ವಚ್ಛವಿರುವುದಾದರೆ ಅದೇಕೆ ಆತ್ಮನಾಕಾರ ನರನಲ್ಲಿ ನಿರ್ಮಲವಾಗಿರುವುದಿಲ್ಲ? ಎಂದು ಕೇಳುವರು; ವಿಚಾರ ಮಾಡಿದರೆ, ಸ್ಫಟಿಕವು ಐದು ಬಣ್ಣಗಳಲ್ಲಿ ಯಾವ ಬಣ್ಣ ಸೋಕಿದರೂ ಆ ಬಣ್ಣವನ್ನು ತಳೆದಂತೆ ಕಾಣುತ್ತದೆ; ಅದೇ ರೀತಿ ದೇಹದ ಚರ್ಮ ಕಪ್ಪಾಗಿದ್ದರೆ ಕರಿಯನೆಂದೂ ಕೆಂಪಾಗಿದ್ದರೆ ಕೆಂಪನೆಂದೂ ಕರೆಯುತ್ತಾರೆ. ಹೀಗೆಂದು ಜಗತ್ತಿಗೆ ನೀನು ಸಾರಿರುವೆ.

ಸ್ವಚ್ಛಾಕಾರದ ಜೀವನೀ ತನುವಿನೊಳ್ತಾನೇಕೆ ಸಿಲ್ಕಿರ್ದಪಂ?।
ಸ್ವೇಚ್ಛಾಮಾರ್ಗದೆ ತಾನುಪಾರ್ಜಿಸಿದ ಕರ್ಮಾಧೀನದಿಂ ಕರ್ಮಮುಂ॥
ತುಚ್ಛಂ ಕ್ರೋಧಧೆ ಮಾನಮಾಯೆಗಳಿನಾ ಲೋಭಾರ್ಥದಿಂ ಬಂದುದೇ।
ಮ್ಲೇಚ್ಛಾಕಾರ ಕಷಾಯಮಂ ಸುಡೆ ಸುಖಂ ರತ್ನಾಕರಾಧೀಶ್ವರಾ॥ ॥೧೧೯॥

ನಿರ್ಮಲವಾದ ಆಕಾರವುಳ್ಳ ಜೀವಾತ್ಮನು ಈ ಶರೀರದಲ್ಲಿ ಏಕೆ ಸಿಕ್ಕಿಬಿದ್ದನು? ತಾನು ಮನಬಂದ ರೀತಿಯಲ್ಲಿ ವರ್ತಿಸಿ, ಗಳಿಸಿದ ಕರ್ಮದ ಅಧೀನನಾಗಿ ಹೀಗೆ ಸಿಕ್ಕಿಹಾಕಿಕೊಂಡಿದ್ದಾನೆ, ದುಷ್ಟ ಕರ್ಮವು ಕ್ರೋಧ, ಮಾನ, ಮಾಯಾ, ಲೋಭ, ಕಷಾಯಗಳ ಪರಿಣಾಮವಾಗಿದೆ. ಕ್ರೂರಾಕಾರ ತಳೆದಿರುವ ಕಷಾಯಗಳನ್ನು ಸುಟ್ಟರೆ ಜೀವಕ್ಕೆ ಸುಖವುಂಟಾಗುತ್ತದೆ.

ನೆಲದಿಂ ಮೇಲೊಗೆದೈದು ಸಾಸಿರಧನುಃಪ್ರಾಮಾಣ್ಯದೊಳ್ಕಾಂಚನೋ-।
ಜ್ಜ್ವಲರತ್ನಂಗಳಿನಾದ ಮಂಡಪದ ಮಧ್ಯಸ್ಥಾನದೊಳ್ಸಿಂಹದಾ॥
ತಲೆಯೊಳ್ತೋರ್ಪರುಣಾಬ್ಜಕರ್ಣಿಕೆಗೆ ಚಾತುಷ್ಕಾಂಗುಲೋದ್ದೇಶದೊ-।
ಳ್ಗೆಲವಾಂತಿರ್ದೆ ರವೀಂದುಕೋಟಿಕಿರಣಾ! ರತ್ನಾಕರಾಧೀಶ್ವರಾ॥ ॥೧೨೦॥

ಓ ನಿರಂಜನ ಸ್ವರೂಪನೇ, ಕೋಟಿ ಚಂದ್ರಾದಿತ್ಯ ಸುಜ್ಞಾನಕಿರಣ ಪ್ರಕಾಶನಾದ ನೀನು ಭೂಮಿಯಿಂದ ಮೇಲಕ್ಕೆ ಐದು ಸಾವಿರ ಬಿಲ್ಲೆತ್ತರ ಪ್ರಮಾಣದಲ್ಲಿ ಮೇಲ್ಭಾಗದಲ್ಲಿರುವೆ. ಅಲ್ಲಿ ಚಿನ್ನದಿಂದಲೂ, ಹೊಳೆಯುವ ರತ್ನಗಳಿಂದಲೂ ನಿರ್ಮಿತವಾದ ಲಕ್ಷ್ಮೀ ಮಂಟಪವಿದೆ; ಅದರ ಮಧ್ಯಭಾಗದಲ್ಲಿ ಸಿಂಹಮಸ್ತಕದಲ್ಲಿ ಕಾಣುವ ಕೆಂದಾವರೆಯ ಕರ್ಣಿಕೆಯ ಮೇಲುಗಡೆ ನಾಲ್ಕಂಗುಲ ಮೇಲಿರುವ ಪ್ರದೇಶದಲ್ಲಿ ಕೋಟಿಸೂರ್ಯಚಂದ್ರಪ್ರಕಾಶವುಳ್ಳ ಸ್ವಾಮಿಯೇ, ನೀನು ಶುಭ ಲಕ್ಷಣಯುಕ್ತನಾಗಿ ಶೋಭಿಸುವೆ(ಗೆಲುವಾಂತಿರುವೆ).

ಜೊನ್ನಂಬೊಲ್ನಯನಕ್ಕೆ ತೋರಿ ಕರದಿಂದಂ ಮುಟ್ಟಲಿಲ್ಲಾದ ಸಂ-।
ಪನ್ನಾಕಾರದೊಳಿರ್ದಪಂ ವಿಮಲಸಿದ್ಧಕ್ಷೇತ್ರದೊಳ್ಸಿದ್ಧನ-॥
ಚ್ಛಿನ್ನಜ್ಞಾನಸಮೇತನಷ್ಟಗುಣಗಾಂಭೀರ್ಯಾತ್ಮನೆಂದಿಚ್ಛೆಯಿಂ।
ನಿನ್ನಂ ಧ್ಯಾನಿಸುವಂಗೆ ಮುಕ್ತಿಯರಿದೇ ರತ್ನಾಕರಾಧೀಶ್ವರಾ॥ ॥೧೨೧॥

"ಹೇ! ಜಿನೇಶಾ! ನೀನು ಬೆಳುದಿಂಗಳಂತೆ ಕಣ್ಣಿಗೆ ಕಂಡರೂ ಕೈಗೆ ಸಿಗದ ರೀತಿಯಲ್ಲಿ ಸಂಪನ್ನಾಕಾರನಾಗಿರುವೆ. ವಿಮಲ ಸಿದ್ಧಲೋಕಾಗ್ರದಲ್ಲಿ ವಿರಾಜಿಸಿರುವೆ. ಸಂಪೂರ್ಣ ಜ್ಞಾನ ಸ್ವರೂಪಿ ಆಗಿರುವೆ; ಅಷ್ಟಗುಣಗಂಭೀರನಾಗಿರುವೆ" ಹೀಗೆಂದು ನಿನ್ನನ್ನು ಅರಿದು ಭಕ್ತಿಯಿಂದ ಧ್ಯಾನಿಸುವವನಿಗೆ ಮುಕ್ತಿ ಸುಲಭಸಾಧ್ಯವಾದುದು.

ಕ್ಷಮೆ ಮಾಳ್ಪಂತೆ ವಿರೋಧಮೇಂ ಕುಡುವುದೇ ಸಂತೋಷಮಂ ತತ್ತ್ವಶಾ-।
ಸ್ತ್ರಮೆ ಮಾಳ್ಪಂತೆ ಕುಶಾಸ್ತ್ರಮೇಂ ಕುಡುವುದೇ ಸುಜ್ಞಾನಮಂ ಮೋಕ್ಷರಾ-॥
ಜ್ಯಮೆ ಮಾಳ್ಪಂತೆ ಚತಃಸ್ಥಳಂ ಕುಡುವುದೇ ಸಿದ್ಧತ್ವಮಂ ನಿಮ್ಮ ಧ-।
ರ್ಮಮೆ ಕಾವಂತೆನಗನ್ಯರೇಂ ಪೊರೆವರೇ? ರತ್ನಾಕರಾಧೀಶ್ವರಾ॥ ॥೧೨೨॥

ಕ್ಷಮಾಗುಣ ನೀಡುವ ಆನಂದವನ್ನು ದ್ವೇಷಗುಣ ನೀಡಬಲ್ಲದೇ? ಆತ್ಮತತ್ವಶಾಸ್ತ್ರ ಸುಜ್ಞಾನದಾಯಕವಾದಂತೆ ಕುಶಾಸ್ತ್ರ ಸುಜ್ಞಾನದಾಯಕವೆಲ್ಲಿ? ಮುಕ್ತಿಸ್ಥಾನದಲ್ಲಿ ದೊರೆಯುವ ಸಿದ್ಧಸ್ವರೂಪವು ಚತುರ್ಗತಿಗಳಲ್ಲಿ ದೊರಕುವುದೇ? ನಿಮ್ಮ ಜಿನಧರ್ಮ ನನ್ನನ್ನು ರಕ್ಷಿಸುವಂತೆ ಅನ್ಯಧರ್ಮೀಯರು ನನ್ನನ್ನು ರಕ್ಷಿಸಬಲ್ಲರೇ? ಇಲ್ಲ.

ನಿನ್ನಂ ಚಿಂತಿಸುತಿರ್ಪವಂಗೆ ಪರದೇಶಂ ತನ್ನದೇಶಂ ಪರರ್।
ತನ್ನಿಷ್ಟರ್ ಪಗೆಗಳ್ಭಟರ್ ದೊರೆಗಳಾತ್ಮಸ್ನೇಹಿತರ್ ಕಿಚ್ಚು ಬಾ–॥
ವನ್ನಂ ವ್ಯಾಧಿ ಸುಖಂ ವಿಷಂ ಸುಧೆಯೆನಿಕ್ಕುಂ ನೋಡೆ ನೀನಿರ್ದುಮಾ–।
ನಿನ್ನೊಂದಕ್ಕೆಳಸಿರ್ಪೆನೇಕೆಯಕಟಾ! ರತ್ನಾಕರಾಧೀಶ್ವರಾ॥ ॥೧೨೩॥

ನಿನ್ನ ಧ್ಯಾನ ಮಾಡುವವರಿಗೆ ಪರದೇಶವು ಸ್ವದೇಶವಾಗುತ್ತದೆ; ಪರರು ತನ್ನವರಾಗುತ್ತಾರೆ; ಶತ್ರುಗಳು ಮಿತ್ರರಾಗುತ್ತಾರೆ; ಸಮರರಾಜರು ಆತ್ಮೀಯ ಮಿತ್ರರಾಗುವರು; ಉರಿಯುವ ಕೆಂಡ, ತಂಪಾದ ಗಂಧವಾಗುವುದು ರೋಗವು ಆರೋಗ್ಯವೆನಿಸುವುದು, ವಿಷವು ಅಮೃತವೆಂದೆನಿಸುವುದು; ಇಂತಹ ಮಹಾಮಹಿಮನಾದ ನಿನ್ನನ್ನು ಬಿಟ್ಟು ನಾನು ಅನ್ಯವಸ್ತುವನ್ನು ಚಿಂತಿಸುತ್ತಿದ್ದೇನಲ್ಲಾ, ಅಯ್ಯೋ!

ನೀನಾನೆಂಬರಿವಾಗೆ ಸಾಕು ಸಿರಿಯೇಂ ದಾರಿದ್ರ್ಯಮೇಂ ಗ್ರಾಮಮೇಂ।
ಕಾನೇಂ ಪಾಲುಣಿಸೇಂ ಕದನ್ನದುಣಿಸೇಂ ನಿರ್ಬಂಧಮೇಂ ರಾಜ್ಯಮೇಂ॥
ಈ ನಾನಾವಿಧಿಯೆಲ್ಲವುಂ ಕನಸಿವಂ ಕೊಂಡೇನೊ ನಿನ್ನೆನ್ನ ಸಂ–।
ಧಾನಂ ನಿತ್ಯಸುಖೈಕವಿನ್ನುಳಿದುವೇಂ? ರತ್ನಾಕರಾಧೀಶ್ವರಾ॥ ॥೧೨೪॥

ನೀನೇ ನಾನು ಎಂಬ ಅರಿವು ಬಂದರೆ ಸಾಕು. ಜನ್ಮ ಸಾರ್ಥಕವಾಯಿತು. ಬಡತನವಾದರೇನು? ಸಿರಿತನವಾದರೇನು? ನಾಡೇನು? ಕಾಡೇನು? ಹಾಲನ್ನವಾದರೇನು? ಕದನ್ನವಾದರೇನು? ಸೆರೆಮನೆಯಾದರೇನು? ಅರಮನೆಯಾದರೇನು? ಇವೆಲ್ಲಾ ಸ್ವಪ್ನ ವ್ಯಾಪಾರವಿದ್ದಂತೆ. ಇವುಗಳನ್ನು ನಂಬಿ ಫಲವೇನು? ನಾನು ನಿನ್ನನ್ನು ಕೂಡಿಕೊಳ್ಳುವುದೇ ನಿತ್ಯಸುಖ. ಇನ್ನುಳಿದವುಗಳಿಂದ ಆಗಬೇಕಾದುದೇನಿಲ್ಲ!

ನಡೆದೆಂ ಚಿತ್ತಕೆ ಬಂದವೊಲ್ನುಡಿದೆ ನಾಂ ಬಾಯ್ಗಿಚ್ಚೆ ಬಂದಂತೆ ಸೈ–।
ಗೆಡೆದೆಂ ದುಃಖಸಮುದ್ರದೊಳ್ಪಡೆದೆನಂಧಂ ಕಣ್ಗಳಂ ಪೆತ್ತವೊಲ್॥
ಬಿಡೆ ನಿಮ್ಮಂಘ್ರಿಗಳಂ ಬಿಡೆಂ ಬಿಡೆನುದಾರಂ ನೀನಹೋ! ಬಲ್ಲೆನೆ–।
ನ್ನೊಡೆಯಾ! ರಕ್ಷಿಸು ರಕ್ಷಿಸಾ ತಳುವಿದೇಂ? ರತ್ನಾಕರಾಧೀಶ್ವರಾ॥ ॥೧೨೫॥

ಮನಸ್ಸಿಗೆ ಬಂದಂತೆಲ್ಲಾ ವರ್ತಿಸಿದೆನು, ಬಾಯಿಗೆ ಬಂದಂತೆಲ್ಲಾ ಹರಟಿದೆನು, ದುಃಖ ಸಾಗರದಲ್ಲಿ ಬಿದ್ದು ಒದ್ದಾಡಿದೆನು, ಕುರುಡನು ಕಣ್ಣು ಪಡೆದಂತೆ ಆತ್ಮಜ್ಞಾನವನ್ನು ಪಡೆದೆನು. ಇನ್ನು ನಿನ್ನ ಪಾದಗಳನ್ನು ಬಿಡಲಾರೆನು; ಬಿಡಲಾರೆನು, ನೀನು ನಿಜಕ್ಕೂ ಉದಾರನು; ನಿನ್ನ ಮಹಿಮೆಗಳನ್ನು ಬಲ್ಲೆನು, ತಡಮಾಡಬೇಡ ರಕ್ಷಿಸು, ನನ್ನನು.

ತ್ರಿಜಗತ್ಸ್ವಾಮಿ ಜಿನೇಂದ್ರ ಸಿದ್ಧ ಶಿವಲೋಕಾರಾಧ್ಯ ಸರ್ವಜ್ಞ ಶಂ-।
ಭು ಜಗನ್ನಾಥ ಜಗತ್ಪಿತಾಮಹ ಹರ ಶ್ರೀಕಾಂತ ವಾಣೀಶ ವಿ-॥
ಷ್ಣು ಜಿತಾನಂಗ ಜಿನೇಶ ಪಶ್ಚಿಮಸಮುದ್ರಾಧೀಶ್ವರಾ ಬೇಗದಿಂ।
ನಿಜಮಂ ತೋರು ದಯಾಳುವೇ ತಳುವಿದೇಂ? ರತ್ನಾಕರಾಧೀಶ್ವರಾ॥ ॥೧೨೬॥

ರತ್ನಾಕರಾಧೀಶ್ವರನೇ! ನೀನು ತ್ರಿಲೋಕದೊಡೆಯನು, ಶ್ರೀ ಜಿನೇಶ್ವರನು, ಸಿದ್ಧಿ ಹೊಂದಿದವನು, ಸಿದ್ಧ ಲೋಕದಲ್ಲಿರುವ ಪೂಜ್ಯನು, ಸಮಸ್ತ ಲೋಕ ವಂದಿತನು. ಸರ್ವಜ್ಞ ಸ್ವರೂಪನು, ಮಂಗಳದಾಯಕನಾದ ಶಂಭು, ಜಗನ್ನಾಥನು, ಲೋಕ ಪಿತಾಮಹನು, ಕರ್ಮನಾಶಹರನು, ಜ್ಞಾನಾದಿ ಸಂಪತ್ತಿನೊಡೆಯನು, ವಾಣೀಶನು, ಜ್ಞಾನದ ಮೂಲ, ಸರ್ವವ್ಯಾಪಕನಾದ ವಿಷ್ಣು, ಮನ್ಮಥಾರಿ, ಕರ್ಮಗಳನ್ನು ಗೆದ್ದ ಜಿನೇಶನು, ಪಶ್ಚಿಮ ಸಮುದ್ರಾಧಿಪತಿಯೆ, ನೀನು ತಡಮಾಡದೆ ಸತ್ಯಸ್ವರೂಪ ತೋರು ದಯಾಶೀಲ! ತಡಮಾಡದೆ ರಕ್ಷಿಸು.

ತ್ರಾಹಿ ತ್ರೈಭುವನೇಂದ್ರಮಸ್ತಕಮಣಿವ್ರಾತಾರ್ಚಿತಾಂಘ್ರಿದ್ವಯಾ।
ತ್ರಾಹಿ ಶ್ರೀರಮಣೀನಟನ್ನಟನರಂಗಶ್ರೀಪದಾಬ್ಜೋಭಯಾ॥
ತ್ರಾಹಿ ತ್ರಾಹಿ ಮಹೇಶ ಮಾಂ ಪುನರಪಿ ತ್ರಾಹೀತಿ ರತ್ನತ್ರಯಾ।
ದೇಹಿ ತವಂ ಮಮ ದೀಯತಾಂ ಜಯಜಯಾ! ರತ್ನಾಕರಾಧೀಶ್ವರಾ॥ ॥೧೨೭॥

ಮೂರು ಲೋಕಗಳ ಅಧಿಪತಿಗಳ ತಲೆಯ ಕಿರೀಟಗಳಲ್ಲಿ ಕಂಗೊಳಿಸುವ ರತ್ನಾವಳಿಗಳಿಂದ ಪೂಜಿಸಲ್ಪಟ್ಟ ಪಾದದ್ವಯನೇ ಪಾಹಿ! ಕಾಪಾಡು, ಲಕ್ಷ್ಮೀದೇವಿಯೆಂಬ ನರ್ತಕಿಯ ನರ್ತನಕ್ಕೆ ವೇದಿಕೆಯೆನಿಸಿದ ಮಂಗಳಕರವಾದ ಪಾದದ್ವಯವುಳ್ಳ ಪರಮೇಶನೇ ಪಾಹಿ! ಕಾಪಾಡು! ನೀನೇ ನನ್ನನ್ನು ಮತ್ತೆ ಮತ್ತೆ ಕಾಪಾಡಬೇಕು. ರತ್ನತ್ರಯನೇ! ನೀನು ನನಗೆ ರತ್ನತ್ರಯಗಳನ್ನು ಕರುಣಿಸು. ನೀನು ಕರುಣಾಕಟಾಕ್ಷದಿಂದ ನಿನ್ನ ಆತ್ಮಜ್ಞಾನವನ್ನು ಕರುಣಿಸು! ಕರುಣಿಸು!

ಕಂದ॥ ವೈರಾಗ್ಯನೀತಿಯಾತ್ಮವಿ।
ಚಾರಂ ತಾಂ ಬಗೆದು ನೋಡೆ ರಾಜಿಸುಗುಂ ಶೃಂ॥
ಗಾರಕವಿಹಂಸರಾಜಂ।
ಪೂರಿಸಿದ ಸಪಾದಶತಕ ರತ್ನಾಕರದೊಳ್ ॥೧೨೮॥

ಈ ಕೃತಿಯು ಶೃಂಗಾರ ಕವಿ ಹಂಸರಾಜ ಎಂಬ ಬಿರುದುಳ್ಳ ರತ್ನಾಕರವರ್ಣಿಯು ಪೂರ್ಣಮಾಡಿದ ಸಪಾದಶತಕ ರತ್ನಾಕರ ಗ್ರಂಥವು. ಇದರಲ್ಲಿ ವೈರಾಗ್ಯವೂ, ನೀತಿಯೂ, ಆತ್ಮವಿಚಾರಗಳು ಪ್ರತಿಪಾದಿತವಾಗಿದೆ. ವಿಚಾರಮಾಡಿ ನೋಡುವವರಿಗೆ ಚೆನ್ನಾಗಿ ತಿಳಿದು ಬರುವುದು.

ಗದ್ಯ॥ **ಶ್ರೀಮದ್ದೇವೇಂದ್ರಕೀರ್ತಿಯೋಗೀಶ್ವರ ಪಾದಾಂಭೋಜಭೃಂಗಾಯಮಾನ**
ಶೃಂಗಾರ ಕವಿಹಂಸರಾಜವಿರಚಿತಮಪ್ಪ
ರತ್ನಾಕರ ಸಪಾದಶತಕಂ ಸಮಾಪ್ತಂ

ಶ್ರೀಮತ್ ದೇವೇಂದ್ರಕೀರ್ತಿ ಮುನೀಶ್ವರರ ಪಾದಕಮಲದಲ್ಲಿ ತುಂಬಿಯಂತಿರುವ ಶೃಂಗಾರಕವಿ ಹಂಸರಾಜನು ವಿರಚಿಸಿದ ರತ್ನಾಕರ ಸಪಾದಶತಕವು ಸಮಾಪ್ತವಾದುದು

* * *

೨. ಅಪರಾಜಿತೇಶ್ವರಶತಕಂ

೨. ಅಪರಾಜಿತೇಶ್ವರಶತಕಂ

ಶ್ರೀಕುಲಮಾಪ್ತಗೋತ್ರಮಮಲಾಂಗಮತಂದ್ರತೆ ಸಮ್ಯಗಾಯು ವಿ–।
ದ್ಯಾಕುಶಲತ್ವಮಾದೊಡೆಮಿದೆನ್ನದಿದನ್ಯಮೆನುತ್ತೆ ಕಂಡು ನಿ–॥
ರ್ವ್ಯಾಕುಲನಾಗಿಯೆಲ್ಲರಿನಗಲ್ದು ಮಣಿತ್ರಯಸಂಪದಕ್ಕೆ ರ–।
ತ್ನಾಕರನಾದವಂ ತವ ಕೃಪಾತ್ಮನಲಾ ಅಪರಾಜಿತೇಶ್ವರಾ॥ ॥೧॥

ಅಪರಾಜಿತೇಶ್ವರನೇ! ಸಂಪದ್ಭರಿತ ವಂಶ, ಉತ್ತಮ ಗೋತ್ರ, ನಿರ್ದೋಷಶರೀರ, ಲವಲವಿಕೆ, ದೀರ್ಘಾಯುಷ್ಯ, ವಿದ್ಯಾಕೌಶಲ್ಯ, ಇವೆಲ್ಲಾ ಪ್ರಾಪ್ತವಾದರೂ "ಇದು ನನ್ನದು; ಅದು ಬೇರೆಯವರದು" ಎಂಬ ಭೇದ ಭಾವನೆಯನ್ನು ತೊರೆದು ನಿಶ್ಚಿಂತನಾದ ಸರ್ವಸಂಗಪರಿತ್ಯಾಗಿಯಾಗಿ ರತ್ನತ್ರಯಗಳಿಗೆ ಆಶ್ರಯದಾತನಾದವನು, ನಿನ್ನ ಕೃಪೆಗೆ ಪಾತ್ರನು; ಪರಮಧನ್ಯನು.

ನಂಬುವುದೇಳು ತತ್ತ್ವಮನದುತ್ತಮದೃಷ್ಟಿ ತದರ್ಥಮಂ ನಯಾ–।
ರ್ಥಂ ಬರೆ ನೋಡಿ ಭೇದಿಪುದದುತ್ತಮಬೋಧಮಹಿಂಸೆಯಲ್ಲಿ ಮಾ–॥
ರ್ಗಂ ಬಿಡದಿರ್ಪುದುತ್ತಮಚರಿತ್ರಮಿವಿಂತು ಮಣಿತ್ರಯಂ ತದೀ–।
ಯಾಂಬುಧಿ ಯಾವುದುತ್ತಮತಪಂಗಳಲಾ ಅಪರಾಜಿತೇಶ್ವರಾ॥ ॥೨॥

ಸಪ್ತತತ್ತ್ವಗಳನ್ನು ನಂಬುವುದು ಸಮ್ಯಕ್‌ದರ್ಶನ; ಈ ಏಳು ತತ್ತ್ವಗಳ ಅರ್ಥವನ್ನು ಯಥಾರ್ಥವಾಗಿ ತಿಳಿಯಲು ಭೇದವಿಜ್ಞಾನಿಯಾಗುವುದು ಸಮ್ಯಕ್‌ಜ್ಞಾನ, ಅಹಿಂಸಾ ಮಾರ್ಗದಲ್ಲಿ ಶಾಸ್ತ್ರಪದ್ಧತಿಯನ್ನು ಬಿಡದೆ ಆಚರಿಸುವುದು ಸಮ್ಯಕ್‌ಚಾರಿತ್ರ. ಇವು ಮೂರೇ ರತ್ನತ್ರಯವು. ಈ ರತ್ನತ್ರಯಗಳಿರುವ ಸಮುದ್ರವೆಂದರೆ ಉತ್ತಮ ತಪಸ್ಸುಗಳು.

ಮೂಜಗವೆಂಬ ಗೇಹದೊಳೆ ತುಂಬಿದ ವಸ್ತುಗಳಾರು ಕಾಯವೈ–।
ದೋಜೆಯ ತತ್ತ್ವವೇಳು ನವಭೇದಪದಾರ್ಥಮಿವಂ ತಪಸ್ವಿ ಸಂ–॥
ಯೋಜಿಸಿ ಕೂಡೆಕೂಡೆ ಪರಿಭಾವಿಸಿ ತನ್ನನೆ ಕಾಣ್ಬುದರ್ಕೆ ಚೇ–।
ತೋಜಯನಾಗಬೇಕು ಮೊದಲೆಂದೆಯಲಾ ಅಪರಾಜಿತೇಶ್ವರಾ॥ ॥೩॥

ತ್ರಿಲೋಕವೆಂಬುದೊಂದು ಮನೆ, ಈ ಮನೆಯಲ್ಲಿ ಷಟ್‌ದ್ರವ್ಯಗಳಿವೆ, ಪಂಚಾಸ್ತಿಕಾಯಗಳಿವೆ, ಏಳು ತತ್ತ್ವಗಳಿವೆ, ನವಪದಾರ್ಥಗಳಿವೆ; ಈ ಇಪ್ಪತ್ತೇಳು ತತ್ತ್ವಗಳನ್ನು ತಪಸ್ವಿಯು ಸೇರಿಸಿ ಪದೇ ಪದೇ ವಿಚಾರಮಾಡಿ ಆತ್ಮಜ್ಞಾನ ಪಡೆಯುವ ಮುಂಚೆ ಮನಸ್ಸನ್ನು ಗೆಲ್ಲಬೇಕು ಎಂದು ಈ ಮುಂಚೆ ಹೇಳಿದೆಯಲ್ಲವೇ?

ಬಳಿಕಣುಪೆಕ್ಕೆ ಪನ್ನೆರಡರಲ್ಲಿ ಚತುಷ್ಕದ ದಮ್ಮಜಾನದೊಳ್।
ಸುಳಿಸುಳಿದಾಡಿ ಕೂಡೆ ಗುರುಪಂಚಕದೊಳ್ಪೊಳೆದಾಡಿ ಚಿತ್ತದ–॥
ಗ್ಗಳಮನಡಂಗಿಸುತ್ತೊಡನೆ ತನ್ನಯ ದೇಹದೊಳಾತ್ಮನಲ್ಲಿ ನಿಂ–।
ದಳಲಳಿದಿರ್ದವಂ ತವ ಕೃಪಾತ್ಮನಲಾ ಅಪರಾಜಿತೇಶ್ವರಾ॥ ॥೪॥

ಅನಂತರ ಹನ್ನೆರಡು ಅನುಪ್ರೇಕ್ಷೆಗಳಲ್ಲಿಯೂ ನಾಲ್ಕು ವಿಧವಾದ ಧರ್ಮಧ್ಯಾನದಲ್ಲಿಯೂ ಮತ್ತೆಮತ್ತೆ ವಿಚಾರಮಾಡುತ್ತಾ ಮನಸ್ಸನ್ನು ಲೀನಗೊಳಿಸಬೇಕು, ಪಂಚಪರಮೇಷ್ಠಿಗಳನ್ನು ಧ್ಯಾನಿಸಿ, ಮನಸ್ಸಿನ ಚಂಚಲತೆಯನ್ನು ನಿವಾರಿಸಬೇಕು; ಅನಂತರ ತನ್ನ ಶರೀರದಲ್ಲಿರುವ ಆತ್ಮನನ್ನೇ ಚಿಂತಿಸುತ್ತಾ ಸಂಸಾರದ ದುಃಖವಿರಹಿತನಾಗಬೇಕು. ಇಂಥವನು ನಿನ್ನ ದಯೆಗೆ ಪಾತ್ರನಾದ ಆತ್ಮವಾಗಿದ್ದಾನೆ.

ಆ ಪದದೊಳ್ ಕ್ಷಣಕ್ಷಣಕೆ ಕರ್ಮಸಮೂಹಕೆ ಹಾನಿ ಸದ್ಗುಣೋ–।
ದ್ದೀಪಿಕೆಯಪ್ಪುದೋದಿನ ಪರಿಶ್ರಮಮುಂ ತಪದುಬ್ಬೆಯುಂ ಸುಧಾ–॥
ರೂಪಮನೆಯ್ದುತಿರ್ಕುಮದರಿಂದದನೇ ಸಕಲಪ್ರಯತ್ನದಿಂ।
ಸ್ಥಾಪಿಸಿ ಮುಕ್ತಿಯಂ ಪಡೆವುದೆಂದೆಯಲಾ ಅಪರಾಜಿತೇಶ್ವರಾ॥ ॥೫॥

ಹೀಗೆ ಆತ್ಮರತನಾದವನ ಕರ್ಮದಕೊಳೆ ಕ್ಷಣಕ್ಷಣಕ್ಕೂ ಕರಗುವುದು; ಸದ್ಗುಣಗಳು ಅಧಿಕಗೊಳ್ಳುವುವು, ಶಾಸ್ತ್ರಾಧ್ಯಯನವೂ ತಪಸ್ಸಿನ ಕಷ್ಟವು ಅಮೃತಸ್ವರೂಪವನ್ನು ಪಡೆಯುವುದು, ಆದುದರಿಂದ ಸಮಸ್ತ ಪ್ರಯತ್ನದಿಂದಲೂ ಆತ್ಮಚಿಂತನೆಯನ್ನೇ ಸಾಧಿಸಿ ಮುಕ್ತಿಯನ್ನು ಗಳಿಸಬೇಕು ಎಂದು ನೀನು ತಿಳಿಸಿರುವೆಯಲ್ಲವೇ?

ಅದು ಲಘುಕರ್ಮಿಗಾತ್ಮ ತನುಭೇದವಿಚಾರದೊಳಳ್ತಿಯುಳ್ಳವಂ–।
ಗುದಯಿಪುದಲ್ಲದೇ ಸಕಲಶಾಸ್ತ್ರಮನೋದಿದೊಡಂ ತಪಂಗಳೊ–॥
ಳ್ಕುದಿದೊಡಮಾಗದಂತದರಿನಾ ರುಚಿಯುಳ್ಳವನೇ ಭವತ್ಪ್ರಸಾ–।
ದದ ಸುಖಿಯೆಂದು ಮೆಚ್ಚಿ ಪರಿಕೀರ್ತಿಪೆನಾನಪರಾಜಿತೇಶ್ವರಾ॥ ॥೬॥

ಆ ಆತ್ಮಧ್ಯಾನವು ಲಘುಕರ್ಮಿಗೆ ಮತ್ತು 'ಆತ್ಮಬೇರೆ–ದೇಹ ಬೇರೆ' ಎಂಬ ಭೇದವಿಜ್ಞಾನದಲ್ಲಿ ಆಸಕ್ತಿ ಇದ್ದವನಿಗೆ ಉಂಟಾಗುತ್ತದೆ. ಹಾಗಲ್ಲದೆ ಸಕಲಶಾಸ್ತ್ರವಿಶಾರದನಾದ ಮಾತ್ರಕ್ಕೆ, ಆಗಲಿ ತಪಸ್ಸಿನ ಕುಲುಮೆಯಲ್ಲಿ ಬೆಂದರಾಗಲಿ ಉಂಟಾಗುವುದಿಲ್ಲ. ಆದಕಾರಣ ಭೇದವಿಜ್ಞಾನವರಿತು ಧ್ಯಾನಾಸಕ್ತನಾದವನೇ ನಿನ್ನ ಅನುಗ್ರಹದ ಸುಖಕ್ಕೆ ಪಾತ್ರರು ಎಂದು ನಾನು ನಂಬಿ, ನಿನ್ನನ್ನೇ ಸ್ತುತಿಸುವೆನು.

ಭೇದವಿಚಾರಮೆಂತೊ ತನುಮೂರವರಲ್ಲಿಯೆ ಕರ್ಮವೆಂಟಿವೇ।
ವೇದನೆಗಿಂಬುಗಳ್ಕಡೆಗಚೇತನರೂಪಿಗಳಾತ್ಮನಿಲ್ಲಿ ಮಿ-॥
ತ್ರೋದಯನಾಗಿ ಬಾಳ್ದಪನವಂ ಸುಖಿ ಚಿನ್ಮಯನೆಂದು ಬುದ್ಧಿಯಿಂ।
ಭೇದಿಸಿ ಬೇರುಗೆಯ್ದೊಳಗೆ ನೋಳ್ಪುದಲಾ ಅಪರಾಜಿತೇಶ್ವರಾ॥ ॥೭॥

ಭೇದವಿಚಾರ ಹೇಗಾದರಿರಲಿ, ಔದಾರಿಕ ತೈಜಸ, ಕಾರ್ಮಣವೆಂಬ ಶರೀರತ್ರಯದಲ್ಲಿ ಅಷ್ಟಕರ್ಮಗಳಿವೆ, ಇವುಗಳೇ ವೇದನೆಗೆ ಕಾರಣಗಳು, ಕೊನೆಗೆ ಜಡಸ್ವರೂಪಗಳಾಗಿವೆ; ಆತ್ಮನು ಈ ಕರ್ಮಗಳನ್ನು ಮಿತ್ರನಂತೆ ತಿಳಿದು ಜೀವಿಸುತ್ತಾನೆ. ಆದರೆ ತಾನು ಪರಮಸುಖಿ ಎಂದು ಭೇದವಿಜ್ಞಾನದಿಂದ ತಿಳಿದು ಬೇರಿಳಿದು ಒಳಹೊಕ್ಕು ನೋಡಬೇಕು.

ಪೊರಗಿದು ಧಾತುರೂಪದೊಡಲಿನ್ನೆರಡುಂಟೊಳಗೊಂದು ತೇಜದಿಂ।
ತುರುಗಿದ ತೈಜಸಾಂಗಮೊಡನಷ್ಟಮಲಾಶ್ರಿತಕಾರ್ಮಣಾಂಗ ಮೊಂ-॥
ದುರೆ ಪೆಸರಿಂದೆ ಬೇರ್ಪಡಿಸಬರ್ಪುದು ರೂಪದೆ ಮಿಶ್ರಿತಂಗಳೀ।
ಸೆರೆಮನೆ ಮೂರರೊಳ್ಪುದಿದನಾತ್ಮನಹೋ ಅಪರಾಜಿತೇಶ್ವರಾ॥ ॥೮॥

ಹೊರಗೆ ಕಾಣಿಸುವ ಸ್ಥೂಲದೇಹವು ಸಪ್ತಧಾತು ರೂಪವಾದುದು(ಔದಾರಿಕ ಶರೀರ) ಇದರೊಳಗೆ ಇನ್ನೆರಡು ಶರೀರಗಳಿವೆ. ಒಂದು ಕಾಂತಿಯುಕ್ತ ತೈಜಸ ಶರೀರವಾಗಿದೆ; ಇನ್ನೊಂದು ಅಷ್ಟಕರ್ಮಾಶ್ರಿತವಾದ 'ಕಾರ್ಮಣ ಶರೀರ'ವಾಗಿದೆ; ಈ ಶರೀರತ್ರಯಕ್ಕೆ ಹೆಸರಿಟ್ಟು ಬೇರೆಬೇರೆ ಮಾಡಲು ಸಾಧ್ಯವಿದ್ದರೂ ತಾತ್ತ್ವಿಕ ರೂಪದಲ್ಲಿ ಒಂದರೊಡನೊಂದು ಬೆರೆತಿವೆ; ಆತ್ಮನು ಈ ಮೂರರ ಸೆರೆಮನೆಯಲ್ಲಿ ಸೆರೆಯಾಗಿ ಬಿಟ್ಟಿದ್ದಾನೆ! ಅಚ್ಚರಿಯ ಸಂಗತಿಯಿದು!

ಆಗುತ ಪೋಗುತಿರ್ಪುದಿದು ಬಾಹ್ಯಶರೀರಮನೇಕರೂಪದಿಂ।
ಯೋಗವಿಯೋಗಿಯಪ್ಪ ಪದಿನಾಲ್ಕು ಗುಣಸ್ಥಲಕಾಲಕಲ್ಲದೆ॥
ಪೋಗದು ತೈಜಸಂ ಪುದಿದ ಕಾರ್ಮಣಮುಂ ಸಲೆ ಭೇದಭಾವನೋ-।
ದ್ಯೋಗಮನಿಂದು ತೊಟ್ಟೆಸೆಗವೇಳ್ಕುಮದರ್ಕಪರಾಜಿತೇಶ್ವರಾ॥ ॥೯॥

ಬಾಹ್ಯಶರೀರ(ಔದಾರಿಕ ಶರೀರ)ವು ನಾನಾ ರೂಪಗಳಿಂದ ಬರುತ್ತಿರುತ್ತದೆ, ಹೋಗುತ್ತಿರುತ್ತದೆ. ಆದರೆ ತೈಜಸಶರೀರ ಮತ್ತು ಕಾರ್ಮಣಕಾಯ ಇವುಗಳು ಮನೋವಚನ ಕಾಯಗಳೆಂಬ ಯೋಗಗಳಿಂದ ಚೇತನ ಬಿಡುಗಡೆಹೊಂದಿ, ಹದಿನಾಲ್ಕನೆಯ ಆಯೋಗಕೇವಲಿ ಗುಣಸ್ಥಾನದ ಕಾಲದಲ್ಲಿ ಆತ್ಮನಿಂದ ಬೇರೆಯಾಗುತ್ತವೆ, ಆದುದರಿಂದ ಇವೆರಡು ಶರೀರಗಳಿಂದ ಮುಕ್ತನಾಗಲು ಇಂದಿನಿಂದಲೇ ಭೇದವಿಜ್ಞಾನವನ್ನು ಅರಿಯುವ ಕಾರ್ಯದಲ್ಲಿ ತೊಡಗಬೇಕು.

ಕಳೆದು ಸಮಸ್ತಬಾಹ್ಯರತಿಯಿಂ ಮನದುತ್ಸವದಿಂದೆ ಗೂಢ ಸು-।
ಸ್ಥಳದೊಳಗಿರ್ದು ತನ್ನೊಳಗೆ ತನ್ನಯ ರೂಪನೆ ನಿಮ್ಮ ರೂಪಿನಾ॥
ಪಳುಕಿನ ಬೊಂಬೆಯಂದವೆನುತಂ ನೆನೆದೀಕ್ಷಿಸುವಂಗೆ ಚಿತ್ತದೊಳ್।
ಪೊಳೆಯದೆ ಮಾಣ್ಬುದೇ ಪರಮಸಿದ್ಧನ ರೂಪಪರಾಜಿತೇಶ್ವರಾ॥ ॥೧೦॥

ಇದಕ್ಕಾಗಿ ಎಲ್ಲಾ ಬಾಹ್ಯವಸ್ತುಗಳ ಮೇಲಿನ ವ್ಯಾಮೋಹವನ್ನು ತೊರೆಯಬೇಕು. ಉಲ್ಲಾಸದ ಮನದಲ್ಲಿ, ಏಕಾಂತಸ್ಥಾನದಲ್ಲಿ ಕುಳಿತು ಆತ್ಮಚಿಂತನೆ ಮಾಡುತ್ತಾ, ತನ್ನ ಆತ್ಮವು ನಿನ್ನಾತ್ಮದ ಸ್ಫಟಿಕಬಿಂಬದಂತೆ ಇದೆಯೆಂದು ಕಲ್ಪಿಸಿಕೊಂಡು ಧ್ಯಾನ ಮಾಡುವವನಿಗೆ ಅಂತರಂಗದಲ್ಲಿ ಪರಮಸಿದ್ಧಾತ್ಮನ ಸ್ವರೂಪವು ಕಾಣದಿರದು.

ತನು ಜಿನಗೇಹವೆಂಬುದೊಳಗಿರ್ದ ನಿಜಾತ್ಮನೆ ದೇವನೆಂಬುದಾ।
ತನುಪರಿಮಾಣನೆಂಬುದ ಶರೀರಕನೆಂಬುದು ಬೋಧದರ್ಶನಂ॥
ತನುವೆನಿಸಿರ್ದನೆಂಬುದಕಲಂಕನಬಾಧನಖಂಡನೆಂಬ ಭಾ-।
ವನೆಯನೆ ಭಾವಿಸುತ್ತಿರೆ ಭವಚ್ಯುತಿ ತಾನಪರಾಜಿತೇಶ್ವರಾ॥ ॥೧೧॥

ಈ ದೇಹವೇ ಜಿನದೇವಾಲಯ, ದೇಹದೊಳಗಿನ ತನ್ನಾತ್ಮನೇ ದೇವರು: ಆತ್ಮನು ದೇಹದಷ್ಟೇ ಗಾತ್ರಪರಿಮಿತನು, ಆತ್ಮನು ಅಶರೀರನು, ಜ್ಞಾನದರ್ಶನಗಳನ್ನೇ ಶರೀರವೆನಿಸಿದವನು; ಆತ್ಮನು ಅಕಳಂಕರೂಪಿ; ಬಾಧಾರಹಿತನು; ಅಖಂಡಸ್ವರೂಪಿ ಎಂಬುದಾಗಿ ನಿತ್ಯಭಾವಿಸಿದರೆ ಭವನಾಶವು ಖಂಡಿತ.

ಮೊದಮೊದಲಾಸರಪ್ಪುದೊಡನೊಪ್ಪಿರೆ ಸಂತಸವಪ್ಪುದಂತು ಮಾ-।
ಣದೆ ಪರಿಭಾವಿಸುತ್ತಿರೆ ಮಹಾಸುಖಮಪ್ಪುದು ಬಾಹ್ಯದಾಟದೊಳ್॥
ಬೆದರಿಕೆಯಪ್ಪುದಾತ್ಮನೊಳೆ ಮೆಚ್ಚುಗೆಯಪ್ಪುದು ಲೋಕಮೆಲ್ಲ ಮಾ-।
ಯದ ಮರುಳಾಗಿ ತೋರ್ಪುದು ನಿಜಾತ್ಮರತಂಗಪರಾಜಿತೇಶ್ವರಾ॥ ॥೧೨॥

ಆತ್ಮನಲ್ಲಿ ಆಸಕ್ತನಾದವನಿಗೆ ಪ್ರಾರಂಭದಲ್ಲಿ ಆತ್ಮನನ್ನೇ ಮೊರೆ ಹೋಗುತ್ತಾನೆ; ಆಮೇಲೆ ಅಮಿತಾನಂದ ಹೊಂದುತ್ತಾನೆ; ಹಾಗೆಯೇ ಬಿಡದೆ ಆನಂದಾನುಭವಿ ಆಗುತಿದ್ದರೆ, ಮಹಾಸುಖಿಯಾಗುತ್ತಾನೆ; ಹೀಗೆ ಮಹಾ ಆತ್ಮಸುಖಿ ಆದವನಿಗೆ ಹೊರಗಿನ ಪ್ರಪಂಚದ ಲೀಲೆಯನ್ನು ಕಂಡರೆ ಭಯವಾಗುತ್ತದೆ. ಆತ್ಮನಲ್ಲೇ ಆಸಕ್ತಿ ಅಧಿಕಗೊಳ್ಳುತ್ತದೆ; ಲೋಕದ ವ್ಯವಹಾರವೆಲ್ಲವು ಮಾಯೆಯ ಮರುಳಾಟವಾಗಿ ಕಾಣಿಸುತ್ತದೆ.

ನುಡಿ ಕಿರಿದಪ್ಪುದೂಟದೊಳರೋಚಕಮಪ್ಪುದು ಬಾಹ್ಯಗೋಷ್ಠಿಯೊಳ್।
ಸಿಡಿಮಿಡಿಯಪ್ಪುದಂತೆ ಬಹಿರಂಗದ ನೋಟಕೆ ಕಣ್ಗೊಳ್ಳದಾ॥
ಕಡುಪಿನ ಕಾಲ್ಗಳಾಟವಡಕಕ್ಕೊಳಗಪ್ಪುದು ಬುದ್ಧಿ ಮುಕ್ತಿಯಂ।
ತುಡುಕುತಮಿರ್ಪುದಲ್ತೆ ಪರಮಾತ್ಮರತಂಗಪರಾಜಿತೇಶ್ವರಾ॥ ॥೧೩॥

ಪರಮಾತ್ಮಧ್ಯಾನದಲ್ಲೇ ಮೈಮರೆತವನಿಗೆ ಮಾತು ಮೊಟಕಾಗುತ್ತದೆ; ಊಟದಲ್ಲಿ ರುಚಿ ಹೋಗುತ್ತದೆ; ಹೊರಗಿನ ಜನಸಂಪರ್ಕಕ್ಕೆ ಸಿಡಿಮಿಡಿಗೊಳ್ಳುತ್ತಾನೆ; ಬಹಿರಂಗ ಜಗತ್ತಿನ ನೋಟಕ್ಕೆ ಹಿಂಜರಿಯುತ್ತಾನೆ; ಕಾಲಿನ ಬಲ ಇದ್ದರೂ ಹೊರಗಿನ ಯಾವ ಲೀಲೆಗೂ ಮುಂದುವರೆಯುವುದಿಲ್ಲ; ಬುದ್ಧಿಶಕ್ತಿಯು ಭಕ್ತಿಯಲ್ಲಿ ಮುಕ್ತಿಯನ್ನು ಪಡೆಯಲು ಅತ್ಯಾಸಕ್ತಿಯನ್ನು ತೋರುತ್ತದೆ.

ಪೊರಗೆ ತಪಂಗಳಾರರ ಸಹಾಯತೆ ಬೇಕು ಶರೀರಮೋಹಮಂ।
ತೊರೆಯಲೆಬೇಕು ಭಾವನೆಯ ಶಾಸ್ತ್ರವಿಲೋಕಿತೆ ಬೇಕು ನಿಚ್ಚಲುಂ॥
ನೆರೆವ ವಿರಕ್ತಿ ಬೇಕು ರಿಪುಬಂಧುಗಳೊಳ್ಸರಿಗಾಣಬೇಕು ಕ–।
ಣ್ಣರಿದು ನಿಜಾತ್ಮನಂ ಚಲಿಸದೀಕ್ಷಿಸುವಂಗಪರಾಜಿತೇಶ್ವರಾ॥ ॥೧೪॥

ತನ್ನಾತ್ಮನನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಬಯಸುವವನಿಗೆ ಆರು ಬಗೆಯ ತಪಸ್ಸಿನ ನೆರವು ಬೇಕು; ದೇಹದ ಮೇಲಿನ ಮೋಹವನ್ನು ತೊರೆಯಬೇಕು; ನಿತ್ಯ ಷೋಡಶಭಾವನೆಯನ್ನು ಬಣ್ಣಿಸುವ ಶಾಸ್ತ್ರದ ಅವಲೋಕನ ಮಾಡಬೇಕು; ಶಾಶ್ವತವಾಗಿ ಬಯಸುವ ವೈರಾಗ್ಯಭಾವವಿರಬೇಕು; ಶತ್ರುಮಿತ್ರರನ್ನು ಸಮಾನಭಾವದಿಂದ ಕಾಣಬೇಕು.

ಮೈಯ್ಯೊಳಗೆನ್ನೆಗಂ ಮಮತೆಯುಂಟವನನ್ನೆಗಮುಗ್ರಕಾಲನಾ।
ಕೈಯ್ಯೊಳಗಿರ್ದ ಪಕ್ಕಿ ವಿಷಯಂಗಳ ಮೆಚ್ಚಿದವಂ ವಿಷಾಗ್ನಿಯೊಳ್॥
ಚುಯ್ಯನೆ ಬೆಂದವಂ ಬಹುಕಷಾಯಮನೊತ್ತಿ ಕಳಲ್ಚದಾತನ–।
ಯ್ಯಯ್ಯೋ! ಮುಳುಂಗಿದಂ ನರಕದೊಳ್ಫಲವೇನಪರಾಜಿತೇಶ್ವರಾ॥ ॥೧೫॥

ಈ ಕ್ಷಣಿಕ ಶರೀರದ ಮೇಲೆ ಎಲ್ಲಿಯವರೆಗೂ ಮಮತೆ ಇರುತ್ತದೋ ಅಲ್ಲಿಯವರೆಗೆ ಆ ಆತ್ಮನು ಕ್ರೂರಕಾಲನೆಂಬ ಕಟುಕನ ಕೈಯಪಕ್ಷಿ, ಇನ್ನು ವಿಷಯಾಸಕ್ತನಾದವನು ಭಯಂಕರವಾದ ಭೋಗದ ವಿಷಾಗ್ನಿಕುಂಡದಲ್ಲಿ ಚುಯ್ಯೆಂದು ಬೇಯುವವನು, ತೀವ್ರವಾದ ಕ್ರೋಧ ಕಷಾಯಗಳನ್ನು ತುಳಿದು ನಿಗ್ರಹಿಸದವನು ಆಗಿ ಘೋರನರಕದಲ್ಲಿ ಬಿದ್ದು ಒದ್ದಾಡುವನು. ಅಯ್ಯೋ, ದೇವರೇ!

ತನು ಪಗೆಯೆಂಬವಂ ವ್ರತಯುತಂ ವಿಷಯಂ ವಿಷಮೆಂದು ಬಿಟ್ಟವಂ।
ವಿನುತತಪಸ್ವಿ ಕೋಪವಿಡಿದಿರ್ದ ಕಷಾಯಕೆ ದೂರನಾದ ಶಾಂ-॥
ತನೆ ಸಕಲಾತ್ಮರಕ್ಷಕನಿನಿತುಂ ಗುಣಸಂತತಿಗೂಡಿ ತತ್ತ್ವಭಾ-।
ವನೆಯೊಳೆ ಬಾಳ್ವನೇ ಶಿವನವಂಗೆಣೆಯಾರಪರಾಜಿತೇಶ್ವರಾ॥ ॥೧೬॥

ಶರೀರವನ್ನು ಶತ್ರುವೆಂದು ತಿಳಿದವನು; ವ್ರತಗಳನ್ನು ಪರಿಪಾಲಿಸುವವನು; ವಿಷಯಾಸಕ್ತಿಯನ್ನು ವಿಷವೆಂದು ತೊರೆದವನು, ಈತನೇ ಶ್ರೇಷ್ಠನಾದ ತಪಸ್ವಿ, ಕ್ರೋಧಾದಿ ಕಷಾಯಗಳಿಂದ ದೂರನಾದವನು, ಶಾಂತಸ್ವಭಾವದವನು, ಆತನೇ ಸಕಲಾತ್ಮಸಂರಕ್ಷಕನು. ಈ ರೀತಿಯಾಗಿ ಈ ಎಲ್ಲ ಸದ್ಗುಣಭರಿತನಾದವನು ತತ್ತ್ವ ಚಿಂತಕನಾಗಿ ಬದುಕುವವನೇ; ಆತನೇ ಮಂಗಳರೂಪಿ ಶುದ್ಧಾತ್ಮನು.

ಉಂಬನಿತರ್ಕೆ ಕೊಟ್ಟು ಪಗೆಯೊಳ್ಪಲವುಂ ತೆರದಿಂದೆ ಸೇವೆಯಂ।
ಕೊಂಬ ವಿವೇಕಿಯಂತೆ ವಿರಸಾನ್ನಮನೇ ತನುವಿಂಗೆ ಜೋಕೆಯಿಂ॥
ತುಂಬಿ ಜಪಂ ತಪಂ ಪರಮಶಾಸ್ತ್ರರಹಸ್ಯದೊಳಾತ್ಮಕಾರ್ಯಮಂ।
ಬೆಂಬಿಡದಾವಗಂ ನೆಗಳ್ವವಂಗೆಣೆಯಾರಪರಾಜಿತೇಶ್ವರಾ॥ ॥೧೭॥

ಹಗೆಗೆ ಊಟವಷ್ಟೇ ಹಾಕಿ ಅವನಿಂದ ಅನೇಕ ಬಗೆಯಲ್ಲಿ ದುಡಿಸಿಕೊಳ್ಳುವ ವಿವೇಕಿಯಂತೆ, ಎಚ್ಚರಿಕೆಯಿಂದ ಶರೀರಕ್ಕೆ ನೀರಸಾಹಾರವನ್ನು ನೀಡಿ ಜಪತಪಗಳನ್ನು ಮಾಡುತ್ತಾ ಶಾಸ್ತ್ರಾಧ್ಯಯನ ಮಾಡುತ್ತಾ ಬೆಂಬಿಡದೆ ಆತ್ಮಕಾರ್ಯನಿರತನಾದವನಿಗೆ ಸರಿಸಮಾನರು ಇನ್ನಾರಿದ್ದಾರೆ?

ಉಂಬುದು ನೀರಸಂ ಪೊರೆವುದೊಂದೊಡಲಿರ್ಪುದು ಗೂಢವಾಸವಾ-।
ಡುಂಬೊಲನೇಳು ತತ್ತ್ವಮೊಳುವಾತು ಸರಸ್ವತಿಯೊಳ್ನಿರಂತರಂ॥
ಹಂಬಲಘಪ್ರಣಾಶದೊಳಗೀಕ್ಷಣಮಾತ್ಮನೊಳಾಗಿ ಬಾಳ್ವ ಧೀ-।
ರಂ ಬಹುಕರ್ಮಮಂ ಕ್ಷಣಕೆ ಖಂಡಿಸನೇ ಅಪರಾಜಿತೇಶ್ವರಾ॥ ॥೧೮॥

ನೀರಸಾಹಾರವನ್ನು ಸ್ವೀಕರಿಸುವುದು, ಆ ಮೂಲಕ ದೇಹದ ಪೋಷಣೆ ಮಾಡುವುದು, ಏಕಾಂತ ವಾಸಮಾಡುವುದು, ಸಪ್ತತತ್ವಗಳಿಗೆ ಆಶ್ರಯನಾಗಿರುವುದು, ಸದಾ ಸರಸವಾಣಿಯಲ್ಲಿ ಸಂಭಾಷಿಸುವುದು, ಕರ್ಮನಾಶಕ್ಕಾಗಿ ಹಂಬಲಿಸುವುದು, ಸದಾ ಆತ್ಮಚಿಂತನೆಯಲ್ಲಿರುವುದು, ಹೀಗೆ ಬಾಳುವ ವಿವೇಕಿ ಕ್ಷಣಮಾತ್ರದಲ್ಲಿ ಕರ್ಮಜಾಲವನ್ನು ನಿರ್ಮೂಲ ಮಾಡಲಾರನೇ?

ತನ್ನೊಳೆ ತನ್ನ ನೋಳ್ಪ ಋಷಿಗನ್ಯರ ನೋಟಮದೇಕೆ ಚಿದ್ಗುಣೋ-।
ತ್ಪನ್ನಸುಧಾನ್ನಮುಣ್ಬ ಮುನಿಗೊಳ್ಳುಣಿಸೆಂಬ ವಿವಕ್ಷೆಯೇಕೆ ಸಿ-॥
ದ್ಧಂ ನಮ ಎಂಬ ವಾಕ್ಯಮಿರೆ ಬೇರ್ನುಡಿಯೇಕೆ ನಿಜಾತ್ಮರೂಪದೊಳ್।
ನಿನ್ನೊಡನಾಡುವಂಗುಳಿದ ಗೋಷ್ಠಿಗಳೇಕಪರಾಜಿತೇಶ್ವರಾ॥ ॥೧೯॥

ತನ್ನ ಆತ್ಮಸೌಂದರ್ಯವನ್ನು ದರ್ಶಿಸುವ ಋಷಿಗೆ ಬಾಹ್ಯಸೌಂದರ್ಯದ ಬಯಕೆಯೇಕೆ? ಆತ್ಮಗುಣಗಳಿಂದುಂಟಾದ ಅಮೃತಾನ್ನವನ್ನು ಉಣ್ಣುವ ಮುನಿಗೆ ಷಡ್ರಸಾಹಾರದ ಅಪೇಕ್ಷೆಯೇಕೆ? 'ಸಿದ್ಧಂ ನಮಃ' ಎಂಬ ಮಾತಿರುವಾಗ ಬೇರೆ ಮಾತೇಕೆ? ತನ್ನ ಆತ್ಮಸ್ವರೂಪದಲ್ಲಿ ನಿನ್ನೊಡನೆ ವಿಹರಿಸುವನಿಗೆ ಅನ್ಯಗೋಷ್ಠಿಗಳೇಕೆ?

ಬಿಡದೆ ಕಷಾಯಮಂ ಸುಡದೆಯಿಂದ್ರಿಯತೃಷ್ಣೆಗಳಂ ಪರೀಷಹ-।
ಕ್ಕೊಡನಿದಿರಾಗಿ ಗೆಲ್ಲದೆ ಸುಗುಪ್ತಿಗಳಂ ಪುಗದಾತ್ಮನಂ ಮಲಂ॥
ಬಿಡೆ ತನುವಿಂದೆ ಬೇರ್ಪಡಿಸಿ ನೋಡದೆ ಸುಮ್ಮನೆ ಕರ್ಮಶತ್ರುವೇ-।
ಬಿಡು ಬಿಡು ಪೋಗೆನಲ್ನುಡಿಗೆ ಪೋದಪುದೇ ಅಪರಾಜಿತೇಶ್ವರಾ॥ ॥೨೦॥

ಕ್ರೋಧಾದಿ ಕಷಾಯಗಳನ್ನು ಬಿಡದೆ, ಇಂದ್ರಿಯಗಳ ಆಶೆಗಳನ್ನು ಸುಡದೆ, ನಾನಾ ವಿಧವಾದ ಪರೀಷಹಗಳನ್ನು ಎದುರಿಸಿ ಗೆಲ್ಲದೆ, ತ್ರಿಗುಪ್ತಿಗಳನ್ನು ಪರಿಪಾಲಿಸದೆ, ಕಶ್ಮಲಭರಿತ ದೇಹದಿಂದ ನಿಷ್ಕಲ್ಮಷ ಆತ್ಮನನ್ನು ಪ್ರತ್ಯೇಕಿಸಿ ನೋಡದೆ, ಸುಮ್ಮನೇ, ಹೇ ಕರ್ಮಶತ್ರುವೇ! ಬಿಡುಬಿಡು, ದೂರ ಸರಿ; ಎಂದರೆ ನಮ್ಮಿಂದ ಅಗಲಿ ಹೋಗುವುದೇ?

ಪುರುಪರಮೇಶಾದಿಯೆನೆ ತೀರ್ಥಕರರ್ಮೊದಲಾಗಿ ಕಾನನಾಂ-।
ತರದೊಳಗದ್ರಿಯೊಳ್ ಚಳಿಯೊಳಾತಪದೊಳ್ಮಳೆಯೊಳ್ ಕ್ಷುಧಾತೃಷಾ-॥
ಭರಮನಡರ್ತು ಗೆಲ್ಲದೆ ಜಿನೇಶ್ವರರಾದರೆ ಕೋಡಿ ಬಾಡಿ ಜೋ-।
ಕರಿಪೆನಗೆತ್ತ ನಿರ್ಜರೆಯ ಮಾತು ಜಡಂಗಪರಾಜಿತೇಶ್ವರಾ॥ ॥೨೧॥

ಪುರುಪರಮೇಶರಾದಿಯಾಗಿ ತೀರ್ಥಂಕರರು ಮೊದಲಾದವರು ಅರಣ್ಯದಲ್ಲಿ, ಪರ್ವತದಲ್ಲಿ, ಚಳಿಯಲ್ಲಿ, ಬಿಸಿಲಿನಲ್ಲಿ, ಮಳೆಯಲ್ಲಿ ಹಸಿವನ್ನು ತಡೆದು ಬಾಯಾರಿಕೆಯನ್ನು ಸಹಿಸಿ ತಪಸ್ಸು ಮಾಡಿ ಜಯಿಸಿ ಜಿನೇಶ್ವರರಾದರು. ಹಾಗಿಲ್ಲದೆ, ಕಷ್ಟಗಳಿಗೆ ಕುಗ್ಗಿಬಿಟ್ಟ, ಕಂದಿ, ಮಂಕಾದ ಜಡಮತಿಯೂ ಆದ ನನಗೆ ಕರ್ಮನಿರ್ಜರೆ ಆಗಲು ಸಾಧ್ಯವೇ?

ಓದಿದ ತತ್ತ್ವಮಿಲ್ಲ ಪರಿದಿಟ್ಟ ಪರಿಗ್ರಹಮಿಲ್ಲ ತಗ್ಗಿ ತಂ–।
ಪಾದ ಕಷಾಯಮಿಲ್ಲ ನೆರೆ ಗೆಲ್ದ ಪರೀಷಹಮಿಲ್ಲ ಸದ್ಗುಣಾ–॥
ಮೋದತೆಯಿಲ್ಲ ಮಾಡಿದುರುಧರ್ಮವಿಕಾಸತೆಯಿಲ್ಲ ನಿಮ್ಮೊಳ–।
ತ್ಯಾದರಭಕ್ತಿಯಿಲ್ಲ ಸುಖಿಯಾಗುವೆನೆಂತಪರಾಜಿತೇಶ್ವರಾ॥ ॥೨೨॥

ಶಾಸ್ತ್ರತತ್ತ್ವಗಳನ್ನು ಅಧ್ಯಯನಮಾಡಿಲ್ಲ; ಪರಿಗ್ರಹಗಳನ್ನು ತ್ಯಜಿಸಿಲ್ಲ; ಕ್ರೋಧಾದಿ ಕಷಾಯವನ್ನು ಕಳೆದು ತಗ್ಗಿ ತಂಪಾಗಿಲ್ಲ; ಕ್ಷುಧಾದಿ ಬಾಧೆಗಳನ್ನು ಜಯಿಸಿಲ್ಲ; ಸದ್ಗುಣಗಳಲ್ಲಿ ಸಂತೋಷ ಪಟ್ಟಿಲ್ಲ; ಹೇಳಿಕೊಳ್ಳುವಂಥ ಅಧಿಕ ಧರ್ಮಪ್ರಭಾವನೆ ಮಾಡಿಲ್ಲ; ನಿಮ್ಮಲ್ಲಿ ಶ್ರದ್ಧಾಭಕ್ತಿಗಳಿಲ್ಲ; ಇಂಥವನಾದ ನಾನು ಸುಖಿಯಾಗಲು ಹೇಗೆ ಸಾಧ್ಯ?

ಬೋಧಿಪೆನೆಂಬೆನೆಲ್ಲರುಮನಾಗಮಪದ್ಧತಿ ಬಾರದಾಯ್ತು ಬ–।
ಲ್ಬಾಧೆಯನಾಂತು ಸೈರಿಸುತುಮಾತ್ಮನೊಳಿರ್ದ ಮಲೀಮಸಂಗಳಂ॥
ಶೋಧಿಪೆನೆಂಬೆನಳ್ಕೆರ್ದೆತನಂ ಬಿಡದಾಯ್ತು ನಿಜಾತ್ಮದೃಷ್ಟಿಯಂ।
ಸಾಧಿಪೆನೆಂಬೆನೆಂದೊಡೆ ಮನಂ ಚಲಮಾಯ್ತಪರಾಜಿತೇಶ್ವರಾ॥ ॥೨೩॥

ಎಲ್ಲರಿಗೂ ಧರ್ಮಬೋಧೆ ಮಾಡುತ್ತೇನೆಂದು ಜಂಭಕೊಚ್ಚಿಕೊಳ್ಳುವೆನು; ಆದರೆ ಶಾಸ್ತ್ರಾಭ್ಯಾಸದ ತತ್ತ್ವವಿಚಾರ ಪದ್ಧತಿಯೇ ನನಗೆ ತಿಳಿಯದಾಗಿದೆ! ಕಠಿಣಬಾಧೆಗಳನ್ನು ಹೊಂದಿ, ಆತ್ಮದಲ್ಲಿರುವ ಮಲವನ್ನೆಲ್ಲಾ ನಿರ್ಮೂಲಗೊಳಿಸುವೆನೆಂದು ಸಾರುತ್ತೇನೆ, ಆದರೆ ಅಂಜುಬುರುಕತನವೇ ನನ್ನನ್ನು ಬಿಟ್ಟಿಲ್ಲ! ಇದು ನನ್ನಾತ್ಮದರ್ಶನವನ್ನು ಸಾಧಿಸುತ್ತೇನೆ ಎಂದು ಹೇಳುತ್ತೇನೆ; ಆದರೆ ನನಗೆ ಮನವೇ ಸ್ಥಿರವಿಲ್ಲವಾಗಿದೆ!

ಭೂರಿಮತಂಗಳಂ ತಿಳಿವುದುಂ ಪಲರಂ ಮತಿದೋರಿ ಧರ್ಮದೊಳ್।
ಸೇರಿಪುದಂ ಮಹೋಗ್ರತಪದೊಳ್ಪಟುವಪ್ಪುದುಮಾತ್ಮನಂ ಮನೋ–॥
ಗಾರದೊಳೀಕ್ಷಿಸುತ್ತೆ ಭವಬಂಧಮನಿಕ್ಕುವ ಬುದ್ಧಿ ಸುಮ್ಮನೇ।
ಬಾರದದರ್ಕೆ ನಿಮ್ಮ ಕರುಣೋನ್ನತಿ ಬೇಕಪರಾಜಿತೇಶ್ವರಾ॥ ॥೨೪॥

ನಾನಾ ಹಿರಿಯ ಧರ್ಮಗಳ ರಹಸ್ಯವನ್ನು ಅರಿಯಬೇಕು; ಜ್ಞಾನೋಪದೇಶ ಮಾಡಿ ಅನೇಕರನ್ನು ಧರ್ಮಮಾರ್ಗದಲ್ಲಿ ನೆಲೆಗೊಳಿಸಬೇಕು; ಉಗ್ರತಪವನ್ನು ಆಚರಿಸಬೇಕು; ಪಟುತ್ವವನ್ನು ಗಳಿಸಬೇಕು; ಆತ್ಮನನ್ನೇ ಆತ್ಮೀಯವಾಗಿ ಕಂಡು ಈ ಬಡಬಂಧನವನ್ನು ಕಿತ್ತೊಗೆಯಬೇಕು; ಆದರೆ ಇದಕ್ಕೆಲ್ಲಾ ಸುಮ್ಮನೆ ಬುದ್ಧಿ ಬರುವುದಿಲ್ಲ. ಅದಕ್ಕೆ ನಿನ್ನ ಕರುಣಾಕಟಾಕ್ಷ ಇರಬೇಕು.

ಕುಡುವ ಸಮರ್ಥರಾರಖಿಳಲೋಕಕೆ ನೀಂ ಪೊರಗಾಗಿ ಮಾನವಂ।
ಪಡೆವ ಪದಂಗಳಾವುವು ತಪಂ ಶ್ರುತಮುಂ ಪೊರಗಾಗಿ ಬಲ್ಲವಂ॥
ಪಿಡಿವ ಸುವಸ್ತುವಾವುದು ಮಣಿತ್ರಿತಯಂ ಪೊರಗಾಗಿ ಸೋಲ್ತು ಕ-।
ಣ್ಣಿಡುವೆಡೆಯಾವುದಾತ್ಮವಿಭವಂ ಪೊರಗಾಗಪರಾಜಿತೇಶ್ವರಾ॥ ॥೨೫॥

ನಿನ್ನ ಬಿಟ್ಟರೆ ಸಮಸ್ತಲೋಕಕ್ಕೆ ಸುಖನೀಡುವ ಸಮರ್ಥರಾರು? ತಪಸ್ಸನ್ನೂ ಶಾಸ್ತ್ರವನ್ನೂ ತೊರೆದರೆ ಮಾನವನಿಗೆ ಮುಕ್ತಿಸ್ಥಾನ ಪಡೆಯಲು ಬೇರೆ ಮಾರ್ಗವೇನಿದೆ? ಜ್ಞಾನಿ ಸ್ವೀಕರಿಸುವ ಸದ್ವಸ್ತು ಯಾವುದು? ರತ್ನತ್ರಯವನ್ನು ಬಿಟ್ಟರೆ, ಮನಸೋತು ಕಣ್ಣಿಡುವ ಸ್ಥಾನ ಯಾವುದಿದೆ?

ಪುಟವಿಡುವಲ್ಲಿ ಕಿಚ್ಚಿನುರಿಗಂಜಿದೊಡಾ ಕನಕಕ್ಕೆ ಕೂಡಿದಾ।
ಕುಟಿಲತೆ ಪೋಕುಮೇ? ಮಲಕಲಂಕಮನೂದಿ ಕಳಲ್ಚಿ ಕಾಂತಿ ಸಂ-॥
ಪುಟದೊಳಗಾತ್ಮನಂ ನಿಲಿಸಿ ನಿರ್ಮಲನಾಗುವೆನೆಂಬ ಭವ್ಯನು-।
ತ್ಕಟತಪದುಬ್ಬೆಗಳ್ಕಿದೊಡೆ ಸಿದ್ಧಿಪುದೇ? ಅಪರಾಜಿತೇಶ್ವರಾ॥ ॥೨೬॥

ಚಿನ್ನವನ್ನು ಪುಟಕ್ಕಿಡುವಾಗ ಬೆಂಕಿಯ ಉಷ್ಣತೆಗೆ ಹೆದರಿದರೆ ಆ ಬಂಗಾರಕ್ಕೆ ಸೇರಿದ ಕಲ್ಮಶ ಹೋಗದು; ಹಾಗೆಯೇ ಆತ್ಮಕಾಂತಿಯ ಪುಟಕ್ಕೆ ಹಾಕಿ ಕರ್ಮವೆಂಬ ಕಶ್ಮಲವನ್ನು ಕಳೆದುಕೊಂಡು, ನಿರ್ಮಲಾತ್ಮನಾಗುತ್ತೇನೆಂದು ಎಂದು ನಿರ್ಧರಿಸಿದ ಭವ್ಯನು ಉತ್ಕಟವಾದ ತಪಸ್ಸಿನ ಕೋಟಲೆಗೆ ಹೆದರಿದರೆ ಸಿದ್ಧಿಯಾಗದು.

ರಾಗಕೆ ರೋಷಕಾಗಿ ಲಲನಾದಿವಿಯೋಗದೊಳುಗ್ರಯುದ್ಧದೊಳ್।
ನೀಗಿದೆನಂಗಕೋಟಿಗಳನಂತದರಿಂ ಭವರೋಗಿಯಾದೆನಾ॥
ರೋಗದ ಮೂಲಮಂ ಸುಡುವ ಘೋರತಪಂದಳೆದೊಂದು ಕಾಯಮಂ।
ತ್ಯಾಗಿಸಲಂಜುತಿರ್ದಪೆನಲಾ ಧೃತಿದೋರಪರಾಜಿತೇಶ್ವರಾ॥ ॥೨೭॥

ಲಲನಾವಿಯೋಗದಲ್ಲಿ ಅನುರಾಗಕ್ಕಾಗಿ, ಘೋರಯುದ್ಧದಲ್ಲಿ ಕ್ರೋಧಕ್ಕಾಗಿ, ಅನೇಕ ಜನ್ಮಗಳನ್ನು ಪಡೆದು ಭವರೋಗಿಯಾದೆನು. ಆ ಭವರೋಗದ ಮೂಲವನ್ನೇ ನಾಶಮಾಡುವ ಘೋರ ತಪಸ್ಸನ್ನು ಮಾಡಿ ಒಂದೇಒಂದು ಜನ್ಮವನ್ನು ಕಳೆಯಲು ಭಯಪಡುತ್ತಿರುವೆ; ನನಗೆ ಧೈರ್ಯನೀಡು.

ಪೋಗದೆ ಪೋದಪೋದ ಭವಕೋಟಿಗಳೊಳ್ಳಿಸಂದು ಕೊಂದು ತಾಂ।
ಕೂಗುವ ಮೋಹರಾಕ್ಷಸನನುಗ್ರ ತಪೋಭರಧೀರನಾಗಿ ನಾಂ॥
ತಾಗುವೆನೆಂದು ತಳ್ತಿರಿದು ಗೆಲ್ವೆನದೆಂದು ಜಗಕ್ಕೆ ಮಿತ್ರ ನಾ–।
ನಾಗುವೆನೆಂದು ನಿನ್ನೆಡೆಯನೆಯ್ದುವೆನೆಂದಪರಾಜಿತೇಶ್ವರಾ॥ ॥೨೮॥

ಹಿಂದೆ ಕಳೆದುಹೋದ ಅನೇಕ ಜನ್ಮಗಳಲ್ಲಿ ಮುಗಿಯದೆ ನನ್ನ ಬೆನ್ನಟ್ಟಿರುವ ನನ್ನನ್ನು ಕೊಂದು ಕೂಗುತ್ತಿರುವ ಮೋಹರಾಕ್ಷಸನನ್ನು ಕಠಿಣತಪಸ್ಸಿನಿಂದ ಧೈರ್ಯವಾಗಿ ದೂರ ಮಾಡಲು ಯಾವಾಗ ಹೋರಾಡುತ್ತೇನೆ? ಆತನನ್ನು ಅಳ್ಳಿರಿದು ಜಯಿಸುವುದೆಂದು? ಜಗಮಿತ್ರನಾಗುವುದೆಂದು? ಮುಕ್ತಿಸ್ಥಾನ ಗಳಿಸುವುದೆಂದು? ದಯಮಾಡಿ ತಿಳಿಸು.

ಹೇವರಮಂ ಕ್ಷಣಾಂತರಕೆ ತೋರ್ಪ ಸುಖಕ್ಕೊಲವಿಂದೊ ನಾಳೆಯೋ।
ಸಾವ ಜನಂಗಳೊಳ್ಮಮತೆ ಮತ್ಸರವೀಗಳೋ ಬೈಗಿನಾಗಳೋ॥
ಬೇವ ಶರೀರದೊಳ್ಬರ್ದುಕುವಾಸೆ ವಿರಕ್ತಿಯೊಳಾತ್ಮತತ್ತ್ವಮಂ।
ಭಾವಿಸಿ ಮುಕ್ತನಾಗಲರಿದಾಯ್ತಕಟಾ! ಅಪರಾಜಿತೇಶ್ವರಾ॥ ॥೨೯॥

ಮರುಕ್ಷಣಕ್ಕೆ ಜುಗುಪ್ಸೆ ತೋರುವ ಸುಖದಲ್ಲಿ ನನಗೆ ಪ್ರೀತಿ ಇದೆ; ಇಂದೋ ನಾಳೆಯೋ ಸಾಯುವ ಜನಗಳಲ್ಲಿ ಮಮತೆ ಇಲ್ಲದೇ ಮತ್ಸರವು; ಈಗಲೋ ಸಂಜೆಗೋ ಬೆಂದು ಬೂದಿಯಾಗುವ ದೇಹವನ್ನು ನಂಬಿ ಬದುಕುವ ಆಸೆಯನ್ನು ಹೊಂದಿದ್ದೇನೆ; ಹೀಗಾದುದರ ಫಲವಾಗಿ, ಇವುಗಳಿಂದ ವೈರಾಗ್ಯಭಾವನೆ ತಳೆದು ಆತ್ಮತತ್ವ ತಿಳಿದು, ಮುಕ್ತಿ ಹೊಂದಲು ಸಾಧ್ಯವಾಗಲಿಲ್ಲ. ಅಯ್ಯೋ!

ರೋಗಿಗಪಥ್ಯಮೇ ರುಚಿಯೆನಿಪ್ಪುದು ವೈದ್ಯಮೆ ಕೈಪೆಯಾದೊಡಾ।
ರೋಗವಿನಾಶಕಾವುದು ಹಿತಂ ಮನುಜಂಗದರಂತೆ ಭೋಗಮೇ॥
ರಾಜಿಸುತಿರ್ಕುಮಾದೊಡಮದಂ ಕಡೆಗೊತ್ತಿ ತಪೋವ್ರತಾಗಮೋ–।
ದ್ಯೋಗದೊಳಾಡದಿರ್ದೊಡವನೇಂ ಕಿಡನೇ? ಅಪರಾಜಿತೇಶ್ವರಾ॥ ॥೩೦॥

ರೋಗಿಗೆ ಅಪಥ್ಯವಸ್ತುವೆ ರುಚಿಕರವೆನಿಸುತ್ತದೆ; ಔಷಧವೇ ಕಹಿಯೆನಿಸುತ್ತದೆ; ಆದರೆ ಆ ರೋಗದ ನಾಶಕ್ಕೆ ಯಾವುದು ಹಿತಕರ? ಔಷಧವಲ್ಲವೇ? ಅದರಂತೆಯೇ ಮನುಜನಿಗೆ ಭೋಗವೇ ಹಿತಕರವಾಗಿ ಕಾಣುತ್ತದೆ; ಆದರೆ ಈ ಭೋಗವನ್ನು ಬದಿಗೊತ್ತಿ ತಪಸ್ಸು, ವ್ರತ, ಶಾಸ್ತ್ರಜ್ಞಾನಗಳಲ್ಲಿ ನಿರತನಾಗದಿದ್ದರೇ ಅವನು ಕೆಡುವುದು ಖಂಡಿತ.

ನಾಗನರಾಮರೇಂದ್ರರ ಸುಖಂ ಸಿರಿಯುಂ ನಿಜದಿಂದೆ ಭಾವಿಸಲ್।
ಜೋಗಿ ಮಹೇಂದ್ರಜಾಲದ ಕುಮಂತ್ರದೆ ತೋರಿದ ಮಾಮರಂಗಳೊಳ್॥
ತೂಗುವ ಪಣ್ಗಳಂ ಸವಿದೆನೆಂಬನ ಸಂಭ್ರಮದಂತೆ ಕರ್ಮಸಂ–।
ಯೋಗದಿನಾಯ್ತು ಪೋಯ್ತೆನಿಸುಗುಂ ಪಿರಿದೇನಪರಾಜಿತೇಶ್ವರಾ॥ ॥೩೧॥

ನಿಜವಾಗಿ ವಿಚಾರ ಮಾಡಿದರೆ, ದೇವೇಂದ್ರ, ನಾಗೇಂದ್ರ, ನರೇಂದ್ರ ಸುಖಸಂಪತ್ತುಗಳೂ ಶಾಶ್ವತವಲ್ಲ; ಅವೂ ಸಹ ಐಂದ್ರಜಾಲಿಕನು ಮಹೇಂದ್ರ ಜಾಲದ ಮಾಟಮಂತ್ರಗಳಿಂದ ಮಾವಿನ ಮರಗಳಲ್ಲಿ ತೂಗಾಡುವ ಮಾವಿನ ಹಣ್ಣುಗಳನ್ನು ತೋರಿಸಿದಾಗ, ಆ ಹಣ್ಣುಗಳನ್ನು ತಿಂದೆನು ಎಂದು ಹೇಳುವವನ ಭ್ರಮೆಯಂತೆ, ಕರ್ಮಸಂಯೋಗದಿಂದ ಸುಖಸಂಪತ್ತುಗಳು ಬಂದಂತೆ–ಹೋದಂತೆ ಎನ್ನಿಸುತ್ತದೆ. ಅದಕ್ಕಿಂತ ಹೆಚ್ಚಿನ ಅನುಭವ ಆಗುವುದಿಲ್ಲ.

ಮುಕ್ತಿಯೊಳಲ್ಲದಿಲ್ಲ ಸುಖವಂತದು ಕರ್ಮವಿನಾಶವಿಲ್ಲದೆ।
ವ್ಯಕ್ತಿಗೆ ಬಾರದಾ ದುರಿತನಾಶಕೆ ದೀಕ್ಷೆಯೆ ಬೇಕು ಮೋಹದಾ॥
ಶಕ್ತಿಯೊಳಿರ್ದವಂಗೆ ರುಚಿದೋರದು ದೀಕ್ಷೆಯದರ್ಕೆ ನಿಮ್ಮ ಸ–।
ದ್ಭಕ್ತಿಯೆ ಬೀಜಮೊಯ್ಯನದನೀವುದು ಮುಂದಪರಾಜಿತೇಶ್ವರಾ॥ ॥೩೨॥

ಸ್ಥಿರಸುಖವು ಮೋಕ್ಷದ ಹೊರತು ಬೇರೆಯದರಲ್ಲಿ ಇಲ್ಲ; ಆ ಸುಖವು ವ್ಯಕ್ತಿಗೆ ಕರ್ಮನಾಶವಾಗದ ಹೊರತು ಅನುಭವಕ್ಕೆ ಬರುವುದಿಲ್ಲ; ಉತ್ತಮ ವ್ರತದೀಕ್ಷೆಗಳಲ್ಲಿ ಪ್ರೀತಿಯುಂಟಾಗಬೇಕು; ಮೋಹಪಾಶಕ್ಕೆ ಒಳಗಾದವನಿಗೆ ದೀಕ್ಷೆಯಲ್ಲಿ ಆಸಕ್ತಿ ಮೂಡಲಾರದು; ಆ ದೀಕ್ಷೆಯಲ್ಲಿ ಶ್ರದ್ಧೆ ಹುಟ್ಟಬೇಕಾದರೆ ನಿಮ್ಮ ಸದ್ಭಕ್ತಿಯೇ ಬೀಜಪ್ರಾಯವಾಗಿದೆ. ಅದಕ್ಕಾಗಿ ಭಕ್ತಿಯನ್ನು ಕೂಡಲೇ ಕರುಣಿಸು.

ಶಕ್ತಿಗೆ ತಕ್ಕ ದಾನ ಗುರುಪೂಜನ ಸುವ್ರತ ಪರ್ವಕಾಲ ನಿ–।
ರ್ಭುಕ್ತಿಗಳಂ ನೆಗಳ್ಚುತೆ ಜಿನಾಗಮಗೋಷ್ಠಿಯಲ್ಲಿ ಧರ್ಮಸಂ–॥
ಯುಕ್ತರ ಮೇಳದೊಳ್ ಕಳೆಯುತುಂ ದಿನಮಂ ನಡೆವಂಗೆ ಮೋಹದಾ–।
ಶಕ್ತಿ ಸಡಿಲ್ದು ಪೋಪುದಿದು ಭಕ್ತಿಯಲಾ ಅಪರಾಜಿತೇಶ್ವರಾ॥ ॥೩೩॥

ಭಕ್ತಿಯ ಲಕ್ಷಣ ಇದು:– ಯಥಾಶಕ್ತಿ ದಾನ ಮಾಡಬೇಕು; ಗುರು ಪೂಜೆ ಮಾಡಬೇಕು; ಸುವ್ರತಗಳನ್ನಾಚರಿಸಬೇಕು; ಪರ್ವಕಾಲಗಳಲ್ಲಿ ಉಪವಾಸ ಮಾಡಬೇಕು; ಜಿನಾಗಮಗೋಷ್ಠಿಗಳಲ್ಲಿ ಧರ್ಮಾತ್ಮರ ಸಹವಾಸದಲ್ಲಿ ಕಾಲ ಕಳೆಯಬೇಕು; ಹೀಗೆ ನಡೆದುಕೊಳ್ಳುವವನಿಗೆ ಮೋಹದ ಆಸಕ್ತಿ ಕುಗ್ಗಿ ಹೋಗುವುದು.

ಮಾಡುವುದರ್ಕೆ ಶಕ್ತಿ ತನಗೊಚ್ಚತಮಿಲ್ಲದೊಡೊಲ್ದು ಧರ್ಮಮಂ।
ಮಾಡುವರಲ್ಲಿ ನೋಡಿ ಪರಿಣಾಮವನೆಯ್ದುವುದೋರ್ಮೆ ನೋಳ್ಪದುಂ॥
ಕೂಡದೊಡಂತೆ ಕೇಳ್ದು ಸುಖಿಯಪ್ಪುದು ನಿಮ್ಮನೆ ನಂಬಿ ಧರ್ಮಮಂ।
ಜೋಡಿಸಿಕೊಂಬುದರ್ಕೆ ಬಿರಿಸುಂಟೆ ಜನಕ್ಕಪರಾಜಿತೇಶ್ವರಾ॥ ॥೩೪॥

ಧರ್ಮಾಚರಣೆಗೆ ತಕ್ಕ ಅವಕಾಶ ಸಾಮರ್ಥ್ಯಗಳಿಲ್ಲದಿದ್ದರೆ, ಅನ್ಯಸ್ವಧರ್ಮೀಯರು ಧರ್ಮವನ್ನು ಆಚರಿಸುವಲ್ಲಿ ಆಸಕ್ತಿ ತಳೆದು ಸಂತೋಷ ಹೊಂದಬೇಕು; ಒಂದು ವೇಳೆ ಕಂಡು ಆನಂದಿಸಲು ಸಾಧ್ಯವಾಗದಿದ್ದರೆ, ಕೇಳಿ ಸುಖಿಯಾಗಬೇಕು; ಹೀಗೆ ನಿಮ್ಮನ್ನೆ ನಂಬಿ, ಯಾವುದೇ ರೀತಿಯಲ್ಲಾಗಲಿ, ಧರ್ಮ ಸಂಗ್ರಹಮಾಡುವವರಿಗೆ ಏನೂ ಕಷ್ಟವುಂಟಾಗದು.

ಹವಣಿಸಿಕೊಂಬುದೊಯ್ಯನೆ ಪರಿಗ್ರಹಮಂ ಗತಿನಾಲ್ಕರಂದಮಂ।
ಶಿವಪದದಂದಮಂ ತಿಳಿಯುತಿರ್ಪುದು ಕಾಯದ ಕಷ್ಟಮಂ ನಿಜಾ-॥
ತ್ಮವಿಪುಲಶುದ್ಧಿಯಂ ನೆನೆಯುತಿರ್ಪುದು ಕೂಡೆ ವಿರಕ್ತಿ ತಾನೆ ಸಂ-।
ಭವಿಪುದು ದೇಹಿಗೆಂದೊರೆವುದೋಜೆಯಲಾ! ಅಪರಾಜಿತೇಶ್ವರಾ॥ ॥೩೫॥

ವ್ಯಕ್ತಿಯು ಮೆಲ್ಲಮೆಲ್ಲನೆ ಪರಿಗ್ರಹಗಳನ್ನು ಪರಿಮಿತಿಗೊಳಿಸಬೇಕು; ಚತುರ್ಗತಿಗಳ ರೀತಿನೀತಿಗಳನ್ನೂ ಮೋಕ್ಷ ಪದವಿಯ ಹಿರಿಮೆಯನ್ನೂ ತಿಳಿಯುತ್ತಿರಬೇಕು; ಶರೀರದ ದುಃಖವನ್ನೂ ತನ್ನಾತ್ಮನ ಪರಿಶುದ್ಧತೆಯನ್ನೂ ನೆನೆಯುತ್ತಿರಬೇಕು; ಹೀಗೆ ಮಾಡಿದ ಕೂಡಲೇ ವ್ಯಕ್ತಿಗೆ ತಾನಾಗಿಯೇ ವೈರಾಗ್ಯ ಮೂಡುವುದು; ಇದೇ ಸನ್ಮಾರ್ಗ.

ಮಿಕ್ಕ ಪರಿಗ್ರಹಗ್ರಹಿತನನ್ಯರಿನಾದುಪದೇಶಲೇಶಮಂ।
ಲೆಕ್ಕಿಪನೇ ವಿರೋಧಿಗಳ ಬಲ್ಲನೆ ಮೆಲ್ಲೆರ್ದೆಯುಂಟೆ ಮತ್ತವಂ॥
ನಕ್ಕುದು ನಕ್ಕುದೇ ಮುನಿದುದುಂ ಮುನಿಸೇ ಅವನಾಟವೆಲ್ಲವುಂ।
ಮಕ್ಕಳ ಮೇಳದಾಟದವೊಲಿರ್ಪುದಲಾ ಅಪರಾಜಿತೇಶ್ವರಾ॥ ॥೩೬॥

ಅಧಿಕವಾದ ಪರಿಗ್ರಹಗಳನ್ನು ಸಂಗ್ರಹಿಸಿದವನು; ಅನ್ಯರ ಉಪದೇಶವನ್ನು ಸ್ವಲ್ಪವಾದರೂ ಲೆಕ್ಕಿಸನು; ಶತ್ರುಗಳು ಯಾರೆಂಬುದನ್ನು ತಿಳಿಯದವನು, ಉದಾರ ಹೃದಯಿಯಾಗಲಾರನು; ಅಂಥವನು ಪಟ್ಟ ಸಂತೋಷ ಸಂತೋಷವಲ್ಲ; ಅವನ ದ್ವೇಷ ದ್ವೇಷವಲ್ಲ; ಅವನಾಟವೆಲ್ಲ ಮಕ್ಕಳ ಮೇಳದಾಟದಂತೆ ಇರುತ್ತದೆ; ಅಂಥವನ ವರ್ತನೆ ಅರ್ಥಹೀನವೂ ಅಜ್ಞಾನಪೂರಿತವೂ ಆಗಿರುತದೆ.

ಗ್ರಹವೆಡೆಗೊಂಡವಂಗೆ ಮರವೊರ್ಮೆ ವಿವೇಕವದೊರ್ಮೆ ಕೂಡೆ ಸಂ-।
ಗ್ರಹಿಸುತಮಿರ್ಕುಮಲ್ಲದೆ ಯಥಾಸ್ಥಿತಿಯುಂಟೆ ನಿರಂತರಂ ಪರಿ-।
ಗ್ರಹದೊಳಗಿರ್ದವಂಗೆ ನುಡಿಯುಂ ನಡೆಯುಂ ಕ್ಷಣಿಕಂಗಳಲ್ಲದೇ॥
ಸಹಜಚರಿತ್ರದೊಳ್ನಿರುಗೆಯೆತ್ತಣಮಾತಪರಾಜಿತೇಶ್ವರಾ॥ ॥೩೭॥

ಗ್ರಹಚಾರ ಕಾಡಿದವನಿಗೆ ಒಮ್ಮೆ ಮರವೆ, ಇನ್ನೊಮ್ಮೆ ವಿವೇಕ ಉಂಟಾಗಿರುತ್ತದೆಯೆ ಹೊರತು ಸದಾ ಸಹಜಸ್ಥಿತಿ ಇರುವುದಿಲ್ಲ. ಹಾಗೆಯೇ ನಿರಂತರ ಪರಿಗ್ರಹದಲ್ಲಿ ಮುಳುಗಿದವನಿಗೆ, ನಡೆಯೂ ನುಡಿಯೂ ಚಂಚಲವಾಗಿರುತ್ತದೆ; ಇನ್ನು ಅವನಿಗೆ, ಸಹಜಚರಿತವೂ ಸ್ಥಿರತ್ವವೂ ಎಲ್ಲಿಯ ಮಾತು?

ಸೊರ್ಕಿ ಶರೀರ ನಾರಿ ಧನವೆನ್ನವಿವೆಂದವರಲ್ಲಿ ಕಣ್ಮನಂ।
ಸಿರ್ಕಿ ವಿವೇಕಿಗಳ್ನುಡಿದ ಧರ್ಮಮನೊಲ್ಲದೆ ಕೂಳ ಕೊರ್ಬಿನೊಳ್॥
ಕರ್ಕಶವೃತ್ತಿಯೊಳ್ನಡೆವ ಕಾಮುಕರಂತಕನೊಯ್ವ ಕಾಲದೊಳ್।
ಮರ್ಕಟನಂತೆ ಪಲ್ಗಿರಿವರೇತರಬಾಳಪರಾಜಿತೇಶ್ವರಾ॥ ॥೩೮॥

'ಈ ಶರೀರ, ಸ್ತ್ರೀ, ಸಿರಿಗಳು ನನ್ನವು' ಎಂದು ಸೊಕ್ಕಿ ಶರೀರದಲ್ಲೇ ದೃಷ್ಟಿನೆಟ್ಟು, ಮನಸ್ಸನ್ನು ಸ್ಥಿರಗೊಳಿಸಿ ಜ್ಞಾನಿಗಳು ಬೋಧಿಸಿದ ಧರ್ಮವನ್ನು ಪರಿಗ್ರಹಿಸಲಾರರು. ಅಲ್ಲದೆ ಕೂಳಕೊಬ್ಬಿನಲ್ಲಿ(ಅನ್ನದ ಮದದಲ್ಲಿ) ಬಾಳಿ ಕ್ರೂರಾಚರಣೆಯಲ್ಲಿ ನಿರತರಾದ ಕಾಮುಕರನ್ನು ಯಮ ಹೊತ್ತುಕೊಂಡು ಹೋಗುತ್ತಾನೆ; ಆಗ ಕಪಿಯಂತೆ ಹಲ್ಗಿರಿಯುವರು; ಇದೇತರ ಬಾಳು? ಇಂಥವನ ಬಾಳು, ಬಾಳೇ?

ರಚ್ಚೆಯ ಸಂಭ್ರಮಕ್ಕೆ ಕುಣಿದಿಚ್ಚೆಯ ಕೂಳುಣುತಂ ಕ್ಷಣಾಂತದೊಳ್।
ಕಿಚ್ಚಿನ ಕೊಂಡಮಂ ಪುಗುವ ರಂಡೆಯವೊಲ್ವಿಷಯಂಗಳಿಚ್ಚೆಯಂ॥
ಮೆಚ್ಚಿ ಮನಕ್ಕೆ ಬಂದ ತೆರದೊಳ್ನಡೆದೊಲ್ಲದೆ ಸುವ್ರತಂಗಳಂ।
ಹುಚ್ಚರೊ ದುರ್ಗತಿಸ್ಥಳಕೆ ಬೀಳ್ವರದೇಕಪರಾಜಿತೇಶ್ವರಾ॥ ॥೩೯॥

ಬಾಹ್ಯಾಡಂಬರ ವಿಲಾಸಕ್ಕೆ ನಲಿದು, ಇಷ್ಟಬಂದ ಆಹಾರವನ್ನು ಉಂಡು ಮರುಕ್ಷಣದಲ್ಲೇ ಸತಿಹೋಗುವ ವಿಧವೆಯಂತೆ, ಇಂದ್ರಿಯಗಳ ವಿಷಯಾಭಿಲಾಷೆಯನ್ನು ಮೆಚ್ಚಿ ಸ್ವೇಚ್ಛಾಪ್ರವರ್ತಿಗಳಾಗಿ ಸದ್ವ್ರತಾಚರಣೆ ಮಾಡದೆ ನರಕದ ದುರ್ಗತಿಗೆ ಬೀಳುತ್ತಾರೆ. ಎಂತಹ ಹುಚ್ಚರಿವರು!

ಪಿಂದಣ ಜನ್ಮಜನ್ಮದೊಳಗೆಲ್ಲಿದನೀ ಭವದತ್ತ ತನ್ನನಾರ್।
ತಂದರದೆಲ್ಲಿ ಮುಂದೆ ತನಗಿನ್ನೆಡೆ ಪುಟ್ಟಿದ ತಾಣತಾಣದೊಳ್॥
ಕುಂದದುಪಾರ್ಜಿಸಿರ್ದ ಧನಮಂ ತನುವಂ ಬರುತೊಂದನುಂ ಮನಂ।
ತಂದುದೆ ನಿಮ್ಮ ನಚ್ಚಿರದೆ ಚಿಂತಿಪುದೇಕಪರಾಜಿತೇಶ್ವರಾ॥ ॥೪೦॥

ಹಿಂದಿನ ಜನ್ಮಾಂತರಗಳಲ್ಲಿ ತಾನೆಲ್ಲಿದ್ದೆನು? ತನ್ನನ್ನು ಈ ಜನ್ಮದತ್ತ ತಂದವರು ಯಾರು? ಮುಂದಕ್ಕೆ ಇನ್ನೆಲ್ಲಿ ಜಾಗ ಕಾದಿದೆ? ನಮಗೆ ತಿಳಿದಿಲ್ಲ. ಪ್ರತಿಬಾರಿಯೂ ಜನ್ಮವೆತ್ತಿದಲ್ಲೆಲ್ಲ ಅಧಿಕವಾಗಿ ಗಳಿಸಿದ ಸಂಪತ್ತನ್ನೂ ಪ್ರೀತಿಸಿದ ಶರೀರವನ್ನೂ ಇನ್ನೊಂದು ಜನ್ಮಕ್ಕೆ ಬರುವಾಗ ಒಂದನ್ನಾದರೂ ಮನಸ್ಸು ತಂದೀತೇ? ವಿಚಾರ ಮಾಡಿದರೆ, ನಿಮ್ಮನ್ನು ನಂಬದೆ ಈಗ ಈ ಸ್ಥಿತಿ ಬಂದಿದೆ. ಇನ್ನು ಚಿಂತಿಸಿದರೇನು ಬಂತು?

ಇತ್ತೊಡೆ ಬರ್ಪುದೇ ಬಡತನಂ ಕುಡದಿರ್ದೊಡೆ ಲಕ್ಷ್ಮಿ ನಿಲ್ವುದೇ।
ಸತ್ತೊಡೆ ಜೀವನಂತೆ ಲಯವಾದನೆ? ಜೀವಿಸುತಿರ್ದೊಡಿರ್ದನೇ॥
ಎತ್ತಣ ಮಾತಿವೆಲ್ಲ ಬರುತುಂ ಬಯಲಾಗುತಮಿರ್ಪುವೈಸೆ ನಿ–।
ಮ್ಮತ್ತಣ ಭಕ್ತಿಯೊಂದೆ ನಿಜಸಿದ್ಧಿಯಲಾ ಅಪರಾಜಿತೇಶ್ವರಾ॥ ॥೪೧॥

ದಾನ ಮಾಡಿದರೆ ದರಿದ್ರತನ ಬರುವುದೇ? ದಾನ ಮಾಡದಿದ್ದರೆ ಧನ ಉಳಿಯುವುದೇ? ದೇಹದ ಮರಣವೇ ಆತ್ಮಕ್ಕೆ ಕೊನೆಯೇ? ಹಾಗಾದರೆ ಜೀವಿಸುತ್ತಿದ್ದರೆ ಆತ್ಮನು ಶಾಶ್ವತವಾಗಿ ನಿಲ್ಲುವುದಿಲ್ಲ. ಇವೆಲ್ಲ ಎಲ್ಲಿಯ ಮಾತು? ಬಾಳಿನಲ್ಲಿ ಇವೆಲ್ಲ ಹುಟ್ಟಿ ಬರುತ್ತವೆ; ಹಾಗೆಯೇ ನಾಶವಾಗಿ ಹೋಗುತ್ತವೆ. ನಿಮ್ಮಲ್ಲಿಟ್ಟ ಭಗವದ್ಭಕ್ತಿಯೊಂದೇ ಶಾಶ್ವತವಾದ ಸಿದ್ಧಿಯನ್ನು ಉಂಟುಮಾಡುತ್ತದೆ.

ನಿನ್ನ ಪದಾಬ್ಜಭಕ್ತಿ ವಿಷಯಾರ್ಥವಿರಕ್ತಿ ತಪೋಭರಕ್ಕೆ ಸಂ–।
ಪನ್ನತೆವೆತ್ತ ಶಕ್ತಿ ತನುವಂ ಸಲೆ ಭೇದಿಸಿ ತನ್ನ ರೂಪನ–॥
ಚ್ಛಿನ್ನದೆ ಕಾಣ್ಬ ಯುಕ್ತಿ ಗುಣದಲ್ಲನುರಕ್ತಿ ಇವಾಗೆ ಮುಕ್ತಿ ಜೀ–।
ವಂ ನರನಾಗಿವಂ ಪಡೆಯದಿರ್ದೊಡದೇಕಪರಾಜಿತೇಶ್ವರಾ॥ ॥೪೨॥

ನಿನ್ನ ಚರಣಕಮಲಗಳಲ್ಲಿ ಭಕ್ತಿ ಇರಬೇಕು; ಇಂದ್ರಿಯಗಳಿಗೆ ವಿಷಯವಾದ ಭೋಗೋಪಭೋಗ ವಸ್ತುಗಳಲ್ಲಿ ವಿರಕ್ತಿ ಇರಬೇಕು; ತಪಸ್ಸಿನ ಕಾಠಿಣ್ಯವನ್ನು ತಡೆದುಕೊಳ್ಳಲು ಸರಿಯಾದ ಶಕ್ತಿ ಇರಬೇಕು; ಶರೀರವನ್ನು ಜ್ಞಾನದ ಮೂಲಕ ಆತ್ಮನಿಂದ ಬೇರೆ ಮಾಡಿ ಸಂಪೂರ್ಣ ದರ್ಶನ ಮಾಡುವ ಯುಕ್ತಿ ಇರಬೇಕು; ಸದ್ಗುಣಗಳಲ್ಲಿ ಪ್ರೀತಿ ಇರಬೇಕು. ಇವೆಲ್ಲ ಇದ್ದರೆ, ಆ ಜೀವನಿಗೆ ಮುಕ್ತಿ ಖಂಡಿತ. ಇವುಗಳನ್ನು ಮನುಷ್ಯನಾಗಿ ಹುಟ್ಟಿದ ಮೇಲೆ ಪಡೆಯದಿದ್ದರೆ, ಅವನು ಜನಿಸಿ ಫಲವೇನು?

ನಿನ್ನೊಳಗಾದ ಭಕ್ತಿ ಗಡ ನಿರ್ವೃತಿ ಬೇಕು ಗಡಂ ವಿಶುದ್ಧದಿಂ।
ತನ್ನಿರವುಂ ಭವತ್ಪ್ರತಿ ಗಡಾಂತುದು ದೀಕ್ಷೆ ಗಡಂ ಬಳಿಕ್ಕಹೋ!॥
ಸನ್ನಿ ಗಡಂ ಬಿಸಿಲ್ಗಡ ಭಯಂ ಗಡ ಬಾಯ್ಸವಿಯಾಸೆಯುಂ ಗಡಂ।
ನನ್ನ ಮನೋವಿಕಾರತೆಯನಾಡುವೆನೇನಪರಾಜಿತೇಶ್ವರಾ॥ ॥೪೩॥

ನಿನ್ನಲ್ಲಿ ನನಗೆ ಭಕ್ತಿ ಉಂಟಾಗಿದೆಯಲ್ಲವೇ ಆದ್ದರಿಂದ ಮೋಕ್ಷ ನನಗೆ ದೊರೆಯಬೇಕಲ್ಲವೇ? ನನ್ನ ಆತ್ಮವನ್ನು ಪರಿಶುದ್ಧವಾದ ಮನಸ್ಸಿನಿಂದ ನಿನ್ನಲ್ಲಿ ವಿಲೀನಗೊಳಿಸಿದ್ದೇನಲ್ಲವೇ? ನಾನು ದೀಕ್ಷಾವ್ರತಿಯಾಗಿದ್ದೇನಲ್ಲವೆ? ಹೀಗಿದ್ದರೂ ನನಗೆ ಶೀತವಾಗುತ್ತದೆ, ಬಿಸಿಲು ಸುಡುತ್ತದೆ ಎಂದು ಭಯವಾಗುತ್ತದೆ. ಬಾಯಿಗೆ ಸವಿಯುವ ಚಪಲವಾಗುತ್ತದೆ. ನನ್ನ ಮನೋವಿಕಾರಗಳನ್ನು ಏನೆಂದು ಬಣ್ಣಿಸಲಿ?

ನಾಲಗೆಗಾವುದಿಚ್ಚೆ ತವ ನಾಮರಸಾಯನಮೊಂದೆ ನನ್ನ ಚಿ-।
ತ್ತಾಲಯದೊಳ್ಬೆಳರ್ಪ ಮಣಿದೀಪಮದಾವುದು ನಿನ್ನ ರೂಪೆ ಪೊ-॥
ಯ್ಮಾಲೆಯ ಮೈಯ ಭಾರಣೆಯ ಪಿಂಗಿಸುವೌಷಧಿಯಾವುದೆನ್ನ ಚಿ-।
ತ್ಪಾಲಕ ನಿನ್ನ ಮಾರ್ಗದ ತಪಂಗಳಲಾ ಅಪರಾಜಿತೇಶ್ವರಾ॥ ॥೪೪॥

ನಾಲಿಗೆಗೆ ರುಚಿ ಯಾವುದೆಂದರೆ, ನಿನ್ನ ಹೆಸರೆಂಬ ರಸಾಯನವು; ನನ್ನ ಹೃದಯ ಮಂದಿರದಲ್ಲಿ ಬೆಳಗುವ ರತ್ನ ದೀಪಯಾವುದೆಂದರೆ, ನಿನ್ನ ರೂಪ; ಆತ್ಮನನ್ನು ಹಿಂಬಾಲಿಸಿಕೊಂಡು ಬಂದ ಶರೀರದ ಹೊರೆಯನ್ನು ಹಗುರಗೊಳಿಸಿವ ಔಷಧ ಯಾವುದೆಂದರೆ, ನಿನ್ನನ್ನು ಕುರಿತು ಮಾಡುವ ತಪಸ್ಸು, ನನ್ನ ಆತ್ಮರಕ್ಷಕನೇ ಕಾಪಾಡು.

ತೊಗಲ ಪಸುಂಬೆಯೊಪೊಲಸಿನೋವರಿಯೊಳ್ ರುಜೆಯೆಂಬ ಚೇಳ್ಗಳಾ।
ಪಗವಿನೊಳಿರ್ಪವೊಲ್ತನುವಿನೊಳ್ಕವಿದಿರ್ದಪನಾತ್ಮನೆಂಬುದಂ॥
ಬಗೆಯದ ಕಾರಣಂ ಬರ್ದುಕು ರಂಜಿಸಿತಲ್ಲದೆ ತೂಗಿ ನೋಳ್ಪಿನಂ।
ನಗಲೆಡೆಯುಂಟೆ ತುತ್ತಿಡೆ ಮನಂಬಹುದೇ? ಅಪರಾಜಿತೇಶ್ವರಾ॥ ॥೪೫॥

ಆತ್ಮನು ಶರೀರದಲ್ಲಿ ಚರ್ಮದ ಚೀಲದೊಳಗೆ ತುರುಕಿದಂತೆ, ಕಶ್ಮಲದ ಕೋಣೆಯಲ್ಲಿ ಕೂಡಿ ಹಾಕಿದಂತೆ, ರೋಗಗಳೆಂಬ ಚೇಳುಗಳ ಗುಂಡಿಯಲ್ಲಿ ಬಿದ್ದಂತೆ ಆವರಿಸಿದ್ದಾನೆ. ಹೀಗೆ ವಿಚಾರ ಮಾಡದಿರುವುದರಿಂದ ಬದುಕು ಶೋಭಾಯಮಾನವಾಗುತ್ತದೆ – ನಗುಸಂತಸದಿಂದ ಕೂಡಿರುತ್ತದೆ.

ಮಾಸು ಮುಸುಂಕಿ ತಾಯೊಡಲೊಳೆಂತಿರವರ್ಪುದು ಮೂತ್ರಮಾರ್ಗದೊಳ್–।
ಹೇಸದೆ ಬರ್ಪುದೆಂತು ಮೊರದೊಳ್ಮಲಮೂತ್ರದೊಳಾಳುತೇಳುತುಂ॥
ಕೂಸೆನಿಸಿರ್ಪುದೆಂತುಟದನಾಂ ಮರೆದಾಗಳೆ ಠಕ್ಕು ಜವ್ವನಂ।
ಸಾಸದವೆಂದು ನಚ್ಚಿದೆನಲಾ ಮತಿದೋರಪರಾಜಿತೇಶ್ವರಾ॥ ॥೪೬॥

ದೇಹವು ಗರ್ಭಕೋಶದಲ್ಲಿ ಸಿಲುಕಿ ತಾಯ ಹೊಟ್ಟೆಯಲ್ಲಿ ಕಷ್ಟ ಪಡುತ್ತಿತ್ತು; ಹೇಸಿಗೆಯಿಲ್ಲದೆ ಮೂತ್ರಮಾರ್ಗದಲ್ಲೆ ಹೊರಗೆ ಬಂದಿತ್ತು; ಮಗುವೆಂದು ಅನ್ನಿಸಿಕೊಂಡು ಮೊರದಲ್ಲಿ, ಮಲಮೂತ್ರದಲ್ಲಿ ಮುಳುಗೇಳುತ್ತ ಇತ್ತು; ಕೂಸು ಎನ್ನಿಸಿಕೊಂಡಿತ್ತು. ಅದನ್ನೆಲ್ಲಾ ಮರೆತು, ಆಗಲೇ ಠಕ್ಕು ಯೌವನ ಬಂದಾಗ ಅದನ್ನೇ ಸ್ಥಿರವೆಂದು ನಂಬಿದ ಬುದ್ಧಿಹೀನನು ನಾನು; ಇಂಥ ನನಗೆ ಸದ್ಬುದ್ಧಿಯನ್ನು ದಯಪಾಲಿಸು.

ಪಗೆಯ ವಶಕ್ಕೆ ಸಿಲ್ಕಿ ಸೆರೆಯಿರ್ದ ಮಹಾನುಭವಂಗೆ ನಿದ್ರೆ ತಾ–।
ನೊಗೆವುದೊ ಭೋಗದಿಚ್ಛೆಯೆ ವಿಡಾಯವೆ ಮಚ್ಚರವುಂಟೆ ದಿವ್ಯಯೋ–॥
ಗಿಗೆ ರಿಪುಮೋಹಮಂ ಜಯಿಸಿ ಮೆಯ್ಸೆರೆಯಂ ಕಳೆವಂದು ಜೋಕೆಯು–।
ಜ್ಜುಗವದೆ ಚಿಂತೆಯೈಸೆ ಪೆರತೊಂದಿಹುದೇ ಅಪರಾಜಿತೇಶ್ವರಾ॥ ॥೪೭॥

ಶತ್ರುವಿನ ಕೈಯಲ್ಲಿ ಸೆರೆಸಿಕ್ಕಿದ ಮಹಾಶಯನಿಗೆ ನಿದ್ರೆ ಬರುವುದಿಲ್ಲ; ಅಂತೆಯೇ ಶ್ರೇಷ್ಠ ಯೋಗಿಗೆ ಆತ್ಮನ ಪರಮಶತ್ರುವಾದ ಮೋಹವನ್ನು ಗೆದ್ದು ಶರೀರಬಂಧನವನ್ನು ದೂರೀಕರಿಸುವಾಗ ಭೋಗದಿಚ್ಛೆ ಉಂಟಾಗದು. ಆತನು ಜಂಬ ಹೊಡೆಯುವುದಿಲ್ಲ; ಮತ್ಸರ ಪಡುವುದಿಲ್ಲ; ಆತನು ಜೋಕೆಯಿಂದ ಮೋಹಪಾಶವನ್ನು ಕಿತ್ತೊಗೆಯುವ ಪ್ರಯತ್ನದಲ್ಲೂ ಚಿಂತನೆಯಲ್ಲೂ ತೊಡಗಿರುತ್ತಾನೆ; ಮತ್ತೇನೂ ಚಿಂತೆ ಆತನಿಗಿರದು.

ಓದುವ ಪೇಳ್ವ ಪೇಳ್ವ ಪರಿಭಾವಿಪ ಬಲ್ಲನಿತಂ ಪೆರರ್ಗೆ ತಾ–।
ನೋದಿಪ ಮೂರು ಸಂಜೆಗಳನಾರು ಸುಪರ್ವದಿನಂಗಳಂ ಸದಾ॥
ಸಾಧಿಸಿ ತಕ್ಕಸತ್ಕ್ರಿಯೆಗಳಂ ನೆಗಳ್ದಿಂತುಟು ದಂದುಗಂಗಳಿಂ।
ಪೋದೊಡೆ ಕಾಲಮೆಲ್ಲ ಶುಭಕಾಲವಲಾ ಅಪರಾಜಿತೇಶ್ವರಾ॥ ॥೪೮॥

ಶಾಸ್ತ್ರವನ್ನು ತಾನು ಓದುವುದರಲ್ಲಿ ಬೇರೆಯವರಿಗೆ ಹೇಳುವುದರಲ್ಲಿ ಬೇರೆಯವರಿಂದ ಕೇಳುವುದರಲ್ಲಿ, ವಿಷಯವನ್ನು ತನ್ನಲ್ಲಿ ಮಂಥನ ಮಾಡುವುದರಲ್ಲಿ, ಅರ್ಥವಾದಷ್ಟನ್ನು ತಿಳಿಸುವಲ್ಲಿ, ಬೇರೆಯವರಿಗೆ ಓದಿಸುವಲ್ಲಿ ಕಾಲ ಕಳೆಯಬೇಕು. ಮೂರು ಸಂಧ್ಯೆಗಳನ್ನೂ ಆರು ಪರ್ವ ದಿನಗಳನ್ನೂ (ತಿಂಗಳಲ್ಲಿ ಬರುವ ೨ ಪಂಚಮಿ ೨ ಅಷ್ಟಮಿ ೨ ಚತುರ್ದಶಿ ಒಟ್ಟು ೬ ಪರ್ವದಿನಗಳು) ಯಾವಾಗಲೂ ವ್ರತನಿಯಮಗಳಿಂದ ಕಳೆದು ಪಾಲಿಸಬೇಕು. ಈ ಪ್ರಕಾರವಾಗಿ ಕಳೆದಕಾಲವೆಲ್ಲ ಶುಭಕಾಲವೆನಿಸುವುದು.

ನುಡಿವೊಡೆ ದೇವ ನಿಮ್ಮಯ ಮಹಾಸಭೆಯೊಳ್ನುಡಿವಂತಿರೋಜೆಯಿಂ।
ನುಡಿವುದು ಪೋಗುವಲ್ಲಿ ಮುಳುವಟ್ಟೆಯೊಳ್ಸೆಯ್ದುವನಂತಿರೋಜೆಯಿಂ॥
ನಡೆವುದು ಕುಳ್ಳಿತಿರ್ಪೊರಗುವುಣ್ಬೆಡೆಯೊಳ್ಸೆರೆಸಿಲ್ಕಿದಾತನಂ–।
ತೊಡನೆ ನಿಜಾತ್ಮಚಿಂತೆಯೊಳಿಹಂಗಘವೇನಪರಾಜಿತೇಶ್ವರಾ॥ ॥೪೯॥

ಮಾತಿನ ಅರ್ಹತೆಯೆಂದರೆ, ನಿಮ್ಮ ಮಹಾಸಭೆಯಲ್ಲಿ ಮಾತಾಡುವಂತೆ, ದಿವ್ಯಧ್ವನಿಯಂತೆ ಕ್ರಮವಾಗಿ ಮಾತಾಡಬೇಕು; ನಡೆಯುವ ಶಕ್ತಿಯಿದ್ದರೆ ಮುಳ್ಳಿನ ದಾರಿಯಲ್ಲಿ ಎಚ್ಚರದಿಂದ ಹೋಗುವ ಹಾಗೆ, ಈರ್ಯಾ ಸಮಿತಿಯಿಂದ ನಡೆಯಬೇಕು; ಕುಳಿತುಕೊಳ್ಳುವ ಜಾಗದಲ್ಲಿ, ಮಲಗಿಕೊಳ್ಳುವ ವೇಳೆಯಲ್ಲಿ, ಊಟಮಾಡುವ ಸಮಯದಲ್ಲಿ, ಸದಾಕಾಲವೂ ಸೆರೆಸಿಕ್ಕಿದ ಕೈದಿಯಂತೆ, ಆತ್ಮಚಿಂತನೆಯಲ್ಲಿಯೇ ಇರುವವನಿಗೆ ಪಾಪ ಎಂದೂ ಬರಲಾರದು!

ಲೋಕದ ವಾರ್ತೆಯೊಳ್ಬಧಿರನಾತ್ಮಹಿತಂ ಪೊರಗಾದ ಮಾತಿನೊಳ್।
ಮೂಕತೆ ತನ್ನ ದೇಹಪರದೇಹದ ನೋಟದೊಳಂಧಕಂ ಪ್ರಮಾ–॥
ದೈಕತೆ ಕಂಡು ರಾಗಿಸಿದೊಡಂ ಸುಡು ಮಾಂಸವಿಕಾರಮೆಂದು ಮೈ–।
ಯ್ಯೋಕರಿಪಾತನನಂತಕನಂಜಿಸನೇ? ಅಪರಾಜಿತೇಶ್ವರಾ॥ ॥೫೦॥

ಲೌಕಿಕ ವಿಚಾರಗಳಿಗೆ ಕಿವುಡನೂ, ಆತ್ಮಹಿತಕರವಲ್ಲದ ಮಾತಿಗೆ ಮೂಕನೂ ತನ್ನ ಮತ್ತು ಅನ್ಯರ ದೇಹದ ಬಗ್ಗೆ ನೋಟ ಬೀರುವುದರಲ್ಲಿ ಕುರುಡನೂ ಪ್ರಮಾದವಶಾತ್ ಅನ್ಯರನ್ನು ನೋಡಿ ಪ್ರೀತಿಸಿದರೂ – ಕೂಡಲೇ ಎಚ್ಚೆತ್ತುಕೊಂಡು ಮಾಂಸದ ಶರೀರವಿದು, ಸುಡಲಿ – ಎಂದು ತ್ಯಾಜ್ಯಮಾಡಿ ಜುಗುಪ್ಸಿತನಾಗುವನು ಯಮನನ್ನೇ ಹೆದರಿಸಬಲ್ಲ!

ನೋಡಿದೊಡೆಲ್ಲಿಯುಂ ತನುವಿನೊಳ್ಮತಿಸೋಲದೆ ಶುದ್ಧಜೀವನಂ॥
ನೋಡುವ ಮಾತನಾಡಿದೊಡೆ ಶಾಂತಿ ಶುಭಂ ಪವಣಾಗೆ ಪೇಳ್ವ ತಾಂ॥
ಪಾಡಿದೊಡತ್ತಲಿತ್ತ ತೊನೆದಾಡದೆ ನಿನ್ನೊಳೆ ನಟ್ಟ ಚಿತ್ತದಿಂ।
ಪಾಡುವನಾಗಿಯುಂ ಕಡುವಿರಾಗಿಯಲಾ ಅಪರಾಜಿತೇಶ್ವರಾ॥ ॥೫೧॥

ಭಕ್ತನು ಯಾವುದನ್ನು ನೋಡಿದರೂ ದೇಹದಲ್ಲಿ ಮೋಹಗೊಳ್ಳದೆ ಪರಿಶುದ್ಧಾತ್ಮನನ್ನು ನೋಡುತ್ತಾನೆ; ಮಾತನಾಡಿದರೆ ಶಾಂತಿಯನ್ನು ಕೋರುವಂತೆ ಶುಭವಾಗುವಂತೆ ಮಿತಭಾಷಿಯಾಗಿರುತ್ತಾನೆ; ತಾನು ಹಾಡಿದರೆ ಆ ಕಡೆ ಈಕಡೆ ತೂಗಾಡದೆ, ನಿನ್ನಲ್ಲೇ ನೆಟ್ಟ ಮನಸ್ಸಿನಿಂದ ಹಾಡುತ್ತಾನೆ; ಇಂಥ ಭಕ್ತನೇ ವೈರಾಗ್ಯ ಶಿಖಾಮಣಿ!

ಕಣ್ಮಲರಳ್ಕರಿಂದೊಸರೆ ನಿಮ್ಮನೆ ನೋಡುತಮಂತರಂಗದೊಳ್।
ಪೊಣ್ಮೆ ವಿಶೋಧಿ ಭಾವಿಸುತೆ ನಾಲಗೆ ರಾಗಿಸೆ ಪಾಡುತಂಗದೊಳ್॥
ಉಣ್ಮಿರೆ ರೋಮಜಾಲವೆರಗುತ್ತನುಕಂಪನವೆತ್ತ ಕೆಯ್ಗಳಿಂ-।
ದಣ್ಮೆ ತವಾಂಘ್ರಿಗಳ್ಗಲರನರ್ಚಿಪೆನೆಂದಪರಾಜಿತೇಶ್ವರಾ॥ ॥೫೨॥

ಜಿನೇಂದ್ರಾ! ನಿನ್ನ ದರ್ಶನಗೈಯುತ್ತಾ ನಯನಪುಷ್ಪವು ಆನಂದಾಶ್ರುವನ್ನು ಹೊರಹೊಮ್ಮಿಸಲಿ; ಅಂತರಂಗದಲ್ಲಿ ನಿಮ್ಮನ್ನೇ ಚಿಂತಿಸುತ್ತಾ ವಿಶುದ್ಧ ಭಾವನೆ ಅವಿರ್ಭವಿಸಲಿ; ನಾಲಗೆ ನಿಮ್ಮನ್ನೇ ಸ್ತೋತ್ರಮಾಡುತ್ತ ಪ್ರೀತಿ ಉಕ್ಕಲಿ; ನಿಮಗೆ ಸಾಷ್ಟಾಂಗವೆರಗುತ್ತಾ ಭಾವಾವೇಗದಲ್ಲಿ ದೇಹದಲ್ಲಿ ರೋಮಾಂಚನವುಂಟಾಗಲಿ; ಹೀಗಾಗುತ್ತಿರಲು ವಾತ್ಸಲ್ಯ ಭಾವದಿಂದ ಕೈಗಳಿಂದ ನಿನ್ನ ಪಾದಗಳಲ್ಲಿ ಸದಾಭಕ್ತಿಯಿಂದ ಸ್ಪರ್ಶಿಸಿ ಪುಷ್ಪಾರ್ಚನೆ ಗೈಯುವಂತಾಗಲಿ.

ಮಾತಿನ ಮಾಲೆಯೇಕೆ ಜಿನ ನಿನ್ನೆಡೆ ತನ್ನೆಡೆಯಲ್ಲದನ್ಯರೊಳ್।
ಪ್ರೀತಿಯನಾವನೆಯ್ದಿದನವಂ ತಳುವೇನಳಲೆಯ್ದಿದಂ ಮಹಾ-॥
ಭೀತಿಯನೆಯ್ದಿದಂ ಭವಸಮುದ್ರಮನೆಯ್ದಿದನೆಂದೊಡಾತ್ಮ ಸ-।
ದ್ಭೂತಿಗೆ ನೀನೆ ಮಾನ್ಯ ಪೆರರಿಂ ಫಲವೇನಪರಾಜಿತೇಶ್ವರಾ॥ ॥೫೩॥

ಬಹಳ ಮಾತಿನಿಂದ ಪ್ರಯೋಜನವಿಲ್ಲ ನಿನ್ನ ಆಶ್ರಯವೇ ತನ್ನ ನೆಲೆಯೆಂದು ಅರಿಯದೆ, ಯಾವನು ಅನ್ಯರಲ್ಲಿ ಆಸಕ್ತಿ ತಳೆದನೋ ಅವನು ಕೂಡಲೇ ದುಃಖಭರಿತನಾದನು; ಭಯಗ್ರಸ್ತನಾದನು; ಸಂಸಾರಸಾಗರದಲ್ಲಿ ಸಿಲುಕಿದನು; ಆದುದರಿಂದ ಆತ್ಮಸಂಪತ್ತಿಗೆ ನೀನೇ ಮಾನ್ಯನು; ಅನ್ಯರಿಂದ ಏನೂ ಪ್ರಯೋಜನವಿಲ್ಲ.

ಆವನುಮಕ್ಕೆ ನಿಮ್ಮಡಿಗಳಂ ನೆನೆವಾತನೆನನ್ನ ಬಂಧು ಸ-।
ದ್ಭಾವದೆ ಪೂಜಿಪಾತನೆ ಸಖಂ ಶ್ರುತಯೋಗಸಮೃದ್ಧನೆನ್ನ ಸಂ-॥
ಜೀವಕನೆಂಬೆನೇಕಿನಿತು ಪಕ್ಷವಿದೆಂಬೆಯ ನನ್ನ ಮೆಚ್ಚಿನಾ।
ದೇವ ನಚ್ಚಿದಾತನೆನಗನ್ಯನೆ ಪೇಳಪರಾಜಿತೇಶ್ವರಾ॥ ॥೫೪॥

ಯಾರೇ ಆಗಲಿ, ನಿಮ್ಮ ಚರಣಗಳನ್ನು ನೆನೆವಾತನೇ ನನ್ನ ಬಂಧುವು; ನಿಮ್ಮ ಪಾದಗಳನ್ನು ಸದ್ಭಾವನೆಯಿಂದ ಅರ್ಚಿಸುವವನೇ ನನ್ನ ಮಿತ್ರನು; ಶಾಸ್ತ್ರವಿಶಾರದನಾದವನೇ ನನ್ನ ಪಾಲಿನ ಸಂಜೀವನ ಔಷಧವು; ಎಂದು ಸಾರುವೆನು. ಇದೇಕೆ ಇಷ್ಟು ಪಕ್ಷಪಾತವೆಂದು ಕೇಳುವೆಯೋ? ನನ್ನ ಪ್ರೀತಿಯ ದೇವರು ಅವನೇ; ಅವನನ್ನೇ ನಂಬಿರುವೆ. ಆತನು ನನಗೆ ಬೇರೆಯವನೇ? ಹೇಳು?

ಲೋಕಮಿದೆಲ್ಲವುಂ ಸ್ಮರಪಿಶಾಚವಿಜೃಂಭಿತಮಿಂದ್ರಜಾಲ ವಿ-।
ದ್ಯಾಕಥನಂ ಯಮಾಸುರನ ದೀಪನದಾಹುತಿಯಲ್ಲಿ ಪಕ್ಷದಿಂ॥
ಶೋಕಮನಾರ್ಗೆ ಮಾಳ್ಪೆನೊಲಿದಿರ್ಪೆನದಾರ್ಗೆ ಕನಲ್ವೆನಾರ್ಗೆನಲ್।
ಮೂಕತೆಯುಂ ದಯೋಕ್ತಿಯೆರಡೇ ಹಿತಮಿನ್ನಪರಾಜಿತೇಶ್ವರಾ॥ ॥೫೫॥

ಈ ಜಗತ್ತೆಲ್ಲಾ ಮನ್ಮಥನೆಂಬ ಪಿಶಾಚದ ರಂಗಮಂದಿರ. ಈ ಜಗವು ಇಂದ್ರಜಾಲ ವಿದ್ಯೆಯ ಮಾತಾಗಿದೆ; ಯಮನೆಂಬ ರಾಕ್ಷಸನ ದೀಪದ ಜ್ವಾಲೆಗೆ ಆಹುತಿಯಾಗಿದೆ; ಅಲ್ಲಿ ಒಲವಿನ ಪಕ್ಷಪಾತದಿಂದ ಯಾರಿಗಾಗಿ ದುಃಖಿಸಲಿ! ಯಾರನ್ನು ಪ್ರೀತಿಸಲಿ? ಯಾರಿಗೆ ಸಿಟ್ಟು ಮಾಡಲಿ? ಶಕ್ಯವಿಲ್ಲ ಇಲ್ಲಿ ಮೌನವೂ ದಯಾವಚನವೂ ಈ ಎರಡೇ ಹಿತಕರವಾದುದು.

ಮೊನ್ನೆ ಬರುತ್ತೆ ಕಂಡೆನವನಂ ಮೃತವಾದನೆಯಾದನಕ್ಕಟಾ।
ನಿನ್ನೆ ಸುಗೋಷ್ಠಿಗೆಯ್ದೆನಿವನೊಳ್ ಲಯವಾದನೆಯಾದನಯ್ಯೊ ಇಂ-॥
ದೆನ್ನೊಡವಂದನೀತನಕಟಾ! ಕಡೆಗಂಡನೆ ಕಂಡನೆಂಬ ಮಾ-।
ತಂ ನೆರೆ ಕೇಳುತೆನ್ನೊಡಲನಚ್ಚುವೆನೆಂತಪರಾಜಿತೇಶ್ವರಾ॥ ॥೫೬॥

ಛೇ! ಮೊನ್ನೆ ಬರುವಾಗ ಆತನನ್ನು ಭೇಟಿ ಮಾಡಿದ್ದೆ! ಅಯ್ಯೋ ಸತ್ತೇಹೋದನಲ್ಲಾ, ಅಕ್ಕಟಾ! ಇವನ ಜೊತೆಯಲ್ಲಿ ನಿನ್ನೆ ತಾನೇ ಧರ್ಮಸಭೆಗೆ ಹೋಗಿದ್ದೆನು ಅವನೂ ಸತ್ತನೇ? ಸತ್ತನು. ಅಯ್ಯೋ! ಇಂಥ ಸಾವಿನ ಮಾತುಗಳನ್ನೇ ಎಲ್ಲ ಕಡೆ ಕೇಳುತ್ತಿರುವ ನಾನು ಈ ದೇಹವನ್ನು ಹೇಗೆ ನೆಚ್ಚಲಿ?

ಎಲೆಯೆಲೆ ಇತ್ತಲಿರ್ದ ಮೊಗವತ್ತೊಲೆದೀಕ್ಷಿಸೆ ಮುನ್ನ ಕಂಡರೊಳ್-।
ಕೆಲಬರನಲ್ಲಿ ಕಾಣಲರಿದಿಂತುಟು ತೋರುತ ಮಾಯಮಪ್ಪ ಮೈ-॥
ಯ್ಬಲೆಯೊಳೆ ಬಾಳ್ವೆನೆಂಬ ಮನವಲ್ಲದೆ ತತ್ತನುವಂ ತಪಂಗಳೊಳ್।
ಸಲಿಸಿ ನಿಜತ್ವಮಂ ಪಡೆಯಲಂಜುವೆನೇಕಪರಾಜಿತೇಶ್ವರಾ॥ ॥೫೭॥

ಅರರೇ! ಈ ಕಡೆಯಿಂದ ಆ ಕಡೆಗೆ ಮುಖ ತಿರುಗಿಸುವಷ್ಟರಲ್ಲೇ ಮೊದಲು ಕಂಡಿದ್ದವರಲ್ಲಿ ಕೆಲವರು ಮರೆಯಾಗಿರುತ್ತಾರೆ; ಹೀಗೆ ಕಂಡಕಂಡ ಹಾಗೆಯೇ ಮಾಯವಾಗುವ ಈ ಶರೀರಜಾಲದಲ್ಲಿ ಬದುಕುತ್ತೇನೆಂಬ ಆಸೆಬಿಟ್ಟು ಈ ದೇಹವನ್ನು ತಪಸ್ಸಿಗೆ ಮೀಸಲಿಟ್ಟು ಆತ್ಮಸ್ವರೂಪಿ ಆಗಲು ಏಕೆ ಹೆದರಬೇಕು?

ಪೇಳವೆ ವೇಳೆವೇಳೆಗಿಳಿವಾಯುವನೀಗಳಿಯಾರಸನ್ನೆಯುಂ।
ಕೋಳಿಯುಮೋದುತಿರ್ಪ ತಿಥಿಪಾತಕಘೋಷಣೆ ತಳ್ತು ಪೇಳೆಯುಂ॥
ಕೇಳುತಮಂತವಕ್ಕಗಿಯದಂಗವಿದಂ ಸ್ಥಿರಮೆಂದೆ ನಚ್ಚಿ ನಿ-।
ನ್ನೊಳಿಗದಿಚ್ಛೆಯಂ ಮರೆದು ಕೆಟ್ಟೆನಲಾ ಅಪರಾಜಿತೇಶ್ವರಾ॥ ॥೫೮॥

ಪ್ರತಿ ಕ್ಷಣಕ್ಷಣಕ್ಕೂ ಕಳೆದುಹೋಗುತ್ತಿರುವ ಆಯುಷ್ಯವನ್ನು ಜ್ಞಾಪಿಸಲು ಗಡಿಯಾರದ ಸಂಕೇತವೂ, ಕೂಗುತ್ತಿರುವ ಕೋಳಿಯೂ ವಾಚಿಸುತ್ತಿರುವ ತಿಥಿಪಾತಕರ ಘೋಷಣೆಯೂ ಸಾರುತ್ತಿಲ್ಲವೇ? ಹಾಗೇ ಹೇಳಿದ್ದನ್ನು ಕೇಳಿಯೂ ಅದನ್ನು ಗಮನಿಸದೆ, ಅದಕ್ಕೆ ಹೆದರದೆ, ಈ ದೇಹವೇ ಶಾಶ್ವತವೆಂದು ನಂಬಿ ನಿನ್ನ ಭಕ್ತಿಸೇವಾ ಕೈಂಕರ್ಯವನ್ನು ಮಾಡುವುದನ್ನು ಮರೆತು ಕೆಟ್ಟೆನಲ್ಲಾ!

ಪೊಕ್ಕು ಸಮಾನಚಿತ್ತವನೆ ಸಾಧಿಸಿ ಕರ್ಮನಿಬಂಧಮಂ ಲಯ-।
ಕ್ಕಿಕ್ಕುವೆನೆಂದು ತಾಳ್ದು ತಪಮಂ ನಡೆಯುತ್ತೆಡೆಯೊಳ್ಕೆಲಂಬರೊಳ್॥
ನಕ್ಕು ಕೆಲಂಬರೊಳ್ಮುನಿದು ಬಾಳ್ವುದಿದೇಂ ಬಿಡಪೋಗಿ ಮೂರು ಗಂ-।
ಟಿಕ್ಕಿದ ಗಾದೆಯಾದೆನುಪಶಾಂತಿಯನೀಯಪರಾಜಿತೇಶ್ವರಾ॥ ॥೫೯॥

ಈ ಜಗತ್ತಿನ ಜೀವರಾಶಿಗಳ ಬಗ್ಗೆ ಸಮಾನಬುದ್ಧಿಯನ್ನೇ ಹೊಂದಿ, ಕರ್ಮದ ಕಟ್ಟುಪಾಡನ್ನು ಸಾಧನೆಯಿಂದ ನಿರ್ಜರೆಗೊಳಿಸುವೆನೆಂದು, ತಪಸ್ಸಿನಲ್ಲಿ ನಿರತನಾದರೂ, ಕೆಲವರಲ್ಲಿ ಪ್ರೀತಿ ತೋರಿಸುತ್ತಾ ಕೆಲವರಲ್ಲಿ ದ್ವೇಷಸಾಧಿಸುತ್ತಾ, ಬಾಳುತ್ತಿದ್ದೇನೆ; ಇದೇನು ಅನ್ಯಾಯ! 'ಗಂಟು ಬಿಡಿಸಲು ಹೋಗಿ ಮೂರು ಗಂಟು ಇಕ್ಕಿದನು(ಕಗ್ಗಂಟು ಮಾಡಿದನು)' ಎಂಬಂತಾಗಿದೆ ನನ್ನ ಸ್ಥಿತಿ. ದೇವಾ! ನನಗೆ ಶಾಂತಿಯನ್ನೂ ಸಮತೆಯನ್ನೂ ಕೊಡು.

ತುಟ್ಟಿದ ಪಟ್ಟಣಕ್ಕೆ ಪಯಣಂ ಬರುತಿರ್ದವನಲ್ಲಿಗಲ್ಲಿ ತಾಂ।
ಬಿಟ್ಟೆಡೆಯೊಳ್ಪಲಂಬರೊಳಗೆಂತು ಸಮಂಬಡೆದಿರ್ಪನಂತೆ ಕ-॥
ಣ್ಣಿಟ್ಟು ನಿಜಾತ್ಮಸಿದ್ಧಿಗೆ ತಪಂಬಡೆವಂ ಪಲರಲ್ಲಿ ಮುಟ್ಟಿಯುಂ।
ಮುಟ್ಟದ ಭಾವದಿಂ ನಡೆಯವೇಳ್ಕುಮಲಾ ಅಪರಾಜಿತೇಶ್ವರಾ॥ ॥೬೦॥

ಊರೂರಿಗೆ ಪ್ರಯಾಣ ಮಾಡುವ ವ್ಯಾಪಾರಿ, ತನಗೆ ಬೇಕಾದ ನಗರಕ್ಕೆ ಪ್ರಯಾಣ ಮಾಡಿ ಬಂದಾಗ, ಅಲ್ಲಿ ತಾನು ಬೀಡು ಬಿಟ್ಟ ಕಡೆಗಳೆಲ್ಲೆಲ್ಲಾ ಎಲ್ಲರಲ್ಲಿ ಹೇಗೆ ಸಮಾನ ಸ್ನೇಹಭಾವವನ್ನು ತಾಳಿರುತ್ತಾನೋ ಹಾಗೆಯೇ ತನ್ನಾತ್ಮಸಿದ್ಧಿಗೆ ಮನಸ್ಸಿಟ್ಟು ತಪಸ್ಸು ಮಾಡುವವನು ಎಲ್ಲರಲ್ಲಿ ಅವರೊಡನಿದ್ದೂ ಅವರ ಪ್ರಭಾವಕ್ಕೆ ಒಳಗಾಗದೆ, ನಿರ್ಲಿಪ್ತ ಭಾವದಿಂದಲೂ ಸಮತಾಭಾವದಿಂದಲೂ ನಡೆದುಕೊಳ್ಳಬೇಕು.

ಆವನೊಳಾದೊಡಂ ಕುಮತಿ ಕಾಳ್ನುಡಿ ಕೀಳ್ನಡೆ ತೋರುತಿರ್ದೊಡಾ।
ಜೀವನೆ ನೈಜವೆನ್ನದೆ ತದೀಯ ಕಷಾಯಗುಣಂಗಳೆಂದವಂ।
ಭಾವಿಸಿ ಯಾ ಕಷಾಯತತಿ ತನ್ನೊಳಗಾಗದವೊಲ್ ನಿಜಾತ್ಮನಂ॥
ಕಾವುತಮಿರ್ಪವಂ ಸ್ವಪರವೇದಿಯಲಾ ಅಪರಾಜಿತೇಶ್ವರಾ॥ ॥೬೧॥

ಯಾರಲ್ಲಾದರೂ ದುರ್ಬುದ್ಧಿ, ದುರ್ವಚನ, ದುರ್ನಡತೆ ಕಂಡಾಗ ಅವು ಆ ಜೀವಿಯ ಸಹಜಸ್ವಭಾವಗಳೆಂದು ತಿಳಿಯಬಾರದು: ಅವು ಅವನಲ್ಲಿರುವ ಆ ಕಷಾಯಕರ್ಮಗಳ ಪರಿಣಾಮವೆಂದು ತಿಳಿಯಬೇಕು; ಆ ಕಷಾಯಗಳ ಪರಿಣಾಮ ತನ್ನಲ್ಲಿ ಉಂಟಾಗದಂತೆ ನೋಡಿಕೊಳ್ಳಬೇಕು ಮತ್ತು ತನ್ನ ಆತ್ಮವನ್ನು ರಕ್ಷಿಸಿಕೊಳ್ಳುವವನೂ ಸ್ವ-ಪರವಸ್ತುಜ್ಞಾನಿಯೂ ಆಗಬೇಕು; ಆತನೇ ನಿಜವಾದ ಜ್ಞಾನಿ.

ಗುಣಿಯೆನಿಸುತ್ತೆ ತಾಂ ನಡೆಯುತಿರ್ದೊಡಮನ್ಯರ ದುರ್ಗುಣಂಗಳಂ।
ಗಣಿಯಿಸಿದಂದು ತಾಂ ಗುಣವಿಹೀನನೆಯಂತದರಿಂದೆ ಸರ್ವರೊಳ್॥
ಗುಣವನೆ ಕಾಣ್ಬೊಡುತ್ತಮಗುಣಕ್ಕವರಂ ತರಲಾರ್ಪೊಡೆಲ್ಲರಂ।
ಗಣಿಯಿಪುದಲ್ಲದಂದವರ ಚಿಂತೆಯದೇಕಪರಾಜಿತೇಶ್ವರಾ॥ ॥೬೨॥

ತಾನು ಗುಣವಂತ ಎನ್ನಿಸಿದರೂ ಅನ್ಯರಲ್ಲಿ ಅವಗುಣಗಳನ್ನು ಲೆಕ್ಕಿಸುವವನು, ಅವರಂತೆ ತಾನು ಗುಣಹೀನನಾಗುತ್ತಾನೆ; ಆದ್ದರಿಂದ ಎಲ್ಲರಲ್ಲೂ ಸದ್ಗುಣಗಳನ್ನೇ ಕಾಣಬೇಕು; ಎಲ್ಲರನ್ನೂ ಸದ್ಗುಣವಂತರನ್ನಾಗಿ ಮಾಡಬೇಕು; ಹಾಗೇ ಸಾಧ್ಯವಿಲ್ಲದಿದ್ದರೆ, ಅವರ ಬಗ್ಗೆ ಏಕೆ ಚಿಂತಿಸಬೇಕು?

ಸರ್ವಗುಣಂಗಳೊಳ್ ಸುಲಭರಾರ್ ಜಿನ ನೀಂ ಪೊರಗಾಗಿ ಲೋಕದೊಳ್।
ಪರ್ವಿದ ಮಿಥ್ಯೆಯೊಳ್ವಿಷಮಕಾಲದೊಳೀ ನರಕೀಟಕಂಗಳೊಳ್॥
ಒರ್ವರೊಳಿರ್ದುದೊಂದು ಗುಣಮಂ ಗುಣಕೋಟಿಯೆನುತ್ತೆ ಕಂಡು ತಾ-।
ನುರ್ವುವವಂಗೆ ನಿನ್ನ ಗುಣಮೊಲ್ದಿರವೇ ಅಪರಾಜಿತೇಶ್ವರಾ॥ ॥೬೩॥

ಲೋಕದ ಎಲ್ಲಾ ಕಡೆ ಮಿಥ್ಯಾತ್ವ ಹಬ್ಬಿದ ವಿಷಮಕಾಲದಲ್ಲಿ, ಈ ನರಹುಳುಗಳ ಜಗತ್ತಿನಲ್ಲಿ ಸರ್ವಗುಣಸಂಪನ್ನನು; ನೀನೊಬ್ಬನೇ ಹೊರತು ಉಳಿದವರಲ್ಲ; ಸುಲಭರಲ್ಲ; ಒಬ್ಬೊಬ್ಬರಲ್ಲಿರುವ ಒಂದೊಂದು ಗುಣವನ್ನು ಕಂಡು ಮೆಚ್ಚಿ ಕೋಟಿ ಗುಣಗಳಿವು ಎಂದು ಹೆಮ್ಮೆಪಡುವವನಿಗೆ ನಿನ್ನ ಗುಣಾವಳಿಗಳನ್ನು ಕಂಡರೆ ಪ್ರೀತಿಯುಂಟಾಗುವುದು ಅತಿಶಯವೇನಲ್ಲ!

ದುರ್ವಿಷಯಂಗಳೆಂಬ ವಿಷಮಂ ಕುಡಿದಾರ್ತವಿರೋಧಮೋಹಮೆಂ-।
ಬುರ್ವಿನ ವತ್ಸನಾಭಿಯನೆ ಮೆಚ್ಚಿ ಕಿಡುತ್ತಿದೆ ಲೋಕವಕ್ಕಟಾ॥
ಸರ್ವರ ಮೈಯೊಳಾ ವಿಷನಿವಾರಣೆಗಾತ್ಮನಿಜಸ್ವರೂಪದಾ।
ನಿರ್ವಿಷಮುಂಟದಂ ಮರೆದು ನೋವರದೇಕಪರಾಜಿತೇಶ್ವರಾ॥ ॥೬೪॥

ಅಕ್ಕಟಾ! ಲೋಕದ ಜನರು ವಿಷಯವಾಸನೆಯೆಂಬ ಕಾಳವಿಷವನ್ನು ಕುಡಿದು ಆರ್ತಧ್ಯಾನ, ದ್ವೇಷ, ಮೋಹಗಳೆಂಬ ಸೊಕ್ಕಿದ 'ವತ್ಸನಾಭಿ'ಯೆಂಬ ಘೋರವಿಷದ ಎಲೆನಾಗನನ್ನು ಪ್ರೀತಿಸಿ ನಾಶವಾಗುತ್ತಿದ್ದಾರೆ! ಎಲ್ಲರ ಮೈಯಲ್ಲಿ ಆವರಿಸಿರುವ ಈ ವಿಷಯಲೋಲುಪತೆ ಎಂಬ ವಿಷನಿವಾರಣೆಗೆ ಆತ್ಮಸ್ವರೂಪವೆಂಬ ವಿಷಾಪಹಾರಿ ಉಂಟು; ಆದರೆ ಅದನ್ನು ಮರೆತು, ದುಃಖಕ್ಕೆ ಒಳಗಾಗುತ್ತಾರಲ್ಲಾ!

ಅರಿಯಲೆ ಚಿತ್ತಮಿಾಯದಘಸಂತತಿಯಾತ್ಮನನೆತ್ತಲಾನುಮೊ-।
ಲ್ದರಿದೊಡೆಯಸ್ತಬೆಸ್ತವನೆ ಮಾಡುವುದೊರ್ಮೆ ಯಥಾರ್ಥಮಾಗಿ ತಾ-॥
ನರಿದೊಡಮೇನೊ ತನ್ನೊಳಗೆ ತನ್ನನೆ ಭೇದಿಸಿ ಶುದ್ಧಸಿದ್ಧ ನೆಂ-।
ದರಿವಿನೊಳೀಕ್ಷಿಸಲ್ಕೆ ಬಿಡದಚ್ಚರಿ ನೋಡಪರಾಜಿತೇಶ್ವರಾ॥ ॥೬೫॥

ಪಾಪಸಮೂಹವು ಆತ್ಮಸ್ವರೂಪವನ್ನು ತಿಳಿಯುವುದಕ್ಕೆ ಮನಸ್ಸಿಗೆ ಅವಕಾಶವನ್ನೇ ನೀಡದು; ಅಕಸ್ಮಾತ್ತಾಗಿ ಹೇಗಾದರೂ ಮನಸ್ಸು ಆತ್ಮನನ್ನು ಪ್ರೀತಿಸಿದರೆ, ನೋಡಿದರೆ ಮನಸ್ಸನ್ನೇ ಅಸ್ತವ್ಯಸ್ತಗೊಳಿಸುವುದು; ಒಂದು ವೇಳೆ ಮನಸ್ಸು, ಆತ್ಮನನ್ನು ಯಥಾರ್ಥವಾಗಿ ತಿಳಿಯಬಯಸಿದರೂ ಆತ್ಮನು ತನ್ನೊಳಗೇ ತನ್ನನ್ನು ದೇಹದಿಂದ ಬೇರ್ಪಡಿಸಿ, ತನ್ನ ಶುದ್ಧ ಸಿದ್ಧರೂಪನೆಂದು ಭೇದವಿಜ್ಞಾನದಿಂದ ತಿಳಿಯಲು ಈ ಪಾಪಸಮೂಹಗಳು ಅವಕಾಶವೀಯದು. ಇದು ಆಶ್ಚರ್ಯದ ಸಂಗತಿಯಾಗಿದೆ.

ಗಳಿಸುವನೆಯ್ದೆ ಪಾಪಸುಕೃತಂಗಳನುಣ್ಬನೆರಳ್ಫಲಂಗಳಂ।
ಮಳವಶನಾಗಿ ದೇಹಿ ಸುಖಿ ದುಃಖಿ ಕಷಾಯಿ ವಿನಾಶಿ ಕಾಮಿ ಪು-॥
ಲ್ಪುಳು ಸತಿ ಗಂಡು ಷಂಡನೆನಲಿಂತು ಬಹುಸ್ಥಿತಿಯಪ್ಪನಾತ್ಮನಾ।
ಮಳಕುಳಮಂ ಕಳಲ್ಚೆ ಸುಖಿಯಪ್ಪನಲಾ ಅಪರಾಜಿತೇಶ್ವರಾ॥ ॥೬೬॥

ಪಾಪ-ಪುಣ್ಯಗಳನ್ನು ಗಳಿಸುವವನು ಸುಖದುಃಖಗಳೆಂಬ ಎರಡು ಫಲಗಳನ್ನು ಅನುಭವಿಸುತ್ತಾನೆ; ಆತ್ಮನು ಕರ್ಮಪರವಶನಾಗಿ ದೇಹಧಾರಿಯಾಗುತ್ತಾನೆ; ಸುಖಿ, ದುಃಖಿ, ಕಷಾಯಿ, ವಿನಾಶಿ, ಕಾಮಿ, ಹುಲ್ಲು, ಹುಳು, ಹೆಣ್ಣು, ಗಂಡು, ಷಂಡ ಎಂಬಿತ್ಯಾದಿ ಅನೇಕ ಸ್ಥಿತಿಗಳನ್ನು ಹೊಂದುತ್ತಾನೆ. ಆತ್ಮನು ಈ ಕರ್ಮಸಮೂಹಗಳನ್ನು ಕಳಚಿಕೊಂಡ ಕೂಡಲೇ ಅನಂತಸುಖಿ ಆಗುತ್ತಾನೆ.

ಕರ್ಮನಿಬಂಧನಾಗಿಯುಮಬಂಧನಮೂರ್ತನೆ ಮೂರ್ತನಾಗಿಯುಂ।
ಕೂರ್ಮೆ ವಿಷಾದಮಿರ್ದುಮಮಲಂ ನಭದಂತಿರೆ ಶೂನ್ಯನಾಗಿಯುಂ॥
ಧರ್ಮಗುಣಾತಿಶಾಯಿಕನಿದಾತ್ಮನ ವರ್ತನೆಯದ್ಭುತಕ್ಕೆ ಸಾ-।
ಸಿರ್ಮಡಿಯದ್ಭುತಂ ತಿಳಿಯಬಲ್ಲಿದನಾರಪರಾಜಿತೇಶ್ವರಾ॥ ॥೬೭॥

ಆತನು ವ್ಯವಹಾರ ದೃಷ್ಟಿಯಿಂದ ಕರ್ಮಬದ್ಧನಾಗಿದ್ದರೂ ನಿಶ್ಚಯದೃಷ್ಟಿಯಿಂದ ಕರ್ಮರಹಿತನು ಗುಣಯುಕ್ತನೂ ಆಗಿದ್ದಾನೆ. ಈ ಎರಡು ದೃಷ್ಟಿಗಳಿಂದ ಮೂರ್ತನಾಗಿದ್ದರೂ ಅಮೂರ್ತನಾಗಿದ್ದಾನೆ; ಪ್ರೀತಿ ವಿಷಾದಗಳನ್ನು ಹೊಂದಿದ್ದರೂ ನಿರ್ಮಲನಾಗಿದ್ದಾನೆ; ಆಕಾಶದಂತೆ ಶೂನ್ಯವಾಗಿದ್ದರೂ ಅತಿಶಯವಾದ ಆತ್ಮನ ಧರ್ಮಗುಣಗಳನ್ನು ಹೊಂದಿದ್ದಾನೆ; ಆತ್ಮನ ಈ ವರ್ತನೆ ಅದ್ಭುತಕ್ಕಿಂತ ಅದ್ಭುತವಾಗಿ ಸಾವಿರಪಾಲು ಮಿರಿಸಿದ ಅದ್ಭುತವಾಗಿದೆ; ಆದರೆ ಇದನ್ನರಿತವರು ಯಾರಿದ್ದಾರೆ?

ಏಕನನೇಕಲ್ಪನಧಿಕಂ ಕ್ಷಯನಕ್ಷಯನಸ್ತಿನಾಸ್ತಿ ಮೂ-।
ಲೋಕಮಿತಂ ಸ್ವದೇಹಮಿತನುತ್ತಮಬೋಧಸುದರ್ಶನಂಗಳಿಂ।
ಲೋಕಕಲೋಕಕಂ ನೆರೆವನಂಗದ ನೋಟದೆ ಬದ್ಧನಾತ್ಮನಾ-।
ಲೋಕನದಿಂದೆ ಮುಕ್ತನಿದು ಶಕ್ಯಮದಾರ್ಗಪರಾಜಿತೇಶ್ವರಾ॥ ॥೬೮॥

ಮೇಲೆ ಹೇಳಿದ ವ್ಯವಹಾರ-ನಿಶ್ಚಯ ದೃಷ್ಟಿಗಳಿಂದ ಆತ್ಮನು ಏಕನೂ ಅನೇಕನೂ, ಅಲ್ಪನೂ-ಅಧಿಕನೂ, ಕ್ಷಯನೂ-ಅಕ್ಷಯನೂ, ಅಸ್ತಿಸ್ವರೂಪನೂ-ನಾಸ್ತಿಸ್ವರೂಪನೂ, ತ್ರಿಲೋಕಮಿತನೂ-ಧರಿಸಿದ ದೇಹಮಿತನೂ, ಕರ್ಮಯುಕ್ತನೂ-ಕರ್ಮಮುಕ್ತನೂ, ಉತ್ತಮ ಜ್ಞಾನದರ್ಶನಗಳಿಂದ ಲೋಕವನ್ನೂ, ಅಲೋಕವನ್ನೂ ವ್ಯಾಪಿಸಿದವನೂ ಆಗಿದ್ದಾನೆ. ಈ ವಿಶಿಷ್ಟತೆ ಆತ್ಮನಿಗಲ್ಲದೆ ಮತ್ತಾರಿಗೂ ಶಕ್ಯವಿಲ್ಲ.

ಮಾನವರಾತ್ಮತತ್ತ್ವಮರಿಯಲ್ಕೆ ಕುವಾದಿವಿವರ್ಜನಕ್ಕೆ ನಾ-।
ನಾನಯಮುಂ ಪ್ರಮಾಣನಿಧಿಸಂಗ್ರಹಮುಂ ನೆರೆದಿರ್ದುವಲ್ಲದೇ॥
ಧ್ಯಾನಿಸುವಾಗಳೀ ಬಹುವಿಕಲ್ಪತೆಯಿಲ್ಲ ಮಣಿತ್ರಯಾತ್ಮನೆಂ-।
ಬೀ ನುತಭಾವಮೊಂದೆ ಬೆಳಗಿರ್ಪುದಲಾ ಅಪರಾಜಿತೇಶ್ವರಾ॥ ॥೬೯॥

ನರರು ಆತ್ಮ ತತ್ತ್ವವನ್ನು ಅರಿಯುವುದಕ್ಕಾಗಿ, ಮಿಥ್ಯಾವಾದಿಗಳನ್ನು ದೂರಸರಿಸುವುದಕ್ಕಾಗಿ ನಾನಾ ಬಗೆಯ ನಯಗಳನ್ನೂ ಪ್ರತ್ಯಕ್ಷಾದಿ ಪ್ರಮಾಣಗಳೆಂಬ ನಿಧಿಸಂಗ್ರಹವನ್ನು ಮಾಡಿದ್ದಾರೆ; ಆದರೆ ಆತ್ಮಚಿಂತನೆಯನ್ನೇ ಮಾಡುವಾಗ ಈ ಬಗೆಯ ಯಾವ ವಿಕಲ್ಪವೂ ಇರುವುದಿಲ್ಲ. ಆಗ ಆತ್ಮನಲ್ಲಿ ರತ್ನತ್ರಯರೂಪನೆಂಬ ಶ್ರೇಷ್ಠ ಭಾವನೆಯೊಂದೇ ಬೆಳಗುತ್ತಿರುತ್ತದೆ.

ವ್ಯವಹೃತಿಯೆಂದು ನಿಶ್ಚಯತೆಯೆಂದು ಮಣಿತ್ರಯಮಕ್ಕುಮಲ್ಲಿ ದೇ-।
ವ ವಚನ ತಾಪಸರ್ಕಳವಧಾರಣೆ ತಾಂ ವ್ಯವಹಾರಮಲ್ಲಿ ದೋ-।
ಷಮನುಳಿವಿಲ್ಲದೇ ಗೆಲಿದೆ ನೀನೆ ಮಮಪ್ರಭು ನಿನ್ನ ವಾಣಿಯೇ।
ಶಿವಮತವಸ್ತಸಂಗನೆ ತಪಸ್ವಿಯಲಾ ಅಪರಾಜಿತೇಶ್ವರಾ॥ ॥೭೦॥

ರತ್ನತ್ರಯವು ವ್ಯವಹಾರವೆಂದೂ ನಿಶ್ಚಯವೆಂದೂ ಎರಡು ಬಗೆಯಾಗಿದೆ. ಅದರಲ್ಲಿ ದೇವರು, ಶಾಸ್ತ್ರ, ಮುನಿ ಇವರಲ್ಲಿ ಭಕ್ತಿಯಿಡುವುದು ವ್ಯವಹಾರ ರತ್ನತ್ರಯ; ಈ ಮೂರರಲ್ಲಿ ದೋಷರಹಿತವಾಗಿ ಕರ್ಮಗಳನ್ನು ಗೆದ್ದವನಾದ್ದರಿಂದ ಜಿನನೇ ದೇವರು. ಜಿನವಾಣಿಯೇ ಮೋಕ್ಷಶಾಸ್ತ್ರ; ಪರಿಗ್ರಹಗಳ ತ್ಯಾಗಿಯೇ ಮುನಿ.

ಮೊದಲೊಳೆ ತತ್ತ್ವಸಪ್ತಕದಿ ಪೇಳ್ದು ಮಣಿತ್ರಯಮಂ ಬಳಿಕ್ಕಿದೇ
ನಿದನುಸಿರ್ದಂದಮೆನ್ನದಿರಿಮಾಪ್ತನೊಳಾಗಮದೊಳ್ತಪಸ್ವಿಯೊಳ್॥
ಪುದಿದಿದು ತತ್ತ್ವವರ್ಗಮದರಿಂದೆರವಿಲ್ಲಮದುಂ ನಿಜಾತ್ಮಸಾ-।
ಧ್ಯದ ಸಹಕಾರಿಯೆಂಬುದು ತವಾಜ್ಞೆಯಲಾ ಅಪರಾಜಿತೇಶ್ವರಾ॥ ॥೭೧॥

ಮೊದಲಲ್ಲಿ ಸಪ್ತತತ್ವದಲ್ಲಿ ರತ್ನತ್ರಯವನ್ನು ಹೇಳಿ, ಈಗ ಇದೇನು ಪುನಃ ರತ್ನತ್ರಯವನ್ನು ಹೇಳುತ್ತಿರುವುದು ಚೆಂದವೇ? ಎಂದು ಕೇಳಬೇಡಿ; ಆಪ್ತನು-ಆಗಮ ತಪಸ್ವಿಗಳಲ್ಲಿ ಸಪ್ತತತ್ತ್ವ ಸಮಾವೇಶಗೊಂಡಿದೆ; ಆಪ್ತ, ಆಗಮ - ಇವು ತಪಸ್ವಿಗಳಿಂದ ಸಪ್ತತತ್ತ್ವ ಬೇರೆಯಾಗಿಲ್ಲ. ಆ ತತ್ತ್ವಸಮೂಹವೂ ತನ್ನಾತ್ಮ ಸಾಧನೆಗೆ ಸಹಾಯಕವೆಂದು ನಿನ್ನ ಆಜ್ಞೆಯಾಗಿದೆ. ಆದ್ದರಿಂದ ಇವು ಮೂರೂ ವ್ಯವಹಾರ ರತ್ನತ್ರಯವಾಗಿದೆ.

ನಿಶ್ಚಯದಿಂದಮಾತ್ಮನೆ ಸುದರ್ಶನಮಾತ್ಮನೆ ಶುದ್ಧಬೋಧಮಂ-।
ತಶ್ಚರಿತಂ ನಿಜಾತ್ಮನೆ ಮಣಿತ್ರಯರೂಪನುಮಾತ್ಮನೆಂಬುದಂ॥
ನಿಶ್ಚಲಮಾಗಿ ನಂಬಿ ನಿಜಮಂ ತಿಳಿದಲ್ಲಿಯೆ ಲೀನಮಾಗಿ ಚೇ-।
ತಶ್ಚಿರಮಂ ನೆಗಳ್ಚೆ ಶಿವಮೆಂದೆಯಲಾ ಅಪರಾಜಿತೇಶ್ವರಾ॥ ॥೭೨॥

ನಿಶ್ಚಯ ರತ್ನತ್ರಯವೆಂದರೆ "ಆತ್ಮನೇ ಸಮ್ಯಕ್‌ದರ್ಶನಸ್ವರೂಪನು; ಆತ್ಮನೇ ಸುಜ್ಞಾನಮಯನು; ಆತ್ಮನೇ ಸಚ್ಚಾರಿತ್ರವಂತನು; ಆತ್ಮನು ರತ್ನತ್ರಯ ಸ್ವರೂಪನು" ಎಂಬುದಾಗಿ ಸ್ಥಿರವಾಗಿ ನಂಬಿ, ನಿಜಸ್ವರೂಪವನ್ನು ತಿಳಿದು ಆ ನಿಜಸ್ವರೂಪನಲ್ಲಿಯೇ ಲೀನನಾಗಿ ಮನಸ್ಸನ್ನು ಅಧಿಕಕಾಲ ವಿನಿಯೋಗಿಸಿದರೆ ಮೋಕ್ಷವುಂಟಾಗುತ್ತದೆ ಎಂದು ನೀನು ಪ್ರತಿಪಾದಿಸಿರುವೆ.

ನಿನ್ನನೆ ನಂಬು ನಂಬಿದೊಡೆ ನನ್ನನೆ ನಂಬಿದೆ ಶುದ್ಧದೃಷ್ಟಿಯಿಂ।
ನಿನ್ನನೆ ನೋಡು ನೋಡಿದೊಡೆ ನನ್ನನೆ ನೋಡಿದವಂ ಸುಚಿತ್ತದಿಂ॥
ನಿನ್ನೊಳಗೈಕ್ಯವಾಗದುವೆ ನನ್ನೊಳಗೇಕತೆಯಾದುದೆಂದು ರ–।
ತ್ನೋನ್ನತಿಯಿಂತುಟೆಂದೊರೆದೆ ನೀನೆ ಬುಧಂಗಪರಾಜಿತೇಶ್ವರಾ॥ ॥೭೩॥

"ನಿನ್ನ ಆತ್ಮನನ್ನೇ ನಂಬು; ನಂಬಿದರೆ ಪರಿಶುದ್ಧ ದೃಷ್ಟಿಯಿಂದ ನನ್ನನ್ನೇ ನಂಬಿದಂತಾಯಿತು; ನಿನ್ನನ್ನೇ ನೋಡು, ನಿರ್ಮಲ ಚಿತ್ತದಿಂದ ನನ್ನನ್ನೇ ನೋಡಿದಂತಾಗುತ್ತದೆ. ನಿನ್ನ ಆತ್ಮನಲ್ಲಿ ಐಕ್ಯವಾಗು, ನನ್ನಲ್ಲೇ ನೀನು ಐಕ್ಯವಾದಂತಾಗುತ್ತದೆ" ಹೀಗೆಂದು ಜ್ಞಾನಿಗಳಿಗೆ ರತ್ನತ್ರಯದ ಶ್ರೇಷ್ಠತೆಯನ್ನು ನೀನು ಸಾರಿದೆ.

ವರಗುರುಪಂಚಕಂ ವರತಪಶ್ಚರಣಂಗಳಿರ್ಪುವಲ್ಲಿ ಸ–।
ದ್ಗುರುಗುಣಶೀಲಸಂಯಮಸುತೀರ್ಥಪವಿತ್ರತೆಯಲ್ಲಿ ತೋರ್ಕುಮು–॥
ತ್ತರಗುಣರಾಶಿ ಮೂಲಗುಣವೃಂದಮಿರ್ದಪುದಲ್ಲಿ ನಿನ್ನ ಚಿ–।
ತ್ಪರಿಣತೆಯಲ್ಲಿ ನಿಟ್ಟಿಸೊಳಗೆಂದೆಯಲಾ ಅಪರಾಜಿತೇಶ್ವರಾ॥ ॥೭೪॥

"ಆತ್ಮರೂಪದ ಚಿಂತನೆಯಲ್ಲಿ ಶ್ರೇಷ್ಠರಾದ ಪಂಚಪರಮೇಷ್ಠಿಗಳೂ, ಶ್ರೇಷ್ಠವಾದ ತಪಶ್ಚರಣಗಳು ಕೂಡಿರುತ್ತವೆ. ಸದ್ಗುರುಗಳ ಗುಣಶೀಲ ಸಂಯಮಗಳೂ ಉತ್ತಮ ತೀರ್ಥಗಳೂ ಪವಿತ್ರತೆಯೂ ತೋರುವುವು. ಆ ಸ್ವರೂಪದಲ್ಲಿ ಉತ್ತರ ಗುಣಾವಳಿಗಳೂ ಮೂಲ ಗುಣರಾಶಿಯೂ ಇರುವುವು; ನಿನ್ನಾತ್ಮ ಸ್ವರೂಪವನ್ನೇ ಚೆನ್ನಾಗಿ ನಿಟ್ಟಿಸಿನೋಡು" ಎಂದು ಬೋಧಿಸಿದೆ.

ಅರಿವರಿವಿಂಗಡರ್ಪುಮರಿವಾತನುಮಂತದೆ ಕಾಣ್ಕೆ ಕಾಣ್ಕೆಗಂ।
ಗುರಿಯುಮಡಂಗಿ ಕಾಣ್ಬನುಮದೇ ಶರಣಂ ಶರಣಾರ್ಥಿ ಸಾರ್ವುದುಂ॥
ಎರಕವೆರಂಗುವಾತನೆರಕಕ್ಕಧಿದೈವಮುಮಾತ್ಮತತ್ತ್ವವೇ।
ಪೊರಗರಸಲ್ಕೆವೇಡ ನಿಜವೆಂದೆಯಲಾ ಅಪರಾಜಿತೇಶ್ವರಾ॥ ॥೭೫॥

ಸಾಮಾನ್ಯಜ್ಞಾನದಿಂದ ವಿಶೇಷಜ್ಞಾನವುಂಟಾಗುತ್ತದೆ; ಹಾಗೆ ಅರಿತವನೂ ಜ್ಞಾನಿಯೇ; ದರ್ಶನಕ್ಕೆ ದರ್ಶನವು ಲಕ್ಷ್ಯವು; ಗುರಿಸಾಧಿಸಿ ನೋಡುವವನೂ ಆತ್ಮನೂ ಬೇರೆ ಅಲ್ಲ; ರಕ್ಷಣೆಯೂ ರಕ್ಷಕನು ಒಂದೇ. ಐಕ್ಯತೆಯೂ, ಐಕ್ಯವಾಗುವವನೂ, ಐಕ್ಯಕ್ಕೆ ಅಧಿದೇವತೆಯೂ ಆತ್ಮ ತತ್ತ್ವವೇ; ಹೀಗೆ ಸಕಲವೂ ತನ್ನಲ್ಲೇ ಇರುವಾಗ ಹೊರಗೆ ಅದನ್ನರಸುವುದು ಸಲ್ಲದು; ಹೀಗೆಂಬ ವಿಚಾರವನ್ನು ಸತ್ಯವೆಂದು ಸಾರಿದವನು ನೀನು.

ಅದನರಿದಾತನೆಲ್ಲಮರಿದಾತನದೊಂದನೆ ಕಂಡನೆಲ್ಲಮಂ।
ಸದರದೆ ಕಂಡನಲ್ಲಿಗೆ ಮನಂ ವಶಮಾದೊಡೆ ಮುಕ್ತಿ ಸಾಧ್ಯಮಾ-॥
ದುದು ಪಲವೇಕದೊಂದು ಪೊರಗಾದೊಡೆ ಕಲ್ತ ಸಮಸ್ತಶಾಸ್ತ್ರದಿಂ।
ಚದುರರೆನಿಕ್ಕುಮಾತ್ಮಪದಸಾಧಕರೇ ಅಪರಾಜಿತೇಶ್ವರಾ॥ ॥೭೬॥

ಆ ಆತ್ಮತತ್ವವನ್ನು ತಿಳಿದವನು ಎಲ್ಲವನ್ನೂ ತಿಳಿದವನು; ಆತ್ಮತತ್ತ್ವವೊಂದನ್ನು ಕಂಡವನು ಸಕಲವನ್ನೂ ಸುಲಭವಾಗಿ ಕಂಡಂತೆಯೇ. ಮನಸ್ಸು ಅದಕ್ಕೆ ವಶವಾದರೆ ಮೋಕ್ಷವಾದಂತೆಯೇ ಆಯಿತು; ಎಂದಮೇಲೆ ಉಳಿದಿದ್ದೇಕೆ? ಆ ಆತ್ಮಸ್ವರೂಪದ ಚಿಂತನೆಯೊಂದಿಲ್ಲದಿದ್ದರೆ ತಾನು ಕಲಿತ ಶಾಸ್ತ್ರಗಳಿಂದ ನಿಪುಣನೆನ್ನಿಸಿಕೊಂಡರೂ ಆತ್ಮಸಾಕ್ಷಾತ್ಕಾರವನ್ನು ಸಾಧಿಸಿ ಸಿದ್ಧ ಪುರುಷನಾಗಲಾರನು.

ಉದ್ಗತದೃಷ್ಟಿಯಿಂ ಸಕಳಮಂ ಪೊರಗೀಕ್ಷಿಸವರ್ಪುದಾತ್ಮನಂ।
ಹೃದ್ಗತದೃಷ್ಟಿಯಿಂದೊಳಗೆ ನಿಟ್ಟಿಸಬಾರದು ಜನ್ಮ ಜನ್ಮದೊಳ್॥
ಪುದ್ಗಲರೂಪದಾರು ರಸಮಂ ಸುಖಿಸಲ್ಪಹುದಾತ್ಮರೂಪಸಂ-।
ವಿದ್ಗುಣದಾ ರಸಾನ್ನಮನುಣಲ್ಕರಿದಿಂದಪರಾಜಿತೇಶ್ವರಾ॥ ॥೭೭॥

ನಮ್ಮ ಹೊರಗಣ್ಣಿನಿಂದ ಹೊರಗಿನ ಲೋಕವನ್ನೆಲ್ಲ ನೋಡಬಹುದು; ಆದರೆ ಆತ್ಮನನ್ನು ಅಂತರಂಗ ದೃಷ್ಟಿಯಿಮದ ಜನ್ಮಜನ್ಮಾಂತರಗಳನ್ನೆತ್ತಿ ಬಂದರೂ ನೋಡುವುದು ಸುಲಭವಲ್ಲ. ಪುದ್ಗಲರೂಪನಾದ ಷಡ್ರಸಗಳನ್ನು ಅನುಭವಿಸಿ ಸುಖಪಡಬಹುದು; ಆದರೆ ಆತ್ಮಸ್ವರೂಪದ ಜ್ಞಾನಗುಣವೆಂಬ ಅಪೂರ್ಣ ರಸಾನ್ನವನ್ನು ಉಂಡು ಸುಖಿಸುವುದು ಸುಲಭದ ಕೆಲಸವಲ್ಲ.

ತಡೆತಡೆದೋಡುತಿರ್ಪ ಮನಮಂ ಪಿಡಿದಾತ್ಮನೊಳಿಟ್ಟು ತನ್ನ ತಾಂ।
ನುಡಿನುಡಿದಾತ್ಮನೊಳ್ ಸ್ವಪರತತ್ತ್ವ ರಹಸ್ಯಮನಾತ್ಮರೂಪಮಂ॥
ಅಡಿಗಡಿಗೊಲ್ದು ನೋಡುತ ಶಮಾಮೃತಮಂ ಸಲೆ ಪೀರ್ದುಪೀರ್ದು ತಂ-।
ಪಡರ್ದ ತಪಸ್ವಿಯೇ ಸುಖಿ ಪೆರಂ ಸುಖಿಯೇ ಅಪರಾಜಿತೇಶ್ವರಾ॥ ॥೭೮॥

ಹೊರಗಿನ ವಿಷಯಗಳತ್ತ ಓಡುತ್ತಿರುವ ಮನಸ್ಸನ್ನು ತಡೆದು ತಡೆದು ಹಿಡಿದು ಆತ್ಮನಲ್ಲಿ ನೆಲೆಗೊಳಿಸಬೇಕು; ತನಗೆ ತಾನೆ ಆತ್ಮಸ್ವರೂಪದ ರಹಸ್ಯವನ್ನೂ ಪರವಸ್ತು ಸ್ವರೂಪದ ರಹಸ್ಯವನ್ನೂ ಆತ್ಮನಲ್ಲಿ ಹೇಳಿ, ಹೇಳಿ, ಆತ್ಮ ಸ್ವರೂಪವನ್ನು ಪ್ರೀತಿಸಿ ಪುನಃ ಪುನಃ ನೋಡುತ್ತಾ ಶಾಂತಿಯೆಂಬ ಸುಖಾಮೃತವನ್ನು ಹೀರಿ ತಂಪುಗೊಂಡ ತಪಸ್ವಿಯೇ ಪರಮಸುಖಿ ಧನ್ಯ. ಇತರರು ಸುಖಿಗಳಲ್ಲ.

ಮನಮನಿದೊಂದನೇ ತನುವಿನೊಳ್ನೆಲಸಿರ್ದ ನಿಜಾತ್ಮನಲ್ಲಿ ನೆ-।
ಟ್ಟನೆ ನಿಲಿಸಲ್ಕೆ ಸಾಕು ಭಯವೆತ್ತಣದೆತ್ತಣದಾರ್ತರೌದ್ರಮಿ॥
ತನುಸುಖದಾಸೆಯೆತ್ತಣದು ತೀವ್ರಪರೀಷಹವೆತ್ತ ಮೋಹಮ-।
ಲ್ಲನ ಕುರುಪಾಟವೆತ್ತ ಪಲವುಂ ಕೊಸರೇಕಪರಾಜಿತೇಶ್ವರಾ॥ ॥೭೯॥

ಈ ದೇಹದಲ್ಲಿ ನೆಲೆಸಿರುವ ತನ್ನಾತ್ಮನಲ್ಲಿ ಈ ಮನಸ್ಸನ್ನು ನಿಶ್ಚಲವಾಗಿ ನಿಲ್ಲಿಸಿದರೆ ಸಾಕು, ಅಂತಹವನಿಗೆ ಯಾವ ಭಯವೂ ಇಲ್ಲ. ಆರ್ತ ರೌದ್ರ ಧ್ಯಾನಗಳಿರುವುದಿಲ್ಲ; ಶರೀರ ಸುಖದ ಆಸೆಯೂ, ಹಸಿವೂ ಮೊದಲಾದ ಬಾಧೆಗಳೂ ಅವನಿಗೆ ತಾಕಲಾರದು; ಮೋಹಮಲ್ಲನ ದುಶ್ಚೇಷ್ಟೆ ಆತ್ಮನ ಮುಂದೆ ನಡೆಯದು; ಎಂದು ಹೇಳಿದ ಮೇಲೆ ಇನ್ನು ಹೆಚ್ಚಿನ ವರ್ಣನೆ ಏಕೆ?

ಮನದ ವಿಕಲ್ಪಮಿಂದ್ರಿಯಕಷಾಯಮನಾಗಿಪುದಂತವಾದೊಡಾ।
ತನುವಚನಂಗಳಾಡುವುವು ತಾನದರಿಂದವೆ ಕರ್ಮಲಬ್ಧಿಯಾ-॥
ಮನವೆ ನಿಜಾತ್ಮರೂಪದೊಳೆ ಮಗ್ನವನೆಯ್ದಿದ ಮೇಲೆ ಕರ್ಮಬಂ-।
ಧನದೆಡೆಯೆತ್ತ ನಿರ್ಜರೆಗಿದೊಂದೆಯಲಾ ಅಪರಾಜಿತೇಶ್ವರಾ॥ ॥೮೦॥

ಮನಸ್ಸಿನ ವಿಕಲ್ಪವು ಇಂದ್ರಿಯಗಳನ್ನೂ ಕ್ರೋಧಾದಿ ಕಷಾಯಗಳನ್ನೂ ಉಂಟು ಮಾಡುತ್ತದೆ; ಆ ಇಂದ್ರಿಯ ಕಷಾಯಗಳಿಗೆ ತಕ್ಕಂತೆ ತಾಳ ಹಾಕಿ ನಾಲಿಗೆ – ದೇಹ ಕುಣಿಯುತ್ತದೆ; ಇದರಿಂದ ಕರ್ಮಪ್ರಾಪ್ತಿಯಾಗುತ್ತದೆ ಮನಸ್ಸು ಎಲ್ಲಕ್ಕೂ ಮೂಲ. ಮನಸ್ಸು ತನ್ನ ನಿಜಸ್ವರೂಪದ ಧ್ಯಾನದಲ್ಲಿ ಮಗ್ನವಾದರೆ ಕರ್ಮಬಂಧನಕ್ಕೆ ಎಡೆಯೇ ಇಲ್ಲ; ಹಿಂದಿನ ಕರ್ಮಗಳು ನಿರ್ಜರೆಯಾಗಲು ಮನಸ್ಸು ಆತ್ಮಸ್ವರೂಪ ಚಿಂತನೆಗೆ ತೊಡಗಿದರೆ ಸಾಕು.

ಮನದ ಕುಭಾವಮೇ ದುರಿತಮಲ್ಲಿ ಸುಭಾವಮೆ ಪುಣ್ಯಮಿಾಯೆರ-।
ಳ್ಮನದೊಳಗಿಲ್ಲದಾ ಮನವೆ ತನ್ನ ನಿಜಾತ್ಮನೊಳೈಕ್ಯಮಾಗಿ ಸು-॥
ಮ್ಮನೆ ನಿಲೆ ಮೋಕ್ಷಮಂತದರಿನಾತ್ಮನೆ ತಾಂ ಪಗೆ ತಾನೆ ಬಂಧುವುಂ।
ತನಗೆ ವಿನಿಶ್ಚಯಕ್ಕೆ ಗುರು ತಾನೆಯಲಾ ಅಪರಾಜಿತೇಶ್ವರಾ॥ ॥೮೧॥

ಮನಸ್ಸಿನ ದುಷ್ಪರಿಣಾಮವೇ ಪಾಪ; ಮನಸ್ಸಿನ ಸತ್ಪರಿಣಾಮವೇ ಪುಣ್ಯ; ಪಾಪ ಪುಣ್ಯಗಳೆರಡೂ ಇಲ್ಲದ ನಿರ್ಮಲ ಮನಸ್ಸು ತನ್ನ ಆತ್ಮಚಿಂತನೆಯಲ್ಲಿ ಐಕ್ಯವಾಗಿ ನಿಂತರೆ ಅದೇ ಮೋಕ್ಷ; ಇಲ್ಲವೇ ತನಗೆ ತಾನು ಬಂಧುವು. ಅದರಿಂದ ಆತ್ಮನೇ ತನಗೆ ತಾನು ಶತ್ರುವು; ತನ್ನ ಆತ್ಮ ಶಾಶ್ವತಸ್ಥಾನ ಹೊಂದುವುದಕ್ಕೆ ತಾನೇ ತನಗೆ ಗುರುವು ಆಗಿದ್ದಾನೆ.

ಇಷ್ಟರುಮೆನ್ನೊಳಿರ್ದಪರನಿಷ್ಟರುಮೆನ್ನೊಳೆಯಿರ್ದಪರ್ ಜಿನೋ–।
ದ್ದಿಷ್ಟಮಿದಿರ್ದ ಮೇಲೆ ಪೊರಗೇನನಭೀಕ್ಷಿಪೆನೇನ ಮಾಡುವೆಂ॥
ಅಷ್ಟಗುಣಂಗಳೊಳ್ನಲಿವುತೊತ್ತರಿಸುತ್ತೊಡನಷ್ಟಕರ್ಮಮಂ।
ದೃಷ್ಟಿಯನೆನ್ನೊಳಾಂ ನಿರಿಸಿ ನಿಂದಪೆನಿನ್ನಪರಾಜಿತೇಶ್ವರಾ॥ ॥೮೨॥

ಪ್ರೀತಿಸುವವರೂ ನನ್ನಲ್ಲೇ ಇದ್ದಾರೆ; ದ್ವೇಷಿಸುವವರೂ ನನ್ನಲ್ಲೇ ಇದ್ದಾರೆ; ಎಂದು ಜಿನವಾಣಿ ಸಾರುತ್ತದೆ; ಹೀಗಿದ್ದ ಮೇಲೆ ಹೊರಗೆ ನೋಡುವುದೂ ಮಾಡುವುದೂ ಏನೂ ಇಲ್ಲ; ಸಮ್ಯಕ್ತ್ವ, ಅನಂತಜ್ಞಾನ, ಅನಂತದರ್ಶನ, ಅನಂತವೀರ್ಯ, ಸೂಕ್ಷ್ಮತ್ವ, ಅವಗಾಹಿತ್ವ, ಅವ್ಯಾಬಾಧತ್ವ, ಅಗುರುಲಘುತ್ವ ಎಂಬ ಅಷ್ಟಗುಣಾಸಕ್ತನಾಗಿ ಸಂತೋಷಿಸುತ್ತಾ, ಘಾತಿ ಮತ್ತು ಅಘಾತಿಗಳೆಂಬ ಅಷ್ಟಕರ್ಮಗಳನ್ನು ಹಗೆಗಳೆಂದು ದೂರಮಾಡುತ್ತಾ ನನ್ನ ಆತ್ಮನಲ್ಲಿಯೇ ದೃಷ್ಟಿನೆಟ್ಟು, ನಿನ್ನನ್ನು ನನ್ನ ಮನದಲ್ಲಿ ನೆಲೆಗೊಳಿಸುವೆನು.

ಅರಸುವೆನೆನ್ನ ದೇಹದೊಳಗೆನ್ನನೆ ಕಾಣ್ಬೆನಮೂರ್ತಸಿದ್ಧನಂ।
ಪೊರಗೊಳಗೆಲ್ಲಮಂ ತೊಳೆದು ತಿಂಗಳ ಪುತ್ತಳಿ ಮಾಡಿ ನೋಡುವೆಂ॥
ತರುಬುವೆನಲ್ಲಿಯೇ ಮನಮನಾಗಳೆ ಬಾಹ್ಯಸಮಸ್ತಚಿಂತೆಯಂ।
ಮರೆವೆನನಂತಸೌಖ್ಯದೊಳಗಾಳ್ದಪೆನಾನಪರಾಜಿತೇಶ್ವರಾ॥ ॥೮೩॥

ನನ್ನ ಶರೀರದೊಳಗೆ ಹುಡುಕಿದರೆ ನನ್ನನ್ನು ನಾನೇ ಕಾಣುತ್ತೇನೆ. ಹೊರಗೂ ಒಳಗೂ ಕೊಳೆಯನ್ನು ತೊಳೆದುಕೊಂಡು ಚಂದ್ರನ ಪ್ರತಿಬಿಂಬದಂತೆ ಶುಭವನ್ನಾಗಿ ಮಾಡಿ ಅಮೂರ್ತಸಿದ್ಧನನ್ನು ಕಾಣುತ್ತೇನೆ; ಮನಸ್ಸನ್ನು ಅಲ್ಲಿಯೇ ಸ್ಥಿರಗೊಳಿಸುತ್ತೇನೆ; ಹೊರಗಿನ ಚಿಂತೆಯನ್ನೆಲ್ಲಾ ಮರೆತು ಅನಂತ ಸೌಖ್ಯಸಾಗರದಲ್ಲಿ ಮುಳುಗುವೆನು.

ಬಾಗದೆ ತೂಗದೋರೆ ಪುಗದೊಯ್ಯನೆ ಸೈಕನೆ ಕುಳ್ಳಿತಕ್ಕೆ ನಿಂ–।
ದಾಗಲಿ ದೇಹಮೂಷೆಯನುಪಾಯದೊಳಾಂತು ತಪೋಗ್ನಿಗೊಡ್ಡಿ ಬೇ–॥
ರಾಗಿರೆ ಸೋರ್ಚೆ ಕರ್ಮಮಯಣಾಕೃತಿಯಂ ಬಳಿಕಲ್ಲಿ ತೋರುತಿ–।
ರ್ಪಾಗಸಮೆಂದು ಕಾಣ್ಬೆನೊಳಗೆನ್ನನೆನಾನಪರಾಜಿತೇಶ್ವರಾ॥ ॥೮೪॥

ಶರೀರವೆಂಬುದು ಮಣ್ಣಿನ ಮೂಸೆ ಅದನ್ನು ಬಗ್ಗಿಸದೆ, ತಗ್ಗಿಸದೆ ಅಡ್ಡಾಗಿಸದೆ, ಉದ್ದಾಗಿಸದೆ, ನೆಟ್ಟಗೆ ನಿಂತಾಗಲಿ, ಕುಳಿತಾಗಲಿ, ತಪಸ್ಸೆಂಬ ಬೆಂಕಿಗೆ ಉಪಾಯವಾಗಿ ಒಡ್ಡಿ ಕರ್ಮಮಯಣದ (ಮೇಣದಾಕಾರದ) ಮೂರ್ತಿಯನ್ನು ಸೋರಿಸಿದಾಗ, ಅದು ಆತ್ಮನಿಂದ ಬೇರೆಯಾಗಲು, ಅಲ್ಲಿ ಆಗ ಕಾಣುತ್ತಿರುವ ಆಕಾಶವು ನಾನೆಂದೂ ನನ್ನನ್ನೇ ನಾನು ಆತ್ಮನ ರೂಪದಲ್ಲಿ ನೋಡುವೆನು.

ಚೇತನನಾತ್ಮನಾಗಸಮಚೇತನಮೆಂಬಿನಿತಲ್ಲದೇ ಸ್ವರೂ-।
ಪಾತಿಶಯಕ್ಕೆ ಭೇದವಿಡಲಿಲ್ಲ ನಭಕ್ಕೆಯುಮಾತ್ಮತತ್ತ್ವಕಂ॥
ಓತದರಿಂದಮಾಗಸವೆ ತಾಂ ಪುರುಷಾಕೃತಿಯಾಯ್ತೊ ಎಂಬುಪಾ-।
ಯಾತುರವಿಟ್ಟು ನೋಳ್ಪೆನೊಳಗೆನ್ನನೆನಾನಪರಾಜಿತೇಶ್ವರಾ॥ ॥೮೫॥

ಆತ್ಮನು ಚೈತನ್ಯರೂಪನು, ಆಕಾಶವು ಜಡವಸ್ತು; ಇಷ್ಟು ವ್ಯತ್ಯಾಸದ ವಿನಾ ಆಕಾಶಕ್ಕೂ ಆತ್ಮಕ್ಕೂ ಬೇರೇನೂ ಅಂತರವಿಲ್ಲ. ಆದುದರಿಂದ ಆ ಆಕಾಶವೇ ಪುರುಷಾಕಾರವನ್ನು ಪಡೆಯಿತೋ ಎಂಬಂತೆ ಉಪಾಯದಿಂದ ಆತುರಪಟ್ಟು ನಾನು ನನ್ನನ್ನೇ ಅಂತರಂಗದಲ್ಲಿ ಪ್ರೀತಿಸಿ ನೋಡುವೆನು.

ಸಿದ್ಧರೆ ರೂಪಿನೊಳ್ಮೊದಲೆ ನೋಟದ ಸಾಧನೆ ಮಾಡಿ ಮಾಡಿ ಸಂ-।
ಶುದ್ಧದೊಳಾತನುಮಿಂತೆಯೆನುತಾಗಲೆ ತನ್ನನೆ ನೋಡಿ ನೋಡಿಯಾ॥
ಸಿದ್ಧರುಮಾನುಮೆಂಬೆರಡು ಭೇದವಡಂಗಿ ನಿಜಾತ್ಮನಲ್ಲಿ ಸ-।
ನ್ನದ್ಧದೊಳೈಕ್ಯವಾಗುವನೆ ಸಿದ್ಧನಲಾ ಅಪರಾಜಿತೇಶ್ವರಾ॥ ॥೮೬॥

ಮೊದಲು ಸಿದ್ಧರ ಆಕಾರಗುಣಗಳನ್ನು ನೋಡಿ ತಿಳಿಯಲು ಸಾಧನೆ ಮಾಡಬೇಕು; ಆಮೇಲೆ ನಾನು ಶುದ್ಧನಿಶ್ಚಯದೃಷ್ಟಿಯಿಂದ ಈ ಸಿದ್ಧಾತ್ಮರ ಹಾಗೆ ಶುದ್ಧನು ಎಂದು ಶುದ್ಧಾತ್ಮನನ್ನೂ ಆ ಸಿದ್ಧರನ್ನೂ ನೋಡಿ ನೋಡಿ ಆ ಸಿದ್ಧರು ಮತ್ತು ಈ ನಾನು ಎಂಬ ಭೇದಭಾವ ಅಳಿದು ತನ್ನಾತ್ಮನಲ್ಲಿ ಸಿದ್ಧನಾಗಿ ಐಕ್ಯನಾಗಬೇಕು ಆಗ ಆತ್ಮನೇ ಪರಮಾತ್ಮನಾಗುವನು.

ನಾಸಿಕದಗ್ರದೊಳ್ನೆಲಸಿ ದೃಷ್ಟಿಗಳೊಪ್ಪೆ ಮನಂ ಲಲಾಟದೊಳ್।
ಸೂಸದೆ ಕೂರ್ಮನಂತೊಳಗಡಂಗಿಸಿ ಮತ್ತು ಳಿದಿಂದ್ರಿಯಂಗಳುಂ॥
ಶ್ವಾಸಮದೊಯ್ಯನಾಗಲೊಳಗೆನ್ನನೆ ನಾಂ ಪರಿಯಂಕ ಚಂದ್ರ ಭ-।
ದ್ರಾಸನಮಾದಿಯಾದವರೊಳೀಕ್ಷಿಪೆನಿನ್ನಪರಾಜಿತೇಶ್ವರಾ॥ ॥೮೭॥

ಆತ್ಮಧ್ಯಾನ ಮಾಡುವವನು ತನ್ನ ದೃಷ್ಟಿಯನ್ನು ಮೂಗಿನ ತುದಿಯಲ್ಲಿರಿಸಬೇಕು; ಮನಸ್ಸನ್ನು ಭ್ರೂಮಧ್ಯದಲ್ಲಿ ಸ್ಥಿರವಾಗಿ ನಿಲ್ಲಿಸಬೇಕು; ಉಳಿದ ಇಂದ್ರಿಯಗಳನ್ನು ಆಮೆಯಂತೆ ಒಳಗಡಗಿಸಿಕೊಳ್ಳಬೇಕು; ನಿಧಾನವಾಗಿ ಉಸಿರಾಡುತ್ತಾ ಪರಿಯಂಕಾಸನ, ಚಂದ್ರಾಸನ, ಭದ್ರಾಸನ ಮೊದಲಾದ ಆಸನಗಳಲ್ಲಿ ಸ್ಥಿರ ಶರೀರಿಯಾಗಿ ನನ್ನನ್ನು ನಾನೇ ನೋಡುವೆನು.

ಕಲಿಗೆ ಮಹಾಬಲಂಗೆ ಮುಖ ಕುಕ್ಕುಟ ಕೂರ್ಮ ಸರೋಜ ವಜ್ರ ಕುಂ।
ಡಲಿಕ ಮಯೂರ ವೀರ ಮಕರೋತ್ಕುಟಿಕಾಸನಮಾದಿಯಾದಿವುಂ॥
ಫಲಿಸುಗುಮಲ್ಪಶಕ್ತಿಗೆಸೆಗುಂ ಪರಿಯಂಕಮದೊಂದು ಮಗ್ಗುಲೊಳ್।
ಮಲಗಿಯುಮಾತ್ಮದೃಷ್ಟಿಯಹುದಾರದವಂಗಪರಾಜಿತೇಶ್ವರಾ॥ ॥೮೮॥

ಮಹಾಬಲಶಾಲಿಯಾದ ವೀರನಿಗೆ ಮುಖ–ಕುಕ್ಕುಟ–ಕೂರ್ಮ–ಕಮಲ–ವಜ್ರ – ಕುಂಡಲಿಕ – ಮಯೂರ – ವೀರ – ಮಕರ – ಉತ್ಕುಟಿಕ ಮೊದಲಾದ ಆಸನಗಳಲ್ಲಿ ಸಿದ್ಧಿ ದೊರೆಯುತ್ತದೆ. ಅಲ್ಪಶಕ್ತಿಯುಳ್ಳವನಿಗೆ ಪರಿಯಂಕ ಆಸನವು ಅನುಕೂಲವಾಗುತ್ತದೆ; ಅದೂ ಸಾಧ್ಯವಿಲ್ಲದವನಿಗೆ ಒಂದು ಪಕ್ಕಕ್ಕೆ ಮಲಗಿಕೊಂಡೇ ಆತ್ಮ ಚಿಂತನೆ ಮಾಡಿ, ಆತ್ಮಸಿದ್ಧಿ ಪಡೆಯಬಹುದು.

ಆಸನಸಂಕುಲಂಗಳನುಬಂಧದಿ ಜಾಡ್ಯಹರಂ ಪಟುತ್ವವೆ–।
ಲ್ಲೋಸರಿಕುಂ ಪುರಾಣರುಜೆ ಪೂರಕ ಕುಂಭಕ ರೇಚಕಂಗಳ–॥
ಭ್ಯಾಸಮೆ ಚಿತ್ತಮಂ ಸ್ಥಿರತೆಮಾಡಿ ವಿಕಲ್ಪಮನೊತ್ತುಗುಂ ಸಮಂ–।
ತೀ ಸಮಕಟ್ಟು ಬೇಕು ನಿಜವಂ ಬಗೆವಂಗಪರಾಜಿತೇಶ್ವರಾ॥ ॥೮೯॥

ಈ ಆಸನಗಳ್ಲಲಿ ತಪಸ್ಸು ಮಾಡುವುದರಿಂದ ಜಡತ್ವ ಹೋಗಿ ಪಟುತ್ವ ಉಂಟಾಗುತ್ತದೆ; ಹಳೆಯ ರೋಗಗಳೆಲ್ಲ ನಷ್ಟವಾಗುತ್ತದೆ; ಪೂರಕ, ಕುಂಭಕ, ರೇಚಕಗಳ ಅಭ್ಯಾಸದಿಂದ ಮನಸ್ಸು ಸ್ಥಿರವಾಗಿ ಚಂಚಲತೆ ದೂರವಾಗುತ್ತದೆ; ಹಾಗೆ ತನ್ನಲ್ಲಿರುವ ಶುದ್ಧಾತ್ಮನನ್ನು ಚಿಂತಿಸುವವನಿಗೆ ಮೇಲೆ ಹೇಳಿದ ಆಸನಗಳಿತ್ಯಾಗಿ ಸಲಕರಣೆಗಳ ಸಮಕಟ್ಟು ಬೇಕಾಗುತ್ತದೆ.

ಪೊಳೆ ಕೆರೆಯೊತ್ತು ವಾರ್ಧಿತಟಮರ್ಹದಗಾರಮರಣ್ಯಮುಂ ವನಂ।
ಪುಳಿಲಚಳಂ ಬಿಲಂ ಗುಹೆ ನಿಷೀದಿಕೆ ಪಾಳ್ಮನೆ ರುದ್ರಭೂಮಿಯಿ–॥
ನ್ನುಳಿದ ವಿವಿಕ್ತಮಕ್ಕೆ ಪಶು ಷಂಡ ವಧೂ ಖಳಜಂತು ದಾರಿಗರ್।
ಸುಳಿಯದ ತಾಣಮಾದೊಡಿವು ಜಾನಕೆ ಲೇಸಪರಾಜಿತೇಶ್ವರಾ॥ ॥೯೦॥

ಹೊಳೆ, ಕೆರೆಯ ದಂಡೆ, ಸಮುದ್ರತೀರ, ಜಿನಾಲಯ ಅರಣ್ಯ, ವನ, ಮರಳದಿನ್ನೆ, ಬಿಲ, ಗುಹೆ, ಸಮಾಧಿಸ್ಥಳ, ಹಾಳುಮನೆ, ಸುಡುಗಾಡು ಇತರ ನಿರ್ಜನ ಪ್ರದೇಶಗಳಾಗಲಿ, ಪಶುಗಳು, ನಪುಂಸಕರು, ಸ್ತ್ರೀಯರು, ದುಷ್ಟಜಂತುಗಳು, ಪ್ರಯಾಣಿಕರು ಸಂಚಾರಮಾಡದಿರುವ ಜಾಗಗಳಾಗಲಿ ಧ್ಯಾನಕ್ಕೆ ಸ್ಥಾನಗಳಾಗಿವೆ.

ಬಾರದ ಜಾನಮಂ ಬರಿಸಿಕೊಂಬ ಸುಸಾಧುಜನಕ್ಕಿವಲ್ಲದೇ॥
ಘೋರತಪೋಧನಂ ಬಗೆವನೇ ಮಳೆ ಗಾಳಿ ಸಿಡಿಲ್ಬಿಸಿಲ್ಗಳಂ॥
ಸೀರುಡು ಪಾವು ಪೆರ್ಬುಲಿಗಳಂ ಪೆರರಿಟ್ಟುಪಸರ್ಗಮಂ ಮನೋ-।
ಧೀರದೆ ಗೆಲ್ದು ನಿತ್ಯಪದನಪ್ಪನಲಾ ಅಪರಾಜಿತೇಶ್ವರಾ॥ ॥೯೧॥

ಧ್ಯಾನ ಮಾಡಲು ತಿಳಿಯದ, ಆದರೆ ಧ್ಯಾನದ ಅಭ್ಯಾಸಕ್ಕೆ ಯತ್ನಿಸುವ, ಸಾಧುಸಜ್ಜನ ಜನಕ್ಕೆ ಇವೆಲ್ಲಾ ಬೇಕು. ಘೋರ ತಪಮಾಡುವ ತಪೋಧನನಿಗೆ ಬೇಕಿಲ್ಲ; ಅವನು ಮಳೆ, ಗಾಳಿ, ಬಿಸಿಲು, ಸಿಡಿಲುಗಳನ್ನೂ ಈಚಲುಹುಳು, ಹಾವು, ಹೆಬ್ಬುಲಿಗಳ ಬಾಧೆಗಳನ್ನೂ ಇತರರು ಕೊಟ್ಟ ಉಪಸರ್ಗಗಳನ್ನು ಮನೋಧೈರ್ಯದಿಂದ ಜಯಿಸಿ ಶಾಶ್ವತವಾದ ಸಿದ್ಧ ಪದವಿಯನ್ನು ಪಡೆಯುತ್ತಾನೆ.

ರಂಭೆಯೆ ಬಂದು ತಾಂ ಕೊರಲನಪ್ಪಿದೊಡಂ ಪುಳಕಂಗಳಾಗದೇ।
ಕುಂಭಿ ಚಮೂರು ಬೃಂಹಿಸುತೆ ಗರ್ಜಿಸುತಂ ಬರೆ ಬಲ್ಪುಗುಂದದೇ॥
ಜೃಂಭಿಸಿ ಕಾಡುಗಿಚ್ಚು ಕವಿಯುತ್ತಿರೆ ಬುದ್ಧಿಕಲಂಕದೇ? ಶಿಲಾ-।
ಸ್ತಂಭವೆನಲ್ಕೆಯೆನ್ನೊಳಗೆ ನಿಲ್ವೆನದೆಂದಪರಾಜಿತೇಶ್ವರಾ॥ ॥೯೨॥

ಸ್ಥಿರಚಿತ್ತನಾದ ಆತ್ಮಧ್ಯಾನಿಯು ರಂಭೆಯೇ ಮೆಚ್ಚಿ ಬಂದು ಕಂಠಾಲಿಂಗನ ಮಾಡಿದರೂ, ರೋಮಾಂಚನ ಹೊಂದದೆ, ಆನೆ ಘೀಂಕಾರ ಮಾಡಿದರೂ ಹುಲಿ ಗರ್ಜಿಸುತ್ತ ಮೇಲೆ ಬಿದ್ದರೂ ಎದೆಗುಂದದೆ, ಕಾಡುಕಿಚ್ಚು ಹತ್ತಿಕೊಂಡು ಹರಡಿ ಆವರಿಸಿದರೂ, ಬುದ್ಧಿ ಕೆಡದೆ ಕಲ್ಲಿನ ಕಂಭದ ಹಾಗೆ ಸ್ಥಿರನಾಗಿರುತ್ತಾನೆ. ಅಂಥ, ಧೃತಿ, ಸ್ಥಿರತೆ ನನ್ನಲ್ಲಿ ಎಂದು ನೆಲೆ ಮಾಡುತ್ತವೆ?

ಇರುತಿರುತಿರ್ದು ಚಿಂತಿಸಿ ಶರೀರದ ಕರ್ಮದ ರೂಪನಂತೆ ಕೊ-।
ಕ್ಕರಿಸಿ ತಪೋಗ್ನಿಯಿಂ ಸುಡುವೆನೀ ಭವಬಂಧಮನೆಂದು ಧೈರ್ಯವಂ-॥
ಕುರಿಸಿ ಪರೀಷಹಂ ಬರಿಸಿ ದೇಹಮನೊಡ್ಡಿ ನಿಜಾತ್ಮದೃಷ್ಟಿಯೊಳ್।
ತೆರಳದೆ ನಿಂದು ಗೆಲ್ವವನೆ ಧನ್ಯನಲಾ ಅಪರಾಜಿತೇಶ್ವರಾ॥ ॥೯೩॥

ಈ ಶರೀರವನ್ನು ತಳೆದಿರುವಾಗಲೇ ಶರೀರದ ಅಸ್ಥಿರತೆಯನ್ನೂ ಹಾಗೆಯೇ ಕರ್ಮಬಂಧನವಿರುವಾಗಲೇ ಕರ್ಮದ ಕುಟಿಲತೆಯನ್ನೂ, ವಿಚಾರ ಮಾಡಿ ಹೇಸಿ, ಅವನ್ನು ಧೈರ್ಯದಿಂದ ತಪಸ್ಸೆಂಬ ಬೆಂಕಿಯಿಂದ ಸುಟ್ಟು ಬೂದಿ ಮಾಡುತ್ತೇನೆಂದು ಧೈರ್ಯ ಹೊಂದಿ ಪರೀಷಹಗಳು ಬಿಡದೆ ಒದಗಿದಾಗ ಅವಕ್ಕೆ ದೇಹ ಒಡ್ಡಿ ಸಹಿಸಿ, ತನ್ನ ಆತ್ಮಚಿಂತನೆಯನ್ನು ಬಿಡದೆ, ಈ ಎಲ್ಲ ಬಾಧೆಗಳನ್ನೂ ಗೆದ್ದವನೇ ಧನ್ಯನು; ಮಾನ್ಯನು.

ಒಪ್ಪಿಸಿ ದೇಹಮಂ ತಪದ ತಾಪಕೆ ತನ್ನ ನಭಸ್ವರೂಪಮಂ।
ನಪ್ಪರಿದಪ್ಪಿಕೊಂಡು ನಿಲೆ ಲೋಕದ ಕಣ್ಗಿದು ಯೋಗಿವೇಷಮೋ॥
ಲೆಪ್ಪದ ರೂಪೊ ಕಲ್ಲ ಪರಿಜೋ ಎನೆ ತೋರ್ಪಿನಮಷ್ಟಕರ್ಮಮುಂ।
ಕಪ್ಪನೆ ಕಂದಿ ಬೆಂದು ತಪನಂಬುಗವೇ? ಅಪರಾಜಿತೇಶ್ವರಾ॥ ॥೯೪॥

ತಪಸ್ಸಿನ ತಾಪಕ್ಕೆ ದೇಹವನ್ನರ್ಪಿಸಿ, ಆಕಾಶ ಸ್ವರೂಪದಂತಿರುವ ಆತ್ಮರೂಪವನ್ನು ಸ್ಮರಿಸಿ, ಆ ಸ್ವರೂಪಧ್ಯಾನದಲ್ಲಿಯೇ ನೆಲೆ ನಿಂತು, ಜನರ ಕಣ್ಣಿಗೆ, ಇವನು ಯೋಗಿವೇಷಧಾರಿಯೋ? ಎರಕದ ಪ್ರತಿಮೆಯೋ? ಕಲ್ಲಿನ ಬೊಂಬೆಯೋ? ಎಂದು ಅನುಮಾನಿಸುವಷ್ಟರಮಟ್ಟಿಗೆ ಸ್ಥಿರವಾಗಿ ಆತ್ಮಚಿಂತನೆ ಮಾಡಿದರೆ ಅಷ್ಟಕರ್ಮಗಳು ಕಪ್ಪನೆ ಕಂದಿಬೆಂದು ಸುಟ್ಟುಹೋಗುತ್ತವೆ.

ಆದಿಯ ವಜ್ರಕಾಯಗದವರ್ಗಲ್ಲದೆ ತಾಳ್ವುದಶಕ್ಯಮುಷ್ಣವಾ-।
ತಾದಿಪರೀಷಹಂಗಳನದೇಂ ಬಿಸವಂದಮೊ ಈಗಳುಂ ಕೆಲರ್॥
ಈ ದೊರೆಮೆಯ್ಯೊಳುಗ್ರತರಘೋರಮಹಾತಪಮಂ ನೆಗಳ್ಚುಗುಂ।
ಮೇದಿನಿಗೀ ಮುನೀಂದ್ರರೆ ಜಿನೇಂದ್ರರಲಾ ಅಪರಾಜಿತೇಶ್ವರಾ॥ ॥೯೫॥

ಸೆಕೆ, ಗಾಳಿ ಮೊದಲಾದ ಬಾಧೆಗಳನ್ನು ಎದುರಿಸುವುದು, ವಜ್ರಶರೀರಿಗಳಿಗೆ ಶಕ್ಯವಲ್ಲದೆ ಬೇರೆಯವರಿಗೆ ಅಸಾಧ್ಯವು; ಆದರೆ ಕೆಲವು ಮುನಿಗಳು ಈಗಲೂ ತಾವು ಜನ್ಮವೆತ್ತ ಮೈಯಲ್ಲೇ ಉಗ್ರೋಗ್ರ ತಪಸ್ಸನ್ನು ಮಾಡುತ್ತಾರೆ; ನಿಜಕ್ಕೂ ಈ ಕಲಿಕಾಲದಲ್ಲಿ ಈ ಜಗತ್ತಿಗೆ ಈ ಮುನೀಶ್ವರರೇ ಜಿನೇಶ್ವರರು, ಅಲ್ಲವೇ?

ನರಕದೊಳಟ್ಟಿ ಮೆಟ್ಟಿ ಕಡು ಕಾಸುವ ಕೀಸುವ ಸರ್ವಬಾಧೆಯಂ।
ಸ್ಮರಿಸಿದೊಡೊತ್ತಿ ಹೇರಿ ಪಶುವಂ ಮೃಗವಾದೊಡೆಯೆಚ್ಚು ಕೊಚ್ಚಿ ಗೋ-॥
ಣರಿವುದನಬ್ಬೆಯುಬ್ಬರದ ಗಬ್ಬದೊಳುಬ್ಬಸದಿಂ ಬಳಲ್ದ ತ-।
ನ್ನಿರವನೆ ಚಿಂತಿಪಂಗೆ ತಪದೊಳ್ಬಿರಿಸೇಕಪರಾಜಿತೇಶ್ವರಾ॥ ॥೯೬॥

ನರಕದಲ್ಲಿ ಹೊಡೆದೋಡಿಸುವರು; ತುಳಿದಾಡುವರು; ಬೆಂಕಿಯಲ್ಲಿ ಕೆಂಪಗೆ ಕಾಸುವರು; ಚರ್ಮ ಸುಲಿಯುವರು, ಇವೆಲ್ಲವನ್ನು ನೆನೆಸಿಕೊಂಡರೆ, ಪಶುವಾದರೆ ಒತ್ತಿ ಭಾರವನ್ನು ಹೊರಿಸುವರು; ಮೃಗವಾದರೆ ಬಾಣದಿಂದ ಕೊಚ್ಚಿ ಕುತ್ತಿಗೆ ಕತ್ತರಿಸುವರು; ಇವುಗಳನ್ನು ನೆನೆದರೆ ತಾಯಿಯ ಉಬ್ಬಿದ ಗಬ್ಬದಲ್ಲಿ ಉಸಿರುಗಟ್ಟಿ ಆಯಾಸಪಟ್ಟ ನವಮಾಸ ಸ್ಥಿತಿಯನ್ನು ನೆನೆದರೆ, ಈ ಎಲ್ಲ ಕಷ್ಟಗಳನ್ನು ನೆನೆದರೆ ತಪಸ್ಸಿನ ಕಷ್ಟಗಳು ಕಷ್ಟಗಳೆಂದೇ ಎನ್ನಿಸದು.

ಸ್ವಾಮಿಕುಮಾರನಾ ಗಜಕುಮಾರಕನಾ ಸುಕುಮಾರನಾತ್ಮಚಿಂ-।
ತಾಮಯ ಸಂಜಯಂತ ಗುರುದತ್ತ ಚಿಲಾತಜ ಧರ್ಮಪುತ್ರರಾ॥
ಸ್ವಾಮಿಸುವರ್ಣಭದ್ರ ಶಿವಭೂತಿ ಸುದರ್ಶನ ಪಾರ್ಶ್ವನಾಥರಾ।
ನೇಮವಿದೆಂದು ನಿಂದೊಡೆದೆಯೊಳ್ಭಯವೇಯಪರಾಜಿತೇಶ್ವರಾ॥ ॥೯೭॥

"ಹಿಂದೆ ಘೋರತಪದಲ್ಲಿ ನಿಂತು ಸಿದ್ಧಿ ಹೊಂದಿದ, ಕುಮಾರಸ್ವಾಮಿ, ಗಜಕುಮಾರ, ಸುಕುಮಾರ, ಆತ್ಮಚಿಂತರತನಾನಾದ ಸಂಜಯಂತ, ಗುರುದತ್ತ, ಚಿಲಾತಪುತ್ರ, ಧರ್ಮರಾಯ, ಸುವರ್ಣಭದ್ರಸ್ವಾಮಿ, ಶಿವಭೂತಿ, ಸುದರ್ಶನ, ಪಾರ್ಶ್ವನಾಥಸ್ವಾಮಿ ಇವರುಗಳೂ ಹೀಗೆಯೇ ಕಠಿಣ ನಿಯಮಗಳನ್ನು ಕೈಗೊಂಡರು" ಎಂದು ನೆನೆಯುತ್ತಾ ತಪಸ್ಸಿಗೆ ತೊಡಗಿದರೆ ಭಯವುಂಟಾಗದು.

ಮೈಯ್ಯ ನಿರಾಶೆ ಘೋರತಪಮುತ್ತಮಸಂಯಮಮಾತ್ಮತತ್ತ್ವಮಂ।
ಕೆಯ್ಯೊಳಗಿರ್ದ ಕನ್ನಡಿಯ ನೋಳ್ಪವೊಲೀಕ್ಷಿಪ ಬೋಧೆ ಕೂಡಿದಾ॥
ಸಂಯಮಿಗೆಲ್ಲಿ ಕಾಂಕ್ಷೆಯಿದಿರಿಂ ಕ್ಷಣದೊಳ್ಭವ ವೃಕ್ಷಮೂಲಮಂ।
ಕುಯ್ಯನೆ ಸುಟ್ಟು ತೂರಿ ಶಿವನಾಗಿರನೇ ಅಪರಾಜಿತೇಶ್ವರಾ॥ ॥೯೮॥

ಈ ದೇಹದ ಬಗ್ಗೆ ನಿರಾಸೆ ಹೊಂದಿದವನಿಗೆ, ಕಠಿಣ ತಪಸ್ಸನ್ನು ಆಚರಿಸಿದವನಿಗೆ, ಉತ್ತಮ ಸಂಯಮ ಹೊಂದಿದವನಿಗೆ ಆತ್ಮತತ್ತ್ವ ಕೈಯೊಳಗಿರುವ ಕನ್ನಡಿಯಲ್ಲಿ ಕಂಡಂತೆ ಸ್ಪಷ್ಟವಾಗಿ ಕಾಣುತ್ತದೆ. ಇಂಥ ಜ್ಞಾನವಂತನಾದ ಸಂಯಮಿಗೆ ಬೇರಾವುದರಲ್ಲೂ ಆಸೆ ಇರದು; ಇಂಥ ವ್ಯಕ್ತಿಯು ಕ್ಷಣಕಾಲದಲ್ಲಿ ಸಂಸಾರವೃಕ್ಷದ ಬೇರನ್ನು ಬುಡಸಹಿತ ಕಿತ್ತು ಸುಟ್ಟು ಬೂದಿಮಾಡಿ, ಗಾಳಿಗೆ ತೂರಿ ಶಿವನಾಗುವನು; ಮುಕ್ತನಾಗುವನು.

ಕವಿದ ಮುಗಿಲ್ಗಳೇ ಪರೆಯಲೆಂದುರೆ ಚಿಂತಿಸವೇಳ್ಕುಮಲ್ಲದೇ।
ರವಿಗಧಿಕಪ್ರಕಾಶಗುಣವಾಗಲಿಯೆಂದೆನವೇಳ್ಕೆಯಾತ್ಮನುಂ॥
ಭವವಿಕೃತಾಷ್ಟಕರ್ಮವನೆ ನಷ್ಟಮನೆಯ್ದಿಪನೆಂಬುದಲ್ಲದೇ।
ಶಿವಸುಖವೆಂಬುದಂ ಬಯಸಲೇಕೆ ನಿಜಕ್ಕಪರಾಜಿತೇಶ್ವರಾ॥ ॥೯೯॥

ಸೂರ್ಯನ ಮೇಲೆ ಆವರಿಸಿರುವ ಮೋಡಗಳನ್ನು ಕಂಡಾಗ ಅವೇ ತೇಲಿಹೋಗಲಿ ಎಂದು ಬಯಸುವುದು ಸಹಜ; ಅದುಬಿಟ್ಟು ಸೂರ್ಯನಿಗೆ ಇನ್ನೂ ಹೆಚ್ಚಿನ ಬೆಳಕಿನ ಶಕ್ತಿ ಉಂಟಾಗಲಿ ಎಂದು ಹೇಳಬೇಕಿಲ್ಲ; ಹಾಗೆಂಯೇ ಆತ್ಮನಿಗೆ ಭವವಿಕಾರವನ್ನುಂಟುಮಾಡುವ ಅಷ್ಟಕರ್ಮಗಳನ್ನು ನಾಶವಾಗಲು ಚಿಂತಿಸಬೇಕೇ ಹೊರತು, ಮುಕ್ತಿಸುಖ ಸುಲಭವಾಗಿ ಲಭಿಸಲೆಂದು ಹಾರೈಸಬೇಕಿಲ್ಲ; ಕರ್ಮನಾಶವಾದರೆ ಮುಕ್ತಿಸುಖ ಸಿದ್ಧ. ಮೋಡಗಳು ಚದರಿದರೆ ಸೂರ್ಯನಬೆಳಕು ಹೊಮ್ಮುವುದು ಖಂಡಿತ.

ಶುದ್ಧನಿಜಾತ್ಮನಂ ಬಿಡದೆ ಕಾಣ್ಬ ಸುಭವ್ಯನ ಸೌಖ್ಯಮೆಂಬುದಾ।
ಸಿದ್ಧರ ಸೌಖ್ಯದಂಶಮೆನವೇಳ್ಕುಮಲ್ಲದೆ ನಾಗದೇವಮ-॥
ರ್ತ್ಯೋರ್ದ್ಧತಸೌಖ್ಯದಲ್ಲಿ ಸರಿಹೋಲಿಸಲಾಗದೇಕೆ ಕರ್ಮಸಂ-।
ಬದ್ಧವದಿಂತಿದಸ್ತ ಮಲಮಪ್ಪುದರಿಂದಪರಾಜಿತೇಶ್ವರಾ॥ ॥೧೦೦॥

ತನ್ನಲ್ಲಿರುವ ಶುದ್ಧಾತ್ಮನನ್ನು ನಿರಂತರವಾಗಿ ಧ್ಯಾನಿಸುವ ಆತ್ಮನಿಗೆ ದೊರಕುವ ಸುಖವು, ಆ ಸಿದ್ಧಪರಮೇಷ್ಠಿಗಳಿಗಾಗುವ ಆನಂದದ ಒಂದಂಶವೆನ್ನಬಹುದು. ಹಾಗಲ್ಲದೆ ಆ ಸುಖವನ್ನು ನಾಗದೇವತೆಗಳ, ಕಲ್ಪವಾಸಿಗಳು ಮತ್ತು ನರರ ಹಿರಿಸುಖದ ಸೌಖ್ಯಕ್ಕೆ ಹೋಲಿಸಬಾರದು; ಏಕೆಂದರೆ ದೇವತೆಗಳು ನರರು ಅನುಭವಿಸುವ ಸುಖ-ಪುಣ್ಯ, ಕರ್ಮದ ಕ್ಷಣಿಕ ಫಲ; ಆದರೆ ಇದು ಕರ್ಮಮಲರಹಿತವಾದ ಅಕ್ಷಯಸುಖ ಆಗಿರುತ್ತದೆ.

ಚಿಂತೆಯೊಳೊಂದಿದಾವ ಬರ್ದುಕುಂ ಬಹುದುಃಖಮೆಯೆಂಬರೆಂದುಮಾ
ಚಿಂತೆಯ ಬಾಳ್ಗೊಳೇ ಬರ್ದುಕುತಿರ್ಪರದೇಕೆ ಸುಖಸ್ಥಳಾಂಧಕರ್॥
ಚಿಂತಿಪ ಮಾಳ್ಪ ಮಾತುಲಿವ ದಂದುಗವಿಲ್ಲದೆ ತನ್ನ ರೂಪಿನೊಳ್।
ಶಾಂತದೆ ತೆಪ್ಪಗಿರ್ಪ ಬಗೆದೋರದಲಾ ಅಪರಾಜಿತೇಶ್ವರಾ॥ ॥೧೦೧॥

ಸುಖದ ರೀತಿ ತಿಳಿಯದವರು 'ಚಿಂತೆಯೊಡಗೂಡಿದ ಯಾವ ಬದುಕಾದರೂ ಅತಿ ದುಃಖಕರವಾದುದೆಂದು ಹೇಳುತ್ತಾರೆ; ಹಾಗೇ ಹೇಳುತ್ತಲೇ ಆ ಬಗೆಯ ದುಃಖ ಜೀವನದಲ್ಲಿಯೇ ಬಾಳನ್ನು ಸಾಗಿಸುತ್ತಾರೆ. ಅದೇಕೆ? ಆಲೋಚಿಸುವ, ಮಾಡುವ, ಮಾತಾಡುವ ಬಾಧೆಯಿಲ್ಲದೆ ತನ್ನಾತ್ಮ ಚಿಂತನೆಯಲ್ಲಿಯೇ ಶಾಂತವಾಗಿ ಸುಮ್ಮನಿರುವ ರೀತಿ ಅವರಿಗೇಕೆ ಗೋಚರವಾಗುವುದಿಲ್ಲ?

ನೋಡಿದು ಚಿತ್ರಮೀಕ್ಷಿಸುವುದೆನ್ನ ನಿಜತ್ವಮದರ್ಕೆ ದೇಹಮ-।
ಳ್ಳಾಡದೆ ಕುಳ್ಳಿತಿರ್ಪ ಕೆಲಸಂ ದೊರೆಕೊಂಬುದು ಮೋಕ್ಷಮಿಂತಿದಂ॥
ಮಾಡುವುದರ್ಕೆ ನಾನಲಸಿ ಮೆಯ್ಮನ ಮಾತುಗಳಂ ಬಯಲ್ಗೆ ರೋ-।
ಡಾಡಿಸಿ ಕರ್ಮಮಂ ಕರೆವೆನಜ್ಞತೆಯಿಂದಪರಾಜಿತೇಶ್ವರಾ॥ ॥೧೦೨॥

ನನ್ನ ನಿಜಸ್ವರೂಪವನ್ನು ನೋಡುವುದಕ್ಕೆ ಶರೀರಕ್ಕೆ ಚಲಿಸದಂತೆ ಕುಳ್ಳಿರುವ ಸ್ಥಿತಿ ಉಂಟಾಗುವುದೇ ಮೋಕ್ಷವು. ಆದರೆ ಈ ಕೆಲಸವನ್ನು ಮಾಡಲು ನಾನು ಸೋಮಾರಿಯಾಗಿದ್ದೇನೆ. ನಾನು ಮೂರ್ಖತನದಿದಂ ಮೈಯನ್ನೂ, ಮನಸ್ಸನ್ನೂ, ಮಾತುಗಳನ್ನೂ ಕಾರ್ಯದಲ್ಲಿ ತೊಡಗಿಸಿ ಕರ್ಮ ಬಂಧಿತನಾಗಿರುವೆನು.

ಚಿಂತಿಸವೇಳ್ಪೊಡಂ ಬಿಡದೆ ಚಿಂತಿಕೆ ದೇಹದ ಕಷ್ಟಮಂ ಸುಖ–।
ಭ್ರಾಂತಿಯನೈದು ಭೇದಭವಮಂ ನವಭೇದಪದಾರ್ಥಮಮಂ ವ್ರತಾ–॥
ನಂತವನರ್ಹದಾದಿಗಳಾತ್ಮನ ಕರ್ಮದ ರೂಪನೇಕೆನಲ್।
ಚಿಂತೆಯಿದಸ್ತಚಿಂತೆಯನೆ ಮಾಳ್ಪುದರಿಂದಪರಾಜಿತೇಶ್ವರಾ॥ ॥೧೦೩॥

ನಿರಂತರ ಚಿಂತನೆ ಮಾಡುವುದಾದರೆ, ಶರೀರದ ಕಷ್ಟಗಳನ್ನು ಕುರಿತು ಚಿಂತಿಸಲಿ, ಸಂಸಾರದಲ್ಲಿ ಸುಖವಿದೆಯೆಂಬ ಭ್ರಾಂತಿಯನ್ನು ಕುರಿತು ವಿಚಾರ ಮಾಡಲಿ, ದ್ರವ್ಯ, ಕ್ಷೇತ್ರ, ಕಾಲ, ಭವ, ಭಾವಗಳೆಂಬ ಪಂಚವಿಧ ಸಂಸಾರವನ್ನು ಕುರಿತು ಮಥಿಸಲಿ, ಒಂಭತ್ತು ಪದಾರ್ಥಗಳನ್ನೂ ಅನಂತ ವ್ರತವನ್ನೂ ಪಂಚಪರಮೇಷ್ಠಿಗಳನ್ನೂ ಆತ್ಮದ ಸ್ವರೂಪವನ್ನೂ ಕರ್ಮದ ಸ್ವರೂಪವನ್ನೂ ಚಿಂತಿಸಲಿ ಏಕೆಂದರೆ ಮೇಲೆ ಹೇಳಿದ ವಸ್ತುಗಳ ಚಿಂತನೆಯು ಇತರ ಚಿಂತೆಗಳನ್ನು ಕಳೆಯುತ್ತದೆ.

ಅಳೆದಿರಿಸಿರ್ದುದಂ ಕುಡುವನಂತೆ ಪವಣ್ನುಡಿಯಿಂದೆ ಭವ್ಯರಂ।
ತಿಳಿಪುವ ಸುಮ್ಮನಿರ್ಪ ನಿಜಕಾರ್ಯಕೆ ಪುರುಷಮೃಗಂಬೊಲುರ್ವಿಯೊಳ್॥
ಪೊಳೆವ ವಿವಿಕ್ತಮಂ ಪುಗುವ ಬೈತ ನಿಧಾನವನೀಕ್ಷಿಪಾತನಂ–।
ತೊಳಗನೆ ಕಾಣ್ಬನೇ ಸಫಲಜನ್ಮನಲಾ ಅಪರಾಜಿತೇಶ್ವರಾ॥ ॥೧೦೪॥

ನಿಜವಾದ ಯೋಗಿಯು ಅಳತೆ ಮಾಡಿಸಿರುವ ಪದಾರ್ಥಗಳನ್ನು ಇನ್ನೊಬ್ಬನಿಗೆ ಕೊಡುವವನಂತೆ, ಮಿತವಾದ ಮಾತಿನಿಂದ ಭವ್ಯರಿಗೆ ಬೋಧೆ ಮಾಡುತ್ತಾರೆ; ಉಳಿದ ಕಾಲದಲ್ಲಿ ಸುಮ್ಮನಿರುತ್ತಾನೆ; ಆತನು ತನ್ನ ಕಾರ್ಯಕ್ಕಾಗಿ ಪುರುಷಮೃಗದಂತೆ ಭೂಮಿಯಲ್ಲಿ ಜನಿಸಿ ವಿರಾಜಿಸುತ್ತಾನೆ; ನಿರ್ಜನ ಪ್ರದೇಶದಲ್ಲಿ ಪ್ರವೇಶಿಸಿ ಗುಪ್ತನಿಧಿಯನ್ನು ಕಾಣುವಂತೆ ಆತ್ಮಸ್ವರೂಪವನ್ನು ಕಾಣುತ್ತಾನೆ. ಇಂಥವನ ಜನ್ಮವೇ ಸಾರ್ಥಕಜನ್ಮ!

ಮಳೆ ಸುರಿದಾಗಳೆಂತು ಪನಿ ಗಾಳಿ ಸಿಡಿಲ್ದನಿಗಳ್ಕಿ ಬಾಹ್ಯದೊಳ್।
ಸುಳಿಯದೆ ಗೇಹದೊಳ್ ಶಿಶುಗಳಿರ್ದಪುವಂತೆಲೆ ಯೋಗಿ ನೀನುಮ–॥
ಗ್ಗಳಿಪ ವಿಕಾರಜೃಂಭಣದ ದುಷ್ಷಮದೊಳ್ ಪೊರಗಾಡಬೇಡ ಪ–।
ಜ್ಜಳಿಸುತೆ ನಿನ್ನೊಳಿರ್ದು ಜಯಿಸೆಂದೆಯಲಾ ಅಪರಾಜಿತೇಶ್ವರಾ॥ ॥೧೦೫॥

ಮಳೆ ಸುರಿಯುವಾಗ, ಮೋಡಕ್ಕೂ ಗಾಳಿಗೂ ಸಿಡಿಲಿನ ಶಬ್ದಕ್ಕೂ ಹೆದರಿ ಹೊರಗೆ ಹೋಗದೆ ಸಣ್ಣಮಕ್ಕಳು ಮನೆಯೊಳಗೆ ಹೇಗೆ ಅಡಗಿರುತ್ತವೋ ಹಾಗೆ, ಎಲೈ ಯೋಗಿಯೇ, ನೀನೂ ಸಹ, ಬಲವಾದ ವಿಕಾರಗಳು ಮೆರೆದಾಡುವ ದುಷ್ಷಮ ಕಾಲದಲ್ಲಿ ಹೊರಗಿನ ವಸ್ತುಗಳಲ್ಲಿ ಸಂತೋಷಿಸದೆ ಆತ್ಮಪ್ರಕಾಶನಾಗಿ, ನಿನ್ನಂತರಂಗದಲ್ಲಿ ಧ್ಯಾನ ನಿರತನಾಗಿದ್ದು ಕರ್ಮಗಳನ್ನು ಜಯಿಸು; ಎಂದು ನೀನು ಉಪದೇಶಿಸಿದ್ದು ಸಾರವಾದ ಮಾತು.

ನೀಡು ದಿನಂ ನಿಜಾತ್ಮನನೆ ಭಾವಿಸಿ ಸಂಸ್ಕೃತನಾದಮೇಲೆ ತಾಂ।
ನೋಡುವುದಲ್ಲಿಯೇ ತಿಳಿವುದಲ್ಲಿಯೆ ಪೊರ್ದುವುದಲ್ಲಿಯೇ ಪ್ರಿಯಂ॥
ಮಾಡುವುದಲ್ಲಿಯೇ ಸುಖಿಪುದಲ್ಲಿಯೆ ಅರ್ಚಿಪುದಲ್ಲಿಯೇ ಮರ-।
ಲ್ದಾಡುವುದಲ್ಲಿಯೇ ಪೊರಗೆ ಮೆಚ್ಚನಲಾ ಅಪರಾಜಿತೇಶ್ವರಾ॥ ॥೧೦೬॥

ತನ್ನಾತ್ಮವನ್ನೇ ಧ್ಯಾನಿಸಿ ಸಂಸ್ಕಾರ ಹೊಂದಿದಮೇಲೆ ಅಭ್ಯಾಸವಾದ ಮೇಲೆ ಇಡೀ ದಿವಸವೆಲ್ಲಾ ತಾನು ತನ್ನಾತ್ಮನನ್ನೇ ದಿಟ್ಟಿಸುವುದಲ್ಲಿಂಯೂ, ಅರಿಯುವುದರಲ್ಲಿಯೂ ಅಲ್ಲೇ ಆಶ್ರಯ ಪಡೆಯುವುದರಲ್ಲಿಯೂ, ಅದನ್ನೇ ಪ್ರೀತಿಸುವುದರಲ್ಲಿಯೂ, ಸುಖ ಕಾಣುವುದರಲ್ಲಿಯೂ, ಪೂಜಿಸುವುದರಲ್ಲಿಯೂ ಮತ್ತೆ ವಿನೋದಗೊಳ್ಳುವುದೂ ನಡೆಯುತ್ತದೆ. ಬಾಹ್ಯವಸ್ತುಗಳಲ್ಲಿ ಆಸಕ್ತಿಯನ್ನು ತೋರುವುದಿಲ್ಲ.

ಸಿರಿಯೊಳಗಂತದೇ ಸಿರಿ ಸುಖಕ್ಕದೆ ಸೌಖ್ಯವನೇಕತತ್ತ್ವದಾ।
ತಿರುಳದೆ ತಾನೆ ಕಟ್ಟಕಡೆ ಸರ್ವವಿಚಾರಕೆಯೆಂತೆನಲ್ಕೆ ಸ-॥
ದ್ಗುರುಗಳುಮೈವರಿರ್ದರದರೊಳ್ವರದರ್ಶನಬೋಧವೃತ್ತಿಗಳ್।
ಪರಮತಪಂಗಳಲ್ಲಿ ನೆಲೆಗೊಂಡುದರಿಂದಪರಾಜಿತೇಶ್ವರಾ॥ ॥೧೦೭॥

ಸಿರಿಯಲ್ಲೆಲ್ಲಾ ತನ್ನಾತ್ಮ ರೂಪವೇ ಪರಮಸಿರಿ; ಸುಖದಲ್ಲೆಲ್ಲಾ ಆತ್ಮರೂಪವೇ ಪರಮಸುಖವು; ಅನೇಕತತ್ತ್ವಗಳ ಸಾರವೇ ಆತ್ಮರೂಪು; ಸಮಸ್ತ ವಿಚಾರಗಳ ಪಾರಾವಾರವೆಂದರೆ ಆತ್ಮರೂಪದ ವಿಚಾರವಾಗಿದೆ. ಏಕೆಂದರೆ ಪಂಚಪರಮೇಷ್ಠಿಗಳೂ, ಸದ್ಗುರುಗಳೂ ಎಲ್ಲರೂ ನಿಜಾತ್ಮರೂಪಿಗಳಾಗಿದ್ದಾರೆ; ರತ್ನತ್ರಯವೂ ಪರಮತಪಸ್ಸೂ, ಆತ್ಮಜ್ಞಾನದಲ್ಲಿ ಅಂತರ್ಗತವಾಗಿದೆ.

ಬಹುವಚನಂಗಳೇಕೆ ಭುವನತ್ರಯಸಾರಮಿದಾತ್ಮತತ್ತ್ವಮು-।
ತ್ಸಹಪರನಾಗಿ ತಾನದನೆ ಭಾವಿಸುತಿರ್ದೊಡೆ ಮುಕ್ತಿಯೆಯ್ದುಗುಂ॥
ಸಹಜಮಿದೊಂದೆ ಇನ್ನುಳಿದುವೆಲ್ಲವವೇಂ ವ್ಯವಹಾರವಾತ್ಮನಂ।
ವಹಿಸಿ ಭವಂಗಳೊಳ್ಬರಿಸುತಿರ್ಪುವಲಾ ಅಪರಾಜಿತೇಶ್ವರಾ॥ ॥೧೦೮॥

ಹೆಚ್ಚಿಗೆ ಮಾತೇಕೆ? ಈ ಆತ್ಮತತ್ತ್ವವು ಭುವನತ್ರಯಸಾರವಾಗಿದೆ; ತಾನು ಉತ್ಸಾಹಪರನಾಗಿ ಆ ತತ್ತ್ವವನ್ನೇ ಯೋಚಿಸುತ್ತಿದ್ದರೆ ಮುಕ್ತಿ ದೊರಕುವುದು; ಇದೊಂದೇ ಯಥಾರ್ಥವಾದುದು; ಇನ್ನುಳಿದಿದ್ದೆಲ್ಲ ಆತ್ಮನನ್ನು ವಹಿಸಿಕೊಂಡು ಭವಗಳಲ್ಲಿ ಬಳಲಿಸುವ ವ್ಯವಹಾರವು; ನಿಷ್ಪ್ರಯೋಜಕವಾದವು.

ಆವ ತಪಂಗಳುಂ ಶ್ರುತಮುಮಾಚರಣಂಗಳುಮಕ್ಕೆ ತನ್ನ ಚಿ-
ದ್ಭಾವದ ನೋಟದೊಳ್ಪುದಿದು ಬಂದೊಡೆ ನಿರ್ಜರೆಮಾಳ್ಕುಮಷ್ಟಕ-॥
ರ್ಮಾವಳಿಯಂ ಬಳಿಕ್ಕೆ ಶಿವಮಪ್ಪುದು ತಾನೆಯದಲ್ಲದಿರ್ದೊಡಾ।
ಜೀವಕೆ ಪುಣ್ಯಬಂಧವನೆ ಮಾಳ್ಪುದಲಾ ಅಪರಾಜಿತೇಶ್ವರಾ॥ ॥೧೦೯॥

ಯಾವ ಬಗೆಯ ತಪಸ್ಸುಗಳಾದರೂ, ಯಾವ ಶಾಸ್ತ್ರಗಳಾದರೂ ಎಂಥ ವ್ರತಾಚರಣೆಗಳಾದರು ನನ್ನ ಆತ್ಮಸ್ವರೂಪದ ನೋಟದಲ್ಲಿ ಪ್ರವೇಶಿಸಿ ಬಂದರೆ ಅವು ಅಷ್ಟಕರ್ಮಾವಳಿಯನ್ನು ನಿರ್ಜರೆಗೊಳಿಸುತ್ತದೆ. ತರುವಾಯ ಮುಕ್ತಿ ತಾನಾಗಿ ಆಗುವುದು; ಆ ಆತ್ಮಸ್ವರೂಪದ ನೋಟದಲ್ಲಿ ಪ್ರವೇಶಿಸದಿದ್ದರೆ ಆ ತಪಸ್ಸು ಮುಂತಾದವು ಪುಣ್ಯ ಕರ್ಮದ ಬಂಧನವನ್ನೇ ಉಂಟು ಮಾಡುತ್ತದೆ.

ಭವ್ಯನಭವ್ಯನೀರ್ವರುಮುದಗ್ರತಪೋವ್ರತಶಾಸ್ತ್ರದೊಳ್ ಸಮಾ-।
ನವ್ಯವಸಾಯರಪ್ಪರದರಿಂ ಸುರಸಂಪದಮಪ್ಪುದಲ್ಲದೇ॥
ಅವ್ಯಯಸಿದ್ಧಿಯಾಗದದು ತನ್ನಯ ಚಿತ್ತವನಾತ್ಮರೂಪದೊಳ್।
ಭವ್ಯ ತಪಸ್ವಿ ಯೋಚಿಸಿದೊಡಪ್ಪುದಲಾ ಅಪರಾಜಿತೇಶ್ವರಾ॥ ॥೧೧೦॥

ಭವ್ಯನೂ, ಅಭವ್ಯನೂ ಇಬ್ಬರೂ ಉಗ್ರತಪಸ್ಸು ಮಾಡುವುದರಲ್ಲಿಯೂ ವ್ರತಾಚರಣೆ, ಶಾಸ್ತ್ರಾಭ್ಯಾಸಗಳಲ್ಲೂ ಸಮಾನರಾಗಿರುತ್ತಾರೆ. ಆದ್ದರಿಂದ ದೇವಸಂಪತ್ತು ಉಂಟಾಗುತ್ತದೆ; ಇಬ್ಬರಿಗೂ, ಮೋಕ್ಷಸಿದ್ಧಿ ಆಗುತ್ತದೆ.

ಮನೆಯೊಳಪೂಳ್ದ ತನ್ನೊಡವೆಯಂ ತೆಗೆದುಣ್ಬೊಡೆ ಪುಣ್ಯಮಿಲ್ಲದಂ।
ಧನಿಕರ ಪೊರ್ದಿ ಬೇಡಿದೊಡೆಯೀವರೆ? ಇತ್ತೊಡುಣಲ್ಕೆ ಸಾಲ್ವನೇ॥
ತನುವಿನೊಳಿರ್ದ ತನ್ನನುರೆ ಕಾಣ್ಬೊಡೆ ಭವ್ಯತೆಯಿಲ್ಲದಿರ್ದವಂ।
ಮುನಿಮತವೆಯ್ದಿಯುಂ ಶಿವವನೈಯ್ದುವನೇ ಅಪರಾಜಿತೇಶ್ವರಾ॥ ॥೧೧೧॥

ಮನೆಯಲ್ಲಿ ಹೂಳಿಟ್ಟ ತನ್ನ ಸಂಪತ್ತನ್ನು ಹೊರತೆಗೆದು ಅನುಭವಿಸಲು ಪುಣ್ಯವಿಲ್ಲ; ಇನ್ನು ಆ ಪುಣ್ಯ-ಸಂಪತ್ತನ್ನು ಸಿರಿವಂತರಲ್ಲಿ ಹೋಗಿ ಕೇಳಿದರೆ ಕೊಡುತ್ತಾರೆಯೇ? ಒಂದು ವೇಳೆ ಅವರಿತ್ತರೆ ಅದನ್ನು ಪುಣ್ಯಹೀನನು ಅನುಭವಿಸಲು ಶಕ್ತನಾಗುವನೇ? ಹಾಗೆಯೇ ಭವ್ಯತ್ವವೆಂಬ(ಸಮ್ಯಕ್ತ್ವ) ಗುಣವಿಲ್ಲದವನು ಶರೀರದೊಳಗಿರುವ ಆತ್ಮನನ್ನು ಕಂಡು, ಬಯಸಿ ಮುನಿದೀಕ್ಷೆಯನ್ನು ಹೊಂದಿದರೂ ಮುಕ್ತಿ ಪಡೆಯಲಾರನು.

ಅಶುಭಶುಭಂಗಳೆಂಬೆರಡು ಯೋಗಮಿವವ್ರತಸುವ್ರತಂಗಳೊಳ್।
ವಿಶದಮಿವಿಂತು ಸಂಸೃತಿಯ ಮಾಳ್ಪವು ದುಃಖಸುಖಸ್ವರೂಪದೊಳ್॥
ಅಶುಭವನೊಲ್ಲದಾ ಶುಭದೊಳಿರ್ದದನುಂ ತೊರೆದಾತ್ಮನೊಳ್ಮನೋ।
ವಶನೆನೆ ಶುದ್ಧಯೋಗಮಿದು ಸಿದ್ಧಿಯಲಾ ಅಪರಾಜಿತೇಶ್ವರಾ॥ ॥೧೧೨॥

ಶುಭ ಮತ್ತು ಅಶುಭ ಎಂಬ ಎರಡು ಯೋಗಗಳುಂಟು; ವ್ರತಪಾಲನೆ ಮಾಡದಿದ್ದರೆ ಅಶುಭಯೋಗ ಉಂಟಾಗಿ ಸಂಸಾರ ದುಃಖಮಯವಾಗುತ್ತದೆ. ಉತ್ತಮವ್ರತಪಾಲನೆ ಮಾಡಿದರೆ ಅಶುಭಯೋಗವನ್ನು ಬಿಟ್ಟು ಶುಭಯೋಗದಲ್ಲಿದ್ದು, ಆಮೇಲೆ ಅದನ್ನೂ ಬಿಟ್ಟು ಮನಸ್ಸು ಆತ್ಮನಲ್ಲಿಯೇ ನೆಲೆನಿಂತರೆ ಶುದ್ಧಯೋಗ ಉಂಟಾಗುತ್ತದೆ. ಇದರಿಂದ ಆತ್ಮಸಿದ್ಧಿ ಆಗುತ್ತದೆ.

ವ್ರತತತಿಯಿಲ್ಲದಂದು ಪವಣಿಲ್ಲ ಮನಕ್ಕದರಿಂದೆ ಪಾಪಮಾ-।
ವ್ರತತತಿಯುಳ್ಳೊಡಂತದನೆ ಪಾಲಿಪೆನವ್ರತಮಂ ಕೆಡಿಪ್ಪೆನೆಂ-॥
ಬತಿಮತಿಯುಳ್ಳಿನಂ ಸುಕೃತಮಕ್ಕುಮದುಂ ಭವಬೀಜಮಿಾ ಮನಃ-।
ಕ್ಷತಿ ಕಿಡೆ ತನ್ನೊಳಿರ್ದೊಡೆ ಸಿದ್ಧಿಯಲಾ ಅಪರಾಜಿತೇಶ್ವರಾ॥ ॥೧೧೩॥

ವ್ರತಪಾಲನೆ ಮಾಡದಿದ್ದರೆ ಮನಸ್ಸಿಗೆ ಪುಣ್ಯದ ಶಕ್ತಿಯೇ ಸಿಗಲಾರದು; ಇನ್ನು ಅವ್ರತದಿಂದ ಪಾಪವೇ ಬರುತ್ತದೆ; ಆದ್ದರಿಂದ ವ್ರತಪಾಲನೆ ಮಾಡಿ ಅವ್ರತವನ್ನು ನಾಶ ಮಾಡುವೆನು; ಪಾಪವನ್ನು ದೂರಗೊಳಿಸುವೆನು; ಎಂಬ ಉತ್ತಮ ತಿಳಿವಳಿಕೆಯಿಂದ ಪುಣ್ಯಗಳಿಕೆ ಆಗುತ್ತದೆ. ಆದರೆ ಆ ಪುಣ್ಯವೂ ಸಂಸಾರದ ಬಂಧನಕ್ಕೇ ಕಾರಣವಾಗುತ್ತದೆ. ಆದ್ದರಿಂದ ಪಾಪ-ಪುಣ್ಯಗಳತ್ತ ಓಲಾಡುವ ಚಂಚಲಮನವನ್ನು ಆತ್ಮಚಿಂತನೆಯಲ್ಲಿ ತೊಡಗಿಸಿದರೆ ಆಗ ಆತ್ಮಸಿದ್ಧಿಯೇ ಉಂಟಾಗುತ್ತದೆ.

ಅಧ್ಯಯನಂಗಳಿಂ ವ್ರತಚಿಂತನೆಯಿಂ ಸ್ತುತಿಯಿಂ ಪ್ರಬೋಧೆಯಿಂ।
ಸಾಧ್ಯಮನಸ್ಕನಾಗಿ ನಿಜರೂಪನಪ್ಪಿದವಂಗೆ ಬೇರೆ ಮ॥
ತ್ತಧ್ಯಯನಾದಿಗಳ್ಮೆರೆಯವಾವ ವಿಕಲ್ಪಮುಮಿಲ್ಲ ಲೋಕಕಾ।
ರಾಧ್ಯನವಂಗೆ ಪೂಜ್ಯಗುಣರಿಲ್ಲವಲಾ ಅಪರಾಜಿತೇಶ್ವರಾ॥ ॥೧೧೪॥

ಶಾಸ್ತ್ರಾಧ್ಯಯನಗಳಿಂದ, ವ್ರತಚಿಂತನೆಯಿಂದ, ಜಿನಸ್ತುತಿಯಿಂದ, ಸಮ್ಯಕ್ ಜ್ಞಾನದಿಂದ, ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳಬೇಕು; ಆತ್ಮದ ನಿಜರೂಪವನ್ನು ಪರಿಗ್ರಹಿಸಿದವನಿಗೆ ಆಮೇಲೆ ಶಾಸ್ತ್ರ, ವ್ರತಗಳು ರುಚಿಸಲಾರವು. ಅವುಗಳ ಅಗತ್ಯವಿರದು; ಆ ಬಗ್ಗೆ ಮನಸ್ಸಿನ ಚಂಚಲತೆ ಇರದು; ಅಂತಹವನಿಗೆ ಸಾಟಿಯಾದ ಪೂಜ್ಯವ್ಯಕ್ತಿ ಇನ್ನೊಬ್ಬನಿಲ್ಲ; ಆತನೇ ಲೋಕಕ್ಕೆ ಆರಾಧ್ಯನು.

ಪಗರಣದಾಟಮೆಂದು ಜಗಮಂ ಸಲೆ ನೋಡುತೆ ದುರ್ವಿಕಲ್ಪಮಂ।
ತೆಗೆದು ಬೀಸಾಡುತಂ ನಿಜಚಿದಾತ್ಮನನೀಕ್ಷಿಸುತಂ ವಿಶೋಧಿಯೊಳ್॥
ಮಿಗೆ ಮುಳುಗಾಡುತಂ ಶಮರಸಾಮೃತಮಂ ಸವಿಯುತ್ತೆ ತನ್ನ ತಾ।
ನಗುತೆ ವಿಳಾಸದಿಂ ತಪಿಸುವಂಗೆಣೆಯಾರಪರಾಜಿತೇಶ್ವರಾ॥ ॥೧೧೫॥

ಜಗತ್ತು ಪಗರಣದಾಟದ ರಂಗವೆಂದು ತಿಳಿದು ದುಷ್ಟ ವಿಚಾರಗಳಿಗೆ ಮನವಿಡದೆ ಮನಸ್ಸಿನಿಂದ ಆ ವಿಕಲ್ಪಗಳನ್ನು ಕಿತ್ತೊಗೆದು ತನ್ನ ಚಿದಾತ್ಮನನ್ನು ದರ್ಶಿಸುತ್ತಲೂ ವಿಶುದ್ಧತೆಯಲ್ಲಿ ಮುಳುಗಾಡುತ್ತಲೂ ಶಾಂತಿರಸವೆಂಬ ಅಮೃತವನ್ನು ಸವಿಯುತ್ತಲೂ ಆತ್ಮಾನಂದದಿಂದ ಸಂತೋಷಿಸುತ್ತಲು ಉತ್ತಮವಾದ ತಪಸ್ಸಿನಲ್ಲೇ ಮಗ್ನನಾಗಬೇಕು. ವಿಚಾರಮಾಡಿದರೆ ಇಂಥ ತಪಸ್ವಿಗೆ ಸಮಾನರಾದವರು ಜಗತ್ತಿನಲ್ಲಿ ಯಾರೂ ಇಲ್ಲ.

ಮೂರು ಶರೀರದೊಳ್ತಡೆಯದಂತರದಾತ್ಮನೊಳೈಕ್ಯಮಾಗಿ ಬಂ।
ದೇರುವ ದುಷ್ಪರೀಷಹವದಂಗಕೆನುತ್ತುಪಶಾಂತನಪ್ಪುದುಂ॥
ಜಾರುಗುಮೊಯ್ಯನೊಯ್ಯನೆ ಚಿದಾವರಣಾದಿಗಳಾತ್ಮಸಿದ್ಧಿ ಮೆ।
ಯ್ದೋರುಗುಮೊಯ್ಯನೊಯ್ಯನಿದೆ ಯುಕ್ತಿಯಲಾ ಅಪರಾಜಿತೇಶ್ವರಾ॥ ॥೧೧೬॥

ಮನಸ್ಸನ್ನು ಔದಾರಿಕ, ತೈಜಸ, ಕಾರ್ಮಣಗಳೆಂಬ ಮೂರು ಶರೀರಗಳತ್ತ ಹೋಗಲು ಬಿಡದೆ, ಅಂತರಾತ್ಮನಲ್ಲಿ ಐಕ್ಯವಾಗುವಂತೆ ಮಾಡಬೇಕು; ಆ ಕಾಲದಲ್ಲಿ ಪ್ರಾಪ್ತವಾಗುವ ದುಷ್ಟಬಾಧೆಗಳನ್ನು ಇವು ಶರೀರಕ್ಕೆ ಒದಗಿದವು ನನಗಲ್ಲ ಎಂದು ಶಾಂತಚಿತ್ತನಾಗಿ ಸಹಿಸಬೇಕು; ಆಗ ಆತ್ಮನನ್ನು ಆವರಿಸಿರುವ ಅಷ್ಟಕರ್ಮದಪರದೆ ಮೆಲ್ಲಮೆಲ್ಲನೆ ಜಾರುತ್ತದೆ; ಅಂತೆಯೇ ಆತ್ಮಸಿದ್ಧಿ ಮೆಲ್ಲಮೆಲ್ಲನೆ ಕಾಣಿಸಿಕೊಳ್ಳುತ್ತದೆ; ಇದೇ ಮುಕ್ತಿಯ ಯುಕ್ತಿ.

ನೋಡುವ ನೋಡಿ ಲಾಲಿಸುವ ಲಾಲಿಸುತಾತ್ಮಸುಖಕ್ಕೆ ವಿಸ್ಮಯಂ।
ಮಾಡುವ ಮಾಡಿ ಮೆಚ್ಚುವ ನಿಜಾತ್ಮನೊಳಾಗಲೆ ಮೆಚ್ಚುತೈಕ್ಯದಿಂ॥
ಕೂಡುವ ಕೂಡಿ ಮೆಯ್ಮರೆವ ತನ್ಮಯನಾಗುತೆ ತಾನೆ ತನ್ನೊಳೋ।
ಲಾಡುವ ಜೋಗಿಯೇ ಅಮೃತಭಾಗಿಯಲಾ ಅಪರಾಜಿತೇಶ್ವರಾ॥ ॥೧೧೭॥

ತನ್ನಾತ್ಮನನ್ನೇ ನೋಡುವವನು; ನೋಡಿ ಪ್ರೀತಿಸುವವನು; ಪ್ರೀತಿಸಿ, ಆತ್ಮಸುಖಕ್ಕೆ ಅಚ್ಚರಿಗೊಳ್ಳುವವನು; ಅಚ್ಚರಿಗೊಂಡು ಮೆಚ್ಚುವವನು ಮೆಚ್ಚಿ ಮತ್ತೆ ತನ್ನಾತ್ಮನಲ್ಲಿ ಲೀನನಾಗುವವನು; ಲೀನನಾಗಿ ಆತ್ಮ ಪರವಶನಾಗುವವನು; ಆತ್ಮಪರವಶನಾಗಿ ಆನಂದಪಡುವ ಯೋಗಿಯೇ ಅಮೃತೋಪಮಮುಕ್ತಿಗೆ ಭಾಗಿ.

ಇಂಗಡಲೊಳ್ಮುಳುಂಗಿದವೊಲಿರ್ಪುದು ಮೇಘವಡಂಗಿದಚ್ಚವೆ।
ಳ್ದಿಂಗಳ ಕಾಂತಿಯೊಳ್ಬೆರಿಸಿದಂತೆವೊಲಿರ್ಪುದು ಸಿದ್ಧರಾಶಿಯೊಳ್॥
ಸಂಗತವಾದವೊಲ್ಮೆರೆವುದಾತ್ಮನೊಳಾತ್ಮನನಾತ್ಮನಿಂದೆ ಕಂ।
ಡಂಗರಿಪಂದದಿಂ ನುಡಿಯಲೆನ್ನಳವೇ ಅಪರಾಜಿತೇಶ್ವರಾ॥ ॥೧೧೮॥

ಆತ್ಮನು ಆತ್ಮನಲ್ಲ, ಆತ್ಮನನ್ನು ಆತ್ಮನಿಂದ ನೋಡೆ ಆತ್ಮಸ್ವರೂಪದಲ್ಲಿ ಲೀನನಾದರೆ, ಕ್ಷೀರಸಮುದ್ರದಲ್ಲಿ ಮುಳುಗಿದಂತಾಗುವುದು; ಮೋಡವಿಲ್ಲದ ಅಚ್ಚ ಬೆಳುದಿಂಗಳ ಪ್ರಕಾಶದಲ್ಲಿ ಬೆರೆತಂತಾಗುವುದು. ಸಿದ್ಧಶಿಲೆಯಲ್ಲಿರುವ ಮುಕ್ತಾತ್ಮರ ಗುಂಪಿನಲ್ಲಿ ಸೇರಿದಂತಾಗುವುದು; ಆಸುಖವನ್ನು ಹಾಗೆಂದು ಹೀಗೆಂದು ಬಿನ್ನವಿಸಲು ಬಾಯಿಲ್ಲವಯ್ಯಾ? ಅದು ಅನುಭವ ವೇದ್ಯ ವಚನಾತೀತ.

ಅವನ ಬರ್ದುಂಕೆ ತಾಂ ಬರ್ದುಕು ಜನ್ಮವದೇ ಸಫಲಂ ವಿಶಿಷ್ಟಲಾ-।
ಭವುಮದೆ ಸರ್ವಸಿದ್ಧಿಗದು ಮೊತ್ತಮೊದಲ್ ಸುವಿಚಾರಕೋಟಿಗೆ-॥
ಲ್ಲವರೊಳೆದೊಂದೆ ಕಟ್ಟಕಡೆ ತನ್ನೊಳೆ ತನ್ನನೆ ತಾನೆ ಕಂಡು ಬಾ-।
ಹ್ಯವನುಳಿದಿರ್ದವಂಗೆ ಭವವೆತ್ತಣದಿನ್ನಪರಾಜಿತೇಶ್ವರಾ॥ ॥೧೧೯॥

ಅಂತಹ ಆತ್ಮಯೋಗಿಯ ಬಾಳೇ ಬಾಳು; ಅವನ ಜನ್ಮವೇ ಸಾರ್ಥಕ ಜನ್ಮ. ಅವನದೇ ವಿಶಿಷ್ಟ ಲಾಭ; ಎಲ್ಲಾ ಸಿದ್ಧಿಗಳಿಗೂ ಆದಿಸಿದ್ಧಿ ಅದು; ವಿಚಾರಗಳಲ್ಲೆಲ್ಲಾ ಕೊನೆಯ ಮಾತು ಆತ್ಮವಿಚಾರವು; ತಾನೇ ತನ್ನನ್ನು ತನ್ನಲ್ಲಿಯೇ ನೋಡಿ ಹೊರಗಿನ ವಿಷಯಗಳಲ್ಲಿ ಆಸಕ್ತಿಯನ್ನು ಕಳೆದುಕೊಂಡವನಿಗೆ ಸಂಸಾರದ ಬಂಧನ ಎಲ್ಲಿಂದ ಬರಬೇಕು?

ತನುವಿನೊಳಿರ್ದ ಸಿದ್ಧಸದೃಶಾತ್ಮನನೀಕ್ಷಿಸುತಂ ವಿಶೋಧಿಸಂ-।
ಜನಿತದೊಳೇನನಾಡಿದನದೆಲ್ಲವುಮಾಗಮಮೆಲ್ಲರಿಚ್ಛೆ ಹೆ-।
ಚ್ಚಿನ ಕಳೆ ಕರ್ಮನಿರ್ಜರೆ ಜಗತ್ತ್ರಯವಲ್ಲಭನಪ್ಪ ಕಜ್ಜವಿ-॥
ನ್ನನಿತಿನಿತೆಂದದರ್ಕೆ ಮಿತಿಮಾಡುವರಾರಪರಾಜಿತೇಶ್ವರಾ॥ ॥೧೨೦॥

ದೇಹಧಾರಿ ಆಗಿದರೂ ಮುಕ್ತಾತ್ಮರಿಗೆ ಸಮಾನವಾದ ಪರಿಶುದ್ಧತೆ ಪಡೆದ ಮುನಿ ಹೇಳಿದ್ದೆಲ್ಲಾ ಶಾಸ್ತ್ರವಾಗುವುದು. ಎಲ್ಲರ ಆಸೆಯೂ ಹೀಗಾಗಬೇಕೆಂಬುದೇ ಆಗಿದೆ; ಆತ್ಮದರ್ಶನವು ಆತ್ಮನಿಗೆ ಹೆಚ್ಚಿನ ಕಲೆಯುಳ್ಳದ್ದೂ, ಕರ್ಮಗಳನ್ನು ನಿರ್ಜರೆ ಮಾಡುವಂಥದ್ದೂ ಆತ್ಮನನ್ನು ತ್ರಿಲೋಕಾಧಿಪತಿಯನ್ನಾಗಿ ಮಾಡುವ ಕಾರ್ಯವಾಗಿದೆ. ಇದಕ್ಕಾವ ಇತಿಮಿತಿ ಇಲ್ಲ.

ರವಿನಡೆದತ್ತಲೆಲ್ಲ ಬೆಳಗಲ್ಲದೆ ಕತ್ತಲೆಯುಂಟೆಯಾತ್ಮತ।
ತ್ತ್ವವೆ ಮನದಲ್ಲಿ ನಟ್ಟು ನುಡಿವಾತನ ಮಾತುಗಳೆಲ್ಲ ಮೋಕ್ಷಮಾ–॥
ರ್ಗವೆಯವನೆಲ್ಲಿ ನಿಂದನದು ತೀರ್ಥವವಂ ನಡೆದತ್ತ ಸರ್ವರು–।
ತ್ಸವಮಿದು ನಿನ್ನ ಮಾರ್ಗದ ರಹಸ್ಯವಲಾ ಅಪರಾಜಿತೇಶ್ವರಾ॥ ॥೧೨೧॥

ಸೂರ್ಯನು ಸಂಚರಿಸಿದ ಕಡೆಯಲ್ಲೆಲ್ಲಾ ಬೆಳಕಲ್ಲದೆ ಕತ್ತಲೆಯಿರಲು ಶಕ್ಕವೇ? ಹಾಗೆಯೇ ಆತ್ಮತತ್ತ್ವವನ್ನೇ ಮನದಲ್ಲಿ ಸ್ಥಿರವಾಗಿ ಧ್ಯಾನಿಸುತ್ತಾ ಇರುವವನು ಆಡಿದ ಮಾತುಗಳಲ್ಲೆಲ್ಲಾ ಮೋಕ್ಷಮಾರ್ಗದೀಪಿಕೆಯಾಗಿರುತ್ತದೆ; ಆತ್ಮಜ್ಞಾನಿ ನೆಲೆನಿಂತಲ್ಲಿ ಆ ತಾಣವೇ ಪುಣ್ಯ ತೀರ್ಥಕ್ಷೇತ್ರ; ಆತ ನಡೆದುಹೋದರೆ ಇಂದ್ರೋತ್ಸವ ಸಾಗಿದಂತೆ, ಇದು ಆತ್ಮಜ್ಞಾನದ ಮೋಕ್ಷಮಾರ್ಗದ ಗುಟ್ಟು.

ಅರಿದನೊಲ್ದು ಕೈವಿಡಿದರಾರಿದನೀಕ್ಷಿಸಿದರ್ಯಥಾರ್ಥದಿಂ–।
ದಾರಿದರಲ್ಲಿಯೇ ಲಯವನೆಯ್ದಿ ನಿಜಂಬಡೆದರ್ ಜಗಕ್ಕಿದಂ॥
ಆರನುಶಾಸನಂಗೊಳಿಸಿದರ್ ಜಿನ ನೀನೆ ಜಗತ್ತ್ರಯೈಕವಿ–।
ಸ್ತಾರಿತವಸ್ತುವಂ ಬೆಳಗಿದ್ದೈ ಕೃಪೆಯಿಂದಪರಾಜಿತೇಶ್ವರಾ॥ ॥೧೨೨॥

ಈ ಆತ್ಮಸ್ವರೂಪವನ್ನು ಮೆಚ್ಚಿ ಸ್ವೀಕರಿಸಿದವರಲ್ಲಿ ನೀನೇ ಅಗ್ರಗಣ್ಯ. ನಿಜವಾದ ಸ್ಥಿತಿಯಲ್ಲಿ ಇದನ್ನು ಕಂಡವನು ಅದರಲ್ಲಿಯೇ ಲಯನಾದವನು, ಆ ಐಕ್ಯದಿಂದ ಮೋಕ್ಷ ಪಡೆದವನು ಇನ್ನಾರು? ನೀನೇ. ಜಗತ್ತಿಗೆ ಆ ಆತ್ಮತತ್ತ್ವವನ್ನು ಬೋಧಿಸಿದವನು ನೀನೇ. ತ್ರಿಜಗದೊಡೆಯ ಜಿನೇಶ್ವರನೇ, ಸಮಸ್ತ ಪದಾರ್ಥಗಳನ್ನು ನೀನೇ ದಯಾಮಯನಾಗಿ ಪ್ರಕಾಶಗೊಳಿಸಿದೆ.

ಚೆಲುವರ ಚೆಲ್ವ ಚೆನ್ನಿಗರ ಚೆನ್ನ ಸುವೀರರ ವೀರ ಸತ್ಕಲಾ–।
ಬಲರ ಬಲಾಢ್ಯ ಬಲ್ಲಿದರ ಬಲ್ಲಹ ದೇವರ ದೇವ ನೀತಿನಿ–॥
ರ್ಮಲರ ನಿಧಾನ ನಿಚ್ಚ ಮದುಮಕ್ಕಳ ಮಾಣಿಕಕಾಂತಿ ಶಾಂತಿ ಶೀ–।
ತಲದ ಶಿರೋಮಣೀ ನಿನಗೆ ಪಾಸಟಿಯಾರಪರಾಜಿತೇಶ್ವರಾ॥ ॥೧೨೩॥

ನೀನು ಉತ್ತಮರಲ್ಲಿ ಅತ್ಯುತ್ತಮ; ಸುಂದರರಲ್ಲಿ ವಿಶ್ವಸುಂದರ; ವೀರರಲ್ಲಿ ಮಹಾವೀರ; ಸತ್ಕಲಾನಿಪುಣರಲ್ಲಿ ಸತ್ಕುಲಾನಿಪುಣಾಗ್ರಣಿ; ಜ್ಞಾನಿಗಳಲ್ಲೆಲ್ಲಾ ಮಹಾಸುಜ್ಞಾನಿ. ದೇವರುಗಳೆಲ್ಲಾ ದೇವಾದಿದೇವ! ನೀತಿ ನಿರ್ಮಲರಲ್ಲೆಲ್ಲಾ ಮೂಲ ಮಹಾಪುರುಷ! ನಿಚ್ಚ ಮದುಮಕ್ಕಳಿಗೆಲ್ಲ ಮಾಣಿಕ್ಯಪದಕ; ಶಾಂತಶೀತಲರಲ್ಲೆಲ್ಲಾ ಶಿರೋಮಣಿ; ನಿನಗೆ ಸಮಾನರು ಇನ್ನಾರಿದ್ದಾರೆ?

ಜಡಮತಿಯೈಸೆ ನಾಂ ಪರಮ ನಿನ್ನ ಗುಣಂಗಳನೆಲ್ಲಮಂ ಮನಂ-।
ಬಿಡಿಯೆ ಸಮರ್ಥನಲ್ಲೆನದರಿಂ ಕಿರಿದಂ ಪಿಡಿದಿರ್ಪೆನೆಂತೆನಲ್॥
ಕೊಡದೊಳಗೆಷ್ಟು ನಿಲ್ವುದು ಸಮುದ್ರಜಲಂ ವರಕಾಂಚನಾದ್ರಿ ಕ-।
ನ್ನಡಿಯೊಳಗೆಷ್ಟು ತೋರ್ಪುದವಧಾರಿಸು ನೀನಪರಾಜಿತೇಶ್ವರಾ॥ ॥೧೨೪॥

ನಾನು ಮಂದಮತಿ, ಮಹಾತ್ಮನೇ! ನಿನ್ನ ಮಹಾಗುಣಗಳನ್ನೆಲ್ಲ ತಿಳಿಯಲು ಅಸಮರ್ಥ. ಆದ್ದರಿಂದ ಕೊಡದೊಳಗೆ ಸಮುದ್ರದ ನೀರನ್ನು ಹಿಡಿದಿಟ್ಟಷ್ಟು, ಶ್ರೇಷ್ಠವಾದ ಮೇರುಪರ್ವತವನ್ನು ಕನ್ನಡಿಯಲ್ಲಿ ಕಂಡಷ್ಟು, ಅದೇ ರೀತಿಯಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ನಿನ್ನ ಗುಣವನ್ನು ಈ ಶತಕದಲ್ಲಿ ಹಿಡಿದಿಡಲು ಯತ್ನಿಸಿದ್ದೇನೆ. ದಯಮಾಡಿ ಚಿತ್ತವಿಸು.

ಬಂದೊಲವಿಂದೆ ನಿನ್ನಿದಿರೊಳೊಪ್ಪದೆ ನಿಂದು ಕರಂಗಳಂ ನೊಸ-।
ಲ್ಗೊಂದಿಸಿ ದೇವದೇವ ಕರುಣಾಕರ ಬಿನ್ನಪವಾತ್ಮಸಿದ್ಧಿಯಿ-॥
ನ್ನೆಂದೆನಗಪ್ಪುದೆಂದೊಡೆಲೆ ಕಂದ ಕಡಂಗದಿರಿಂದು ನಾಳೆಯೆ-।
ಮ್ಮಂದವೆ ಯಪ್ಪೆಯೆಂಬ ನುಡಿಗೇಳ್ವೆನದೆಂದಪರಾಜಿತೇಶ್ವರಾ॥ ॥೧೨೫॥

ಪ್ರೀತಿಯಿಂದ ಬಂದು ನಿನ್ನೆದುರಿನಲ್ಲಿ ನಿಂತು ಭಕ್ತಿಭಾವದಿಂದ ಬಾಗಿ ಕೈಗಳನ್ನು ಜೋಡಿಸಿ ಹಣೆಗಿಟ್ಟು "ದೇವಾಧಿದೇವನೇ, ಕರುಣಾಕರಾ, ಇದೋ ನನ್ನ ಬಿನ್ನಹವು, ಇನ್ನು ನನಗೆ ಆತ್ಮಸಿದ್ಧಿ ಎಂದಾಗುವುದು?" ಎಂದು ಪ್ರಾರ್ಥಿಸಿದರೆ, ನೀನು "ಎಲೆ ಕಂದಾ, ಆತುರ ಪಡಬೇಡ, ಇಂದೋ ನಾಳೆಯೋ ನೀನೂ ಸಹ ನನ್ನಂತೆಯೇ ಆಗುವೆ" ಎಂಬ ನಿನ್ನ ಭರವಸೆಯ ಪುಣ್ಯದ ನುಡಿಯಿನ್ನು ಅದೆಂದು ಕಿವಿಗೆ ಬೀಳುವುದು? ತಿಳಿಸಯ್ಯಾ.

ಮುನ್ನಮನೇಕರಂ ಭವದಿನೆತ್ತಿ ಯಶೋನಿಧಿಯಾದೆಯಾದೊಡೇಂ।
ನಿನ್ನ ದಯಾಗುಣಕ್ಕದು ವಿಶೇಷಮೆ ಮೂರ್ಖನನಾರ್ತರೌದ್ರನಂ॥
ನನ್ನ ಪವಿತ್ರಮಾಡಿದೊಡೆ ದೊಡ್ಡಪೆಸರ್ ಘನಕೀರ್ತಿ ದೇವ ಭೂ-।
ತೆನ್ನದಿರೊಪ್ಪುಗೊಳ್ನಗದಿರೈ ಶರಣಾಗಪರಾಜಿತೇಶ್ವರಾ॥ ॥೧೨೬॥

ನೀನು ಈ ಮುಂಚೆ ಅನೇಕರನ್ನು ಈ ಸಂಸಾರ ಸಾಗರದಿಂದ ಪಾರುಮಾಡಿ ಭವಸಾಗರತಾರಕನೆಂಬ ಪ್ರಶಸ್ತಿಗೆ ಪಾತ್ರನಾದೆ. ಆದರೇನು? ಅದು ನಿನ್ನ ದಯಾಗುಣಕ್ಕೆ ತಕ್ಕ ದೊಡ್ಡ ಕಾರ್ಯವಲ್ಲ! ಏಕೆಂದರೆ ಮೂರ್ಖನೂ ಆರ್ತನೂ ರೌದ್ರನೂ ಆದ ನಾನಿದ್ದೇನೆ. ನನ್ನನ್ನು ನೀನು ಉದ್ಧರಿಸಿದರೆ ಆಗ ನಿನಗೆ ದೊಡ್ಡ ಹೆಸರು, ಘನಕೀರ್ತಿ, ದೇವಶ್ರೇಷ್ಠ ಇತ್ಯಾದಿ ಬಿರುದು ಉಂಟಾಗುತ್ತದೆ. ಭಗವಂತಾ! ಇದು ಅತಿಶಯೋಕ್ತಿ ಎನ್ನಬೇಡ, ಒಪ್ಪಿಕೋ. ನಗದಿರಯ್ಯ! ಶರಣಾದೆ ಒಪ್ಪಿಕೋ.

ಶ್ರೀಶುಭವೆತ್ತ ಮೇರುನಗದಿಂದ್ರದಿಶಾಸ್ಥಿತವತ್ಸಕಾವತೀ–।
ದೇಶದೊಳಿರ್ದಪೈ ವಿಜಿತಘಾತಿಚತುಷ್ಕ ಜಗತ್ತ್ರಯಾರ್ಚಿತಾ॥
ಲೇಶಮದಾದೊಡಂ ಪುದಿದ ಪುದ್ಗಲದಲ್ಲಿರಲಾರೆನಯ್ಯ ಸ–।
ರ್ವೇಶ ಶರಣ್ಯ ಗಣ್ಯ ತಳುವೇಂ ಶರಣಾಗಪರಾಜಿತೇಶ್ವರಾ॥ ॥೧೨೭॥

ನಾಲ್ಕು ಘಾತಿಕರ್ಮಗಳನ್ನು ಗೆದ್ದವನೇ! ನೀನು ಅತ್ಯಂತ ಶೋಭಾಯಮಾನವೂ ಮಂಗಳಕರವೂ ಆದ ಮಹಾಮೇರುಪರ್ವತದ ಪೂರ್ವದಿಕ್ಕಿನಲ್ಲಿರುವ ವತ್ಸಕಾವತೀ ದೇಶದಲ್ಲಿ ಇರುತ್ತೀಯೆ, ನನ್ನೊಡನೆ ಸೇರಿರುವ ಪುದ್ಗಲದಲ್ಲಿ ಸ್ವಲ್ಪಕಾಲವಾದರೂ ನಾನಿರಲಾರೆ, ಶರಣಾಗತ ರಕ್ಷಕನೇ ಸರ್ವೇಶಾ ತಡಮಾಡಬೇಡ, ಕಾಪಾಡು!

ತ್ರಿಜಗತ್ಸ್ವಾಮಿಗಳಿರ್ದಪರ್ಧರೆಯೊಳೀಗಳ್ದೂರವಲ್ಲಿರ್ದೊಡೀ।
ವಿಜಯಾರ್ಧಂ ಹಿಮವದ್ದ್ವಯಂ ನಿಷಧಮೆಂಬೀ ನಾಲ್ಕು ಪೆರ್ಗೋಡೆಗಳ್॥
ಪ್ರಜೆಗಡ್ಡೈಸಿದವೈಸೆ ಕಾಣ್ಬೆರಿಮಡರ್ತಾರಾಧನಂ ಮಾಡಿರೋ॥
ನಿಜದಿಂದೆಮ್ಮಪರಾಜಿತೇಶ್ವರನುಮಂ ಶ್ರೀಮಂದರಸ್ವಾಮಿಯಂ॥ ॥೧೨೮॥

ಈಗಲೂ ಪೃಥ್ವಿಯಲ್ಲಿ ತ್ರಿಲೋಕಾಧಿಪತಿಗಳಾದ ತೀರ್ಥಂಕರರು ದೂರದಲ್ಲಿದ್ದಾರೆ. ಅವರಲ್ಲಿ ಇದ್ದರೂ ನಡುವೆ ಈ ವಿಜಯಾರ್ಧಪರ್ವತ ಹಿಮಾಲಯ ಪರ್ವತ, ಮಹಾಹಿವತ್ ಪರ್ವತ, ನಿಷಧಪರ್ವತಗಳೆಂಬ ನಾಲ್ಕು ದೊಡ್ಡ ಅಡ್ಡಗೋಡೆಗಳು ಭವ್ಯಪ್ರಜಾಕೋಟಿಗೆ ದರ್ಶನಭಾಗ್ಯ ದೊರೆಯಲು ಅಡ್ಡವಾಗಿ ನಿಂತಿವೆ. ಆದುದರಿಂದ ಅವರನ್ನು ಹೊಂದಿ ಪೂಜೆ ಮಾಡಿರಯ್ಯಾ, ಆಗ ನಿಜವಾಗಿ ನಮ್ಮ ಪರಮಪಾವನ ಅಪರಾಜಿತೇಶ್ವರನನ್ನೂ ಶ್ರೀಮಂದರಸ್ವಾಮಿಯನ್ನೂ ನಿಜವಾಗಿ ದರ್ಶನ ಮಾಡುವಿರಿ.

ಶ್ರೀಮದ್ದೇವೇಂದ್ರಕೀರ್ತಿಯೋಗೀಶ್ವರಪಾದಾಂಭೋಜಭೃಂಗಾಯಮಾನ
ಶೃಂಗಾರಕವಿಹಂಸರಾಜವಿರಚಿತಮಪ್ಪಅಪರಾಜಿತೇಶ್ವರ
ಸಪಾದಶತಕಂ ಸಮಾಪ್ತಂ

ಶ್ರೀಮತ್ ದೇವೇಂದ್ರ ಕೀರ್ತಿಯೋಗೀಶ್ವರರ ಪಾದಕಮಲದಲ್ಲಿ ಭ್ರಮರದಂತಿರುವ ಶೃಂಗಾರಕವಿಹಂಸರಾಜನು ವಿರಚಿಸಿದ ಅಪರಾಜಿತೇಶ್ವರ ಶತಕದ ಭಾವಾನುವಾದವು ಮುಗಿಯಿತು

* * *

೩. ತ್ರಿಲೋಕಶತಕಂ

೩. ತ್ರಿಲೋಕಶತಕಂ

ಪೂರ್ವವಿದೇಹದೊಳೆಸಕಂ।
ದೋರ್ವಂಗಪರಾಜಿತೇಶ್ವರಂಗೆನ್ನ ಮನಃ॥
ಪೂರ್ವಕದೆ ನಮಿಸಿ ಪೇಳ್ವೆಂ।
ಪೂರ್ವಾಚಾರ್ಯಾನುಮತದೆ ಲೋಕಸ್ಥಿತಿಯಂ॥ ॥೧॥

ಪೂರ್ವವಿದೇಹ ಕ್ಷೇತ್ರದಲ್ಲಿ ಜ್ಯೋತಿ-ಪ್ರಕಾಶವನ್ನು ತೋರುವ ಅಪರಾಜಿತ ತೀರ್ಥಂಕರರಿಗೆ ತ್ರಿಕರಣಪೂರ್ವಕವಾಗಿ ವಂದಿಸಿ ಪೂರ್ವಾಚಾರ್ಯರ ಪರಂಪರೆಯ ಪ್ರಕಾರ ಲೋಕಸ್ಥಿತಿಯನ್ನು ತಿಳಿಸುವೆನು.

ತೆರಪಾದ ಶಾಸ್ತ್ರದೊಳ್ಮು।
ನ್ನರುಪಿದ ಲೋಕಸ್ವರೂಪಮಂ ನಾನೀಗಳ್॥
ಕಿರಿದರೊಳೆ ಸೂಚಿಸುವೆನದ-।
ನರಿಯಲ್ಬೇಕೆಂದು ಮಂದಮತಿಗಳ್ಪಲಬರ್॥ ॥೨॥

ಅಪಾರವಾದ ಶಾಸ್ತ್ರ ಸಮೂಹದಲ್ಲಿ ಪೂರ್ವೋಕ್ತವಾದ ಲೋಕಸ್ವರೂಪವನ್ನು ಹಲವರು ಮಂದಮತಿಗಳು ಅರಿಯಲೆಂದು ನಾನೀಗ ಸಂಕ್ಷಿಪ್ತವಾಗಿ ತಿಳಿಸುವೆ.

ಕಡೆಯಿಲ್ಲದೆಸೆವ ಗಗನದ।
ನಡುವಿರ್ಕುಂ ಮೂರು ಗಾಳಿಯಾ ಗಾಳಿಗಳಾ॥
ಒಡಲೊಳೆ ಷಡ್ದ್ರವ್ಯಂಗಳ್।
ಇಡಿಕಿರಿದದು ಲೋಕಮದರ ಬಾಹ್ಯಲೋಕಮಂ॥ ॥೩॥

ಅನಂತವಾದ ಗಗನದಲ್ಲಿ ಮಧ್ಯಭಾಗದೊಳಗೆ ಮೂರು ಬಗೆ ಗಾಳಿಗಳಿವೆ. ಅವುಗಳ ನಡುವೆ ಷಡ್ದ್ರವ್ಯಗಳು ಅಡಕವಾಗಿವೆ. ಅದೇ ಲೋಕಾಕಾಶ. ಅದರ ಹೊರಗಿರುವುದು ಅಲೋಕಾಕಾಶ.

ಜೀವಾವಳಿ ಪುದ್ಗಲಚಯ।
ಮಾವರಿಸಿದ ಧರ್ಮಮೊಂದಧರ್ಮಂ ಗಗನಂ॥
ತೀವಿದ ಕಾಲಾಣುಗಳಿಂ–।
ದೀ ವಿಧದಿಂ ದ್ರವ್ಯಷಟ್ಕಮಿರ್ಪುದರಿಂದಂ॥ ॥೪॥

ಜೀವ ಸಮೂಹ, ಪುದ್ಗಲಸಮೂಹ, ವಿಸ್ತೃತ ಧರ್ಮದ್ರವ್ಯ, ಅಧರ್ಮದ್ರವ್ಯ, ಗಗನವ್ಯಾಪ್ತ ಕಾಲಾಣುಗಳು, ಆಕಾಶ, ಎಂಬ ಆರು ದ್ರವ್ಯಗಳಿಂದ ಇರುವುದನ್ನು 'ಲೋಕ' ವೆನ್ನುತ್ತಾರೆ.

ಓತೊಂದೇ ಸಮಯಕಸಂ–।
ಖ್ಯಾತದ ಯೋಜನಕೆ ಪೋಪ ಸುರನ ವಿಮಾನಂ॥
ಸೈತು ದಿವಾರಾತ್ರಿಯಸಂ–।
ಖ್ಯಾತಾಬ್ದಂ ಪೋದಡೊಂದು ರಜ್ಜುವೆನಿಕ್ಕುಂ॥ ॥೫॥

ಒಂದು ರಜ್ಜುವಿನ ಉದ್ದೇಶವೆಂದರೆ ಹೊಂದಿಕೊಂಡು ಒಂದೇ ಕಾಲಕ್ಕೆ ಅಸಂಖ್ಯಾತ ಯೋಜನ ದೂರ ಸಾಗುವ ದೇವವಿಮಾನವು ಹಗಲೂರಾತ್ರಿ ಎಡಬಿಡದೆ ಅಸಂಖ್ಯಾತ ವರ್ಷಗಳವರೆಗೆ ಹೋದಷ್ಟು ದೂರ ಪ್ರದೇಶ.

ಅಡಿಯಿಂ ತುದಿಗೀ ಲೋಕಂ।
ನುಡಿಯಲ್ಪದಿನಾಲ್ಕು ರಜ್ಜುವೆಂಬನಿತುದ್ದಂ॥
ಬಡಗಲ್ತೆಂಕಲ್ಮೊದಲಿಂ।
ಕಡೆಗದು ತಾನೇಳು ರಜ್ಜುವೆಂಬನಿತಗಲಂ॥ ॥೬॥

ಈ ಲೋಕವು ತಳದಿಂದ ತುದಿಯವರೆಗೆ ಹದಿನಾಲ್ಕು ರಜ್ಜುಗಳಷ್ಟು ಉದ್ದವಿದೆ; ಉತ್ತರದಿಂದ ದಕ್ಷಿಣಕ್ಕೆ ಏಳು ರಜ್ಜುಗಳಷ್ಟು ಅಗಲವಿದೆ ಎನ್ನುತ್ತಾರೆ.

ತಳಗೇಳು ರಜ್ಜು ಮಧ್ಯದೊ-।
ಳಳೆಯಲ್ತಾನೊಂದು ರಜ್ಜು ಮತ್ತಾ ಬ್ರಹ್ಮ॥
ಸ್ಥಳಮೈದು ರಜ್ಜು ತುದಿಯೊಳ್।
ಬಳಿಕೊಂದೇ ರಜ್ಜುವಾಯ್ತು ಮೂಡಲ್ಪಡುವಲ್॥ ॥೭॥

ಪೂರ್ವಪಶ್ಚಿಮವಾಗಿ ಪರಿಗಣಿಸಿದರೆ ತಳಭಾಗದಲ್ಲಿ ಏಳು ರಜ್ಜುವೂ ನಡುಭಾಗದಲ್ಲಿ ಒಂದು ರಜ್ಜುವೂ, ಆಮೇಲೆ ಬ್ರಹ್ಮಕಲ್ಪವು ಐದು ರಜ್ಜುವೂ ಅನಂತರ ಅಗ್ರದಲ್ಲಿ ಒಂದು ರಜ್ಜುವೂ ಅಳತೆಯುಳ್ಳದ್ದಾಗಿದೆ.

ಮರದೊಳ್ಕೆಚ್ಚಿಂತಿಹುದಾ।
ಪರಿಯೊಳಗೀ ಜಗದ ನಡುವೆ ಮೊದಲಿಂ ತುದಿಮು-॥
ಟ್ಟಿರುತಿರ್ಕುಂ ತ್ರಸನಾಳಿಯ।
ದೊರೆವೊಡೆ ಚತುರಸ್ರವೊಂದು ರಜ್ಜುವಿನಗಲಂ॥ ॥೮॥

ಈ ಲೋಕದ ನಡುವೆ ಬುಡದಿಂದ ತುದಿಯವರೆಗೆ, ಮರದ ಕಾಂಡದಲ್ಲಿ ದಿಂಡು (ಕೆಚ್ಚು) ಇರುವ ಹಾಗೆ, ಒಂದು ರಜ್ಜುವಿನಷ್ಟು ಅಗಲವನ್ನೂ ಚಚ್ಚೌಕವನ್ನೂ ಹೊಂದಿದ ತ್ರಸನಾಳಿ ಇರುತ್ತದೆ.

ತ್ರಸಮೆನೆ ಚರಿಸುವ ಜೀವಂ।
ತ್ರಸನಾಳಿಯೊಳೇ ತ್ರಸಂಗಳಿಹವದರಿಂದಂ॥
ಪೆಸರಾಯ್ತು ನಾಳಿಯಿಂ ಪೊರ-।
ಗಸವಸದಿಂ ಸ್ಥಾವರಂಗಳೇ ಜೀವಿಸುಗುಂ॥ ॥೯॥

ತ್ರಸವೆಂದರೆ ಚಲಿಸುವ ಜೀವ; ತ್ರಸಜೀವಿಗಳು ತ್ರಸನಾಳಿಯಲ್ಲೇ ಇರುತ್ತವೆ. ಆದ್ದರಿಂದ ತ್ರಸನಾಳಿಯೆನ್ನುವರು. ಈ ತ್ರಸನಾಲಿಯ ಆಚೆ ಸ್ಥಾವರ ಜೀವಗಳು ಒತ್ತೊತ್ತಾಗಿ ಜೀವಿಸುತ್ತವೆ.

ಈಕ್ಷಿಸೆ ಮೇರುವಿನಗ್ರದೆ।
ಮೋಕ್ಷಾವಧಿಗೂರ್ಧ್ವಲೋಕಮೀ ದ್ವೀಪಾಂಭೋ॥
ಧೀ ಕ್ಷಿತಿ ಮಧ್ಯಮಲೋಕಂ।
ಸಾಕ್ಷಾತ್ತಳಲೋಕವೇಳು ನರಕಂ ಭವನಂ॥ ॥೧೦॥

ಮಹಾಮೇರುವಿನ ಮೇಲಿನ ತುದಿಯಿಂದ ಮೋಕ್ಷದವರೆಗೆ ಊರ್ಧ್ವ ಲೋಕವಿದೆ. ದ್ವೀಪ, ಸಮುದ್ರಗಳಿಂದ ಕೂಡಿರುವ ಈ ಭೂಲೋಕ ಸಾಕ್ಷಾತ್ ಮಧ್ಯಮ ಲೋಕವಾಗಿದೆ. ಇದರ ತಳದಲ್ಲಿ ಅಧೋಲೋಕವು ಏಳು ನರಕಗಳನ್ನೂ ಭವನಲೋಕವನ್ನೂ ಹೊಂದಿದೆ.

ಅಡಿ ಜಕ್ಕಳಮೆಂಬಂದಂ।
ನಡು ಝುಲ್ಲರಿಯಂ ಮೇಲೆ ಮರ್ದಳೆಯಂ ನೇ॥
ರ್ಪಡೆದಿರಿಸಿದಂತೆ ಮೊದಲಿಂ।
ಕಡೆ ಮುಟ್ಟಲ್ನೋಡೆ ಲೋಕದಾಕೃತಿಯೆಸೆಗುಂ॥ ॥೧೧॥

॥ಇತಿ ಪೀಠಿಕಾವರ್ಣನಂ॥

ಲೋಕದ ಕೆಳಭಾಗವು ಜಕ್ಕಳದ ಹಾಗೆ (ಬೆತ್ತದ ಕುರ್ಚಿಯ ಆಕಾರದಂತೆ) ಹಬ್ಬಿದೆ. ಮಧ್ಯಭಾಗವು ಚಪ್ಪಟೆಯಾದ ಜರಡಿಮೇಲೆ ಮದ್ದಳೆಯನ್ನು ನೆಟ್ಟಗಿರಿಸಿದಂತೆ ಇದೆ. ಈ ರೀತಿ ಬುಡದಿಂದ ತುದಿಯವರೆಗೆ ಲೋಕಾಕಾರವು ಕಂಗೊಳಿಸುತ್ತದೆ.

ಇಲ್ಲಿಗೆ **ಪೀಠಿಕಾವಿವರಣೆ** ಮುಗಿಯಿತು.

ಕೆಳಗೇಳು ನಿರಯಭೂಮಿಗ।
ಳಳವಟ್ಟವರಲ್ಲಿ ಯೆರಡುವುಂ ಕಾಲ್ನೆಲಗಳ್॥
ಕೆಳಗಣವುಂ ಛಳಿನೆಲಗ।
ಳ್ಕೊಳೆ ಮುಕ್ಕಾಲ್ಗೂಡಿ ಮೇಲೆ ನಾಲ್ಕತ್ಯುಷ್ಣಂ॥ ॥೧೨॥

ಕೆಳಭಾಗದಲ್ಲಿ ಏಳು ನರಕ ಭೂಮಿಗಳಿದ್ದು ಅವುಗಳಲ್ಲಿ ಕೆಳಗಿನ ಎರಡೂಕಾಲು ನೆಲಭಾಗ ಶೀತಯುಕ್ತವಾಗಿರುತ್ತದೆ. ಅದು ಕಡಿಮೆಯಾಗಿ ಮೇಲೆ ನಾಲ್ಕುಮುಕ್ಕಾಲು ನೆಲಭಾಗ ಅತ್ಯುಷ್ಣವಾಗಿರುತ್ತದೆ.

ಇಳಿಯೊಳ್ಬಿಡೆ ನಿಡುಲೋಹಾ।
ಚಳಮಾಗಳೆ ಮೇಣದಂತೆ ಕರಗುವುದೂರ್ಧ್ವ॥
ಸ್ಥಳದುಷ್ಣದಿನಾ ರಸಮಂ।
ಘಳಿಲನೆ ಬಲಿಯಿಸುವ ಶಕ್ತಿ ಕೆಳಗಣ ಶೈತ್ಯಂ॥ ॥೧೩॥

ಭೂಮಿಯಲ್ಲಿ ನೇರವಾಗಿರುವ ಲೋಹಾಚಳವನ್ನು ಬಿಟ್ಟರೆ ಅದು ಆ ಮೇಲಿನ ನೆಲದ ಶಾಖದಿಂದ ಕೂಡಲೇ ಮಯಣದಂತೆ ಕರಗುವುದು. ಕೆಳಭಾಗದ ಶೈತ್ಯವು ಆ ಕರಗಿದ ರಸವನ್ನು ಬೇಗನೆ ಘನೀಭೂತಗೊಳಿಸುವ ಶಕ್ತಿಯನ್ನು ಪಡೆದಿದೆ.

ನೆಲನೆಲ್ಲಂ ದುರ್ಗಂಧದೆ।
ಕಲಸಿದ ವಿಷದಂತೆ ಮರಗಳೆಲೆಯೆಲ್ಲಂ ಕೂ–॥
ರಲಗಿನವೊಲ್ಪರಿವ ನದೀ।
ಜಲಮೆಲ್ಲಂ ಕಾಯ್ದ ಲೋಹರಸದಂತಿರ್ಕುಂ॥ ॥೧೪॥

ನೆಲದ ಭಾಗವೆಲ್ಲ ದುರ್ಗಂಧ ಬೆರೆತ ವಿಷದಂತಿದೆ; ಮರಗಳ ಎಲೆಗಳು ಚೂಪಾದ ಕತ್ತಿಯೆಂತಿದೆ; ಹರಿಯುವ ನದಿಯ ನೀರು ಕಾದಕಬ್ಬಿಣದ ರಸದಂತಿದೆ.

ಆ ನರಕಭೂಮಿಗಳೊಳ–।
ಜ್ಞಾನಿಗಳತಿಪಾಪಭಾರದಿಂ ಬೀಳ್ದಯ್ಯೋ॥
ನಾನಾದುಃಖಂಬಡುತಿಹ–।
ರೇನೆಂಬೆಂ ಪೇಳ್ವೊಡೆನ್ನ ಮೆಯ್ಕಂಪಿಸುಗುಂ॥ ॥೧೫॥

ಆ ನರಕಲೋಕಗಳಲ್ಲಿ ಬಿದ್ದು ಭಾರಿ ಮಹಾಪಾಪಗಳ ಹೊರೆಹೊತ್ತ ಅಜ್ಞಾನಿಗಳು ನಾನಾ ಬಗೆಯ ದುಃಖಗಳನ್ನು ಅನುಭವಿಸುತ್ತಿರುವರು. ಅಯ್ಯೋ, ಏನೆಂದು ಹೇಳೋಣ! ಹೇಳು ಹೊರಟರೆ ನನ್ನ ಮೈ ಕಂಪಿಸುತ್ತದೆ.

ಒರ್ವರರನೊರ್ವರ್ಕೆಡಪುವ।
ರೋರ್ವರನೋರ್ವರ್ಕನಲ್ದು ತರಿವರ್ಕೊರೆವರ್॥
ಜರ್ವಿಸಿ ಪಳಿವರ್ಸೀಳ್ವರ್।
ಪೂರ್ವಭವಸ್ಮರಣೆದೋರಿ ಬೈವರ್ಪೊಯ್ವರ್॥ ॥೧೬॥

ಒಬ್ಬರನ್ನೊಬ್ಬರು ಪೂರ್ವಜನ್ಮದ ನೆನಪನ್ನು ಮೂಡಿಸಿ ಬೀಳಿಸುವರು; ಒಬ್ಬರನ್ನೊಬ್ಬರು ಕೋಪದಿಂದ ತರಿಯುತ್ತಾರೆ; ಕೊರೆಯುತ್ತಾರೆ; ಮತ್ತೆ ಹೊಡೆದಾಡುತ್ತಾರೆ.

ಸುಡುವರ್ಕಳ್ಳಿದೆ ಬಿಡದುರೆ।
ಕುಡಿಯೆನುತಂ ಕಾಯ್ದ ಲೋಹರಸಮಂ ನೆರೆವರ್॥
ಒಡನವರೊಡಲಂ ಕೊರೆ ಕೊರೆ।
ದಡಗಿದೆ ತಿನ್ನೆನುತ ಬಾಯ್ಗೆ ಗಿಡಿವರ್ಜಡಿವರ್॥ ॥೧೭॥

ಒಬ್ಬರನ್ನೊಬ್ಬರು ಸುಡುತ್ತಾರೆ. "ಹೆಂಡವಿದೆ; ಚೆನ್ನಾಗಿ ಕುಡಿ" ಎಂದು ಕಾದ ಕಬ್ಬಿಣರಸವನ್ನು ಒಂದೇ ಸಮನೆ ಬಾಯಿಗೆ ಗಿಡಿಯುತ್ತಾರೆ. ತಕ್ಷಣ ಅವರ ದೇಹವನ್ನು ಕೊರೆದು ಕೊರೆದು "ಇದೋ ಮಾಂಸ, ತಿನ್ನು" ಎಂದು ಬಾಯಿಗೆ ತುರುಕುವರು ಮತ್ತು ಹೊಡೆಯುವರು.

ಲೋಹದ ಪೆಣ್ಬುತ್ಥಳಿಯಂ।
ಕಾಹೇರಿಸಿ ಕಾಸಿ ತಂದು ಪರಸತಿಯಿವಳೊಳ್॥
ಮೋಹಿಸುತಪ್ಪೆನುತಂ ಪಿಡಿ।
ದಾ ಹಾದರದರಿಕೆಯವರ್ಗೆ ಪಿಡಿದಪ್ಪಿಸುವರ್॥ ॥೧೮॥

ಕಬ್ಬಿಣದ ಸ್ತ್ರೀಗೊಂಬೆಯನ್ನು ಕಾಯಿಸಿ ಬಿಸಿಯೇರಿಸಿ ತಂದು, "ಇವಳು ಪರನಾರಿ, ಇವಳನ್ನು ಕಾಮಿಸುತ್ತಾ ಆಲಿಂಗಿಸು" ಎಂದು ಹಿಡಿದು ಹಿಡಿದು ವ್ಯಭಿಚಾರಿಗಳಿಗೆ ಅಪ್ಪಿಸುತ್ತಾರೆ.

ಮೊರೆಯಿಡುವರ್ಗೋಳಿಡುವರ್।
ದರದರನೆಳೆಯಲ್ಕೆ ಹಲ್ಲ ಕಿರಿವರ್ಮೊರೆವರ್॥
ಕಿರಿಕಿರಿದಾಗಿರೆ ಮೆಯ್ಯಂ।
ಕೊರೆವಾಗಳ್ಬಯ್ಯಲಿಡುವರೇಳ್ವರ್ಬೀಳ್ವರ್॥ ॥೧೯॥

ಆಗ ನರಕಶಿಕ್ಷೆಯನುಭವಿಸುವವರು, ಮೊರೆ, ಹೋಗುತ್ತಾರೆ; ಗೋಳಾಡುತ್ತಾರೆ. ಸರಸರನೆ ಎಳೆದಾಡಿದಾಗ ಹಲ್ಗಿಂಜುತ್ತಾರೆ ಅಳುತ್ತಾರೆ; ಚೂರು ಚೂರಾಗಿ ಮೈಯಲ್ಲಿ ಕುಸುರು ತರಿದಾಗ ಅರಚುತ್ತಾರೆ, ಏಳುತ್ತಾರೆ, ಬೀಳುತ್ತಾರೆ.

ಕಡಿದೊಂದು ಬಾರಿ ತನುವಂ।
ಬಿಡುವುದು ಲೇಸಂತುಟಲ್ಲ ನಾರಕರಂಗಂ॥
ಕಡಿಖಂಡವೆಸಗೆ ತುಂಡಹು-।
ದೊಡಗೂಡಿದೊಡೊಂದೆಯಹುದು ಪಾದರಸಂಬೊಲ್॥ ॥೨೦॥

ಒಂದೇ ಸಲಕ್ಕೆ ಶರೀರವನ್ನು ಕತ್ತರಿಸಿ ಹಾಕುವುದು ಒಳ್ಳೆಯದು. ಆದರೆ ನಾರಕಿಯ ದೇಹವು ಹಾಗಲ್ಲ; ಕತ್ತರಿಸಿ ಭಾಗಮಾಡಿದರೆ ತುಂಡಾಗುವುದು; ಒಟ್ಟು ಮಾಡಿದರೆ ಪಾದರಸದಂತೆ ಮತ್ತೆ ಒಂದಾಗಿ ಸೇರಿಕೊಳ್ಳುವುದು.

ನಿಡುಬೆಟ್ಟದನಿತು ಕೂಳುಂ-।
ಬೊಡೆ ಕಡು ಹಸಿವುಂಟು ಕೂಳುಗಳ್ತಮಗಿಲ್ಲಂ॥
ಕಡಲಂ ಪೀರ್ವ ಮಹಾತೃಷೆ-।
ಯಡಸಿರ್ಪುದು ನೀರ ಪನಿಯುಮಿಲ್ಲದೆ ನೋವರ್॥ ॥೨೧॥

ಎತ್ತರವಾದ ಬೆಟ್ಟದಷ್ಟು ಆಹಾರ ತಿನ್ನುವಷ್ಟು ವಿಪರೀತ ಹಸಿವಾಗುತ್ತದೆ; ಆದರೆ ಅವರಿಗೆ ಅಲ್ಲಿ ಆಹಾರವಿರುವುದಿಲ್ಲ. ಸಮುದ್ರವನ್ನೇ ಹೀರಿಬಿಡುವಷ್ಟು ಕಡುದಾಹವಿರುತ್ತದೆ. ಆದರೆ ಒಂದು ತೊಟ್ಟು ನೀರೂ ಇಲ್ಲದೆ ಒದ್ದಾಡುತ್ತಾರೆ.

ನರಕಮೆ ದುಃಖಂ ಮತ್ತಾ।
ನರಕದೊಳಂ ಪೋಗೆ ಪೋಗೆ ಮೇಲಣ ನರಕೋ–॥
ರ್ವರೆಯಿಂ ಕೆಳಕೆಳಗತಿನಿ–।
ಷ್ಠುರದುಃಖಮದಕ್ಕುಮಾಯುಷಂ ಪಿರಿದಕ್ಕುಂ॥ ॥೨೨॥

ನರಕವೆಂಬುದೇ ದುಃಖಮಯವಾದುದು; ಮತ್ತೆ ಆ ನರಕಲೋಕಗಳಲ್ಲಿ ಮೇಲಿಂದ ಕೆಳಕ್ಕೆ ಹೋದ ಹಾಗೆಲ್ಲಾ, ಮೇಲಿನ ನರಕಗಳಿಗಿಂತ ಕೆಳಗಿನ ನರಕಲೋಕಗಳಲ್ಲಿ ಅತ್ಯಂತ ಕಠಿಣವಾದ ದುಃಖವಿರುತ್ತದೆ. ತೀರಾ ಕೆಳಗಿನ ಲೋಕಕ್ಕೆ ಹೋದಂತೆಲ್ಲಾ ಆಯುಷ್ಯ ಹೆಚ್ಚುತ್ತಾ ಹೋಗುತ್ತದೆ

ಇಪ್ಪತ್ತೈದುಂ ಸಮಯಕೆ।
ತಪ್ಪದೆ ಧರೆಗಾರುಸೂಳ್ಸುಖೋರ್ವಿಯ ಕುರಿಯಾ॥
ತುಪ್ಪಳಿಯಿಂ ತೆಗೆತೆಗೆದಿಡ–।
ಲುಪ್ಪುಗಡಲ್ಭರಿತದೊಂದು ಸಾಗರಮೆನಿಕುಂ॥ ॥೨೩॥

ಸಾಗರದ ಪರಿಮಾಣವೆಷ್ಟೆಂದರೆ ಭೋಗಭೂಮಿಯ ಕುರಿಯತುಪ್ಪಟದಿಂದ ಲವಣ ಸಮುದ್ರದ ನೀರನ್ನು ಇಪ್ಪತ್ತೈದು ಸಮಯಕ್ಕೊಮ್ಮೆ ತಪ್ಪದೆ ತೆಗೆತೆಗೆದು ಆರುಬಾರಿ ಭೂಮಿಗಿಡಲು, ಆ ಸಮುದ್ರ ಬರಿದಾಗ, ಅದನು ಒಂದು 'ಸಾಗರ'ದ ಪರಿಮಾಣವೆನ್ನುವರು.

ಮೊದಲಿಂ ಕೆಳಗೇಳುಂ ನರ–।
ಕದೊಳಾಯುಷಮೊಂದು ಮೂರುವೇಳುಂ ದಶಕಂ॥
ಪದಿನೇಳಿಪ್ಪತ್ತೆರಡಂ–।
ತ್ಯದೊಳದು ಮೂವತ್ತುಮೂರು ಸಾಗರಮಕ್ಕುಂ॥ ॥೨೪॥

ಮೇಲಿಂದ ಕೆಳಕ್ಕೆ ಕ್ರಮವಾಗಿ ಏಳು ನರಕಗಳಲ್ಲಿ ಆಯುಷ್ಯ ಪ್ರಮಾಣವು ಒಂದು ಸಾಗರ, ಮೂರು ಸಾಗರ, ಏಳು ಸಾಗರ, ಹತ್ತು ಸಾಗರ, ಹದಿನೇಳು ಸಾಗರ, ಇಪ್ಪತ್ತೆರಡು ಸಾಗರ. ಕೊನೆಯ ಏಳನೆಯ ನರಕದಲ್ಲಿ ಮೂವತ್ತಮೂರು ಸಾಗರ ಇರುತ್ತದೆ.

ಎವೆಯಿಕ್ಕುವನಿತು ಕಾಲಮು-।
ಮವರ್ಗೆಡವಿಲ್ಲ ದುಃಖದೊಳ್ಬಹುಕಾಲಂ॥
ನವೆಯುತ್ತಿರ್ಪರ್ಮುನ್ನಿನ।
ಭವದೊಳ್ತಾವೆಸಗಿದುಗ್ರಪಾಪದ ಫಲದಿಂ॥ ॥೨೫॥

॥ಇತಿ ನರಕಲೋಕವರ್ಣನಂ॥

ನಾರಕಿಗಳು ಪೂರ್ವಜನ್ಮದಲ್ಲಿ ತಾವು ಮಾಡಿದ ಘೋರಪಾಪದ ಫಲವಾಗಿ ಅನಂತಕಾಲದವರೆಗೆ ರೆಪ್ಪೆ ಮಿಟುಕುವಷ್ಟು ಕಾಲವಾದರೂ ಬಿಡದೆ (ಒಂದೇ ಸಮನೆ) ಸಾಗರೋಪಮ ಕಾಲದವರೆಗೆ ದುಃಖದಲ್ಲಿ ತೊಳಲಾಡುತ್ತಿರುವರು.

ಇಲ್ಲಿಗೆ ನರಕಲೋಕವರ್ಣನೆ ಮುಗಿಯಿತು

ಆ ನರಕೋರ್ವರೆಯಿಂ ಮೇ-।
ಲೀ ನರಲೋಕಕ್ಕೆ ಕೆಳಗೆ ನಲ್ನಡುವಿರ್ಕುಂ॥
ಶ್ರೀನಾಗಲೋಕವಂತದು॥
ತಾನಾಗಮದಲ್ಲಿ ಭವನಲೋಕಮೆನಿಕ್ಕುಂ॥ ॥೨೬॥

ಆ ನರಕಲೋಕದ ಮೇಲೆ ಮತ್ತು ಈ ನರಲೋಕದ ಕೆಳಗೆ ಇದರ ಮಧ್ಯಭಾಗದಲ್ಲಿ ಶ್ರೀನಾಗಲೋಕವಿದೆ. ಅದನ್ನು ಆಗಮದಲ್ಲಿ ಭವನಲೋಕವೆನ್ನುತ್ತಾರೆ.

ನೆರೆದೇಳ್ಕೋಟಿಯುಮೆಪ್ಪ-।
ತ್ತೆರಡೇಲಕ್ಕಂಗಳಕ್ಕುಮಾ ಭವನಂಗಳ್॥
ಅರುಹನಾಲಯಮುಮನಿತೇ।
ಸುರರೆನಿಸುವರಲ್ಲಿ ಪುಟ್ಟಿದವರುಂ ಸುಖಿಗಳ್॥ ॥೨೭॥

॥ಇತಿ ಭವನಲೋಕವರ್ಣನಂ॥

ಈ ಭವನಲೋಕದಲ್ಲಿ ಏಳುಕೋಟಿ ಎಪ್ಪತ್ತೆರಡು ಲಕ್ಷ ಪೂರ್ಣಭವನಗಳಿವೆ. ಅರ್ಹತ್ ಪರಮೇಶ್ವರ ದೇಗುಲಗಳೂ ಅಷ್ಟೇ ಸಂಖ್ಯೆಯಲ್ಲಿ ಇವೆ; ಈ ಭವನಲೋಕದಲ್ಲಿ ಹುಟ್ಟಿದವರು ಸುರರು ಎನ್ನಿಸಿಕೊಳ್ಳುತ್ತಾರೆ; ಸುಖಿಗಳಾಗಿರುತ್ತಾರೆ.

ಆ ಭವನಲೋಕದಿಂ ಮೇ–।
ಲೀ ಭೂತಳವಿದೇಕೊ ತಾನೆ ನಡುವಣ ಲೋಕಂ–॥
ಈ ಭೂಮಿಗಸಂಖ್ಯಾತಂ–।
ಶೋಭಿಸುಗುಂ ದ್ವೀಪಸಾಗರಂ ಕ್ರಮದಿಂದಂ॥ ॥೨೮॥

ಈ ಭವನಲೋಕದ ಮೇಲೆ ನಮ್ಮವರ ಲೋಕವಿದೆ. ಇದು ಮಧ್ಯಮಲೋಕ. ಈ ಭೂಮಿಯಲ್ಲಿ ಒಂದಾದ ಮೇಲೆ ಒಂದು ಅಸಂಖ್ಯಾತ ದ್ವೀಪ ಸಮುದ್ರಗಳು ಕಂಡು ಬರುತ್ತವೆ.

ಇದು ಜಂಬೂದ್ವೀಪಂ ಗಾ–।
ವುದ ಲಕ್ಕದ ತೆರಪು ಬಟ್ಟಿತಾಗಿರ್ಪುದು ಮ–॥
ತ್ತದರಿಂದಿಮ್ಮಡಿತೆರಪಿನೊ–।
ಳದೆ ಸುತ್ತುಂ ಸುತ್ತಿಬಂದು ಲವಣ ಸಮುದ್ರಂ॥ ॥೨೯॥

ಈ ಜಂಬೂದ್ವೀಪವು ಒಂದು ಲಕ್ಷಯೋಜನ ವಿಸ್ತಾರವಾಗಿಯೂ ದುಂಡಾಗಿಯೂ ಇದೆ. ಮತ್ತೆ ಇದರಿಂದ ಇಮ್ಮಡಿ ವಿಸ್ತಾರದಲ್ಲಿ ಸುತ್ತಲೂ ಲವಣಸಮುದ್ರ ಆವರಿಸಿದೆ.

ಆ ಲವಣಾಂಭೋನಿಧಿಗಿ–।
ಪಾರ್ಗಲದೊಳಿಹುದು ಧಾತಕೀಖಂಡದ್ವೀ–॥
ಪಾಲಂಬಮುದರಿನಿರ್ಮ್ಮಡಿ।
ಕಾಲೋದಕಮೆಂಬ ವಾರ್ಧಿ ಬಳಸಿಹುದೊಳ್ಪಿಂ॥ ॥೩೦॥

ಆ ಲವಣ ಸಮುದ್ರಕ್ಕೆ ಇಮ್ಮಡಿಯಾಗಿ ನಾಲ್ಕು ಲಕ್ಷ ಯೋಜನ ವಿಸ್ತಾರದಲ್ಲಿ ಧಾತಕೀಖಂಡ ದ್ವೀಪವಿದೆ. ಆ ದ್ವೀಪದಿಂದ ಎರಡರಷ್ಟು ಕಾಲೋದಕ ಸಮುದ್ರ ಸುತ್ತುವರಿದಿದೆ.

ಕಾಲೋದಕಾಬ್ಧಿಗಿರ್ಮಡಿ।
ಯಾಲಂಬಿಪ ತೆರಪು ಪುಷ್ಕರದ್ವೀಪಂ ಸು–॥
ತ್ತೋಲಗಿಸೆ ಮಾನುಷೋತ್ತರ–।
ಶೈಲಂ ತದ್ವೀಪಮಧ್ಯದೊಳ್ಬಳಸಿರ್ಕುಂ॥ ॥೩೧॥

ಕಾಲೋದಕಸಮುದ್ರದ ಸುತ್ತಲೂ ಎರಡುಪಟ್ಟು ವಿಸ್ತಾರವನ್ನು ಅವಲಂಬಿಸಿರುವ ಪುಷ್ಕರದ್ವೀಪ ಆವರಿಸಿದೆ. ಆ ದ್ವೀಪದ ಮಧ್ಯದಲ್ಲಿ ಮಾನುಷೋತ್ತರ ಪರ್ವತ ಆವರಿಸಿದೆ.

ಆ ಗಿರಿಯ ಬಳಸಿ ಪಲವುಂ।
ಸಾಗರಮುಂ ದ್ವೀಪತತಿಯುಮೊಂದಕ್ಕೊಂದುಂ॥
ದ್ವೈಗುಣಮೆನೆ ರಜ್ಜುವರಂ।
ಪೋಗಿರ್ಕುಂ ಬೀಸಿದಂದದಿಂ ಕವೆಯಾರಂ॥ ॥೩೨॥

ಆ ಪರ್ವತವನ್ನು ಬಳಸಿಕೊಂಡು ಒಂದಕ್ಕಿಂತ ಒಂದು ಇಮ್ಮಡಿ ವಿಸ್ತಾರವುಳ್ಳ ಅನೇಕ ದ್ವೀಪಸಮುದ್ರಗಳು ಒಂದು ರಜ್ಜು ದೂರದವರೆಗೆ ಕವೆಯಾರವನ್ನು (ದುಂಡಾಗಿ ಬಳಸಿ ಬರುವ ಸಾಧನ) ಬೀಸಿದಂತೆ ಸುತ್ತಿಕೊಂಡಿವೆ.

ವರಮಾನುಷೋತ್ತರಾಚಳ–।
ಮಿರುತಿರ್ಕುಂ ಕೋಟೆಯಂತುಟದರೊಳಗೆಸೆಗುಂ॥
ಎರಡುವರೆದೀವಿಯದರೊಳ್।
ನರರಿರ್ಕುಂ ಗಿರಿಯ ಪೊರಗೆ ತಿರ್ಯಂಚಂಗಳ್॥ ॥೩೩॥

ಶ್ರೇಷ್ಠವಾದ ಮಾನುಷೋತ್ತರ ಪರ್ವತವು ಕೋಟೆಯಂತಿದೆ. ಅದರಲ್ಲಿ ಎರಡೂವರೆ ದ್ವೀಪಗಳಿವೆ. ಆ ದ್ವೀಪಗಳಲ್ಲಿ ಮಾನವರಿದ್ದಾರೆ ಆ ಮಾನುಷೋತ್ತರ ಪರ್ವತದ ಹೊರಭಾಗಕ್ಕೆ ತಿರ್ಯಕ್ ಜೀವಿಗಳಿರುತ್ತವೆ; ಮನುಷ್ಯರು ಇರುವುದಿಲ್ಲ.

ಮನುಜಕ್ಷೇತ್ರದ ತೆರಪೆನಿ-।
ತೆನೆ ನಾಲ್ವತ್ತೈದು ಲಕ್ಷಯೋಜನಮಕ್ಕುಂ॥
ನೆನೆವೊಡೆ ಮೇಲಣ ಮೋಕ್ಷಮು-।
ಮನಿತೇ ತೆರಪಕ್ಕುಮಿಂತಿದಾಗಮಸಿದ್ಧಂ॥ ॥೩೪॥

ಮನುಷ್ಯಲೋಕದ ವಿಸ್ತಾರವೆಷ್ಟೆಂದರೆ ನಾಲ್ವತ್ತೈದು ಲಕ್ಷ ಯೋಜನವಾಗಿದೆ. ಹಾಗೆ ನೋಡಿದರೆ ಮೇಲಿನ ಮೋಕ್ಷಸ್ಥಾನವೂ ಅಷ್ಟೇ ವಿಸ್ತಾರವಾಗಿದೆ. ಇದು ಆಗಮಸಿದ್ಧವಾದ ವಿಚಾರ.

ಈ ಜಂಬೂದ್ವೀಪದೊಳಭಿ-।
ರಾಜಿಸುಗುಂ ನಟ್ಟನಡುವೆ ಮೇರುನಗೇಂದ್ರಂ॥
ಯೋಜನಲಕ್ಷದ ನೀಟಂ।
ಯೋಜನವೀರೈದು ಸಾಸಿರಂ ಬಳಸು ಮೊದಲ್॥ ॥೩೫॥

ಈ ಜಂಬೂದ್ವೀಪದ ಮಧ್ಯಭಾಗದಲ್ಲಿ ಒಂದು ಲಕ್ಷ ಯೋಜನದೆತ್ತರವೂ ಬುಡದಲ್ಲಿ ಹತ್ತುಸಾವಿರ ಯೋಜನ ಸುತ್ತಳತೆಯುಳ್ಳ ಮಹಾಮೇರು ಪರ್ವತ ವಿರಾಜಿಸುತ್ತಿದೆ.

ಅದರ ಸರಿತದೊಳೆ ಮೂಡ-।
ಲ್ಪುದಿದೆರಡುಂ ಪಡುವಲೆರಡು ಮೇರುಗಳಿರ್ಕುಂ॥
ವಿದಿತಮಿವು ಧಾತಕೀಖಂ-।
ಡದೊಳೆರಡುಂ ಪುಷ್ಕರಾರ್ಧದೊಳಗೆರಡೆನಿಕುಂ॥ ॥೩೬॥

ಆ ಪರ್ವತದ ಬಳಿಯಲ್ಲೇ ಪೂರ್ವದಿಕ್ಕಿನಲ್ಲಿ ಎರಡು, ಪಶ್ಚಿಮದಿಕ್ಕಿನಲ್ಲಿ ಎರಡು, ಸಮಾನವಾದ ಮೇರು ಪರ್ವತಗಳಿವೆ. ಇವುಗಳಲ್ಲಿ ಎರಡು ಧಾತಕೀಖಂಡದಲ್ಲಿವೆ; ಇನ್ನೆರಡು ಪುಷ್ಕರಾರ್ಧದಲ್ಲಿವೆ.

ಎಂಬತ್ತು ನಾಲ್ಕು ಸಾಸಿರ–।
ಮೆಂಬನಿತೇ ಗಾವುದಂ ಚತುರ್ಮೇರುಗಳು–॥
ದ್ದಂ ಬಗೆವೊಡಂತವೈದುಂ।
ಪೊಂಬೆಟ್ಟಂಗಳ್ಜಿನೇಂದ್ರನಿಲಯಯುತಂಗಳ್॥ ॥೩೭॥

ವಿಚಾರ ಮಾಡಿದರೆ, ಈ ನಾಲ್ಕು ಮೇರುಪರ್ವತಗಳಲ್ಲಿ ಪ್ರತಿಯೊಂದೂ ಎಂಬತ್ತುನಾಲ್ಕು ಸಹಸ್ರ ಯೋಜನ ಗಾವುದಗಳ ಎತ್ತರವಿದೆ. ಮಧ್ಯದಲ್ಲಿ ಗಮನಿಸಿದರೆ ಅಂತೆಯೇ ಐದು ಚಿನ್ನದ ಬೆಟ್ಟಗಳೂ, ಆ ಬೆಟ್ಟಗಳಲ್ಲಿ ಅಕೃತ್ರಿಮ ಜಿನದೇವಾಲಯಗಳೂ ಇವೆ.

ಆ ಹೇಮಪರ್ವತಂಗಳ।
ರೂಹಿಂದಂ ಮೂಡಣುರ್ವಿ ಪೂರ್ವವಿದೇಹಂ॥
ಮೋಹರಿಸಿ ಪಡುವಲಪರವಿ–।
ದೇಹೋರ್ವರೆ ಪಂಚಗಿರಿಗೆ ಧರೆ ಪತ್ತಕ್ಕುಂ॥ ॥೩೮॥

ಆ ಚಿನ್ನದ ಬೆಟ್ಟಗಳ ರೂಪಿನಿಂದ ವಿಶೇಷವಾಗಿ ಪೂರ್ವವಿದೇಹವು ಪೂರ್ವದಿಕ್ಕಿನಲ್ಲಿರುವ ಭೂಮಿಯಲ್ಲಿದೆ; ಅಪರ ವಿದೇಹವು ಪಶ್ಚಿಮದಿಕ್ಕಿನಲ್ಲಿರುವ ಭೂಮಿಯಲ್ಲಿದೆ. ಐದು ಮೇರು ಪರ್ವತಗಳಿಗೆ ಹತ್ತು ಪ್ರದೇಶಗಳಿವೆ. ಅದರಲ್ಲಿ ಐದು ಪೂರ್ವ ವಿದೇಹಗಳೆನಿಸಿದರೆ, ಇನ್ನೈದು ಪಶ್ಚಿಮ ವಿದೇಹಗಳು ಎನ್ನಿಸಿಕೊಂಡಿವೆ.

ಮೇರುಗಳ ತೆಂಕಬಡಗಲ್।
ಸಾರಿರ್ದಪವಾರು ಭೋಗಭೂಮಿಗಳವರಿಂ॥
ಸೇರಿಂತು ತೆಂಕ ಭರತಮಿ–।
ದೈರಾವತಮೆಂಬ ಭೂಮಿ ಬಡಗಣ ದೆಸೆಯೊಳ್॥ ॥೩೯॥

ಮೇರುಪರ್ವತಗಳ ದಕ್ಷಿಣೋತ್ತರಗಳಲ್ಲಿ ಈ ಕಡೆ ಮೂರು, ಆಕಡೆ ಮೂರು, ಒಂದೊಂದು ಪರ್ವತಕ್ಕೆ ಆರಾರು ಭೋಗಭೂಮಿಗಳು ಸೇರಿಕೊಂಡಿರುತ್ತವೆ. ಅವುಗಳಲ್ಲಿ ದಕ್ಷಿಣಕ್ಕೆ ಭರತಭೂಮಿಯಿದೆ; ಉತ್ತರ ದಿಕ್ಕಿನಲ್ಲಿ ಐರಾವತಭೂಮಿಯಿದೆ.

ಭೋಗಮಹಿ ಲೇಸು ಮತ್ತಾ।
ಭೋಗಿಗಳುಂ ಚೆಲ್ವರಹುದು ಧರ್ಮಮದಿಲ್ಲಂ॥'
ಭೋಗಿಸುವರ್ಮುನ್ನಂ ಜಿನ-।
ಯೋಗಿಗೆ ಭಕ್ತಿಯೊಳೆ ಭುಕ್ತಿಯಿಕ್ಕಿದ ಫಲದಿಂ॥ ॥೪೦॥

ಭೋಗಭೂಮಿ ಒಳ್ಳೆಯದು; ಮತ್ತೆ ಅಲ್ಲಿನ ಜನ ಚೆಲುವ ಚೆನ್ನಿಗರು ಆದರೆ ಅಲ್ಲಿ ಧರ್ಮ ಕಾಣದು. ಆದರೂ ಹಿಂದೆ ಅವರು ಜಿನಯೋಗಿಗೆ ಭಕ್ತಿಯಿಂದ ಆಹಾರದಾನ ಮಾಡಿದ್ದರ ಫಲವಾಗಿ ಸುಖವನ್ನು ಅನುಭವಿಸುತ್ತಾರೆ.

ಭರತಮುಮೈರಾವತಮೆಂ-।
ಬೆರಡಿವು ಪತ್ತಾದವೈದು ಮೇರುಗೆ ಭೋಗೋ-॥
ರ್ವರೆಯಕ್ಕುಮೊರ್ಮೆ ಕರ್ಮೋ-।
ರ್ವರೆಯಕ್ಕುಂ ಪ್ರಳಯಮಕ್ಕುಮುದ್ಧತಮಕ್ಕುಂ॥ ॥೪೧॥

ಭರತಭೂಮಿಯೂ ಐರಾವತಭೂಮಿಯೂ ಈ ಎರಡು ಕ್ಷೇತ್ರಗಳು ಐದು ಮೇರು ಪರ್ವತಗಳಿಗೆ ಸೇರಿದಂತೆ ಹತ್ತು ಆಗುವುದು. ಇವುಗಳು ಒಮ್ಮೆ ಭೋಗಭೂಮಿಗಳಾಗಿ ಪರಿಣಮಿಸಿದರೆ, ಇನ್ನೊಮ್ಮೆ ಇವೇ ಕರ್ಮಭೂಮಿಗಳಾಗಿ ಪರಿಣಮಿಸುತ್ತವೆ. ಇವುಗಳಿಗೆ ಸೃಷ್ಟಿಯು ಉಂಟು; ನಾಶವೂ ಉಂಟು.

ಪೂವಾಪರಮೆಂಬ ವಿದೇ-।
ಹೋರ್ವಿಗೆ ಕೇಡಿಲ್ಲ ಪರಮತಸ್ಥಿತಿಯಿಲ್ಲಂ॥
ಸರ್ವಜ್ಞಮತವೆ ಮೆರೆಗುಂ।
ಸರ್ವದಿನಂ ಮುಕ್ತಿಗೈದುವರ್ಜಿನರಿರ್ಪರ್॥ ॥೪೨॥

ಪೂರ್ವವಿದೇಹ ಅಪರವಿದೇಹಗಳಿಗೆ ನಾಶವಿಲ್ಲ. ಅಲ್ಲಿ ಅನ್ಯಮತ ಪ್ರಭಾವವಿಲ್ಲ. ಸರ್ವಜ್ಞ ವೀತರಾಗನಮತವೇ ವಿರಾಜಿಸುತ್ತದೆ; ಭವ್ಯಜೀವಿಗಳು ಎಲ್ಲಾ ದಿನಗಳಲ್ಲೂ ಮುಕ್ತಿ ಹೊಂದುತ್ತಿರುತ್ತಾರೆ. ಅಲ್ಲಿ ಸದಾ ಜಿನರು, ತೀರ್ಥಂಕರರು ಇರುತ್ತಾರೆ.

ವಿಜಯಾರ್ಧಗಿರಿಗಳಿರ್ಕು೦।
ರಜತಮಯಂಗಳ್ಸಮಂತು ನೂರೆಪ್ಪತ್ತಾ॥
ರಜತಾದ್ರಿಗಳೊಳ್ವಿದ್ಯಾ-।
ವಿಜಯರ್ವಿದ್ಯಾಧರರ್ಕಳಿರ್ಕುಂ ಸುಖದಿಂ॥ ॥೪೩॥

ಬೆಳ್ಳಿಯ ನೂರೆಪ್ಪತ್ತು ವಿಜಯಾರ್ಧಪರ್ವತಗಳು ಸಮಾನಾಕಾರದಲ್ಲಿವೆ; ಆ ಬೆಳ್ಳಿ ಬೆಟ್ಟಗಳಲ್ಲಿ ವಿದ್ಯಾವಿಜಯಿಗಳಾದ ವಿದ್ಯಾಧರರು ಸುಖವಾಗಿ ವಾಸಿಸುತ್ತಾರೆ.

ವ್ರತದಾನಪೂಜೆಯುಂಟೂ-।
ರ್ಜಿತದೀಕ್ಷೆಯುಮುಂಟು ಮೋಕ್ಷಮುಂಟವರೊಳ್ಮ॥
ತ್ತತಿಶಯವಿದ್ಯಾಬಲಮುಂ-।
ಟತಿಭೋಗಮುಮುಂಟು ಚರಿಸುವರ್ನಭದೊಳವರ್॥ ॥೪೪॥

॥ಇತಿ ನರಲೋಕವರ್ಣನಂ॥

ಆ ವಿದ್ಯಾಧರರಲ್ಲಿ ವ್ರತ, ದಾನ, ಪೂಜೆಗಳುಂಟು; ಜಿನದೀಕ್ಷೆ, ಮೋಕ್ಷವುಂಟು. ಅತಿಶಯ ವಿದ್ಯಾಬಲ, ಅಧಿಕಭೋಗ ಉಂಟು; ಅವರು ಗಗನಮಾರ್ಗದಲ್ಲಿ ಸಂಚಾರ ಮಾಡುತ್ತಿರುವರು.

ಇಲ್ಲಿಗೆ ನರಲೋಕವರ್ಣನೆ ಮುಗಿಯಿತು

ನರಲೋಕದ ವಾರ್ತೆಯದಂ-।
ತಿರಲಿನ್ನಾ ಮೇರುಗಿರಿಯ ತುದಿಯಿಂ ಭವನೋ-॥
ರ್ವರೆ ಮುಟ್ಟಲೆಲ್ಲಿಯುಂ ವ್ಯಂ-।
ತರರಿರ್ಪರ್ತಾವುಮಮರರೆನಿಸುವರ್ಸುಖಿಗಳ್॥ ॥೪೫॥

॥ಇತಿ ವ್ಯಂತರಲೋಕವರ್ಣನಂ॥

ನರಲೋಕದ ವಿಚಾರ ಹಾಗಿರಲಿ, ಇನ್ನು ಆ ಮೇರುಗಿರಿಯ ತುದಿಯಿಂದ ಭವನಲೋಕದವರೆಗೆ ವ್ಯಂತರರು ಇರುತ್ತಾರೆ. ಅವರೂ ಸಹ ದೇವತೆಗಳು ಮತ್ತು ಸುಖಿಗಳು ಎನಿಸುತ್ತಾರೆ.,

ಇಲ್ಲಿಗೆ ವ್ಯಂತರಲೋಕವರ್ಣನೆ ಮುಗಿಯಿತು

ಆ ಮಾತಂತಿರಲಿನ್ನೀ।
ಭೂಮಿಯ ಮೇಲೇಳುನೂರತೊಂಬತ್ತೆಂಬು–॥
ದ್ದಾಮದ ಯೋಜನದೊಳ್ತಾ–।
ರಾಮಂಡಲಮಿರ್ಕುಮವರುಮಮರರ್ಸುಖಿಗಳ್। ॥೪೬॥

ಆ ವಿಚಾರ ಹಾಗಿರಲಿ. ಇನ್ನು ಈ ವ್ಯಂತರಲೋಕದ ಮೇಲೆ ಏಳುನೂರ ತೊಂಬತ್ತು ಮಹಾಯೋಜನ ವ್ಯಾಪ್ತಿಯಲ್ಲಿ ತಾರಾಮಂಡಲವಿದೆ. ಆ ತಾರೆಗಳು, ದೇವತೆಗಳು ಹೌದು; ಸುಖಿಗಳೂ ಹೌದು.

ಮೊತ್ತಮೊದಲಿಂದೆ ತುದಿಗದು।
ಪತ್ತೊಡಗೂಡಿರ್ದ ನೂರುಗಾವುದ ದಟ್ಟಂ॥
ಸುತ್ತೊಂದು ರಜ್ಜುವುಡುಗಣ।
ಮೊತ್ತಂ ಜ್ಯೋತಿಷ್ಕಲೋಕಮೆನಿಕುಂ ಪೆಸರಿಂ॥ ॥೪೭॥

॥ಇತಿ ಜ್ಯೋತಿರ್ಲೋಕವರ್ಣನಂ॥

ಅಲ್ಲಿಂದ ಮೊದಲ್ಗೊಂಡು ತುದಿಯವರೆಗೆ ನೂರಹತ್ತು ಯೋಜನ ವಿಸ್ತಾರವಾಗಿ ಸುತ್ತಲೂ ಒಂದು ರಜ್ಜು ನಕ್ಷತ್ರ ಸಮೂಹವಿದೆ. ಆ ಪ್ರದೇಶಕ್ಕೆ ಜ್ಯೋತಿರ್ಲೋಕವೆಂದು ಹೆಸರು.

ಇಲ್ಲಿಗೆ ಜ್ಯೋತಿರ್ಲೋಕವರ್ಣನೆ ಮುಗಿಯಿತು

ತೋರುವ ತಾರಾಗಣಮಂ।
ಮೀರಿದ ಮೇರುವಿನ ಮೇಲೆ ತೆಂಕಲ್ಬಡಗಳ್॥
ಬೇರಾಗಿ ತೋರ್ಪುವುಂ ಪದಿ–।
ನಾರುಂ ಸ್ವರ್ಗಂಗಳೆರಡು ಸಾಲಾಗಿರ್ಕುಂ॥ ॥೪೮॥

ಕಾಣುತ್ತಿರುವ ತಾರಾಮಂಡಲದ ಆಚೆಗೆ ಮೇರು ಪರ್ವತದ ಮೇಲ್ಭಾಗದಲ್ಲಿ ದಕ್ಷಿಣೋತ್ತರಕ್ಕೆ ಬೇರೆ ಬೇರೆಯಾಗಿ ಕಾಣುವ ಹದಿನಾರು ಸ್ವರ್ಗಗಳು ಎರಡು ಸಾಲಿನಲ್ಲಿವೆ.

ಇರ್ಪುದು ರತ್ನವಿಮಾನಂ।
ಕೂರ್ಪಂಗೆನೆಯರ್ಕಳಲ್ಲಿ ದೇವಾಂಗನೆಯರ್॥
ನೇರ್ಪಟ್ಟ ದಿವ್ಯದೇಹಮ-।
ನಾರ್ಪೊಗಳಲ್ಬಲ್ಲರಣ್ಣ ಸಗ್ಗದ ಸುಖಮಂ॥ ॥೪೯॥

ಆ ಸ್ವರ್ಗಗಳಲ್ಲಿ ರತ್ನವಿಮಾನವಿದೆ; ಪ್ರಿಯರಾದ ದೇವತಾ ಸ್ತ್ರೀಯರಿದ್ದಾರೆ; ರೂಪಿಸಿದ ಸೊಗಸಾದ ದಿವ್ಯಶರೀರವಿದೆ; ಅಣ್ಣಂದಿರಾ! ಆ ಸ್ವರ್ಗಸುಖವನ್ನು ಯಾರಿಗೆ ತಾನೇ ಬಣ್ಣಿಸಲು ಶಕ್ಯ?

ಪದಿನಾರುಂ ಕಲ್ಪಂಗಳ।
ತುದಿಯೊಳ್ ಗ್ರೈವೇಯಕಾಖ್ಯಮೊಂದೇ ಸಾಲಿಂ-॥
ದೊದವಿಹುದಿಂದ್ರಕದ ವಿಮಾ-।
ನದೊಳೊಂಬತ್ತರೊಳತೀವರಮ್ಯಂ ಕಾಮ್ಯಂ॥ ॥೫೦॥

ಹದಿನಾರು ಕಲ್ಪಗಳ ತುದಿಯಲ್ಲಿ ಮೂರು ಮೂರಂತೆ ಒಂದೇ ಸಾಲಿನಲ್ಲಿ 'ಗ್ರೈವೇಯಕ'ವೆಂಬ ಹೆಸರಿನ ಒಂಬತ್ತು ಇಂದ್ರಕ ವಿಮಾನಗಳಿವೆ. ಈ ವಿಮಾನಗಳು ಅತಿರಮಣೀಯವಾಗಿವೆ. ಅಪೇಕ್ಷಣೀಯವಾಗಿವೆ.

ಸಂದಾ ಗ್ರೈವೇಯಕದಿಂ।
ಮುಂದೆ ನವಾಣುದ್ದಿಶಾಖ್ಯಮಿರ್ಕುಂ ತಾನೆಂ-॥
ಟುಂ ದೆಸೆಗೆಂಟು ವಿಮಾನಂ।
ನಿಂದುದು ನಡುವೊಂದು ನವಕಮಾಯ್ತು ವಿಮಾನಂ॥ ॥೫೧॥

ಒಟ್ಟಿಗೆ ಸಾಲಾಗಿರುವ ಗ್ರೈವೇಯಕ ವಿಮಾನಗಳ ಮುಂದೆ ನವಾಣುದಿಶವೆಂಬ ವಿಮಾನಕ್ಷೇತ್ರವಿದೆ. ಇದು ಎಂಟು ದಿಕ್ಕಿನಲ್ಲಿ ಎಂಟು ವಿಮಾನಗಳನ್ನೂ ಒಳಗೊಂಡಿದೆ. ಮಧ್ಯದಲ್ಲಿ ಒಂದು ವಿಮಾನವನ್ನೂ ಒಳಗೊಂಡಿದೆ. ಹೀಗೆ ಒಟ್ಟು ಒಂಬತ್ತು ವಿಮಾನಗಳಿವೆ. ಆದ್ದರಿಂದ ನವಾಣುದಿಶನೆಂಬ ಹೆಸರು.

ಮತ್ತದರ ಮೇಲೆ ಪಂಚಾ-।
ಣುತ್ತರೆಯೆಂದುಂಟದಕ್ಕೆ ಪಂಚವಿಮಾನಂ॥
ಸುತ್ತೆ ನಾಲ್ದೆಸೆಗೆ ನಾಲ್ಕು ಮ-।
ಹೋತ್ತಮಸರ್ವಾರ್ಥಸಿದ್ಧಿ ಮಧ್ಯವಿಮಾನಂ॥ ॥೫೨॥

ಮತ್ತೆ ಅದರ ಮೇಲೆ ಪಂಚಾಣುತ್ತರೆ ಎಂಬುದಿದೆ. ಅಲ್ಲಿ ಐದು ವಿಮಾನಗಳಿವೆ; ಸುತ್ತಲೂ ವಿಜಯ, ವೈಜಯಂತ, ಜಯಂತ, ಅಪರಾಜಿತ ಎಂಬವು ನಾಲ್ಕು ದಿಕ್ಕುಗಳಲ್ಲೂ ಅತ್ಯುತ್ತಮವಾದ ಸರ್ವಾರ್ಥಸಿದ್ಧಿಯೆಂಬ ವಿಮಾನ, ಮಧ್ಯದಲ್ಲೂ ಇದೆ.

ಅಲ್ಲಿಂದ ಮೇಲೆ ಸಗ್ಗಗ-।
ಳಿಲ್ಲಂ ಪದಿನಾರು ಕಲ್ಪದೊಳಗಲ್ಲದೆ ಮೇ-॥
ಲಿಲ್ಲಬಲೆಯರ್ಕಳಬಲೆಯ-।
ರಿಲ್ಲದೊಡೇನವರ್ಗಮಧಿಕಸುಖಮುಂಟವರೊಳ್॥ ॥೫೩॥

ಅಲ್ಲಿಂದ ಮೇಲಕ್ಕೆ ಸ್ವರ್ಗಗಳು ಇಲ್ಲ. ಈ ಹದಿನಾರು ಸ್ವರ್ಗಗಳನ್ನು ಬಿಟ್ಟರೆ, ಇನ್ನು ಮೇಲಕ್ಕೆ ಸ್ತ್ರೀಯರಿಲ್ಲ. ಅವರಿಲ್ಲದಿದ್ದರೂ ಆ ಮೇಲಿನ, ವಿಮಾನಲೋಕದಲ್ಲಿ ಇರುವವರಿಗೆ ಅಧಿಕಸುಖವಿದೆ.

ಸಗ್ಗಮೆ ಸುಖವಹುದಂತಾ।
ಸಗ್ಗದೊಳಂ ಪೋಗೆ ಪೋಗೆ ತಳದಿಂ ಮೇಲ್ಮೆ-॥
ಲುಗ್ಗಡಮಕ್ಕುಂ ಸೌಖ್ಯಂ।
ವೆಗ್ಗಳಮಾಯುಷ್ಯಕಾಂತಿಶಕ್ತಿವಿವೇಕಂ॥ ॥೫೪॥

ಸ್ವರ್ಗವೇ ಸುಖಕರ; ಆ ಸ್ವರ್ಗಲೋಕಗಳಲ್ಲಿಯೂ ಕೆಳಗಿನಿಂದ ಮೇಲು ಮೇಲಿನ ಲೋಕಗಳಿಗೆ ಹೋದಂತೆಲ್ಲಾ ಸೌಖ್ಯವೂ ಹೆಚ್ಚುತ್ತಾ ಹೋಗುತ್ತದೆ; ಅದರ ಜತೆಗೆ ಆಯುಷ್ಯವೂ ತೇಜಸ್ಸು ಶಕ್ತಿಯೂ ವಿವೇಕವೂ ವೃದ್ಧಿಸುತ್ತದೆ.

ನರಕಕ್ಕೆ ಮೇಗಣಿಂ ಕೆಳ-।
ಗುರುದುಃಖಂ ದೀರ್ಘದಾಯುವಾಯ್ತದು ಕಷ್ಟಂ॥
ಸುರಲೋಕಕೆ ತಳದಿಂ ಮೇ-।
ಲುರುಸುಖಮುಂ ದೀರ್ಘದಾಯವಾಯ್ತದು ಶಿಷ್ಟಂ॥ ॥೫೫॥

ನರಕಲೋಕಗಳಲ್ಲಿ ಮೇಲಿನಿಂದ ಕೆಳಕೆಳಗೆ ಹೋದಂತೆಲ್ಲಾ ಅಧಿಕ ದುಃಖಪ್ರಾಪ್ತಿ ಆಗುತ್ತದೆ. ಆಯುಷ್ಯವೂ ಹೆಚ್ಚುತ್ತಾ ಹೋಗುತ್ತದೆ. ಆದ್ದರಿಂದ ಕಷ್ಟ. ಸ್ವರ್ಗಲೋಕಗಳಲ್ಲಾದರೋ ಕೆಳಗಿನಿಂದ ಮೇಲೇರಿದಂತೆಲ್ಲಾ ಆಯುಷ್ಯ ಹೆಚ್ಚುತ್ತಾ ಹೋಗುತ್ತದೆ. ಆದ್ದರಿಂದ ಅದು ಶಿಷ್ಟ(ಸುಖಕರ)ವಾಗಿರುತ್ತದೆ.

ಮೊದಲಿಗಂ ಯುಗ್ಮಂಗಳ್ಗೆರ-।
ಡದರಿಂದೇಳಾಯ್ತು ಪತ್ತು ಪದಿನಾಲ್ಕೀರೆಂ॥
ಟದೆ ಪದಿನೆಂಟಿರ್ಪತ್ತೊ-।
ಪ್ಪಿದುದಿರ್ಪತ್ತೆರಡು ವಾರ್ಧಿಯಗ್ರದ್ವಿಕದೊಳ್॥ ॥೫೬॥

ಹದಿನಾರು ಸ್ವರ್ಗಗಳಲ್ಲಿ ಆರೋಹಣ ಗತಿಯಲ್ಲಿ ಆಯುಷ್ಯ ಪರಿಮಾಣ ಹೀಗಿದೆ:

ಸೌಧರ್ಮ – ಈಶಾನ ಕಲ್ಪಗಳ ಸುರರಿಗೆ ಎರಡು ಸಾಗರೋಪಮಾಯುಷ್ಯ;
ಸನತ್ಕುಮಾರ – ಮಹೇಂದ್ರ ಕಲ್ಪಗಳ ಸುರರಿಗೆ ಏಳು ಸಾಗರೋಪಮಾಯುಷ್ಯ
ಬ್ರಹ್ಮ – ಬ್ರಹ್ಮೋತ್ತರ ಕಲ್ಪಗಳ ಸುರರಿಗೆ ಹತ್ತು ಸಾಗರೋಪಮಾಯುಷ್ಯ
ಶುಕ್ರ – ಮಹಾಶುಕ್ರ ಕಲ್ಪಗಳ ಸುರರಿಗೆ ಹದಿನಾರು ಸಾಗರೋಪಮಾಯುಷ್ಯ
ಶತಾರ – ಸಹಸ್ರಾರ ಕಲ್ಪಗಳ ಸುರರಿಗೆ ಹದಿನೆಂಟು ಸಾಗರೋಪಮಾಯುಷ್ಯ
ಆನತ – ಪ್ರಾಣತ ಕಲ್ಪಗಳ ಸುರರಿಗೆ ಇಪ್ಪತ್ತು ಸಾಗರೋಪಮಾಯುಷ್ಯ
ಆರಣ – ಅಚ್ಯುತ ಕಲ್ಪಗಳ ಸುರರಿಗೆ ಇಪ್ಪತ್ತೆರಡು ಸಾಗರೋಪಮಾಯುಷ್ಯ

ಗ್ರೈವೇಯಕದಿಂದೊಂದೊಂ-।
ದಾ ವಾರಿಧಿ ಪೆರ್ಚುತ್ತೈದಣುತ್ತರೆಯೊಳಗಾ॥
ಮೂವತ್ತು ಮೂರು ವಾರಿಧಿ।
ದೇವರ್ಕಳ ಮೊತ್ತಕಾದುದಧಿಕಾದುದಧಿಕಾಯುಷ್ಯಂ॥ ॥೫೭॥

ಗ್ರೈವೇಯಕ ವಿಮಾನದಿಂದ ಮುಂದಕ್ಕೆ ಒಂದೊಂದು ಸಾಗರೋಪಮ ಆಯುಷ್ಯ ಹೆಚ್ಚುತ್ತಾ ಹೋಗುತ್ತದೆ. ಪಂಚಾಣುತ್ತರೆಗಳಲ್ಲಿ ಮೂವತ್ತಮೂರು ಸಾಗರೋಪಮಾಯುಷ್ಯ ಸುರರ ಸಮೂಹಕ್ಕೆ ಇರುತ್ತದೆ.

ಅಸುರರ್ಗೊಂದಂಬುಧಿ ಮ–।
ತ್ತೆಸೆವಾ ಭವನಾಮರರ್ಗಮಾ ಜ್ಯೋತಿಷ್ಕ–॥
ರ್ಗಸಮವ್ಯಂತರರ್ಗಂ ಭೋ–।
ಗಿಸುವ ಮಹೀಜನಕೆ ಕೆಲವು ಪಲ್ಯಾಯುಷ್ಯಂ॥ ॥೫೮॥

ಅಸುರ ದೇವತೆಗಳಿಗೆ ಒಂದು ಸಾಗರೋಪಮ ಪರಮಾಯುಷ್ಯ; ಮತ್ತೆ ಆ ಭವನ ದೇವತೆಗಳಿಗೆ, ಜ್ಯೋತಿಷ್ಕ ದೇವತೆಗಳಿಗೆ ಅಸಮಾನರಾದ ವ್ಯಂತರದೇವತೆಗಳಿಗೆ, ಭೋಗಭೂಮಿಯ ಜನರಿಗೆ, ಕೆಲವು ಪಲ್ಯ ಪರಮಾಯುಷ್ಯ.

ಸಾಗರಮಂ ಸುಜ್ಞಾನದೆ।
ಭಾಗಿಸಿ ದಶಕೋಟಿ ಬಾರಿ ಕೋಟಿಯನಿಟ್ಟಾ॥
ಭಾಗೆಗಳೆಲ್ಲರೊಳೊಂದೇ।
ಭಾಗೆಯ ಕೆಯ್ಕೊಂಡೊಡೊಂದು ಪಲ್ಯಮೆನಿಕ್ಕುಂ॥ ॥೫೯॥

ಪಲ್ಯಸಂಖ್ಯೆ ಎಷ್ಟೆಂದರೆ, ಸಾಗರವನ್ನು ಹತ್ತುಕೋಟಿ ಸಲ ಕೋಟಿಯನ್ನು ಇಟ್ಟು, ಸುಜ್ಞಾನದಿಂದ ಭಾಗಿಸಿ ಒಂದು ಭಾಗ ತೆಗೆದುಕೊಂಡಷ್ಟು ಆಗುತ್ತದೆ.

ಎಂಬತ್ತು ನಾಲ್ಕು ಲಕ್ಷಾ–।
ಬ್ದಂ ಬರಲೊಂದಂಗವಂಗವಪ್ಪಿನೆ ಪೂರ್ವಂ॥
ಬೆಂಬಿಡದೆ ಪೂರ್ವಕೋಟಿ ಪೊ–।
ಲಂಬಾಯ್ತು ವಿದೇಹಜನಕೆ ಪರಮಾಯುಷ್ಯಂ॥ ॥೬೦॥

ಎಂಬತ್ತನಾಲ್ಕು ಲಕ್ಷ ವರ್ಷಗಳಿಗೆ ಒಂದು ಅಂಗ; ಎಂಬತ್ತುನಾಲ್ಕು ಲಕ್ಷ ಅಂಗಗಳಿಗೆ ಒಂದು ಪೂರ್ವ; ಒಂದು ಕೋಟಿ ಪೂರ್ವಗಳಿಗೆ ಒಂದು ಪೂರ್ವ ಕೋಟಿ. ವಿದೇಹದ ಜನರಿಗೆ ಒಂದು ಕೋಟಿ ಪರಮಾಯುಷ್ಯ.

ಐರಾವತಭರತದ ಜನ–।
ಕಾರೋಹಿಸೆ ಮೂರು ಪಲ್ಯಮಿಳಿದೊಡೆ ಪದಿನೈ–॥
ದೇ ರಂಜಿಪ ವರ್ಷಮು ಮ–।
ತ್ತಾರಯ್ವೊಡೆ ನಡುವೆ ಪಲವುಮಿತರಾಯುಷ್ಯಂ॥ ॥೬೧॥

ಐರಾವತ ಮತ್ತು ಭರತಭೂಮಿಯ ಜನರಿಗೆ ಹೆಚ್ಚೆಂದರೆ ಮೂರು ಪಲ್ಯೋಪಮಾಯುಷ್ಯ; ಕಡಿಮೆಯೆಂದರೆ ಹದಿನೈದೇ ವರ್ಷಾಯುಷ್ಯ; ವಿಚಾರ ಮಾಡಿದರೆ ಮಧ್ಯದಲ್ಲಿ ಹಲವು ಇತರ ಆಯುಷ್ಯಗಳಿವೆ.

ಮತ್ತೈ ರಾವತಭರತದ।
ಪತ್ತುಂ ವಿಜಯಾರ್ಧದವರ್ಗಮಿಳಿದೊಡೆ ನೂರಿ–॥
ಪ್ಪತ್ತೇರೆ ಪೂರ್ವಕೋಟಿ ಕು–।
ರಿತ್ತೊರೆವೊಡೆ ನಡುವೆ ಪಲವುತೆರದಾಯುಷ್ಯಂ॥ ॥೬೨॥

ಇನ್ನು ಐರಾವತ, ಭರತಕ್ಷೇತ್ರಗಳ ಹತ್ತು ವಿಜಯಾರ್ಧ ಪರ್ವತಗಳಲ್ಲಿ ಇರುವವರಿಗೂ ಕಡಿಮೆಯೆಂದರೆ ನೂರಿಪ್ಪತ್ತೇ ವರ್ಷಾಯುಷ್ಯ. ಗಮನಿಸುವುದಾದರೆ, ಮಧ್ಯದಲ್ಲಿ ಹಲವು ವಿಧದ ಆಯುಷ್ಯವಿರುವುದು.

ಇನ್ನುಳಿದ ವಿದೇಹಂಗಳ।
ಸನ್ನಿಧಿಯಾ ರಜತಶೈಲ ನೂರರುವತ್ತೆಂ–॥
ಬನ್ನೆಗವೊಪ್ಪುವ ಖಚರ–।
ರ್ಗುನ್ನತದಾ ಪೂರ್ವಕೋಟಿ ಪಿರಿದಿಳಿವಿಲ್ಲಂ॥ ॥೬೩॥

ಇನ್ನುಳಿದ ವಿದೇಹಕ್ಷೇತ್ರಗಳ ಬಳಿಯಿರುವ ನೂರ ಅರವತ್ತು ವಿಜಯಾರ್ಧ ಪರ್ವತಗಳಲ್ಲಿ ವಿರಾಜಿಸುವ ಖೇಚರರಿಗೆ ಪೂರ್ವಕೋಟಿ ಉತ್ಕೃಷ್ಟಾಯುಷ್ಯವೇ ಇರುವುದು; ಕಡಿಮೆ ಆಯುಷ್ಯ ಇರುವುದಿಲ್ಲ.

ಭವನಜ್ಯೋತಿರ್ವ್ಯಂತರ–।
ದಿವಿಜರ್ಮೊದಲೆರಡು ಸಗ್ಗದವರುಂ ಕಾಂತಾ–॥
ನಿವಹದೊಳನವರತಂ ಮಾ–।
ನವರಂದದೆ ಕೂಡಿ ಸುಖಿಪರಿಂದ್ರಿಯಸುಖಮಂ॥ ॥೬೪॥

ಭವನ, ಜ್ಯೋತಿ, ವ್ಯಂತರ ಲೋಕಗಳ ದೇವತೆಗಳು; ಮೊದಲನೆಯ ಎರಡು ಸ್ವರ್ಗಗಳ ದೇವತೆಗಳು; ಮನುಷ್ಯರಂತೆ ಸ್ತ್ರೀಸಮೂಹದಲ್ಲಿ ಸೇರಿ ಸದಾ ಇಂದ್ರಿಯ ಸುಖವನ್ನು ಅನುಭವಿಸುತ್ತಾರೆ.

ಮುಟ್ಟಿ ಕೆಲರ್ನೋಡಿ ಕೆಲರ್।
ನೆಟ್ಟನೆ ನುಡಿಗೇಳ್ದು ನೆನೆದು ಮೇಲ್ಮೇಲಮರರ್॥
ತೊಟ್ಟನೆ ಸುಖವೆಯ್ದುವರಿಂ–।
ತಿಟ್ಟಣಿಸಿದ ಪೆಣ್ಗಳಾಟವೀರೆಂಟೆಡೆಯೊಳ್॥ ॥೬೫॥

ಮೊದಲೆರಡು ಸ್ವರ್ಗಗಳನ್ನು ಬಿಟ್ಟು ಮೇಲುಮೇಲಿನ ಸ್ವರ್ಗದ ದೇವತೆಗಳಲ್ಲಿ ಕೆಲವರು ದೇವಸ್ತ್ರೀಯರ ಸ್ಪರ್ಶದಿಂದಲೇ ಸುಖಿಸುತ್ತಾರೆ; ಕೆಲವರು ದರ್ಶನಮಾತ್ರದಿಂದಲೇ ಸುಖಿಗಳಾಗುವರು; ಕೆಲವರು ಸ್ತ್ರೀಯರ ಶ್ರವಣ ಮತ್ತು ನೇರ ಸ್ಮರಣೆಯಿಂದಲೇ ಸುಖ ಹೊಂದುತ್ತಾರೆ; ಒಟ್ಟಿನಲ್ಲಿ ದೇವತಾ ಸ್ತ್ರೀಸಮೂಹದ ವಿನೋದವು ಆ ಹದಿನಾರು ಸ್ವರ್ಗಗಳಲ್ಲೂ ಹಬ್ಬಿರುತ್ತದೆ.

ಮೇಲೆ ಪೆಣ್ಣಿಲ್ಲವಿಲ್ಲದೊ–।
ಡಾಲಿಸೆ ಸುಖಮಧಿಕಮುಂಟುಮರಿವೊಡಶಕ್ಯಂ॥
ಬಾಲಕಿಗೆ ತರುಣಿ ರತಿಸುಖ।
ಲೀಲೆಯನೊರೆವಂತೆ ಸೊಗಸದನುಭವವಿಲ್ಲಂ॥ ॥೬೬॥

॥ಇತಿ ಸ್ವರ್ಗಲೋಕವರ್ಣನಂ॥

ಈ ಹದಿನಾರು ಸ್ವರ್ಗಗಳಾಚೆಗೆ ಸ್ತ್ರೀಯರು ಇಲ್ಲ; ಇಲ್ಲದಿದ್ದರೂ ಗಮನಿಸಿದ್ದಲ್ಲಿ, ಅಲ್ಲಿಯೂ ಅಧಿಕ ಸುಖವಿದೆ. ಆದರೆ ನಾವು ಅದನ್ನು ತಿಳಿಯಲು ಅಸಾಧ್ಯ. ಬಾಲಕಿಗೆ ತರುಣಿಯು ರತಿಸುಖದ ವಿನೋದವನ್ನು ಹೇಳಿದಂತಾಗುತ್ತವೆ. ಆ ಸುಖವನ್ನು ಸವಿಯಲು ಬಾಲಕಿಗೆ ಸುಖಾನುಭವವಿರುವುದಿಲ್ಲವಲ್ಲ!

ಇಲ್ಲಿಗೆ ಸ್ವರ್ಗಲೋಕವರ್ಣನೆ ಮುಗಿಯಿತು

ಹೋಹೋ ಸ್ವರ್ಗದ ವಾರ್ತೆಯ।
ದೇಹವಣಂತಿರಲಿ ಮತ್ತೆ ಜಂಬೂದ್ವೀಪ॥
ಕ್ಕೂಹಿಸೆ ಯೆಂಟನೆಯದು ಸೋ–।
ತ್ಸಾಹಂ ನಂದೀಶ್ವರಾಖ್ಯಮಿರ್ಕುಂ ದ್ವೀಪಂ॥ ॥೬೭॥

ಸ್ವರ್ಗದ ಮಾತನ್ನು ಬದಿಗಿಟ್ಟು ಉತ್ಸಾಹದಿಂದ ವಿಚಾರಮಾಡಿದರೆ, ಮುಂದಿನ ಸಂಗತಿ ಇದು; ಜಂಬೂದ್ವೀಪಕ್ಕೆ ಎಂಟನೆಯದಾಗಿ ನಂದೀಶ್ವರ ದ್ವೀಪವಿದೆ.

ಅದರೊಳ್ನಾಲ್ದೆಸೆಗಳೊಳಂ।
ಪದಿಮೂರುಂ ಗಿರಿಗಳುಂಟು ನಾಲ್ದೆಸೆಯಂ ಕೂ–॥
ಡಿದೊಡೈವತ್ತೆರಡಾದುವು।
ಪುದಿದೈವತ್ತೆರಡು ಬಸದಿಗಳ್ಮತ್ತವರೊಳ್॥ ॥೬೮॥

ಆ ನಂದೀಶ್ವರ ದ್ವೀಪದಲ್ಲಿ ಪ್ರತಿ ದಿಕ್ಕಿಗೆ ಹದಿಮೂರು ಪರ್ವತಗಳಂತೆ ನಾಲ್ಕು ದಿಕ್ಕುಗಳಲ್ಲಿ ಒಟ್ಟು ಐವತ್ತೆರಡು ಪರ್ವತಗಳಿವೆ. ಪ್ರತಿ ಪರ್ವತದಲ್ಲಿಯೂ ಬಸದಿ ಇದೆ. ಎಂದರೆ ಐವತ್ತೆರಡು ಬಸದಿಗಳಿವೆ.

ಆ ನಂದೀಶ್ವರದ್ವೀಪಕೆ।
ತಾನದು ನಾಲ್ಕನೆಯ ದೀವಿ ಕುಂಡಲಶೈಲಂ॥
ಆ ನಗಕೆ ಮೂರನೆಯ ಭೂ–।
ಸ್ಥಾನದ ದೀವಿಯೊಳೆ ರುಚಕಪರ್ವತಮಿರ್ಕುಂ॥ ॥೬೯॥

ಆ ನಂದೀಶ್ವರ ದ್ವೀಪಕ್ಕೆ ನಾಲ್ಕನೆಯದು ಕುಂಡಲಪರ್ವತವಿರುವ ದ್ವೀಪ. ಆ ಪರ್ವತಕ್ಕೆ ಮೂರನೆಯ ಭೂಸ್ಥಾನದ ದ್ವೀಪದಲ್ಲಿ ರುಚಕ ಪರ್ವತವಿದೆ.

ಅವು ಮಾನುಷೋತ್ತರಾದ್ರಿಯೊ-।
ಲವನಿಯ ಬಳಸಿರ್ದವವರ ನಾಲ್ಕುಂ ದೆಸೆಯೊಳ್॥
ದಿವಿಜತತಿ ಸುತ್ತಲುಂ ಜಿನ।
ಭವನಂಗಳ್ನಾಲ್ಕು ನಾಲ್ಕು ವಿಭ್ರಾಜಿಸುಗುಂ॥ **॥೭೦॥**

॥ಇತಿ ನಂದೀಶ್ವರದ್ವೀಪ ಕುಂಡಲಗಿರಿ ರುಚಕಾದ್ರಿ ವರ್ಣನಂ॥

ಆ ಪರ್ವತಗಳು ಮಾನುಷೋತ್ತರ ಪರ್ವತದಂತೆ ಭೂಮಿಯನ್ನು ಸುತ್ತುಗಟ್ಟಿರುತ್ತವೆ. ಅವುಗಳ ನಾಲ್ಕು ದಿಕ್ಕುಗಳಲ್ಲಿ ದೇವತಾ ಸಮೂಹವಿರುತ್ತದೆ. ಸುತ್ತಲೂ ನಾಲ್ಕು ಅಕೃತ್ರಿಮ ಜಿನಮಂದಿರಗಳು ವಿರಾಜಿಸುತ್ತವೆ.

ಇಲ್ಲಿಗೆ ನಂದೀಶ್ವರದ್ವೀಪ ಕುಂಡಲಗಿರಿ ರುಚಕಾದ್ರಿ ವರ್ಣನೆ ಮುಗಿಯಿತು

ಅರಿದಿಹುದವನಿಂ ನಾಂ ಮೊದ-।
ಲರುಪಿದ ಕಾಲೋದಕಾಬ್ಧಿ ಲವಣಾಬ್ಧಿಗಳಾ॥
ಕುರುವಂಗಳಲ್ಲಿ ತೋರ್ಕುಂ।
ಕುರಿಮುಸುಡ ಕುಭೋಗಭೂಮಿ ತೊಂಬತ್ತಾರುಂ॥ **॥೭೧॥**

ಈ ಮೊದಲು ಹೇಳಿದ ಕಾಲೋದಕ ಸಮುದ್ರ ಮತ್ತು ಲವಣ ಸಮುದ್ರಗಳ ದಿಣ್ಣೆಗಳಲ್ಲಿ ಕುರಿಮೂತಿಯಾಕಾರದ ತೊಂಬತ್ತಾರು ಕುಭೋಗ ಭೂಮಿಗಳಿರುತ್ತವೆ.

ನೀರೆಲ್ಲಂ ಕಬ್ಬಿನರಸ-।
ದೋರಗೆ ಮಣ್ಣೆಲ್ಲವಲ್ಲಿ ಲಡ್ಡುಗೆಯ ಸಮಂ॥
ಸಾರಫಲಮೀವ ತರುಲತೆ।
ಧಾರಿಣಿ ಲೇಸದರೊಳೊಗೆದ ನರರತಿಕಷ್ಟರ್॥ **॥೭೨॥**

ಅಲ್ಲಿಯ ನೀರೆಲ್ಲ ಇಕ್ಷುರಸದಂತೆ; ಅಲ್ಲಿರುವ ಮಣ್ಣೆಲ್ಲ ಲಾಡುವಿನಂತೆ ಸಿಹಿ; ಅಲ್ಲಿಯ ಗಿಡಬಳ್ಳಿಗಳು ರಸಭರಿತ ಫಲಗಳನ್ನೀಯುತ್ತವೆ; ಅದು ಸೊಗಸಾದ ಪ್ರದೇಶ; ಆದರೆ ಅಲ್ಲಿ ಹುಟ್ಟುವ ಮನುಷ್ಯರು ಅತಿ ದುಃಖಿಗಳು.

ಒಂದೇ ಕಾಲೊಂದೇ ಕೆ-।
ಯ್ಯೊಂದೇ ಕಣ್ಣೊಂದೆ ಕರ್ಣದವರಲ್ಲಿ ಕೆಲರ್॥
ಪಂದಿಮೊಗಂ ಕೋಡಗಮೊಗ-।
ಮೆಂದಿವು ಮೊದಲಾದ ಬಹುಮುಖರ್ಪಲರಿಪ್ಪರ್॥ ॥೭೩॥

ಅಲ್ಲಿಯ ಮನುಷ್ಯರಿಗೆ ಒಂದೇ ಕಾಲು, ಒಂದೇ ಕೈ, ಒಂದೇ ಕಣ್ಣು, ಒಂದೇ ಕಿವಿ, ಕೆಲವರಿಗೆ ಹಂದಿಮುಖ; ಕೆಲವರಿಗೆ ಕೋತಿಮೂತಿ; ಈ ರೀತಿಯಲ್ಲಿ ಅನೇಕ ಬಗೆಯ ಮುಖಗಳನ್ನು ಹತ್ತಾರು ಮಂದಿ ಹೊಂದಿರುತ್ತಾರೆ.

ಪಾಸುಂಗಿವಿ ಪೊದೆಕಿವಿಗಳ್।
ಬೀಸುವ ಬಾಲಂ ಕೊರಂಟು ಬಾಲಂ ಕೆಲರೊಳ್॥
ಈ ಸೊಬಗಿನ ಪೆಣ್ಗಂಡುಗ-।
ಳಾ ಸೀಮೆಯೊಳಿರೆ ಕುಭೋಗಭೂಮಿಗಳೆಂಬರ್॥ ॥೭೪॥

ಹಾಸಿಗೆಯಂಥ ಕಿವಿಯವರು, ಹೊದಿಕೆಯಂಥ ಕಿವಿಯವರು ಅಲ್ಲಿದ್ದಾರೆ. ಬೀಸುವ ಬಾಲ ಕೆಲವರಿಗಿದ್ದರೆ ಮುರುಟಿದ ಬಾಲ ಕೆಲವರಿಗಿದೆ; ಇಂಥ ರೂಪಿನ ಸ್ತ್ರೀಪುರುಷರು ಇರುವ ಪ್ರದೇಶವೇ ಕುಭೋಗಭೂಮಿ.

ಮುನ್ನ ಕುಪಾತ್ರಕೆ ಭಕ್ತಿಯೊ-।
ಳನ್ನವನಿತ್ತಂತುಟಾದರದರಿಂ ವ್ರತಿಕ-॥
ರ್ಗನ್ನವನೀವುದು ದಯೆಯಿಂ-।
ದನ್ನಿಗರಂ ಪೂಜಿಸೀಯಲಾಗದು ಕೂಳಂ॥ ॥೭೫॥

॥ಇತಿ ಕುಭೋಗಭೂಮಿವರ್ಣನಂ॥

ಕುಪಾತ್ರರಿಗೆ ಭಕ್ತಿಯಿಂದ ಆಹಾರ ದಾನವನ್ನು ಹಿಂದಿನ ಜನ್ಮದಲ್ಲಿ ಮಾಡಿದ್ದರಿಂದ ಅವರು ಹೀಗಾದರು. ಆದ್ದರಿಂದ ಸತ್ಪಾತ್ರರಾದ ವ್ರತಿಕರಿಗೆ ಆಹಾರದಾನ ಮಾಡಬೇಕು. ಅಪಾತ್ರರಿಗೆ ಭಕ್ತಿಯಲ್ಲಿ ಆಹಾರದಾನ ನೀಡಬಾರದು.

ಇಲ್ಲಿಗೆ ಕುಭೋಗಭೂಮಿ ವರ್ಣನೆ ಮುಗಿಯಿತು

ಆ ನುಡಿಯಂತಿರಲೀ ಬಳಿ-।
ಕ್ಕೇನೆಂಬೆಂ ಮೂರು ಲೋಕದೊಳಗೆಲ್ಲೆಡೆಯೊಳ್॥
ಬೇನೆಯನುಣತೆ ನಿಗೋದ-।
ಸ್ಥಾನದೊಳೇಕೇಂದ್ರಿಯಾತ್ಮಕಂಗಳು ಬಾಳ್ಗುಂ॥ ॥೭೬॥

ಆ ಮಾತು ಹಾಗಿರಲಿ; ಮೂರು ಲೋಕದ ಎಲ್ಲಾ ಭಾಗಗಳಲ್ಲೂ ನಿಗೋದ ಸ್ಥಾನದಲ್ಲಿ ಏಕೇಂದ್ರಿಯ ಜೀವಿಗಳು ದುಃಖವನ್ನು ಅನುಭವಿಸುತ್ತಾ ಜೀವಿಸುತ್ತವೆ.

ಸ್ಕಂಧಮುಮಂಡರಮಾವಾ-।
ಸಂ ದೂಪಿನ ಪುಳವಿ ಮೂರ್ತಿಯೆಂಬಿವರೊಳ್ಸಂ-॥
ದೊಂದಂಗಮಾಗಿ ಬಾಧಾ-।
ಸಿಂಧುವಿನೊಳ್ಮೂಡಿ ಮುಳುಗಿ ನೋವುತ್ತಿರ್ಕುಂ॥ ॥೭೭॥

ಸ್ಕಂದ, ಅಂಡರ, ಆವಾಸ, ಪುಳವಿ, ಮೂರ್ತಿ ದೇಹಗಳೆರಡು ಎಂಬುದಾಗಿ ಸೂಕ್ಷ್ಮ ನಿಗೋದಜೀವಿಗಳು ಐದು ತೆರನಾಗಿವೆ. ಸ್ಕಂಧ ಜೀವಗಳು ಅಸಂಖ್ಯಾತ ಲೋಕಪ್ರಮಾಣದಲ್ಲಿವೆ; ಇದೇ ಪ್ರಮಾಣದಲ್ಲಿ ಸ್ಕಂಧದಲ್ಲಿ ಅಂಡರವೂ ಅಂಡರದಲ್ಲಿ ಆವಾಸವೂ, ಆವಾಸದಲ್ಲಿ ಪುಳವಿಯೂ, ಪುಳವಿಯಲ್ಲಿ ಮೂರ್ತಿಯೂ ಏಕೀಭವಿಸಿ ದುಃಖಸಾಗರದಲ್ಲಿ ತೇಲಿ ಮುಳುಗಿ ಬಾಧೆಪಡುತ್ತಿರುತ್ತವೆ.

ಆರುಂ ಸಾಸಿರದೊಡನೀ-।
ರಾರುಂ ಸೂಳೆರಡಗಳಿಗೆಗಂ ಕಡಮೆಯೊಳಂ-॥
ಗಾರಾಗಿ ಸತ್ತು ಪುಟ್ಟುತೆ।
ಬೇರಾಗದೆ ಹುದುಗಿ ನೋವವತಿಸೂಕ್ಷ್ಮಂಗಳ್॥ ॥೭೮॥

ಈ ಅತಿ ಸೂಕ್ಷ್ಮ ಜೀವಗಳು ಎರಡು ಗಳಿಗೆಯಲ್ಲಿ ಹದಿನೆಂಟು ಸಾವಿರ ಸಲಕ್ಕೆ ಕಡಿಮೆಯಿಲ್ಲದೆ ಒಂದಕ್ಕೊಂದು ಸೇರಿಕೊಂಡು ಸಾಯುತ್ತ ಹುಟ್ಟುತ್ತ ದುಃಖಿಸುತ್ತವೆ.

ನರಕದ ದುಃಖಕ್ಕಂ ಕಡು।
ಪಿರಿದೆನಿಸುವ ದುಃಖಮಾ ನಿಗೋದದೊಳದು ತಾಂ॥
ಸ್ಥಿರಮೆಂದಸ್ಥಿರಮೆಂದದ–।
ನೆರಡುಂ ತೆರನಾಗಿ ತೋರುಗುಂ ಜಿನಮತದೊಳ್॥ ॥೭೯॥

ಆ ನಿಗೋದ ಲೋಕದಲ್ಲಿ ನರಕದಲ್ಲಿರುವುದಕ್ಕಿಂತ ಮಿಗಿಲಾದ ದುಃಖವಿರುತ್ತದೆ. ಅದನ್ನು ಜಿನಮತಾನುಸಾರ ಅಸ್ಥಿರದುಃಖ–ಸ್ಥಿರದುಃಖವೆಂದು ಎರಡು ಬಗೆಯಾಗಿ ಭಾವಿಸಲಾಗುತ್ತದೆ.

ಸಾಗರಮನಿತೆನಿತೆಂಬೊಡ–।
ದಾಗದುಮಲ್ಲಿರ್ಪ ಕಾಲಮಂ ಸಾಗರಸಂ–॥
ಖ್ಯಾಗಣಮಂ ಮೀರಿದುದೆಂ–।
ಬಾಗಳ್ ಜಿನಜಿನ ನಿಗೋದಮೇ ಕಡುಕಷ್ಟಂ॥ ॥೮೦॥

ಆ ನಿಗೋದದಲ್ಲಿರುವ ಕಾಲವನ್ನು ಅಷ್ಟು, ಸಾಗರಕಾಲ, ಇಷ್ಟು ಸಾಗರ ಕಾಲವೆಂದು ಹೇಳಲಾಗುವುದಿಲ್ಲ; ಅದು ಸಾಗರ ಸಂಖ್ಯೆಯ ಲೆಕ್ಕಕ್ಕೆ ಮೀರಿದುದು. ಹಾಗೆಂದ ಮೇಲೆ, ಜಿನ! ಜಿನ! ಬಹು ಕಷ್ಟತಮ ಬೆಂದ ನಿಗೋದ ಲೋಕವಾಸ!

ಎಂದಾದೊಡಂ ತ್ರಸತ್ವಕೆ।
ಬಂದೊಡೆ ಬಹುದೊರ್ಮೆ ಬಾರಮೊಡಮಿಹವದನಿ–॥
ಷ್ಟಂದೆನಬಾರದು ಜಿನಜಿನ।
ಬೆಂದ ನಿಗೋದಕೆ ಸಮಾನ ದುರ್ಗತಿಯುಂಟೇ?॥ ॥೮೧॥

ಆ ನಿಗೋದ ಜೀವಿಗಳು ಒಂದಲ್ಲಾ ಒಂದು ದಿನ ತ್ರಸತ್ವಕ್ಕೆ ಬಂದರೂ ಬರಬಹುದು; ಬಾರದೆಯೂ ಇರಬಹುದು. ಅಲ್ಲಿಯ ದುಃಖವನ್ನು ಬಣ್ಣಿಸಲು ಅಶಕ್ಯ. ಜಿನ! ಜಿನ! ದುಃಖದಲ್ಲಿ ಬೇಯುವ ನಿಗೋದ ಲೋಕಕ್ಕೆ ಸಮಾನವಾದ ದುರ್ಗತಿ ಇನ್ನೊಂದಿಲ್ಲ!

ನುಡಿವಾಗಳೆನ್ನ ಮೆಯ್ನಡ-।
ನಡುಗುತ್ತಿದೆ ಜಿನಜಿನಾರದಂತಿರಲಿ ಬಳಿ-॥
ಕ್ಕೊಡನೀ ಮೂರುಂ ಲೋಕದ।
ಕಡೆಯೆನಿಸಿದ ಸಿದ್ಧಲೋಕದಂದಮನೊರೆವೆಂ॥ ॥೮೨॥

॥ಇತಿ ನಿಗೋದವರ್ಣನಂ॥

ಇಂತಹ ಘೋರವಾದ ನಿಗೋದದ ದುಃಖವನ್ನು ನೆನೆದರೆ ಆ ಜಿನ! ಜಿನ! ದುಃಖವನ್ನು ತಡೆಯಲಾಗದೆ ಥರಥರನೆ ನನ್ನ ಮೈತತ್ತರಿಸುತ್ತಿದೆ. ಇನ್ನು ಆ ವಿಚಾರವನ್ನು ಬದಿಗಿಟ್ಟು ಮೂರು ಲೋಕಗಳಲ್ಲಿ ಈಗ ಮೇಲಿನ ಕೊನೆಯ ಸಿದ್ಧಲೋಕದ ಸ್ವರೂಪವನ್ನು ವಿವರಿಸುವೆನು.

ಇಲ್ಲಿಗೆ ನಿಗೋದವರ್ಣನೆ ಮುಗಿಯಿತು

ಸರ್ವಾರ್ಥಸಿದ್ಧಿಯಿಂ ಮೇ-।
ಲುರ್ವಿದ ಪನ್ನೆರಡು ಯೋಜನಂ ಪೋದೆಡೆಯೊಳ್॥
ತೋರ್ಪುದೆಂಟನೆಯ ಭೂಮಿ ತ-।
ದುರ್ವಿಯ ಮೇಲ್ಮುಟ್ಟಿ ಸಿದ್ಧಶಿಲೆಯೆಸೆದಿರ್ಕುಂ॥ ॥೮೩॥

ಸರ್ವಾರ್ಥ ಸಿದ್ಧಿ ವಿಮಾನದಿಂದ ಮೇಲಕ್ಕೆ ಹಬ್ಬಿದ ಹನ್ನೆರಡು ಯೋಜನಾದೂರ ಸಾಗಿದರೆ, ಎಂಟನೆಯ ಭೂಮಿ ಸಿಗುವುದು. ಅದರ ಮೇಲೆ ತಾಗಿಕೊಂಡು ಸಿದ್ಧಶಿಲೆ ಶೋಭಿಸುತ್ತಿದೆ.

ಕಡುಬಿಳಿದು ಬಟ್ಟಿತದು ಬೆ-।
ಳ್ಗೊಡೆಯಂತೆಸೆದಿರ್ಪುದೆಂಟು ಗಾವುದ ದಟ್ಟಂ॥
ಪೊಡವಿಯೊಳಪ್ರತಿಯದು ಪೇ-।
ಳ್ವೊಡೆ ನಾಲ್ವತ್ತೈದು ಲಕ್ಷಯೋಜನದಗಲಂ॥ ॥೮೪॥

ಆ ಸಿದ್ಧಶಿಲೆ ಪೂರಾ ಬಿಳುಪಾಗಿದೆ; ದುಂಡಾಗಿದೆ; ಎಂಟು ಗಾವುದದ ಗಾತ್ರವನ್ನು ನಲವತ್ತೈದು ಲಕ್ಷ ಯೋಜನ ವಿಸ್ತಾರವನ್ನು ಹೊಂದಿದೆ: ಬೆಳ್ಗೊಡೆಯಂತೆ ಶೋಭಿಸುತ್ತಿದೆ: ಹೇಳುವುದಾದರೆ ಪೃಥ್ವಿಯಲ್ಲಿಯೇ ಅಸದೃಶ್ಯವಾಗಿದೆ.

ಮಿಗೆ ಸಿದ್ಧಶಿಲೆಯ ಮೇಲೀ।
ಜಗಮಂ ಮುಸುಕಿರ್ದ ಮೂರು ಗಾಳಿಗಳಿರ್ಕುಂ॥
ಗಗನಮೊಂದಲ್ಲದಾ ಗಾ-।
ಳಿಗಳಿಂದಂ ಪೊರಗೆ ಮಿಕ್ಕ ವಸ್ತುಗಳಿಲ್ಲಂ॥ ॥೮೫॥

ಸಿದ್ಧ ಶಿಲೆಯ ಮೇಲೆ ಈ ಲೋಕವನ್ನು ಅಧಿಕವಾಗಿ ಆವರಿಸಿರುವ ಘನೋದಧಿ, ಘನವಾತ, ತನುವಾತಗಳೆಂಬ ಮೂರು ಗಾಳಿಗಳಿರುತ್ತವೆ. ಆ ಗಾಳಿಗಳಿಂದ ಆಚೆಗೆ ಆಕಾಶದ ವಿನಾ ಬೇರೆ ವಸ್ತುಗಳಿಲ್ಲ.

ಅರೆಗಾವುದಂ ಘನೋದಧಿ।
ಹರಿದಾರಿಯ ದಟ್ಟಮಾ ಘನಾನಿಲಮಮರ್ದಿ-॥
ರ್ಕಿರೆ ನಾನೂರೆಪ್ಪತ್ತೈ-।
ದುರುಧನು ಕುಂದೆನಿಪ ದಟ್ಟಮಾ ತನುವಾತಂ॥ ॥೮೬॥

ಘನೋದಧಿ ಎರಡು ಹರಿದಾರಿಯಷ್ಟು ವ್ಯಾಪ್ತವಾಗಿದೆ; ಘನವಾತವು ಒಂದು ಹರಿದಾರಿಯಷ್ಟು ವ್ಯಾಪ್ತವಾಗಿದೆ; ತನುವಾತವು ನಾಲ್ಕುನೂರ ಇಪ್ಪತ್ತೈದು ಬಿಲ್ಲಂತರ ಕಡಿಮೆಯಾದ ಒಂದು ಹರಿದಾರಿಯಷ್ಟು ವ್ಯಾಪ್ತವಾಗಿದೆ.

ಆ ಮೂರುಗಾಳಿಗಳೊಳು-।
ದ್ದಾಮದೊಳಾ ಕಡೆಯ ವಾಯುವಲಯದೊಳಿರ್ಪರ್॥
ಶ್ರೀಮತ್ಸಿದ್ಧರ್ಬುದ್ಧರ್।
ಸ್ವಾಮಿಗಳತಿಶುದ್ಧರವರೆಯುಪಮಾತೀತರ್॥ ॥೮೭॥

ಈ ಮೂರು ಗಾಳಿಗಳಲ್ಲಿ ಕೊನೆಯದಾದ ತನುವಾತ ವಲಯದಲ್ಲಿ ಜ್ಞಾನಿಗಳು, ಸ್ವಾಮಿಗಳು, ಅತಿ ಶುದ್ಧರು, ಅತಿಶ್ರೇಷ್ಠತೆಯಲ್ಲಿ ಉಪಮಾತೀತರು ಆದ ಶ್ರೀಮತ್ ಸಿದ್ಧಪರಮೇಷ್ಠಿಗಳಿರುತ್ತಾರೆ.

ಕಾಯೋತ್ಸರ್ಗಂ ಪಲ್ಯಂ-।
ಕಾಯತಮೆಂಬೆರಡರಲ್ಲಿ ಮಿಸುಕದೆ ಮೆರೆವರ್॥
ಶ್ರೇಯೋಲಕ್ಷ್ಮಿಯನಪ್ಪಿ ಸು-।
ಖಾಯತಿ ತಲೆಗೇರಿ ಪರವಶಂ ತಟ್ಟಿದವೊಲ್॥ ॥೮೮॥

ಆ ಸಿದ್ಧಪರಮೇಷ್ಠಿಗಳು ಶ್ರೇಯೋಲಕ್ಷ್ಮಿಯನ್ನು ಆಲಿಂಗಿಸಿ ಸುಖಾಧಿಕ್ಯ ತಲೆಗೇರಿ ಪರವಶತೆ ಹೊಂದಿದಂತೆ ಕಾಯೋತ್ಸರ್ಗದಲ್ಲಿ ಅಥವಾ ಪಲ್ಯಂಕಾಯತಾಸನ ಎಂಬ ಎರಡರಲ್ಲಿ ಮಿಸುಕದೆ (ಅಲ್ಲಾಡದೆ) ಸ್ಥಿರವಾಗಿ ಮೆರೆಯುವರು.

ಕುಂದಿದೊಡೆ ಮೂರುವರೆಮೊಳ-।
ದಿಂದಂ ಕಿರಿದಿಲ್ಲ ಪೆರ್ಚಿದಂದವರುದ್ದಂ॥
ಮುಂದೈನೂರಿಪ್ಪತ್ತೈ-।
ದೆಂದೆನಿಪ ಧನುರ್ಮಿತಂ ಬಹುಕ್ರಮವೆಡೆಯೊಳ್॥ ॥೮೯॥

ಆ ಸಿದ್ಧಪರಮೇಷ್ಠಿಗಳ ಆಕಾರವು ಉದ್ದಳತೆಯಲ್ಲಿ ಕನಿಷ್ಠ ಪಕ್ಷ ಮೂರೂವರೆ ಮೊಳಕ್ಕಿಂತ ಕಡಿಮೆಯಿಲ್ಲ; ಗರಿಷ್ಠ ಪಕ್ಷ ಐದುನೂರ ಇಪ್ಪತ್ತೈದು ಬಿಲ್ಲದ್ದದ ಅಳತೆ ಇರುತ್ತದೆ; ಮಧ್ಯದಲ್ಲಿ ಹಲವು ವಿಧವಾದ ಅಳತೆಗಳಿರುತ್ತವೆ.

ಕುಂದು ಪೆರ್ಚುದ್ದದೊಳಗುಂ-।
ಟೊಂದಚ್ಚರಿ ಮೇಲೆ ನೋಳ್ಪೊಡವರ ಶಿರಂಗಳ್॥
ಒಂದೇಸರಿತದೊಳಿರ್ಪವು।
ಸಂದ ಸುಖಂ ಶಕ್ತಿಬೋಧಮೆಲ್ಲ ಸಮಾನಂ॥ ॥೯೦॥

ಉದ್ದಳತೆಯಲ್ಲಿ ಹೆಚ್ಚು ಕಡಿಮೆ ಇದ್ದರೂ ಸಹ, ಮೇಲ್ಭಾಗದಲ್ಲಿ ನೋಡಿದರೆ ಅವರ ಶಿರಗಳು ಒಂದೇ ಎತ್ತರದಲ್ಲಿ ಸಮಾನವಾಗಿರುತ್ತವೆ. ಅವರಿಗೆ ಪ್ರಾಪ್ತವಾಗಿರುವ ಜ್ಞಾನ, ಶಕ್ತಿ ಸುಖಗಳು ಸಮಾನವಾಗಿರುತ್ತವೆ. ಇದು ಅಚ್ಚರಿಯ ಸಂಗತಿ!

ಕರು ಹೋರಿಯೆತ್ತುಗಳ್ಚ–।
ಲ್ದೊರೆಯಂ ಪಾಯ್ವಂದು ಮೇಲೆ ತಲೆ ಸರಿಸಂಗಳ್॥
ಕಿರಿದು ಪಿರಿದುಂಟು ಕೆಳಗಾ।
ತೆರನೆಂಬುದು ಶಿಷ್ಯಬೋಧನಾರ್ಥದುಪಾಯಂ॥ ॥೯೧॥

ಇದು ಹೇಗೆ ಸಾಧ್ಯ ಎಂದರೆ – ಒಂದು ನಿದರ್ಶನ: ಕರು, ಹೋರಿ, ಎತ್ತುಗಳು ಹೊಳೆಯಲ್ಲಿ ಈಜುದಾಟುವಾಗ ಅವುಗಳ ತಲೆಗಳು ನೀರಿನ ಮೇಲೆ ಸಮವಾಗಿರುತ್ತವೆ. ನೀರಿನ ಒಳಗೆ ಅವುಗಳ ದೇಹಗಳು ಚಿಕ್ಕದು, ದೊಡ್ಡದು ಇರುತ್ತವೆ. ಹಾಗೆಯೇ ಸಿದ್ಧಪರಮೇಷ್ಠಿಗಳು ಮೇಲೆ ತನುವಾತದಲ್ಲಿ ಒಂದೇ ಸಮ ಇರುತ್ತಾರೆ; ಕೆಳಗೆ ಹೆಚ್ಚು ಕಡಿಮೆ ಇರುತ್ತಾರೆ. ಈ ಸಂಗತಿಯು ಶಿಷ್ಯನಿಗೆ ತಿಳಿಸಲು ಹೇಳಿದ ನಿದರ್ಶನೋಪಾಯಗಳಾಗಿವೆ.

ತಮ್ಮೊಳ್ತಾಮೊಳಪೊಕ್ಕೊಡ–।
ನಮ್ಮಮ್ಮ ಪಲಂಬರೊಂದುಗೂಡಿರ್ಪರಹೋ॥
ಉಮ್ಮಳಮುಬ್ಬಸಮಿಲ್ಲಂ।
ಬೊಮ್ಮನೆ ರೂಪೆನಿಸಿದವರ್ಗೆ ಸಿಡಿಮಿಡಿಯುಂಟೇ?॥ ॥೯೨॥

ಆ ಸಿದ್ಧಪರಮೇಷ್ಠಿಗಳು ಪರಸ್ಪರ ಒಬ್ಬರಲ್ಲೊಬ್ಬರು ಒಳಹೊಕ್ಕಿದ್ದರೂ ಹಲವಾರು ಒಂದಾಗಿ ಸೇರಬಲ್ಲರು! ಅಚ್ಚರಿಯ ಸಂಗತಿ! ಇಷ್ಟಾದರೂ ಅವರಲ್ಲಿ ಉಮ್ಮಳವು, ಉಬ್ಬಸವೂ ಇರುವುದಿಲ್ಲ. ಪರಬ್ರಹ್ಮನ ಸ್ವರೂಪವೇ ಆಗಿರುವವರಿಗೆ ಯಾತರ ಅಂಜಿಕೆ?

ಮೆಯ್ಯುಳ್ಳವರಿಟ್ಟಣಿಸಿದೊ–।
ಡಯ್ಯೋ ಮೆಯ್ಬೆಮರಿತುಬ್ಬೆಯಾಯ್ತೆನಲಕ್ಕುಂ॥
ಮೆಯ್ಯಳಿದು ಪರಮಚಿತ್ಕಳೆ।
ಮೆಯ್ಯಾದವರೊಂದುಗೂಡಿದೊಡೆ ನೋವುಂಟೇ?॥ ॥೯೩॥

ಶರೀರಧಾರಿಗಳಾಗಿರುವವರು ದಟ್ಟಣಿಸಿದರೆ! ಅಯ್ಯೋ ಬೆವರಿತು ಮೈ, ಆಯಿತು ಸೆಖೆ; ಎಂದು ಉಸುರುವರು. ನಶ್ವರ ದೇಹವಿಲ್ಲದೆ ಪರಮ ಚೈತನ್ಯವೇ ಶರೀರವನ್ನಾಗಿ ಪಡೆದವರು ಗುಂಪಾಗಿ ಸೇರಿದರೆ ಅವರಿಗೆ ನೋವಿರದು.

ಪಲವು ದೀಪಂಗಳ್ಸಂ-।
ಗಲಿಸಿ ಸಮಂತೊಂದು ಮನೆಯೊಳಿರ್ದೊಡೆ ಕಿರಣ-॥
ಕ್ಕಲೆಬಲೆ ನೂಕುಂ ತಾಕುಂ।
ನೆಲಸಿರ್ಕುಮೆಯಂತೆ ಸಿದ್ಧರೊಂದಾಗಿರ್ಪರ್॥ ॥೯೪॥

ಒಂದೇ ಮನೆಯಲ್ಲಿ ಅನೇಕ ದೀಪಗಳು ಸೇರಿ, ಒಂದೇ ರೀತಿ ಬೆಳಕು ಚೆಲ್ಲುತ್ತಿದ್ದರೆ ಅವುಗಳ ಕಿರಣಗಳಿಗೆ ಬಿಗಿತವಾಗಲಿ, ನೂಕು ನುಗ್ಗಲಾಗಲೀ, ಘರ್ಷಣೆಯಾಗಲಿ ಉಂಟಾದೀತೇ? ಇಲ್ಲ, ಹಾಗೆಯೇ ಸಿದ್ಧಪರಮೇಷ್ಠಿಗಳು ಒಂದಾಗಿ ಸೌಹಾರ್ದದಿಂದ ಕೂಡಿರಬಲ್ಲರು.

ಗಾಳಿಯೊಳಿರುತಿಹರಿರ್ದುಂ।
ಗಾಳಿಯುಮಂ ಸೋಂಕಲಿಲ್ಲ ಸೂಕ್ಷ್ಮಮೆನಿಪ್ಪಾ॥
ಗಾಳಿಯೆ ಸ್ಥೂಲಮುಮಾಯ್ತಾ।
ಗಾಳಿಗಮತಿಸೂಕ್ಷ್ಮರಾದರಚ್ಚರಿಯಲ್ತೆ॥ ॥೯೫॥

ಸಿದ್ಧಪರಮೇಷ್ಠಿಗಳು ತನುವಾತವೆಂಬ ಗಾಳಿವಲಯದಲ್ಲಿದ್ದರೂ ಅದನ್ನು ಸ್ಪರ್ಶಿಸುವುದಿಲ್ಲ. ಆ ಸೂಕ್ಷ್ಮಗಾಳಿ ಅವರ ಪಾಲಿಗೆ ಸ್ಥೂಲವೆನಿಸುತ್ತದೆ. ಏಕೆಂದರೆ ಆ ಗಾಳಿಯ ಸೂಕ್ಷ್ಮತೆಗಿಂತ ಸಿದ್ಧಪರಮೇಷ್ಠಿಗಳು ಬಹುಸೂಕ್ಷ್ಮವಾಗಿರುತ್ತಾರೆ. ಇದು ಅಚ್ಚರಿಯ ಸಂಗತಿ! ಅಲ್ಲವೆ?

ತನುವವರ್ಗಿಲ್ಲ ಸುಬೋಧಮೆ।
ತನುವಾಗಿಹುದಿಂದ್ರಿಯಂಗಳಿಲ್ಲ ಸುಖಂ ತೆ-॥
ಕ್ಕನೆ ತುಂಬಿಹುದಿನ್ನೇನೆಂ-।
ದೆನಬಹುದಾ ಸಿದ್ಧರಂದಮದು ಬಿಸವಂದಂ॥ ॥೯೬॥

ಆ ಸಿದ್ಧಪರಮೇಷ್ಠಿಗಳಿಗೆ ದೇಹವಿಲ್ಲ, ಸುಜ್ಞಾನ ಶರೀರಗಳಾದ ಅವರಿಗೆ ಇಂದ್ರಿಯಗಳಿಲ್ಲ. ಸಂಪೂರ್ಣವಾಗಿ ಸುಖ ಆವರಿಸಿರುವುದು; ಆ ಸಿದ್ಧರ ಸೌಂದರ್ಯ ಸೋಜಿಗವಾದುದು. ಬಣ್ಣಿಸಲು ಆಳವಲ್ಲ.

ವರ್ಣಂಗಳೈದುಮಿಲ್ಲಂ।
ಪೂರ್ಣಪ್ರಭೆ ಬೆಳಗುತಿಹುದು ಗಂಧರಸಂಗಳ್॥
ವರ್ಣಿಸುವೊಡಿಲ್ಲ ದಿವ್ಯಗು–।
ಣಾರ್ಣವಮೆಸೆದಿರ್ಪುದವರ ಮಹಿಮೆ ವಿಚಿತ್ರಂ॥ ॥೯೭॥

ಶ್ವೇತ, ಪೀತ, ಹರಿತ, ಅರುಣ, ಕೃಷ್ಣ, ಎಂಬ ಪಂಚವರ್ಣಗಳು ಅವರಿಗಿಲ್ಲ; ಪೂರ್ಣಕಾಂತಿಯ ಮೂರ್ತಿಗಳು ಅವರು; ಗಂಧರಸಗಳು ಅವರಿಗಿಲ್ಲ; ದಿವ್ಯಗುಣ ಸಾಗರರೂ ಅವರು; ವಿಚಿತ್ರ ಮಹಿಮಾವಂತರು.

ಜ್ಞಾನಾಕ್ಷಿಗೆ ತೋರುವರ–।
ಜ್ಞಾನದ ಚರ್ಮಾಕ್ಷಿಗಳ್ಗೆ ತೋರರ್ಪರಮ–॥
ಧ್ಯಾನಕ್ಕೆ ಸಿಲ್ಕುವರ್ಮ–।
ರ್ತ್ತೇನೆಂಬೆಂ ಮೆಯ್ಗೆ ಕೆಯ್ಗೆ ಸಿಲ್ಕರಮೋಘಂ॥ ॥೯೮॥

ಆ ಸಿದ್ಧಪರಮೇಷ್ಠಿಗಳು ಜ್ಞಾನಾಕ್ಷಿಗಳಿಗೆ ಕಾಣಿಸುವರು, ಚರ್ಮಾಕ್ಷಿಗಳಿಗೆ ಕಾಣಿಸರು, ದಿವ್ಯಜ್ಞಾನಕ್ಕೆ ದಕ್ಕುವರು ಉಳಿದವರ ಕೈಗೆ ನಶ್ವರ ಶರೀರಿಗಳಿಗೆ ಎಟುಕರು; ಅವರು ಸಾರ್ಥಕಸ್ವರೂಪರು.

ಆಕಾರಮೆಯಹುದೊರ್ಮೆ ನಿ–।
ರಾಕಾರಮುಮೆನಲೆ ಬಹುದು ಸಿದ್ಧರ ರೂಹುಂ॥
ಏಕೆಂದೊಡರಿಕೆಗದು ತಾಂ।
ಸ್ವೀಕೃತಮಾಯಿಂದ್ರಿಯಕ್ಕೆ ಸಿರ್ಕದ ದೆಸೆಯಿಂ॥ ॥೯೯॥

ಪಂಚಪರಮೇಷ್ಠಿಗಳ ರೂಪವು ಸಾಕಾರವೂ ಹೌದು; ಏಕೆಂದರೆ ಜ್ಞಾನಕ್ಕೆ ಗೋಚರವಾಗುತ್ತದೆ. ನಿರಾಕಾರವೂ ಹೌದು; ಏಕೆಂದರೆ ಇಂದ್ರಿಯಗಳಿಗೆ ಅಗೋಚರವಾಗಿದೆ. ಆದ್ದರಿಂದ ಅವರ ರೂಪ ಉಭಯಾಕಾರವುಳ್ಳದ್ದು ಎನ್ನಬಹುದು.

ತಿಳಿವೆಳ್ದಿಂಗಳ್ನೋಟಕೆ।
ಪೊಳೆವುತ್ತಿದೆ ಪಿಡಿದು ತೆಗೆಯಲರಿದಂತಾ ನಿ-॥
ರ್ಮಳರುಂ ಸುಜ್ಞಾನಕೆ ತಾ-।
ವಳವಡುವರ್ಗಮ್ಯರಲ್ಲ ಪಂಚೇಂದ್ರಿಯಕಂ॥ ॥೧೦೦॥

ತಿಳಿಬೆಳುದಿಂಗಳು ಕಣ್ಣಿಗೆ ಕಾಣಿಸುತ್ತದೆ; ಆದರೆ ಅದನ್ನು ಹಿಡಿದು ತೆಗೆದುಕೊಳ್ಳಲಾಗದು; ಹಾಗೆಯೇ ಪವಿತ್ರರೂಪಿಗಳಾದ ಸಿದ್ಧಪರಮೇಷ್ಠಿಗಳು ಸುಜ್ಞಾನಗೋಚರರು; ಆದರೆ ಪಂಚೇಂದ್ರಿಯ ಗ್ರಾಹ್ಯರು ಅಲ್ಲ.

ತುಂಬಿದ ಚಿದ್ಗುಣಮಂಬರ-।
ಮೆಂಬಂದದ ಬಯಲ ರೂಪು ಪುರುಷಾಕಾರಂ॥
ಎಂಬಿವು ಮೂರುಂಟವರ್ಗೆ ಚಿ-।
ದಂಬರಪುರುಷರ್ಕಳೆಂಬುದು ಸಾರ್ಥಕನಾಮಂ॥ ॥೧೦೧॥

ಸಿದ್ಧಪರಮೇಷ್ಠಿಗಳಿಗೆ 'ಚಿದಂಬರ ಪುರುಷ' ಎಂಬ ಸಾರ್ಥಕನಾಮವಿದೆ. ಏಕೆಂದರೆ ಅವರಿಗೆ ಪರಿಪೂರ್ಣ ಚಿದಾತ್ಮನಗುಣ, ಆಕಾಶದಂತಹ ಬಯಲರೂಪವು ಮತ್ತು ಪುರುಷಾಕಾರ ಇವು ಮೂರು ಇವೆ.

ಆಕಾಶದಂತೆ ಬಯಲಹು-।
ದಾಕಾಶಂ ಜ್ಞಾನಿಯಲ್ಲ ಪುರುಷಾಕೃತಿಯ-॥
ಲ್ಲಾಕಾಶಕೆ ಸಿದ್ಧರ್ಗಾ-।
ಲೋಕಿಸೆ ತಾನಿಷ್ಟೆ ಭೇದವಲ್ಲದೆ ಪೆರತೇಂ॥ ॥೧೦೨॥

ಸಿದ್ಧಪರಮೇಷ್ಠಿಗಳ ಆಕಾರವು ಆಕಾಶದಂತೆ ಬಯಲುರೂಪಾದರೂ ಆಕಾಶಕ್ಕೂ ಪರಮೇಷ್ಠಿಗಳಿಗೂ ಇರುವ ವ್ಯತ್ಯಾಸವಿಷ್ಟೆ. ಮತ್ತೇನಿಲ್ಲ. ಆಕಾಶವು ಸಿದ್ಧಪುರುಷರ ಹಾಗೆ ಜ್ಞಾನಿಯೂ ಅಲ್ಲ, ಪುರುಷಾಕಾರವೂ ಅಲ್ಲ.

ಸಮ್ಯಕ್ತ್ವಂ ಮೊದಲಾದ ಸು–।
ರಮ್ಯಗುಣಾಷ್ಟಕಮೆ ತಮಗೆ ಭೂಷಣಮೊಡನಾ॥
ಸಮ್ಯಕ್ತ್ವಂ ಮೊದಲಾ ಸು–।
ರಮ್ಯಗುಣಾಷ್ಟಕಮೆ ದೇಹವದೆ ತಾವಾದರ್॥ ॥೧೦೩॥

ಸಿದ್ಧಪರಮೇಷ್ಠಿಗಳಿಗೆ ಸಮ್ಯಕ್ತ್ವವೇ ಮೊದಲಾದ ಎಂಟು ರಮ್ಯಗುಣಗಳೇ ಭೂಷಣವು; ಮತ್ತೆ ಆ ಅಷ್ಟ ಸುರಮ್ಯಗುಣಗಳೇ ಶರೀರವು; ಹೆಚ್ಚೇನು ಅಷ್ಟಗುಣಗಳೇ ಅವರು.

ತಲೆಯಿಂದಡಿಮುಟ್ಟಂ ಸು–।
ತ್ತಲುಮರಿವುತ ಕಾಣುತಿರ್ಪರದರಿಂ ಸಿದ್ಧರ್॥
ಸಲೆ ಸರ್ವತೋಮುಖರ್ಮ್ಮಂ–।
ಗಲಮೆನಿಸಿದ ಸರ್ವತೋವಿಲೋಚನರಾದರ್॥ ॥೧೦೪॥

ಮುಡಿಯಿಂದ ಅಡಿಯವರೆಗೆ ಎಲ್ಲ ದಿಕ್ಕುಗಳಲ್ಲೂ, ಎಲ್ಲವನ್ನೂ ತಿಳಿಯುತ್ತಲೂ ಕಾಣುತ್ತಲೂ ಇರುತ್ತಾರೆ. ಆದ್ದರಿಂದ ಮಂಗಳಸ್ವರೂಪರಾದ ಸಿದ್ಧಪರಮೇಷ್ಠಿಗಳು ಸರ್ವತೋಮುಖರು, ಸರ್ವತೋದರ್ಶಿಗಳು ಎಂದು ಎನಿಸಿದರು.

ಮೂಲೋಕದೊಳಗು ಹೊರಗುಮ–।
ನಾಲೋಕಿಸುತರಿವುತಿರ್ಪರಹುದಾದೊಡಮೇನ್॥
ಮೂಲೋಕದೊಳಗು ಹೊರಗವ–।
ಗ್ರಾಲದ ಬಿತ್ತಿನ ಸಮಾನವರಿಕೆ ವಿಶಾಲಂ॥ ॥೧೦೫॥

ಸಿದ್ಧಪರಮೇಷ್ಠಿಗಳು ತ್ರಿಲೋಕದ ಅಂತರಂಗ ಬಹಿರಂಗಗಳನ್ನು ವೀಕ್ಷಿಸುತ್ತಾ ತಿಳಿಯಬಲ್ಲರು, ಆಲದಬೀಜ ಚಿಕ್ಕದಾದರೂ ವಿಶಾಲ ಮರವಾಗಬಲ್ಲದು; ಹಾಗೆಯೇ ನಿಯತ ಸ್ಥಾನದಲ್ಲಿದ್ದರೂ ಸಿದ್ಧಪರಮೇಷ್ಠಿಗಳು ತ್ರಿಲೋಕಗಳ ಒಳಗುಹೊರಗಿನ ಸರ್ವಸ್ವವನ್ನು ಅರಿಯಬಲ್ಲರು.

ತ್ರಿಜಗವನೆತ್ತುವ ವೀರ್ಯಂ।
ನಿಜವಾಗಿಹುದವರ್ಗೆ ಚೇಷ್ಟಿಸದೆ ತೆಪ್ಪಗಿಹರ್॥
ತ್ರಿಜಗದ ಸುಖಕಧಿಕಸುಖಂ।
ನಿಜವಾಗಿಹುದಿಂತುಂಟೆಂದು ನುಡಿಯಲಶಕ್ಯಂ॥ ॥೧೦೬॥

ಅವರಿಗೆ ತ್ರಿಲೋಕಗಳನ್ನು ಮೇಲೆತ್ತುವ(ಉದ್ಧರಿಸುವ) ಶಕ್ತಿ ಇದ್ದರೂ ಆ ಶಕ್ತಿಯನ್ನು ಬಳಸದೆ ಸುಮ್ಮನೆ ಇರುತ್ತಾರೆ. ಅವರಿಗೆ ನಿಜಕ್ಕೂ ಈ ತ್ರಿಲೋಕಗಳ ಸುಖವನ್ನು ಮೀರಿದ ಸುಖವಿರುತ್ತದೆ. ಆ ಸುಖವನ್ನು ಇಂಥದ್ದು ಎಂದು ವರ್ಣಿಸುವುದು ಅಸಾಧ್ಯ.

ನಾಗಜ್ಯೋತಿರ್ವ್ಯಂತರ-।
ಭೋಗಮಹೀಖಚರಸುರಗಣಂ ಬಹುಭವದೊಳ್॥
ಭೋಗಿಸಿದ ಭೋಗಮಂ ನೋ-।
ಳ್ಪಾಗಳ್ಸಿದ್ಧರ್ ಸುಖಾಬ್ಧಿಗದು ತುಂತುರ್ವೊಲ್॥ ॥೧೦೭॥

॥ಇತಿ ಸಿದ್ಧಲೋಕಸಿದ್ಧರಾಶಿವರ್ಣನಂ॥

ನಾಗದೇವತೆಗಳು, ಜ್ಯೋತಿರ್ದೇವತೆಗಳು ವ್ಯಂತರ ದೇವತೆಗಳು, ಭೋಗಭೂಮಿಯ ಆರ್ಯರೂ, ಖೇಚರರೂ ಸ್ವರ್ಗದ ಸುರಗಣಗಳು ಅನೇಕ ಭವಗಳಲ್ಲಿ ಅನುಭವಿಸಿದ ಸುಖಗಳೆಲ್ಲವನ್ನೂ ಹೋಲಿಸಿದರೆ, ಅದು ಸಿದ್ಧಪರಮೇಷ್ಠಿಗಳ ಸುಖಸಾಗರದ ಹನಿಗೆ ಸಮಾನವೆನ್ನಬಹುದು.

ಇಲ್ಲಿಗೆ ಸಿದ್ಧಲೋಕಸಿದ್ಧರಾಶಿಯ ವರ್ಣನೆ ಮುಗಿಯಿತು

ಪಂಚಾಣುತ್ತರೆಯಿಂಭವ-।
ನಾಂಚಿತಧರೆ ಮುಟ್ಟಲಿರ್ದ ಸುರರಂ ಮಡಿವರ್॥
ಕಿಂಚಿತ್ಸುಖಮಿದು ಛೀ ಸುಡು।
ಚಂಚನ್ಮುಕ್ತಿಯೆ ಮಹಾಸುಖಂ ನಿತ್ಯಪದಂ॥ ॥೧೦೮॥

ಪಂಚಾಣುತ್ತರೆಯಿಂದ ಭವನಲೋಕದವರೆಗೆ ಇರುವ ದೇವತೆಗಳಿಗೆಲ್ಲ ಸಾವುಂಟು. ಆದ್ದರಿಂದ ಅವರ ಸುಖವೆಲ್ಲ ಅಲ್ಪಸುಖ. ಛೀ! ಅದಕ್ಕೆ ಧಿಕ್ಕಾರ! ತೇಜೋಪೂರ್ಣ ಮುಕ್ತಿ ಸುಖವೇ ಅಧಿಕವಾದುದು, ನಿತ್ಯವಾದುದು.

ನರಕನಿಗೋದಂಗಳ ಮಾ-।
ತಿರಲತಿತರದುಃಖದಾಗರಂ ಸುಡು ಕಷ್ಟಂ॥
ನರಖಚರಭೋಗಭೂಮಿಜ-।
ರರರೆ ವಿದೇಹಜರುಮಲ್ಪಸುಖಿಗಳ್ಮಡಿವರ್॥ ॥೧೦೯॥

ನರಕಲೋಕ - ನಿಗೋದ ಲೋಕಗಳ ವಿಚಾರ ಹಾಗಿರಲಿ, ಗೊತ್ತೇ ಇದೆ; ಅವು ಅಧಿಕತರ ದುಃಖನಿವಾಸಗಳು, ಸುಡಲಿ, ಕಷ್ಟ! ಮನುಷ್ಯರೂ ಖೇಚರರೂ ಭೋಗಭೂಮಿಜರೂ, ಅದಕ್ಕಿಂತ ಮಿಗಿಲಾಗಿ ವಿದೇಹಜರೂ ಇವರೆಲ್ಲರೂ ಅಲ್ಪ ಸುಖಿಗಳೂ ಸಾಯುವವರೂ ಆಗಿದ್ದಾರೆ.

ಕೇಡಿಲ್ಲದ ಸುಖಮಾವುದು।
ನೋಡಿದೊಡಾ ಮುಕ್ತಿಯೊಂದೆ ಮತ್ತಿನವೆಲ್ಲಂ॥
ಕೇಡುಳ್ಳವದರಿನೆಲ್ಲರ್।
ಮಾಡುವುದಾ ಮುಕ್ತಿಪದಕೆ ತಕ್ಕುಜ್ಜುಗಮಂ॥ ॥೧೧೦॥

ಹಾಗಾದರೆ ನಾಶರಹಿತವಾದ ಸುಖ ಯಾವುದು? ಮುಕ್ತಿಯೊಂದೆ, ಉಳಿದೆಲ್ಲವೂ ಅಳಿಯುವಂಥವು. ಆದಕಾರಣ ಎಲ್ಲರೂ ಮುಕ್ತಿ ಸುಖಕ್ಕಾಗಿ ತಕ್ಕ ಪ್ರಯತ್ನವನ್ನು ಮಾಡಬೇಕು.

ಅವುಜ್ಜುಗಮೇನೆಂದೊಡೆ।
ಪಾವನಜಿನಸಿದ್ಧಭಕ್ತಿಯಾ ಭಕ್ತಿಯೆ ತಾಂ॥
ಭಾವಿಸೆ ಭೇದಮಭೇದಂ।
ದ್ವೈವಿಧಮಾಗಿರ್ಕುಮರಿದು ನೆಗಳ್ದೊಡೆ ಮೋಕ್ಷಂ॥ ॥೧೧೧॥

ಅಂಥ ಪ್ರಯತ್ನ ಯಾವುದೆಂದರೆ, ಪರಮಪವಿತ್ರವಾದ ಜಿನರನ್ನು ಮತ್ತು ಸಿದ್ಧರನ್ನು ಭಕ್ತಿಯಿಂದ ಪೂಜಿಸುವುದು; ವಿಚಾರ ಮಾಡಿದರೆ ಈ ಭಕ್ತಿ ಎರಡು ವಿಧ; ಒಂದು ಭೇದಭಕ್ತಿ; ಇನ್ನೊಂದು ಅಭೇದಭಕ್ತಿ; ಇದನ್ನು ಚೆನ್ನಾಗಿ ಅರಿತು ಆಚರಿಸಿದರೆ ಮೋಕ್ಷವು ಕಟ್ಟಿಟ್ಟ ಗಂಟು.

ಸಲೆ ಭೇದಭಕ್ತಿಯೆಂತುಟು।
ಹೊಲಬರಿಯೆವು ಮತ್ತಭೇದಭಕ್ತಿಯದೆಂತಾ॥
ಕಲೆಯಂ ಪೇಳೆನೆ ಪೇಳ್ವೆಂ।
ಹಲವಂ ಹಂಬಲಿಸದೊಲ್ದು ಲಾಲಿಪುದೆಲ್ಲರ್॥ ॥೧೧೨॥

ಭೇದಭಕ್ತಿಯು ಹೇಗಿರುತ್ತದೆ? ಅಭೇದಭಕ್ತಿ ಹೇಗಿರುತ್ತದೆ? ಅದು ನಮಗರ್ಥವಾಗಿಲ್ಲ. ಆ ಕಲೆಯ ರಹಸ್ಯವನ್ನು ತಿಳಿಯಬೇಕು ಎಂದಿದ್ದರೆ ತಿಳಿಸುವೆನು. ಅನ್ಯವಿಷಯಗಳಲ್ಲಿ ಮನವಿರಿಸದೆ ತದೇಕಚಿತ್ತದಿಂದ ಎಲ್ಲರೂ ಶ್ರದ್ಧೆಯಿಂದ ಲಾಲಿಸಬೇಕು.

ಶ್ರೀ ಸಮವಸರಣದೊಳ್ಜಿನ-।
ರಾ ಸಿದ್ಧರುದಾಗ್ರಮೋಕ್ಷದಲ್ಲಿಹರೆಂದ-॥
ಭ್ಯಾಸಿಸಿ ಬೇರಿಟ್ಟವರಂ।
ಲೇಸಿಂ ಧ್ಯಾನಿಪುದೆ ಭೇದಭಕ್ತಿಯೆನಿಕ್ಕುಂ॥ ॥೧೧೩॥

ಶ್ರೀಸಮವಸರಣ ವಿಹಾರಮಂಟಪದಲ್ಲಿ ಜಿನರು ಇರುತ್ತಾರೆ; ಆ ಸಿದ್ಧಪರಮೇಷ್ಠಿಗಳು ಅತಿ ಉನ್ನತ ಮೋಕ್ಷದಲ್ಲಿರುತ್ತಾರೆ; ಎಂದು ಅರಿತು ಅವರನ್ನು ಬೇರೆಬೇರೆಯಾಗಿಟ್ಟು ಲೇಸಿನಿಂದ ಧ್ಯಾನಿಸುವುದೇ ಭೇದಭಕ್ತಿ.

ಮತ್ತಾ ಜಿನರಂ ಸಿದ್ಧರ-।
ನಿತ್ತಲ್ತನ್ನೊಡಲೊಳಿರ್ದ ಶುದ್ಧಾತ್ಮನೊಳೇ॥
ಪತ್ತಿಸಿ ತಾಂ ಧ್ಯಾನಿಸಿದೊಡೆ।
ಸುತ್ತೇನದು ತಾನಭೇದಭಕ್ತಿಯೆನಿಕ್ಕುಂ॥ ॥೧೧೪॥

ಮತ್ತೆ ಜಿನರನ್ನೂ ಸಿದ್ಧಪರಮೇಷ್ಠಿಗಳನ್ನೂ ತನ್ನ ದೇಹದೊಳಗಿನ ಶುದ್ಧಾತ್ಮನಲ್ಲಿ ಸಮೀಕರಿಸಿ ಧ್ಯಾನಿಸಿದರೆ ಅದೇ ಅಭೇದಭಕ್ತಿ ಎನಿಸುತ್ತದೆ.

ದೇವನ ಬೇರಿಟ್ಟೊಲವಿಂ।
ಭಾವಿಸಲದು ಭೇದಭಕ್ತಿ ಬೇರಾಗದೆ ತಾಂ॥
ಭಾವಿಸಲಭೇದಭಕ್ತಿಕ-।
ಲಾವಿಧಮೆಂದರಿದು ನೆಗಳೆ ಮುಕ್ತಿಯದಕ್ಕುಂ॥ ॥೧೧೫॥

ಒಂದು ಮಾತಿನಲ್ಲಿ ಹೇಳುವುದಾದರೆ, ದೇವನನ್ನು ತನ್ನಿಂದ ಬೇರೆಯಾಗಿ ಇರಿಸಿ ಭಕ್ತಿಯಿಂದ ಭಾವಿಸಿದರೆ ಅದು ಭೇದಭಕ್ತಿ; ದೇವನಿಂದ ತಾನು ಭಿನ್ನನಾಗದೇ ಆತ್ಮನನ್ನು ಅಖಂಡವಾಗಿ ಭಾವಿಸಿದರೆ ಅಭೇದಭಕ್ತಿ; ಹೀಗೆಂದು ಆ ಕಲೆಯನ್ನು ತಿಳಿದು ಆಚರಿಸುವವರಿಗೆ ಮುಕ್ತಿ ಖಂಡಿತ.

ಭೇದದ ಭಕ್ತಿಯ ಮೊದಲೊಳ-।
ಗಾದರಿಪುದು ಮತ್ತಭೇದಭಕ್ತಿಯೊಳೀ ಜ್ಞಾ॥
ನೋದಯಮಾಗಿರ್ಪುದಿದೇ।
ಹಾದಿ ಸುಮೋಕ್ಷಕ್ಕೆ ತಾನೆ ರತ್ನತ್ರಯಮುಂ॥ ॥೧೧೬॥

ಮೊದಲು ಭೇದಭಕ್ತಿಯನ್ನು ಮನ್ನಿಸಬೇಕು; ಆಮೇಲೆ ಅಭೇದ ಭಕ್ತಿಯಲ್ಲಿ ನಿರತನಾಗಬೇಕು; ಈ ಬಗೆಯ ಜ್ಞಾನೋದಯವೇ ಶ್ರೇಷ್ಠಮುಕ್ತಿಗೆ ದಾರಿಯೂ ರತ್ನತ್ರಯವೂ ಆಗಿರುತ್ತದೆ.

ಜಿನರಂತೆ ಸಿದ್ಧರಂತೀ।
ತನುವಿನೊಳಿರ್ದಾತ್ಮನೆಂದು ತಾಂ ಧ್ಯಾನಿಪುದೇ॥
ಜಿನಸಿದ್ಧಭಕ್ತಿಯದರಿಂ-।
ದನುಭವಿಸುವನದರ ಪದಮುಮಂ ಮೋಕ್ಷಮುಮಂ॥ ॥೧೧೭॥

ಈ ದೇಹದಲ್ಲಿರುವ ಆತ್ಮನು ಜಿನರಂತೆ, ಸಿದ್ಧರಂತೆ ಇರುತ್ತಾನೆಂದು ಭಾವಿಸಿ ತಾನು ಧ್ಯಾನಿಸುವುದೇ ಜಿನಸಿದ್ಧಭಕ್ತಿ. ಈ ಭಕ್ತಿಯಿಂದ ಸಿದ್ಧಸ್ಥಾನವನ್ನೂ ಮೋಕ್ಷಗತಿಯನ್ನೂ ಹೊಂದುವನು.

ಶಿಲೆಯಂ ಕಂಚುಂ ಲೆಪ್ಪವ-।
ನಲಸದೆ ಜಿನಮುದ್ರೆಮಾಡಿ ಪೂಜಿಪ ತೆರದಿಂ॥
ಚಲಿಸದೆ ಜಿನನೆಂದಾತ್ಮನ-।
ನೊಲಿದೀಕ್ಷಿಸೆ ಮೋಕ್ಷಮಪ್ಪುದೊಂದಚ್ಚರಿಯೇ॥ ॥೧೧೮॥

ಕಲ್ಲಿನಲ್ಲಿ, ಕಂಚಿನಲ್ಲಿ, ಲೆಪ್ಪದಲ್ಲಿ, ಆಲಸ್ಯಮಾಡದೆ ಅವುಗಳಲ್ಲಿ ಜಿನಮುದ್ರೆಯನ್ನು ನಿರ್ಮಿಸಿ ಪೂಜಿಸುವ ಹಾಗೆ, ಆತ್ಮನನ್ನು ಜಿನನೆಂದು ಭಕ್ತಿಯಿಂದ ಸ್ಥಿರವಾಗಿ ಧ್ಯಾನಿಸಿ ಕಂಡರೆ ಮೋಕ್ಷ ದೊರಕುವುದು ಏನಚ್ಚರಿಯೇ?

ಅಪವಿತ್ರದೊಡಲೊಳಿರ್ದುಂ।
ಸುಪವಿತ್ರನೆನಿಕ್ಕುಮಾತ್ಮನೆಂತೆನೆ ಪೇಳ್ವೆಂ॥
ಅಪವಿತ್ರದ ಕೆಚ್ಚಲೊಳಿ-।
ರ್ದಪುದಾಗಿಯುಮಮೃತಮೆನಿಪ ಪಾಲಂತೆ ವಲಂ॥ ॥೧೧೯॥

ಆತ್ಮನು ಅಪವಿತ್ರವಾದ ದೇಹದಲ್ಲಿದ್ದರೂ ಸುಪವಿತ್ರನು ಎನ್ನಿಸಿರುವನು. ಹೇಗೆಂದರೆ, ಹೇಳುವೆನು ಕೇಳಿ. ಹಾಲು ಅಪವಿತ್ರವಾದ ಮಾಂಸದ ಕೆಚ್ಚಲಲ್ಲಿ ಇದ್ದರೂ ಅಮೃತವೆಂದೆನಿಸುತ್ತದೆ. ಹಾಗೆ ಆತ್ಮನೂ ಪವಿತ್ರ ಎನಿಸಿದ್ದಾನೆ.

ಮರದೊಳಿಹುದಗ್ನಿ ಹೊಸೆದೊಡೆ।
ಮರನಂ ತಾ ಸುಡುವುದಂತೆ ಕರ್ಮದೊಳಿರ್ಪಂ॥
ಪರಮಾತ್ಮಂ ಧ್ಯಾನಿಸಿದೊಡೆ।
ದುರಿತಮನುರೆ ಸುಡುವನೊಡನೆ ಮುಕ್ತಿಗೆ ಪೋಪಂ॥ ॥೧೨೦॥

ಮರದಲ್ಲಿ ಬೆಂಕಿ ಅಡಗಿರುತ್ತದೆ; ಮರಗಳು ಮಸೆದಾಟಕ್ಕೆ ಒಳಗಾದರೆ ಬೆಂಕಿ ಬರುತ್ತದೆ; ಮರ ಸುಡುತ್ತದೆ; ಹಾಗೆಯೇ ಪರಮಾತ್ಮನು ಕರ್ಮದಲ್ಲಿ ಅಡಗಿರುತ್ತಾನೆ; ಧ್ಯಾನಿಸಿದರೆ ಕರ್ಮಗಳನ್ನು ಅವನು ಚೆನ್ನಾಗಿ ಸುಡುತ್ತಾನೆ; ಕೂಡಲೇ ಧ್ಯಾನಸ್ಥ ಮುಕ್ತಿಗೆ ಸಲ್ಲುತ್ತಾನೆ.

ಮುಂಪೇಳ್ದ ಸಿದ್ಧರೆಲ್ಲರು-।
ಮಿಂಪಿನೊಳೀ ಧರೆಯೊಳಿರ್ದುಮಿಾ ಪರಿಯೊಳಗಾ॥
ತ್ಮಂ ಪಾವನನೆಂದೀಕ್ಷಿಸಿ।
ಪೆಂಪೆನಿಸಿದ ಸಿದ್ಧರಾದರಿದು ಸಿದ್ಧಾಂತಂ॥ ॥೧೨೧॥

ಮುಂಚೆ ಹೇಳಿದ ಸಿದ್ಧಪರಮೇಷ್ಠಿಗಳೆಲ್ಲರೂ ಈ ಭೂಮಿಯಲ್ಲಿ ಆನಂದಲ್ಲಿದ್ದು ಈ ರೀತಿಯಲ್ಲಿ ಆತ್ಮನು ಪವಿತ್ರನೆಂದು ಭಾವಿಸಿ ನೋಡಿ ಅಧಿಕರೆನಿಸಿದ ಸಿದ್ಧಪರಮೇಷ್ಠಿಗಳಾದರು. ಈ ಮಾತು ಸಿದ್ಧಾಂತ(ಖಚಿತ ತತ್ತ್ವನಿರ್ಣಯ).

ಲೋಕತ್ರಯಮದನರಿಯ-।
ಲ್ಬೇಕಾದೊಡೆ ಲೋಕದಷ್ಟು ತೆರಪೆನ್ನಾತ್ಮಂ॥
ಶ್ರೀಕರನೆಂದಾತ್ಮಧ್ಯಾ-।
ನೈಕಾಗ್ರಣಿಯಾಗಬೇಕುಮಲ್ಲದೊಡಫಲಂ॥ ॥೧೨೨॥

॥ಇತಿ ಶಾಸ್ತ್ರತಾತ್ಪರ್ಯವರ್ಣನಂ॥

ಮೂರು ಲೋಕವನ್ನು ತಿಳಿಯಬೇಕಾದರೆ ನನ್ನ ದೇಹದೊಳಿರುವ ಆತ್ಮನು ಲೋಕದಷ್ಟು ವಿಶಾಲನಾಗಿದ್ದಾನೆ; ಸಂಪತ್ಕರನಾಗಿದ್ದಾನೆ, ಎಂದು ಆತ್ಮಧ್ಯಾನದಲ್ಲಿ ನಿರತನಾಗಿ ತದೇಕಚಿತ್ತನಾದರೆ ಆಗ ತ್ರಿಲೋಕಜ್ಞಾನಿ ಆಗಬಹುದು. ಇಲ್ಲದಿದ್ದರೆ ಪ್ರಯೋಜನವಿಲ್ಲ.

ಇಲ್ಲಿಗೆ ಶಾಸ್ತ್ರತಾತ್ಪರ್ಯವರ್ಣನೆ ಮುಗಿಯಿತು

ಕೆಲರೆಲ್ಲ ಸಲ್ಲದೆಂಬರ್।
ಕೆಲರಾತ್ಮಧ್ಯಾನಮಿಲ್ಲ ಪೊಲ್ಲದಿದೆಂಬ-॥
ಗೊರ್ಲಿಯದಿರಣ್ಣಾ ಮೋಕ್ಷದ।
ಕಲೆಯದು ನಂಬಿದೊಡೆ ನೋಡಿರ್ಪ್ರೈ ಪ್ರಾಭೃತಮಂ॥ ॥೧೨೩॥

ಕೆಲವರು ಇದೆಲ್ಲ ಸರಿಯಲ್ಲವೆನ್ನುತ್ತಾರೆ; ಆತ್ಮಧ್ಯಾನಸಿದ್ಧಿ ಆಗುವುದಿಲ್ಲ ಎಂದು ಹೇಳುತ್ತಾರೆ. ಈ ರೀತಿ ಮಾತು ಸುಳ್ಳು; ಹಾಗೆ ಹೇಳುವವರನ್ನು ನಂಬಬೇಡಿ; ಮೇಲಿನ ಮಾತನ್ನು, ಆತ್ಮಸಿದ್ಧಿ ಆಗುತ್ತದೆ ಎಂಬುದನ್ನು ನಿಜವೆಂದು ನಂಬಿದರೆ ಅದೇ ಮೋಕ್ಷದ ಕಲೆ-ಜ್ಞಾನವಾಗುತ್ತದೆ. ಬೇಕಾದರೆ ಶ್ರೇಷ್ಠ ಆಗಮವಾದ ಪ್ರಾಭೃತ ಶಾಸ್ತ್ರಗ್ರಂಥವನ್ನು ನೋಡಿರಿ!

ಆಸನ್ನ ಭವ್ಯರಾತ್ಮನ-।
ನೋಸರಿಸದೆ ಕಾಣ್ಬರಯ್ಯ ಕಾಣದೊಡಂ ದೂ-॥
ರಾಸನ್ನ ಭವ್ಯರೊಪ್ಪುವ-।
ರೀ ಸಹಜಧ್ಯಾನಮೆಂದೊಡುರಿವರಭವ್ಯರ್॥ ॥೧೨೪॥

ಅಸನ್ನಭವ್ಯರು ಹಿಂಜರಿಯದೆ ಆತ್ಮದರ್ಶನ ಹೊಂದುವರು; ಆತ್ಮವನ್ನು ದರ್ಶಿಸದಿದ್ದರೂ ದೂರಭವ್ಯರೂ ಸಮೀಪಭವ್ಯರೂ ಆತ್ಮವನ್ನು ಅಂಗೀಕರಿಸುತ್ತಾರೆ. ಆದರೆ ಅಭವ್ಯರು ಇದನ್ನು ಸಹಜವಾದ ಧ್ಯಾನ-ಆತ್ಮಧ್ಯಾನ ಎಂದರೆ ಉರಿದು ಬೀಳುತ್ತಾರೆ.

ಧ್ಯಾನಿಗೆ ಮೂರೇ ಭವಮಾ।
ಧ್ಯಾನಕೊಡಂಬಟ್ಟವಂಗೆ ಹತ್ತೆಂಟು ಭವಂ॥
ತಾನೊಡನೆ ಮುಕ್ತಿಯಹುದೀ।
ಧ್ಯಾನಕೆ ಮುನಿವಂಗೆ ಮುಕ್ತಿಯಿಲ್ಲಖಿಲಭವಂ॥ ॥೧೨೫॥

॥ಇತಿ ಧೂರ್ತನಿವಾರಣವರ್ಣನಂ॥

ಆತ್ಮಧ್ಯಾನಿಗೆ ಮೋಕ್ಷಪ್ರಾಪ್ತಿಯಾಗಲು ಮೂರೇ ಭವಗಳು ಸಾಕು. ಧ್ಯಾನಕ್ಕೆ ಒಡಂಬಡುವವನಿಗೆ ಎಂಟು-ಹತ್ತು ಭವಗಳು ಬೇಕು. ಆಮೇಲೆ ಮುಕ್ತಿ ತಾನಾಗಿ ದೊರೆಯುವುದು, ಈ ಆತ್ಮಧ್ಯಾನಕ್ಕೆ ಮುನಿಯುವವನಿಗೆ ಯಾವುದೊಂದು ಭವದಲ್ಲೂ ಮುಕ್ತಿಯಿಲ್ಲ.

ಇಲ್ಲಿಗೆ ಧೂರ್ತನಿವಾರಣ ವರ್ಣನೆ ಮುಗಿಯಿತು

ಪ್ರಣವಸ್ವರೂಪ ತೇ ನಮ।
ರಣದೂರ ನಮೋ ನಮೋ ನಮೋಸ್ತು ಸ್ವಾಹಾ॥
ಗುಣಗುಣಿಯೋಗಾಯ ನಮೋ।
ಮಣಿತ್ರಯೈಕಾರ್ಥನೇ ಚಿದಂಬರಪುರುಷಾ॥ ॥೧೨೬॥

ಓಂಕಾರಸ್ವರೂಪನೇ, ಚಿದಂಬರಪುರುಷನೇ, ನಿನಗೆ ನಮಸ್ಕಾರ ರಣಕಲಹದೂರನೇ, ನಿನಗೆ ನಮೋ! ನಮೋ! ಗುಣಗಳೆಂಬ ರತ್ನತ್ರಯ ರತ್ನಗಳ ಸಂಬಂಧವುಳ್ಳವನೆ, ನಿನಗೆ ನಮಸ್ಕಾರ. ಸ್ವಾಹಾ.

ಸಿದ್ಧಾಯ ನಮಃ ಸ್ವಾಹಾ।
ಸಿದ್ಧಾಂತಾಮೃತಸಮುದ್ರಸಾರಾಯ ನಮಃ॥
ಸಿದ್ಧಪರಮೇಷ್ಠಿನೇ ನಮಃ।
ಉದ್ಧೂತಮಲಾಯ ತೇ ನಿರಂಜನಸಿದ್ಧಾ॥ ॥೧೨೭॥

॥ಇತಿ ಸಿದ್ಧ ನಮಸ್ಕಾರಃ॥

ನಿರಂಜನಸಿದ್ಧನಿಗೆ, ಸಿದ್ಧಪರಮೇಷ್ಠಿಗೆ, ನಮಸ್ಕಾರವಿರಲಿ. ಸ್ವಾಹಾ! ಸಿದ್ಧಾಂತವೆಂಬ ಅಮೃತಸಾಗರನಿಗೆ ನಮಸ್ಕಾರ. ಕರ್ಮಮಲವನ್ನು ದೂರ ಮಾಡಿದವನಿಗೆ, ಸಿದ್ಧಪರಮೇಷ್ಠಿಗೆ ಶರಣು! ಶರಣು.

ಇಲ್ಲಿಗೆ ಸಿದ್ಧನಮಸ್ಕಾರ ಮುಗಿಯಿತು

ಮಣಿಶೈಲಂ ಗತಿಯಿಂದು ಶಾಲಿಶಕಕಾಲಂ ಸಂದಿರಲ್ತೌಳವಾಂ-।
ಗಣದೊಳ್ವೇಣುಪುರಾಂಕದೊಳ್ ಸೃಜಿಸಿದಂ ರತ್ನಾಕರಾರ್ಯಂ ನಿಜೇ-॥
ಕ್ಷಣ ತಾತ್ಪರ್ಯಮಿದೀ ತ್ರಿಲೋಕಶತಕಂ ತಾನೀ ಪಗಲ್ತೊಟ್ಟು ಮುಂ-।
ದಣ ವೀರಾಂಗದಯೋಗಿ ಮುಟ್ಟುತಿಳೆಯೊಳ್ ಸಲ್ಲೀಲೆಯಿಂದೊಪ್ಪುಗುಂ॥
॥೧೨೮॥

ಆತ್ಮದರ್ಶನ ವಿಚಾರಸಂಗ್ರಹವಿರುವ ಈ ತ್ರಿಲೋಕಶತಕವನ್ನು ತೌಳವದೇಶದಲ್ಲಿ ಮೂಡುಬಿದಿರೆ (ವೇಣುಪುರ)ದಲ್ಲಿ ರತ್ನಾಕರರಾಯನು ಶಾಲಿವಾಹನಶಕಕಾಲ ೧೪೭೯ರಲ್ಲಿ (ಮಣಿ = ೯, ಶೈಲ = ೭, ಗತಿ = ೪, ಇಂದು = ೧ ಬಲದಿಂಬ ಎಡಕ್ಕೆ ಓದಿದರೆ ೧೪೭೯)(ಕ್ರಿಸ್ತಶಕ ೧೫೫೭ರಲ್ಲಿ) ರಚಿಸಿದನು. ಈ ಕೃತಿ ಇಂದಿನಿಂದ ಅನಂತಕಾಲದವರೆಗೆ ಪಂಚಮಕಾಲದ ಕೊನೆಯ ವೀರಾಂಗದನೆಂಬ ಯೋಗಿಯತನಕ ಈ ಭೂಮಿಯಲ್ಲಿ ಸಲ್ಲೀಲೆಯಿಂದ ವಿರಾಜಿಸಲಿ.

॥ಇತ್ಯಾಶೀರ್ವಾದಃ॥

ಶ್ರೀಮದ್ದೇವೇಂದ್ರ ಕೀರ್ತಿಯೋಗೀಶ್ವರಪಾದಾಂಭೋಜಭೃಂಗಾಯಮಾನ
ಶೃಂಗಾರಕವಿಹಂಸರಾಜವಿರಚಿತಮಪ್ಪ
ತ್ರಿಲೋಕಶತಕಂ ಸಮಾಪ್ತಂ

ಶ್ರೀಮದ್ದೇವೇಂದ್ರಕೀರ್ತಿ ಯೋಗೀಶ್ವರರ ಪಾದಕಮಲದಲ್ಲಿ ಭ್ರಮರದಂತಿರುವ ಶೃಂಗಾರಕವಿಹಂಸರಾಜನು ವಿರಚಿಸಿದ ತ್ರಿಲೋಕಶತಕವು ಸಮಾಪ್ತಿಯಾದುದು

* * *

I. ರತ್ನಾಕರಶತಕ

ಶಬ್ದಾರ್ಥ ಮತ್ತು ಟಿಪ್ಪಣಿಗಳು

[ರ = ರತ್ನಾಕರಶತಕ; ಅ = ಅಪರಾಜಿತೇಶ್ವರ ಶತಕ; ತ್ರಿ = ತ್ರಿಲೋಕಶತಕ]

ಶತಕ–ಪದ್ಯಸಂಖ್ಯೆ

ರ–೧ **ಶ್ರೀರಾಗಂ** – ಚಂದನಾದಿ ಸುಗಂಧ ಲೇಪನಗಳು

ಸಿರಿಗಂಪುಮಾಲೆ – ಪರಿಮಳಭರಿತ ಪುಷ್ಪಹಾರಗಳು

ಮಣಿಹಾರಂ – ನವರತ್ನಯುಕ್ತ ಸರಗಳು

ವಸ್ತ್ರಂ – ಬಣ್ಣ ಬಣ್ಣದ ಬಟ್ಟೆಗಳು

ಅಂಗಕ್ಕೆ ಅಲಂಕಾರಂ – ಶರೀರಕ್ಕೆ ಶೋಭಾಯಮಾನಗಳು

ಹೇಯಂ ಇವು – ಇವೆಲ್ಲಾ ಬಿಡತಕ್ಕವು, ತಿರಸ್ಕಾರ ಮಾಡತಕ್ಕವು

ಆತ್ಮತತ್ತ್ವರುಚಿ – ಆತ್ಮತತ್ತ್ವದ ಬಗ್ಗೆ ಶ್ರದ್ಧೆ ಸಮ್ಯಕ್ ದರ್ಶನ

ಬೋಧ – ಸಮ್ಯಕ್ ಜ್ಞಾನ

ಉದ್ಯತ್ ಚರಿತ್ರಂಗಳ್ – ಶ್ರೇಷ್ಠವೆನಿಸಿದ ಚಾರಿತ್ರ

ಈ ತ್ರೈರತ್ನಂ – ಈ ರತ್ನತ್ರಯಗಳು (ಸಮ್ಯಕ್ ದರ್ಶನ – ಸಮ್ಯಕ್ ಜ್ಞಾನ – ಸಮ್ಯಕ್ ಚಾರಿತ್ರ)

ಮನಸಿಂಗೆ ಸಿಂಗರಂ – ಮನೋಶೃಂಗಾರದ ಭೂಷಣಗಳು

ಉಪಾದೇಯಂಗಳ್ – ಸ್ವೀಕಾರ ಯೋಗ್ಯಗಳಾಗಿವೆ

ಎಂದಿತ್ತೆ – ಎಂಬುದಾಗಿ ಕೊಟ್ಟಿರುವೆ

ಟಿಪ್ಪಣಿ : ಜೈನ ಕಾವ್ಯಗಳು, ಹಳಗನ್ನಡ, ನಡುಗನ್ನಡ ಷಟ್ಪದಿ – ಸಾಂಗತ್ಯಗಳು, ಅಷ್ಟೇಕೆ ಆಧುನಿಕ ಮಹಾಕಾವ್ಯಗಳೆಲ್ಲವೂ ಶ್ರೀಕಾರದಿಂದ ಪ್ರಾರಂಭವಾಗುವುವು. ಇದು ಕನ್ನಡ ಕಾವ್ಯದ ಪರಂಪರೆಯ ಲಕ್ಷಣ. ಅಂತೆಯೇ ಈ ಶತಕಗಳು ಶ್ರೀಕಾರದಿಂದ ಶ್ರೀರಾಗಂ ಎಂಬ ನುಡಿಗಳಿಂದ ಮಂಗಳಸೂಚಕವಾಗಿ ಪ್ರಾರಂಭವಾಗಿದೆ.

ಟಿಪ್ಪಣಿ : ರತ್ನಾಕರಾಧೀಶ್ವರಾ ಈ ಅಂಕಿತಕ್ಕೆ ಮೂರು ಅರ್ಥಗಳಿವೆ. ೧. ಸಮುದ್ರಾಧಿಪತಿ, ೨. ರತ್ನತ್ರಯಗಳಿಗೆ ಗಣಿ, ೩. ರತ್ನಾಕರ ಕವಿಯ ಒಡೆಯನಾದ ಜಿನ.

ರ–೨ **ಒಲ್ದು ಭೇದಿಪುದು** – ಆಸಕ್ತಿಯಿಂದ ಅಭ್ಯಸಿಸಿ ಅರಿಯುವುದು
ಕಿಡದಂತುಟು – ನಾಶವಾಗದಂತೆ – ಓದಿ–ಕಾಪಾಡಿ **ಸುರತ್ನತ್ವಂ** – ಈ ಮೂರು ರತ್ನಗಳು **ಮುಕ್ತಿಗೆ** – ಮೋಕ್ಷಕ್ಕೆ ಸಾಧನಗಳಾಗಿವೆ.
ಅರುಪಿದೈ – ಬೋಧಿಸಿರುವೆ.

ರ–೩ **ಷಡ್ದ್ರವ್ಯ** (೬) ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ, ಕಾಲ – ಈ ಆರು ದ್ರವ್ಯಗಳು.

ರ–೩ **ಅಸ್ತಿಕಾಯ** (೫) ಪುದ್ಗಲಾಸ್ತಿಕಾಯ, ಧರ್ಮಾಸ್ತಿಕಾಯ, ಅಧರ್ಮಾಸ್ತಿಕಾಯ, ಅಧರ್ಮಾಸ್ತಿಕಾಯ, ಆಕಾಶಾಸ್ತಿಕಾಯ ಎಂದು ಐದು ಬಗೆ.

ರ–೩ **ಏಳು ತತ್ತ್ವ** (೭) ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರಾ, ಮೋಕ್ಷ – ಏಳು ತತ್ತ್ವಗಳು.

ರ–೩ **ನವಪದಾರ್ಥ** (೯) ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರಾ, ಮೋಕ್ಷ, ಪಾಪ, ಪುಣ್ಯ.

ರ–೨ **ಸಮ್ಯಕ್ ದರ್ಶನ** : ದೇವ, ಗುರು, ಶಾಸ್ತ್ರಗಳಲ್ಲಿ ಶ್ರದ್ಧಾಭಕ್ತಿಗಳನ್ನಿಡುವುದೇ ಸಮ್ಯಕ್‌ದರ್ಶನ.

ರ–೨ **ಸಮ್ಯಕ್ ಚಾರಿತ್ರ** : ದರ್ಶನ, ಜ್ಞಾನಗಳಿಂದ ಕೂಡಿ ಸಕಲ ಜೀವಿಗಳಲೂ ಸಮಾನತೆಯಿಂದ ವರ್ತಿಸುತ್ತಾ ಸದ್ಗುಣಶೀಲಗಳಿಂದ ಬಾಳುವುದೇ ಸಮ್ಯಕ್ ಚಾರಿತ್ರ.

ಈ ಮೂರನ್ನೂ ಮುಕ್ತಿಸೋಪಾನಗಳೆಂದೂ ರತ್ನತ್ರಯಗಳೆಂದೂ ಕರೆಯುತ್ತಾರೆ.

ರ–೪ **ಅರಲೊಳ್** = ಪುಷ್ಪದಲ್ಲಿ; **ಸೌರಭ್ಯಂ** – ಕಂಪು; **ನರುನೆಯ್** = ಘಂ ಎನ್ನುವ ತುಪ್ಪ; ಕಾಷ್ಟದೊಳ್ – ಕಟ್ಟಿಗೆಯಲ್ಲಿ; ಅರುಪಿದೈ – ತಿಳಿಸಿದೆ.

ರ–೫ **ಪೊಗರ್**–ಕಾಂತಿ, ಹೊಳಪು; **ಕೆಚ್ಚು**–ಗಟ್ಟಿತನ; ಸೊಲ್ಲು–ವಚನ.

ರ–೬ **ಒತ್ತಂಬಂ** = ಬಲವಾಗಿ, ಗಟ್ಟಿಯಾಗಿ; **ಅರಿದೇ?** – ಅಸಾಧ್ಯವೇ?

ರ–೭ **ಅಂಗುಷ್ಠಂ** – ಕಾಲಿನ ಹೆಬ್ಬೆರಳನ್ನು ಮೊದಲ್ಗೊಂಡು; **ನೆತ್ತಿವರೆಗಂ** – ತಲೆಯವರೆಗೆ ಎಂದರೆ ಆಪಾದಮಸ್ತಕ; **ಉತ್ತುಂಗ** – ಶ್ರೇಷ್ಠ; **ಮಾಂಗಲ್ಯಂ** – ಶುಭಸ್ವರೂಪನು, ಮಂಗಳರೂಪಿ; **ಸ್ವಯಂಭು** – ತನ್ನ ಸ್ವರೂಪವನ್ನು ಹೊಂದಿದವನು.

ರ–೮ **ಕಂದದ** – ಬಾಡಿಹೋಗದ; **ನಾಂದದ** – ನೆನೆಯದ; **ಉಗ್ರಾಸಿ** (ಉಗ್ರ+ಅಸಿ) – ಹರಿತವಾದ ಕತ್ತಿ, ತೀಕ್ಷ್ಣವಾದ ಖಡ್ಗ; **ರುಜೆಗಳಿಂ** – ರೋಗಗಳಿಂದ; ಕೇಡಾಗುವ – ನಾಶವಾಗುವ.

೪–೯ **ಲಯಪ್ರಕರನಂ** – ನಾಶಪರಂಪರೆ ಹೊಂದಿದವನು; **ನಿಶ್ಚೇಷ್ಟನಂ** – ವ್ಯಾಪಾರರಹಿತನು; **ಪಡಿಮಾತೇಂ**? – ಹೆಚ್ಚಿಗೆ ಹೇಳುವುದೇನಿದೆ?; **ಮಾರ್ದಂಗಿಕಂಬೋಲ್** – ಮದ್ದಲೆ ಬಾರಿಸುವವನಂತೆ; **ಜೋಹಟಿಗಂಬೊಲ್** – ವೇಷಧಾರಿಯಂತೆ.

೪–೧೦ **ಪಂದೊವಲ** – ಹಸಿಯ ಚರ್ಮದ; **ಕೂರ್ಪಾಸಂಗಳಂ** – ಕವಚಗಳನ್ನು; **ಪೇಸಿ** – ಜುಗುಪ್ಸೆಗೊಂಡು, ಹೇವರಿಸಿ; **ಪೊಳ್ದಿರ್ಪಂ** – ಭೇದಿಸಲ್ಪಟ್ಟಿರುವನು; **ಚದುರ** – ಕುಶಲಿ.

೪–೧೧ **ಬೂರಂ** – ಬೂರಗದ ಮರದ ಹತ್ತಿ; **ವಾರಿಯೊಳ್** – ನೀರಿನಲ್ಲಿ; **ಅಳ್ದಿ** – ನೆನೆಯಲ್ಪಟ್ಟು; **ಊರ್ಧ್ವಗಮನಂ** ಕೆಟ್ಟು – ಮೇಲೆ ಹಾರುವ, ದಿಕ್ಕು ತಪ್ಪಿ; **ಉರ್ವಿಯೊಳ್** – ಭೂಮಿಯಲ್ಲಿ; **ಭಾರೈಸಲ್** – ಹೇರಿಕೊಳ್ಳಲು; ಆನ್ ಆರ್?– ನಾನು ಯಾರು? ಈ ಸಂಸ್ಕೃತಿ ಯಾರ್? – ಈ ಸಂಸಾರ ಯಾವುದು?

೪–೧೨ **ತನು** – ಶರೀರ; **ಪಾತ್ರೆ** – ದೀಪಸ್ತಂಭ; **ಇಂದ್ರಿಯದ ಮೊತ್ತಂ** – ಶಬ್ದ, ಸ್ಪರ್ಶ, ರೂಪ, ರಸ, ಗಂಧ (ಕಿವಿ, ಚರ್ಮ, ಕಣ್ಣು, ನಾಲಗೆ, ಮೂಗುಗಳೆಂಬ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳ ಸಮೂಹ)

೪–೧೩ **ಘನದೊಡ್ಡಂಬವೊಲ್** (ಘನದ+ಒಡ್ಡು+ಎಂಬ+ವೊಲ್) – ಮೋಡದ ರಾಶಿ ಎಂಬಂತಿರುವ; **ಮೈಯೊಳ್** – ಶರೀರದಲ್ಲಿ; **ಏಕಿರ್ದಪೈ** – ತಿಳಿದೂ ತಿಳಿದೂ ಏಕೆ ಸುಮ್ಮನೆ ಇರುವೆ.

೪–೧೪ **ಕೊಂಬವಂ** – ಪಡೆಯುವವನು; **ನಿತ್ಯತ್ವವಾದ+ಇಂಬಂ** – ಶಾಶ್ವತನಾದ ಮುಕ್ತಿಸ್ಥಾನದ ಆಶ್ರಯವನ್ನು; **ಚದುರನ್** – ಜಾಣನು.

೪–೧೫ **ಪುಲುವೀಡು** – ಹುಲ್ಲುಮನೆ (ಗುಡಿಸಲು); **ಪರದನ್** – ವ್ಯಾಪಾರಿ (ವರ್ತಕ); **ಅವಂಗೋ** – ಸ್ವರ್ಗವೇರಿದ ಜೀವಾತ್ಮನಿಗೋ?

೪–೧೬ **ಅಕ್ಷರಧ್ಯಾನಂಗೆಯ್ದಳಿದಂಗೆ** – ನಾಮಸ್ಮರಣೆಯಲ್ಲಿ ದೇಹತ್ಯಜಿಸಿದವನಿಗೆ; **ಇಷ್ಟಾದಿಗಳ್** – ಬಂಧುಮಿತ್ರರು. **ಅದೇಂ** – ಏತಕ್ಕೆ; **ದುಃಖಿಪರ್** – ಶೋಕಿಸುತ್ತಾರೆ; **ಅಕ್ಷರಧ್ಯಾನ** – ನಾಮಸ್ಮರಣೆ, ನಾಮಧ್ಯಾನ.

೪–೧೭ **ಪೆರತೇ** – ಬೇರೆಯೇನು?; **ಮೈಯ್ ತಾಳ್ದಿದರ್ಗೆ** – ಶರೀರಧಾರಣೆ ಮಾಡಿದವರಿಗೆ (ನರಜನ್ಮ ಪಡೆದವರಿಗೆ).

೪–೧೮ **ನಿಚ್ಚಲುಂ** – ಸದಾ, ನಿತ್ಯ.

ಪಂಚಕಲ್ಯಾಣಂ – ಗರ್ಭಾವತರಣ, ಜನ್ಮಾಭಿಷೇಕ, ಪರಿನಿಷ್ಕ್ರಮಣ, ಕೇವಲಜ್ಞಾನ, ಪರಿನಿರ್ವಾಣ ಕಲ್ಯಾಣಗಳು.

ಪಂಚಗುರುಸ್ತವಂ – ಅರಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ, ಸರ್ವಸಾಧು ಇವರ ಸ್ತೋತ್ರವನ್ನು ಪಂಚಪರಮೇಷ್ಠಿಗಳ ಸ್ತೋತ್ರವೆಂದು ಕರೆಯುತ್ತಾರೆ.

ಪರಮಶಾಸ್ತ್ರಂ – ಶ್ರೇಷ್ಠವಾದ ಶಾಸ್ತ್ರವು

ಮೋಕ್ಷಸಂಧಾನದ ಚಿತ್ತ್ರಾಣಂ – ಮೋಕ್ಷವನ್ನುಂಟುಮಾಡುವ ಆತ್ಮಸ್ವರೂಪ ರಕ್ಷಣೆಯು.

ಚಿತ್ತನರತ್ನ ಮೂರು – ಆತ್ಮನ ಸಮ್ಯಕ್‌ದರ್ಶನ, ಜ್ಞಾನ, ಚಾರಿತ್ರಗಳೆಂಬ ರತ್ನ ತ್ರಯಗಳು.

ಅಲಂಪಿಂ – ಪ್ರೀತಿಯಿಂದ ಮೆತ್ತಿನ ಚಿಂತಕರು, ಉಳಿದ ವಿಷಯ ಚಿಂತಕರು.

ಮರುಳರ್ – ಹುಚ್ಚರು, ಬುದ್ಧಿಗೇಡಿಗಳು.

ರ–೧೯ **ಭ್ರಾಂತಾತ್ಮರು** (ಭ್ರಾಂತ+ಆತ್ಮರು) – ಭ್ರಮಾಧೀನರಾದವರು, ಮರುಳರು.

ಆ ಪಾಟಿಯೊಳ್ – ಅದೇ ರೀತಿಯಲ್ಲಿ

ಆರ್ಯವರ್ಯರಂ – ಆಚಾರ್ಯರನ್ನು;

ಸಾಧುಪಾವನರಂ – ಸರ್ವಸಾಧುಗಳನ್ನು

ಒದಗರೋ – ಸಿದ್ಧರಾಗುವುದಿಲ್ಲವಲ್ಲಾ.

ರ–೨೦ **(ಪಾಠಾಂತರ)** ೧ ಪಡೆದಿತ್ತಿಲ್ಲ ೨ ಪಡೆದಿತ್ತಿಲ್ಲವೆ ೩ ಪಡೆದತ್ತಿಲ್ಲವೆ –

ಅರ್ಥ : ಸಂವೃದ್ಧಿ – ಅಭಿವೃದ್ಧಿ, ಪ್ರಗತಿ, ಉನ್ನತಿ. **ಮಮಕಾರ**–ಮೋಹ; **ತತ್‌ಬೋಧಚಾರಿತ್ರ್ಯಮಂ**– ಅದರಿಂದ ಸಮ್ಯಕ್‌ಜ್ಞಾನ ಚಾರಿತ್ರಗಳನ್ನು.

ಟಿಪ್ಪಣಿ: ೧ ಜಿನರು ಅರ್ಹಂತರು ಸಿದ್ಧರು ಆಚಾರ್ಯರು ಉಪಾಧ್ಯಾಯರು ಸರ್ವಸಾಧುಗಳು ಇವರನ್ನು ಪಂಚಪರಮೇಷ್ಠಿಗಳೆಂದು ಕರೆಯುತ್ತಾರೆ.

ಟಿಪ್ಪಣಿ: ಅರಿಹಂತರು (ಜಿನ) ಯಾವಾಗ ಮುನಿಗೆ ತಪಶ್ಚರ್ಯದ ಪ್ರಭಾವದಿಂದ ಕೇವಲಜ್ಞಾನವಾಗುವುದೋ ಆಗ ಅವರಿಗೆ ಜಿನ (ಅರಿಹಂತ) ಎನ್ನುವರು. ಅವರು ಧರ್ಮೋಪದೇಶ ನೀಡುತ್ತಾರೆ. ಪಂಚನಮಸ್ಕಾರಗಳಲ್ಲಿ ಅವರಿಗೆ ಮೊದಲ ನಮಸ್ಕಾರಗಳು.

ಸಿದ್ಧರು – ಆಯುಷ್ಯಪೂರ್ವವಾದ ನಂತರ ಅರಿಹಂತರ ಶರೀರವು ಕರ್ಪುರದಂತೆ ಹಾರಿಹೋಗಿ ಅವರ ಆತ್ಮ (ಜೀವ)ವು ಲೋಕಾಕಾಶದ ಮೇಲೆ ಹೋಗಿ ಸ್ಥಿರವಾಗಿ ನಿಲ್ಲುವುದು. ಆಗ ಅವರಿಗೆ ಸಿದ್ಧರೆನ್ನುತ್ತಾರೆ.

ಆಚಾರ್ಯರು – ಯಾವ ಮುನಿಗಳು ಎರಡನೇ ಹಂತದ ಮುನಿಗಳನ್ನು ತಮ್ಮ ಸಂಪುಟದಲ್ಲಿ ತೆಗೆದುಕೊಳ್ಳುವರೋ ದೀಕ್ಷೆ ಕೊಡುವರೋ ಅಪರಾಧವಾದಲ್ಲಿ ಶಿಕ್ಷೆ ವಿಧಿಸುವರೋ ಅಥವಾ ಸಂಘದಿಂದ ತೆಗೆದುಹಾಕುವರೋ ಅಂಥವರನ್ನು ಆಚಾರ್ಯರೆನ್ನುತ್ತಾರೆ.

ಉಪಾಧ್ಯಾಯರು – ಯಾವ ಮುನಿಗಳು ತಾವು ಸ್ವತಃ ಕಲಿಯುತ್ತಾರೋ ಮತ್ತು ಎರಡನೇ ಹಂತದ ಮುನಿಗಳಿಗೆ ಕಲಿಸುತ್ತಾರೋ ಅವರಿಗೆ ಉಪಾಧ್ಯಾಯರೆನ್ನುತ್ತಾರೆ.

ರ–೧೯ **ಸಾಧುಗಳು** – ಉಚ್ಚಕುಲದಲ್ಲಿ ಹುಟ್ಟಿದವರು ಮುನಿಯಾಗಿ ರಾಗ ದ್ವೇಷ, ಮೋಹ ತ್ಯಜಿಸಿ ಅಡವಿಯಲ್ಲಿ ವಾಸಿಸುತ್ತಾರೆ. ಅಲ್ಲಿ ಧ್ಯಾನ ಮತ್ತು ಜ್ಞಾನದ ಅಭ್ಯಾಸ

ಮಾಡುತ್ತಿರುತ್ತಾರೆ. ದಿವಸದಲ್ಲಿ ಒಮ್ಮೆ ಆಹಾರ ಸ್ವೀಕರಿಸಲು ಊರಿಗೆ ಬರುತ್ತಾರೆ. ಹಣ, ಅರಿವೆ ಮೊದಲಾದ ಪರಿಗ್ರಹಗಳನ್ನು ಇಟ್ಟುಕೊಳ್ಳುವುದಿಲ್ಲ. ಅವರಿಗೆ ಸಾಧುಗಳೆನ್ನುತ್ತಾರೆ.

ರ–೨೧ **ನರಕ ತಿರ್ಯಕ್ ಮಾನುಷ ಮತ್ತು ದೇವತ್ವದೊಳ್** – ಚತುರ್ಗತಿಗಳು

ಟಿಪ್ಪಣಿ: ಜೀವದ ವಿಶೇಷ ಸ್ಥಿತಿಗೆ ಗತಿ ಎನ್ನುವರು. ಅವು ನಾಲ್ಕು ತೆರನಾಗಿವೆ. ೧. ನರಕ ಗತಿ ೨. ತಿರ್ಯಂಚಗತಿ ೩. ಮನುಷ್ಯಗತಿ ೪. ದೇವಗತಿ.

ನರಕ ಗತಿ : ನರಕದ ಜೀವದ ಸ್ಥಿತಿಗೆ ನರಕಗತಿ ಎನ್ನುವರು. ಅಲ್ಲಿ ವಾಸಿಸುವ ಜೀವಿಗಳಿಗೆ ನಾರಕಿಗಳು ಎನ್ನುವರು. ಪಾಪ ಮತ್ತು ಕ್ರೋಧ ಮಾಡುವುದರಿಂದ ನರಕ ಗತಿ ಉಂಟಾಗುತ್ತದೆ.

ತಿರ್ಯಕ್‌ಗತಿ : ಬಹಳಷ್ಟು ಕಪಟದಿಂದ ತಿರ್ಯಂಚಗತಿ ಬಂಧ ಉಂಟಾಗುತ್ತದೆ. ಏಕೇಂದ್ರಿಯ, ದ್ವಿಂದ್ರೀಯ, ಚತುರೀಂದ್ರಿಯ, ಅಸಂಜ್ಞಿ ಪಂಚೇಂದ್ರಿಯ, ಸಂಜ್ಞಿ ಪಂಚೇಂದ್ರಿಯ (ಪಶುಪಕ್ಷಿ) ಗತಿಗಳಿಗೆ ತಿರ್ಯಂಚ ಗತಿ ಎನ್ನುವರು.

ತಿರ : ಎಂದರೆ ಕುಟಿಲತೆಯನ್ನು ಪ್ರಾಪ್ತಿ ಹೊಂದಿದ ಜೀವಗಳು ತಿರ್ಯಂಚಗಳು ಮನ ವಚನ ಕಾಯದ ಕುಟಿಲತೆಯನ್ನು ಹೊಂದಿದ, ನಿಕೃಷ್ಟ ಜ್ಞಾನವನ್ನು ಹೊಂದಿದ ಪಾಪದ ಬಾಹುಳ್ಯವನ್ನುಳ್ಳ ಆಹಾರಾದಿ ಸಂಜ್ಞೆಗಳು ಸುವ್ಯಕ್ತವಾಗಿರುವ ಜೀವಗಳು ತಿರ್ಯಂಚಗಳು.

ಮರ್ತ್ಯಗತಿ (ಮನುಷ್ಯಗತಿ) : ಈ ಗತಿಯಲ್ಲಿ ತಿರ್ಯಂಚ ಗತಿಗಿಂತ ಕಡಿಮೆ ದುಃಖ ಪ್ರಮಾಣವಿದೆ. ಈ ಗತಿಯಿಂದಲೇ ಜೀವ ಮೋಕ್ಷಕ್ಕೆ ಹೋಗಲು ಶಕ್ಯವಿದೆ. ಮನುಷ್ಯ ಗತಿಯಲ್ಲಿ ಮರಣಿಸಿದವರು ೪ ಗತಿಗಳಲ್ಲೂ ಜನಿಸಬಹುದು. ನಾಲ್ಕು ಗತಿಗಳಲ್ಲಿ ಜೀವ ಮನುಷ್ಯ ಗತಿಯಲ್ಲಿ ಜನಿಸುವುದು.

ದೇವಗತಿ (ದೇವತ್ವ) : ದೇವತೆಗಳ ಸ್ಥಿತಿಗೆ ದೇವಗತಿ ಎನ್ನುವರು. ಈ ಗತಿಯಲ್ಲಿ ಜೀವನಿಗೆ ಕಲ್ಪವೃಕ್ಷದಿಂದ ಅನೇಕ ಪ್ರಕಾರದ ಭೋಗೋಪಭೋಗಗಳು ಪ್ರಾಪ್ತವಾಗುವವು. ಇಂದ್ರಿಯಸುಖದ ಹಿನ್ನೆಲೆಯಲ್ಲಿ ದೇವಗತಿಯೇ ಒಳ್ಳೆಯದೆನ್ನುವರು. ಸಮ್ಯಕ್ ದರ್ಶನ ಸಹಿತ ಆಯುಷ್ಯಬಂಧ ಆದರೆ ಅವನು ನಿಯಮದಿಂದ ದೇವಗತಿಯಲ್ಲೇ ಜನಿಸುವನು.

ರ–೨೧ **ಒರಗಿರ್ದ** – ಮಲಗಿದ್ದ; **ತರಿಸಂದು** – ಅಲೆದಾಡಿ; **ಬಯಲಬಾಳಂ** – ನಶಿಸುವ ಜೀವನವನ್ನು; **ನಚ್ಚಿ** – ನಂಬಿ.

ರ–೨೨ **ಸಮಂತು** – ಹಾಗೆಯೇ; **ಅತ್ತಳ್** – ಹಿಂದೆ; **ಅತ್ತತ್ತಲ್** – ಇನ್ನೂ ಹಿಂದೆ, ಅನಾದಿಕಾಲದಿಂದ.

ರ–೨೩ **ರೂಪು ಜೋಹಂಗಳಂ** – ಆಕಾರಗಳನ್ನೂ ವೇಷಗಳನ್ನೂ; **ಮೆಯ್ಮೆಚ್ಚಿದ** – ಶರೀರಕ್ಕೆ ಇಷ್ಟವಾದ; **ತಳುಮಾಳ್ಪರೆ** – ತಡಮಾಡುವರೆ?

ರ–೨೪ **ಚೀ** – ಛೀ, ಥೂ; **ನಾರುವ** – ದುರ್ಗಂಧದಿಂದ ಕೂಡಿದ; **ನಿರ್ಮಲ ಪ್ರಕೃತಿ** – ಪರಿಶುದ್ಧವಾದ ಸ್ವಭಾವ; **ದೇಹಜವ್ಯಾಧಿಯಿಂ** – ದೇಹದಲ್ಲಿ ಉಂಟಾಗುವ ರೋಗರುಜಿನಗಳಿಂದ; **ಪುಯ್ಯಲ್ಪೆತ್ತಿಹುದು** (ಪುಯ್ಯಲ್ + ಪೆತ್ತಿಹುದು) – ಗೋಳಾಡುವುದು; **ತಳು** – ತಡ.

ರ–೨೫ **ದಾರಿದ್ರ್ಯ** – ಬಡತನ; **ಕವಿದಂದು** – ಆವರಿಸಿದ ಕಾಲದಲ್ಲಿ; **ಪಾಯ್ದು** – ಮೇಲೆ ಬಿದ್ದು; **ಮಾಸಂಕೆಗೊಂಡಂದು** – ತಾನಂಜಿದಾಗಲೂ; **ದುರ್ವಾರ** – ನಿವಾರಿಸಲು ಅಸಾಧ್ಯವಾದ; **ವ್ಯಾಧಿ** – ರೋಗ; **ವೈರಿಲಯ** – ಶತ್ರುನಾಶ; **ಅಂಡಿಸುವುದು** – ಅವಿತುಕೊಳ್ಳುವುದು.

ರ–೨೬ **ಪಲುಂಬಲ್ಕೆ** – ಹಲುಬಿದರೆ, ನೆನೆದರೆ; **ಆರ್ಪರೊ** – ಶಕ್ತರಾಗುವರೇ?; **ಜಿಹ್ವೆ** – ನಾಲಗೆ; **ಎಮ್ಮಯ್ಯಾ** – ನನ್ನೊಡೆಯಾ.

ರ–೨೭ **ಇಚ್ಛೈಸನ್** – ಆಸೆ ಪಡುವುದಿಲ್ಲ; **ಮಾಯಾಮೋಹ** – ಮಾಯೆಯಿಂದುಂಟಾದ ಭ್ರಮೆ; **ಅಕಟಾ** – ಅಯ್ಯೋ; **ಒಗೆವಂ** – ಹುಟ್ಟುತ್ತಾನೆ.

ರ–೨೮ **ಎಂತು** + **ಅಗಲ್ವೆಂ** – ಹೇಗೆ ಬಿಟ್ಟು ಹೋಗಲಿ?; **ಆರುಂಟು** – ಇನ್ನಾರು ಗತಿ?; **ಪ್ರಾಯ** + **ತಾಳ್ದು** – ಯೌವನಕ್ಕೆ ಬಂದು; **ಮುನ್ನಿನಾ** – ಹಿಂದಿನ ಜನ್ಮದ.

ರ–೨೯ **ಮೂತ್ರಾಧ್ವದೊಳ್** (**ಮೂತ್ರ+ಅಧ್ವದೊಳ್**) – ಮೂತ್ರ ಮಾರ್ಗದಲ್ಲಿ; **ಬಾರಂ** – ಬರುವುದಿಲ್ಲ; **ಅಂಗನಾ** + **ಆನೀವ** – ಪತ್ನಿಯರ ಗುಂಪು; **ಉಣ್ಣನ್** – ತಿನ್ನುವುದಿಲ್ಲ?; **ದುರ್ಗಂಧದಿಂ** – ಮಲಮೂತ್ರದಿಂದ.

ರ–೩೦ **ಉರ್ವಿಯಂ** – ಭೂಮಿಯನ್ನು, **ಪಕ್ಷೀಕರಂಗೊಂಡು** – ಪರಿಗ್ರಹಿಸಿಕೊಂಡು; **ಲೋಗರವು** – ಸಾಮಾನ್ಯರದು; **ನಿಂದಿಪಂ** – ದೂಷಿಸುತ್ತಾನೆ; **ಭವ** – ಜನ್ಮ; **ನಿರವಿಸಾ** – ತಿಳಿಸು, ನಿರೂಪಿಸು.

ರ–೩೧ **ಉಳ್ಳುದನಾಡೆ** (ಉಳ್ಳುದನ್+ಆಡೆ) – ಇದ್ದುದ್ದನ್ನು ಇದ್ದ ಹಾಗೆ ಹೇಳಿದರೆ (ಕಂಡದ್ದು ಕಂಡ ಹಾಗೆ ಹೇಳಿದರೆ ಕೆಂಡದಂತಹ ಕೋಪ – ಗಾದೆ.); **ನಾಳ್ಮಾತು** – (ನಾಣ್ನುಡಿ, ಗಾದೆ); **ಬಹುಯೋನಿಯೊಳು** – ಅನೇಕ ಜನ್ಮಗಳಲ್ಲಿ ಗುಹ್ಯದ್ವಾರದಿಂದ; **ಮಲಶುಕ್ಲಂಗಳೊಳ್** – ಮಲ ವೀರ್ಯಗಳಲ್ಲಿ; **ಆಳ್ದು ಬಾಳ್ದು** – ಮುಳುಗಿ ವೃದ್ಧಿ ಹೊಂದಿ; **ಮನಮನ್ಯರ್ನೊಂದು** – ಮನಂ + ಅನ್ಯರ್ + ನೊಂದು + ದೂಷಿಸಿದಾಗ – ಬೈವಲ್ಲಿ.

ರ–೩೨ **ಬಾಹ್ಯಾಪೇಕ್ಷೆಯಿಂ** – ವ್ಯವಹಾರ ದೃಷ್ಟಿಯಿಂದ; **ಪಕ್ಷಂ** – ಪ್ರೀತಿಯು; **ಅಕುಲ** – ಕುಲವಿಲ್ಲದವನು; **ಮನಃಸಹ್ಯಂ** – ಮನಸ್ಸಿಗೆ ಸಹನೀಯವಾದುದು; **ನಿರ್ನಾಮಿ** – ಹೆಸರಿಲ್ಲದವನು; **ನಿರ್ಗುಹ್ಯೋದ್ಭೂತಂ** (ನಿರ್ + ಗುಹ್ಯ + ಉದ್ಭೂತನ್) – ಹೆಣ್ಣಿನಲ್ಲಿ ಜನಿಸಿದವನು; **ಅನಾದ್ಯಂ** – ಆದಿಯಿಲ್ಲದವನು; **ಗ್ರಾಹ್ಯಂ** – ತಿಳಿಯುವುದೇ

ಸರಿ; **ತತ್ಪರಿಭಾವವೇ** – ಹಾಗೆಂದು ತಿಳಿಯುವುದೇ; **ಭವಹರಂ** – ಸಂಸಾರನಾಶಕವಾದುದು.

ರ–೩೩ **ಪಕ್ಷಂಗೊಂಡೊಡೆ ಕೊಳ್ಗೆ** – ಪಡೆಯುವುದಾದರೆ ಪಡೆಯಲಿ; **ಉದ್ಭಕ್ಷ ದ್ವೇಷದೆ** – ಚೆನ್ನಾಗಿ ತಿನ್ನುವ ಉದ್ದೇಶದಿಂದ; **ಕುತ್ಸಿತದ ಶೀಲಂ** – ದುಷ್ಟ ಆಚರಣೆ; **ತಳ್ತು** – ಹೊಂದಿ.

ರ–೩೪ **ಆರ್ದ್ರಚರ್ಮದ ಒಡಲೊಳ್** – ಹಸಿತೊಗಲಿನ ಶರೀರದಲ್ಲಿ; **ತಳ್ತು** – ಧರಿಸಿ; ಏರಿ **ಮಾರ್ಗುಮೊ** – ಏನು ಮಾಡುತ್ತವೋ; **ಪಾಪ ಪುಣ್ಯಯುಗಳಂ** – ಪಾಪ ಪುಣ್ಯಂಗಳೆಂಬ ಕರ್ಮಗಳ ಜೋಡಿ.

ರ–೩೫ **ಅಸುವಂ** – ಜೀವವನ್ನು; **ಒಯ್ವುದು** – ಸೆಳೆಯುತ್ತದೆ; **ಅಧ್ರುವಂ** – ನಶ್ವರವಾದವು; **ಸಾವಿಂಗೊಡಲ್** (ಸಾವಿಂಗೆ + ಒಡಲ್) – ಜನನ ಮರಣಗಳಿಗೆ ಕಾರಣಗಳು.

ರ–೩೬ **ವಿಕೃತಗೊಂಡು** – ವಿಕಾರಗೊಂಡು; **ಮಾಂಜದೊ** – ಮರೆಯುವುದಿಲ್ಲವೊ; **ಪ್ರಕೃತಿ ಪ್ರಾಪ್ತಿಗೆ** – ಕರ್ಮಪ್ರಕೃತಿಯ ಪ್ರಾಪ್ತಿಗೆ.

ರ–೩೭ **ದುರಿತಂ** – ಪಾಪಕರ್ಮವು; **ತೀರ್ದೊಡೆ** – ತೋರಿದರೆ (ಮುಗಿದರೆ); **ಕರಂ** – ವಿಶೇಷವಾಗಿ; **ಎಡೆಯಾಟಂ** – ತಿರುಗಾಟವು, ಅಲೆದಾಟ; **ಅಕ್ಷಯವಲಾ** – ಅಕ್ಷಯಸುಖಕ್ಕೆ ಭಾಜನನಾಗುತ್ತಾನಲ್ಲವೆ?

ರ–೩೮ **ಬಗೆಯಲ್** – ವಿಚಾರ ಮಾಡಿದರೆ; **ಒರ್ಮೆ** – ಒಂದು ಬಾರಿಗೆ; **ಕತದಿಂ** – ಕಾರಣದಿಂದ; **ಅನುಬಂಧ** – ಸಂಬಂಧ; **ಮುಂಪುಣೆ** – ಮುಂದಾದರೆ.

ರ–೩೯ **ಸದಯಾಮೂಲಮತಕ್ಕೆ** – ಅಹಿಂಸಾ ಧರ್ಮ ಮತಕ್ಕೆ; **ಎಯ್ದುವಂ** – ಹೊಂದುವನು; **ತಳ್ತೊಡಂ** – ಸೇರಿಸಿದರೂ; **ತನ್ನಿರ್ಧನಂ** (ತತ್+ನಿರ್ಧನಂ) – ಆ ದರಿದ್ರನು.

ಟಿಪ್ಪಣಿ : ಸುಕೃತಾನುಬಂಧಿದುರಿತ – ಪೂರ್ವಜನ್ಮದಲ್ಲಿ ಮಾಡಿದ ಪಾಪವು ಬಡತನದಲ್ಲಿ ಸೇರಿದ್ದರೂ, ದಯಮೂಲಮತಕ್ಕೆ ಸೇರಿ ನಡೆಯುವವನು. ಮುಂದೆ ತಾನು ಪುಣ್ಯ ಸಂಪತ್ತು ಹೊಂದುತ್ತಾನೆ. ಇದೇ ಸುಕೃತಾನುಬಂಧಿದುರಿತವು. (ಪುಣ್ಯವನ್ನು ಉಂಟು ಮಾಡುವ ಪಾಪವಿದು).

ದುರಿತಾನುಬಂಧಿದುರಿತ – ದರಿದ್ರನು ತಾನು ಮಿಥ್ಯಾತ್ವದಲ್ಲಿ ಮುಚ್ಚಿಕೊಳ್ಳಲದು. ದುರಿತಾನುಬಂಧಿದುರಿತವು (ಪಾಪಾಚರಣೆಯಿಂದ ಮುಂದಕ್ಕೆ ಪಾಪಬಂಧವಾಗುವುದು ಎಂದರ್ಥವು).

ರ–೪೦ **ಧನಾಢ್ಯಂ** – ಶ್ರೀಮಂತನು; **ಮಿಥ್ಯಾಮತದಲ್ಲಿ** – ದುರಿತಾನುಬಂಧಿ ಸುಕೃತವು – ಪಾಪವನ್ನುಂಟು ಮಾಡುವ ಪುಣ್ಯವೆಂದರ್ಥ; **ಸುಕೃತಾನುಬಂಧಿಸುಕೃತಂ** – ಪುಣ್ಯಸಂಬಂಧವುಂಟುಮಾಡುವ ಪುಣ್ಯವೆಂದರ್ಥ.

ರ-೪೧ **ಅಘಪುಣ್ಯಂಗಳ್** – ದುಷ್ಕೃತ ಸುಕೃತಂಗಳ್, ಪಾಪ ಪುಣ್ಯಗಳು; **ಅಂಗಘಟಂ** – ಶರೀರವೆಂಬ ಗಡಿ; **ಪುಗಲ್** – ಪ್ರವೇಶಿಸಿದರೆ; **ಲಘುವಕ್ಕುಂ** – ಕಡಿಮೆಯಾಗುತ್ತದೆ; **ಕ್ರಮಂಪಿಡಿದು** – ಕ್ರಮವಾಗಿ; **ಘನಂಬೋಲ್‌ಬಯಲಾಗಿ** – ಮೋಡದಂತೆ ಮಾಯವಾಗಿ; **ಮುಕ್ತಿಸಡೆಗುಂ** – ಪಾಪ ಪುಣುಗಳೆರಡರಿಂದ ಕರ್ಮನಿರ್ಜರೆಯಾಗಿ ಮೋಕ್ಷ ಗಳಿಸುತ್ತಾನೆ.

ರ-೪೨ **ನಿರ್ಗ್ರಂಥರಥ** – ನಿಷ್ಪರಿಗ್ರಹವೆಂಬ ತೇರು. **ಪರಿಲಂಘಿಪಂ** – ದಾಟುತ್ತಾನೆ; **ಪಡಗಿಂ** – ಹಡಗಿನಿಂದ; **ಇರನಲೇ** – ಇರಲಾರನಲ್ಲವೇ?; **ಗಾರ್ಹಸ್ಥ್ಯನುಂ** – ಶ್ರೇಷ್ಠ ಶ್ರಾವಕನಾದ ಸಜ್ಜನ ಸಂಸಾರಿ.

ರ-೪೩ **ಸಂಘದ ಸೇವೆ** – ಮುನ್ನಿ ಆರ್ಜಿಕೆ ಶ್ರಾವಕ ಶ್ರಾವಿಕೆಯರೆಂಬ ಚತುರ್ವಿಧ ಸಂಘದ ಸೇವೆ ಶ್ರಾವಣ ಸಂಘ; **ಅರ್ಹದ್ಧರ್ಮ** – ಜಿನಧರ್ಮ; **ಪರ್ವ** – ಹಬ್ಬ; **ಒಲ್ದು** – ಸಂತೋಷದಿಂದ; **ನೋಂಪಿ** – ವ್ರತ; **ತೀರ್ಚುವ** – ಕಳೆಯುವ; **ಅನಘಂ** – ಪಾಪರಹಿತ, ಪುಣ್ಯವಂತ.

ರ-೪೪ **ಪುತ್ರೋತ್ಸವ** – ಮಗ ಹುಟ್ಟಿದ ಹಬ್ಬ; **ಅಕ್ಷರಾಭ್ಯಾಸ** – ವಿದ್ಯಾಭ್ಯಾಸ ಪ್ರಾರಂಭ; ಓನಾಮ ಕಲಿಕೆ; **ಪ್ರವೇಶದೆಡೆಯೊಳ್** – ವಧೂ ಆಗಮಿಸುವ, ಗೃಹಪ್ರವೇಶ ಮೊದಲಾದ ಬರಮಾಡಿಕೊಳ್ಳುವ, ಕಾಲಿಡುವ ಸಮಾರಂಭಗಳಲ್ಲಿ.

ರ-೪೫ **ಆಹಾರದಾನ** (ಹಸಿದವರಿಗೆ, ಮುನಿಗಳಿಗೆ, ರೋಗಿಗಳಿಗೆ ಆಹಾರ ನೀಡುವುದು); **ಅಭಯದಾನ** (ಆಪತ್ತಿನಲ್ಲಿದ್ದವರಿಗೆ ಅಭಯ ನೀಡುವುದು); **ವೈದ್ಯ** – ಭೈಷಜ್ಯ ದಾನ, ರೋಗಪೀಡಿತರಿಗೆ **ಔಷಧೋಪಚಾರ** ನೀಡುವುದು; **ಶಾಸ್ತ್ರದಾನ** – ಶಾಸ್ತ್ರಾಭ್ಯಾಸ ಮಾಡುವರಿಗೆ ಗ್ರಂಥದಾನ ಮಾಡುವುದು. **ಚಾತುರ್ದಾನ** – ಚತುರ್ವಿಧ ದಾನಗಳಿಂದ.

ಸೌಖ್ಯಸಂದೋಹಂ – ಸದ್ಗೃಹಸ್ಥನಿಗೆ ಶಾಂತಿಸುಖಗಳು ದೊರೆಯುತ್ತವೆ. **ಶ್ರೀಶಿಲೆ** – ಕಾಂತಿಯುಕ್ತ ಶಿಲೆ (ಅಮೃತಶಿಲೆ?); **ಲೇಪ್ಯ** – ಲೆಪ್ಪ; **ಕಾಂಸ್ಯ** – ಕಂಚು; **ರಜತ** – ಬೆಳ್ಳಿ; **ಅಷ್ಟಾಪಾದ** – ಬಂಗಾರ; **ರತ್ನ** – ನವರತ್ನ; **ದೇಹಾರ** – ದೇವಾಲಯವನ್ನು; **ಗೆಯಲ್** – ಮಾಡಿಸಿದರೆ; **ಅಂಗ ಸೌಂದರ ಬಲಂ** – ಶರೀರ ಸೌಂದರ್ಯ ಮತ್ತು ಶಕ್ತಿ ಹೆಚ್ಚುತ್ತದೆ; **ತತ್‌ಚೈತ್ಯೇ ಗೇಹಪ್ರತಿಷ್ಠಾಹರ್ಷಂ** – ಆ ದೇವಾಲಯದಲ್ಲಿ ಜಿನಬಿಂಬ ಸ್ಥಾಪಿಸಿ ಸಂತೋಷಗೊಂಡರೆ **ಮುಕ್ತಿ ಸಂದಿದವಲಾ** – ಮೋಕ್ಷಸಂಪತ್ತು ದೊರೆಯುತ್ತದೆ.

ರ-೪೬ **ನೋನೆ** – ವ್ರತಗಳನ್ನಾಚರಿಸಿದರೆ; **ಅಲಂಪಿಂ ಮಾಡೆ** – ಸಂತೋಷದಿಂದ ದಾನ ಮಾಡಿದರೆ; **ತೀರ್ದೊಡಂ** – ಮುಗಿದುಹೋದರೂ; **ಬಿಡುಗಣ್ಣು + ಐಸಿರಿಯಂ** – ಅಮರಲೋಕದ ಅಷ್ಟೈಶ್ವರ್ಯವನ್ನು.

ರ-೪೭ **ಏನಸುಂ** – ಬಹಳ (ಚೆನ್ನಾದ); **ಬಾಯಂಬಿಟ್ಟು** – ಇಷ್ಟಪಟ್ಟು; **ಕಾಂಕ್ಷಾಮಹಾರಾಣ್ಯಂ ಪೊಕ್ಕು** – ಆಸೆಯೆಂಬ ಅರಣ್ಯವನ್ನು ಹೊಕ್ಕು; **ಅಕ್ಕಟಾ** – ಅಯ್ಯೋ.

೭-೪೮ **ಆರ್‌ಕಳೆದರ್** – ಯಾರು ದೂರ ಮಾಡಿದರು?; **ಕಿಡಿಸಿದಂ** – ಕೆಡಿಸಿದನು; **ಎರಳ್ಸಮನಿಕುಂ** – ಎರಡೂ ಲಭಿಸುತ್ತವೆ; **ಧೀರತ್ವಮಂ** – ಧೈರ್ಯವನ್ನು; **ಕುದಿವುದೋ?** – ಸಂತಾಪಪಡುತ್ತದೆ ಏಕೆ?

೭-೪೯ **ಕುರುರಾಯಂ** – ದುರ್ಯೋಧನನು; **ಕುಡುವಂ** – ಕೊಡುತ್ತಿದ್ದನು; **ಡಿಂಬೊಳ್ಗಿನೊಳ್** – ಕೊನೆಗಾಲದಲ್ಲಿ; **ಉರ್ವರೆ** – ಕಡು; **ಧರಾಧೀಶರಾದರ್** – ಭೂಪತಿಗಳಾದರು; **ಪಾಪ ಶುಭೋದಯ ಕ್ರಿಯೆ** – ಪಾಪ ಪುಣ್ಯೋದಯ ಕಾರ್ಯ.

೭-೫೦ **ಮನೋರಾಗಂಗಳಿಂ** – ಮನಃ ಪ್ರೀತಿಯಿಂದ; ಉಪಭೋಗವೂ **ಭೋಗವು** – ಸುಖಸೌಭಾಗ್ಯಗಳು; **ಮೇಣ್** – ಮತ್ತು; **ದರಿದ್ರವು+ಅಡಸಲ್** – ಬಡತನ ಆವರಿಸಲು; **ಪದಾಂಭೋಜಯುಗಂ** – ಪಾದಕಮಲಗಳೆರಡು.

ಆಮ್ಲಮುಂ – ಹುಳಿಯೂ; **ತೊಗರುಂ** – ಒಗರೂ; **ಕೈಪೆಯುಂ** – ಕಹಿಯೂ; **ಹಿತಂ+ತೋರ್ಕುಂ+ಎನುತ್ತೆ** – ರುಚಿಯನ್ನು ತೋರಿಸುವುದೆಂದು; **ಒಲಿವವೊಲ್** – ಆಸೆಪಡುವಂತೆ; **ದುರಾಗ್ರಹಕಂ** – ಕೋಪಕ್ಕೆ; **ಪಳಿರೆಗಂ** – ನಿಂದೆಗೆ.

೭-೫೨ **ಘಟಿಕಾಪಾತ್ರನ್** – ಗಳಿಗೆ ಬಟ್ಟಲತ್ತ ನೋಡುತ್ತಿರುವವನು; **ಸ್ಫುಟದಿಂ** – ಸ್ಪಷ್ಟವಾಗಿ; **ಸಂಘಟಿಸಲ್** – ನಾಟುತ್ತಿರಲು.

೭-೫೩ **ಸೂತ್ರವು** – ಗಾಳಿಪಟದ ದಾರವು; **ಎನಸುಂ ಸಿಲ್ಕಿರ್ದೊಡಂ** – ಎಷ್ಟೇ ಬಿಗಿಯಾಗಿ ಹಿಡಿತದಲ್ಲಿದ್ದರೂ; **ವ್ಯೋಮದೊಳ್** – ಗಗನದಲ್ಲಿ; **ಸಮಂತು** – ಚೆನ್ನಾಗಿ, **ಅದರವೊಲ್** – ಆ ಗಾಳಿಪಟದಂತೆ; **ಜಂಜಡಂಪಡೆದು** – ದೇಹದಲ್ಲಿ ಬಂಧಿತವಾಗಿದ್ದರೂ; **ಪಳಂಚೆ** – ತಾಗಿ, ಮುಟ್ಟಿ.

೭-೫೪ **ಎರ್ದೆಗೆಟ್ಟಾಗಲ್** – ಭಯಪಟ್ಟಾಗ; **ನುಡಿದಪ್ಪಿದಾಗಳ್** – ಮಾತು ತಪ್ಪಿದಾಗ; **ಸುಖಾವ್ಯಾಪ್ತಿಯೊಳ್** – ಸುಖಪಟ್ಟಾಗ; **ತ್ರಾಹಿ** – ಕಾಪಾಡು; **ಅಭ್ಯಾಸಿಸುವನ್** – ಕಲಿಯುವವನೇ; **ಲಲಿತಾಂಗಿಯರ್** – ಸುಂದರಿಯರು; **ಸುಳಿದರ್** – ಕಾಣಿಸಿಕೊಂಡರೆ.

೭-೫೫ **ಮೊಗಂ ತೆಗದರ್** – ಮುಖಮಾಡುತ್ತಾರೋ; **ಜಿಹ್ವೆ** – ನಾಲಗೆ; **ಸರಿಮಿಂಡಿಯರ್** – ಋತುಮತಿಯರಾದ ಯುವತಿಯರು; **ಎಯ್ದುಗುಂ** – ಹೋಗುತ್ತದೆ, ಸಾಗುತ್ತದೆ; **ಏವೆನ್** – ಏನು ಮಾಡಲಿ?

೭-೫೬ **ಮುಗ್ಗುವನ್** – ಮುಗ್ಗರಿಸುತ್ತಾನೆ; **ಉಚ್ಛ್ವಾಸ ನಿಃಶ್ವಾಸ** – ಉಸಿರಾಟ; **ಪೂರದೆ** – ಪ್ರವಾಹದಲ್ಲಿ; **ಬಡಿಗೊಂಬನ್** – ಬಡಿದುಕೊಂಡು ಒದ್ದಾಡುತ್ತಾನೆ; **ಶಕ್ತಿಕ್ಷಯಂದೋರೆ** – ಶಕ್ತಿಕುಂದಲು; **ಆಳ್ಗೆವೊಯ್ವಂ** – ಆಯಾಸಗೊಳ್ಳುತ್ತಾನೆ (ಪಕ್ಕೆ ಹೊಯ್ಯುತ್ತಾನೆ); **ಮರುಳುವವಲಾ** – ಹುಚ್ಚುತನವಲ್ಲವೇ?

೭-೫೭ **ತಿಳಿವಿಲ್ಲಾಗಿ** – ತಿಳಿವಳಿಕೆಯಿಲ್ಲದೆ; **ಶಿಶುತ್ವದೊಳ್** – ಕೂಸಾಗಿದ್ದಾಗ; **ಎರ್ದೆಯೊಳ್** – ಹೃದಯದಲ್ಲಿ; **ಮೆಯ್ದೋರೆಯುಂ** – ಕಾಣಿಸಿಕೊಂಡರೂ; **ಮೂತ್ರಬಿಲದೊಳ್**

– ಮೂತ್ರದ್ವಾರದಲ್ಲಿ **ಶುಕ್ಲಮಂ** – ವೀರ್ಯವನ್ನು; **ತುಳುಕಲ್** – ಚೆಲ್ಲಲು; **ಮೋಹಿಪನ್** – ತವಕಿಸುತ್ತಾನೆ; **ಭ್ರಮಿತನು** – ಮರಳಾದವನು.

ರ–೫೮ **ಸುಖವೆಂಬರ್** – ರತಿಸುಖವನ್ನು ಸುಖವೆನ್ನುವರು; **ಕಾಣ್ಕೆ** – ದರ್ಶನವು; **ಸಮ್ಮುಖವಾದಂದು** – ಪ್ರಾಪ್ತವಾದಾಗ; **ಸೌಖ್ಯವು** – ನಿಜಸುಖವು; **ಹೇಯದ ಉನ್ಮುಖವು** – ತುಚ್ಛವಾದ ಸೊಕ್ಕು; **ತೋರೆಯುಂ** – ತೋರಿದರೂ; **ಜಡಂ** – ಆಲಸ್ಯವು; **ದುರ್ಮುಖರ್** – ಅಜ್ಞಾನಿಗಳು.

ರ–೫೯ **ಏನೊಂದುಗ್ರಮೊ ನೋಡ** – ಎಷ್ಟು ಭಯಂಕರವಾದುದು ಈ ಸಂಗತಿ ತಿಳಿ; **ನೋಟ ಅರಿವೇ** – ದರ್ಶನ ಜ್ಞಾನಗಳೇ; **ಮೈಯಾದ** – ಶರೀರವಾದ; **ಮೀನಾಕ್ಷೀತನು** – ಸುಂದರಿಯಿತಮ; **ತಳ್ಕಿಸಲೊಡು** – ಆಲಿಂಗಿಸಿದೊಡನೆ; **ಮತ್ತದಕ್ಕೆ** – ಆ ಶರೀರಕ್ಕೆ; **ಆನಂದಂಮಿಗೆ** – ಸಂತೋಷಾತಿರೇಕಕ್ಕೆ.

ರ–೬೦ **ಮದವೆದ್ದ ಆನೆಗೆ** – ಉನ್ಮತ್ತಗಜಕ್ಕೆ; **ಇನಿದೇ?** – ಹಿತವೇ?; **ಮೆಯ್ತೀಂಟೆಗಂ** – ಮೆಯ್ ಕಡಿತಕ್ಕೆ; **ಬದಿಯಂ** – ಕೆಸರನ್ನು; **ತೋಡುವುದು** – ಹಳ್ಳತೋಡಿ ಅದರಲ್ಲಿ ಕೂರುವುದು ಅಥವಾ ಕೆಸರನ್ನು ಬಳಿಯುವುದು; **ಒಳ್ಳಿತಲ್ತು** – ಒಳ್ಳೆಯದಲ್ಲ; **ನಾರೀರತಂ** – ಸ್ತ್ರೀ ಸುಖ; **ಉನ್ಮದದ ಉದ್ರೇಕ** – ಸೊಕ್ಕಿನ ಆವೇಶ.

ರ–೬೧ **ತನುವೇಳ್ಕುಂ** – ಶರೀರ (ಜೀವ) ಉಳಿಯಬೇಕೆನ್ನುವವನು; **ಎಳಸನೇ?** – ಆಶಿಸುವುದಿಲ್ಲವೇ?; **ಪಿತ್ತೋರ್ಜಿತಂ** – ಪಿತ್ತ ಕೆರಳಿದಾಗ; **ದೇಹಶೋಧನೆಯಂ** – (ಪಿತ್ತಶಮನಕ್ಕೆ ವಾಂತಿ ಮಾಡಿಕೊಳ್ಳುವುದು ಇತ್ಯಾದಿಗಳಿಂದ) ದೇಹ ಶುದ್ಧಿಯನ್ನು; **ಮಾಳ್ಪುವಂತೆ** – ಮಾಡಿಕೊಳ್ಳುವ ಹಾಗೆ; **ಅಂಗನಾಸುರತದಿಂ** – ಸ್ತ್ರೀ ಸಂಭೋಗದಿಂದ; **ತನ್ನಿಂದ್ರಿಯಂ** – ವೀರ್ಯವು; **ತತ್‌ತನುಬೇಡ** – ಇಂಥ ಮಲಿನ ನಶ್ವರ ಶರೀರ ಬೇಡವೆಂಬುವನಿಗೆ ರತಿಸುಖ ಉಚಿತವಲ್ಲ.

ರ–೬೨ **ವಿಷಮೋದ್ರೇಕ** – ವಿಪರೀತ ಯೌವನಾವೇಶ; **ವಿಷಯಕ್ಕಾಟಿಸನ್** – ಸ್ತ್ರೀ ಸುಖಕ್ಕೆ ಎಂದೂ ಆಶಿಸದವನು; **ಮಾನುಷ್ಯನಲ್ತು + ಅಲ್ತು** – ಅವನು ಸಾಧಾರಣ ಮನುಷ್ಯನಂತೂ ಅಲ್ಲವೇ ಅಲ್ಲ (ಅಸಾಮಾನ್ಯ ವ್ಯಕ್ತಿ); **ನಿರ್ವಿಷರೂಪಂ** – ವಿಷಯಾಸಕ್ತಿಯಿಂದ ದೂರವಾದವನು; **ನಿರಘಂ** – ಪಾಪರಹಿತನು; **ನಿರಾವರಣವ್ಯೆ** – ಕರ್ಮಗಳು ೮ ಬಗೆ. ಇವುಗಳಲ್ಲಿ ಮೊದಲ ೪ ಕರ್ಮಗಳನ್ನು **ಘಾತಿಕರ್ಮ ಚತುಷ್ಟಯ** ಎಂದು ಕರೆಯುತ್ತಾರೆ. ೧. ಜ್ಞಾನಾವರಣಿ ಕರ್ಮ ೨. ದರ್ಶನಾವರಣ ಕರ್ಮ ೩. ವೇದವೀಯ ಕರ್ಮ ೪. ಮೋಹನೀಯ ಕರ್ಮ.

ಆಘಾತಿಕರ್ಮಗಳು – ೫ ಆಯುಕರ್ಮ, ೬ ನಾಮಕರ್ಮ, ೭ ಗೋತ್ರಕರ್ಮ, ೮ ಅಂತರಾಯ ಕರ್ಮ ಈ ಎಂಟು ಕರ್ಮಗಳಿಂದ ಮುಕ್ತನಾದವನೇ **ನಿರಾವರಣನು**.

ರ–೬೩ **ಅರಿವಂಗೆ** – ವಿಚಾರವಂತನಿಗೆ; **ಮರ್ದುಂ** – ಔಷಧವು; **ಮಾನಿನಿಯುಂ** – ಸ್ತ್ರೀಯು; **ಅಂತಲ್ಲದೆ** – ಹಾಗಲ್ಲದಿದ್ದರೆ; **ಪರ್ವ** – ತಿಥಿ ಕಾಲದಲ್ಲಿ – ಪರ್ವ

ತಿಥಿಗಳಲ್ಲಿ ತಪಸ್ಸನ್ನಾಚರಿಸಿದರು; **ಇರ್ದತ್ತ ಕಾಲದಲ್ಲಿ ಐದುವರ್** – ಸ್ತ್ರೀಯರನ್ನು ಮತ್ತೆ ಸೇರುತ್ತಾರೆ; **ಎಯ್ದಿಯುಂ** – ಹೋಗಿ ಸೇರಿದರೂ, **ಭ್ರಮಿತರೋ** – ಮೋಹಿತರಾದರೇ? ಆಗಲಿಲ್ಲ. (ತಾವರೆ ಎಲೆ ಮೇಲಿನ ನೀರಿನ ಹನಿ ಅಂಟಿಯೂ ಅಂಟದಂತೆ ಇದ್ದಹಾಗೆ ಸಂಸಾರದಲ್ಲಿ ನಿರ್ಲಿಪ್ತರಾಗಿದ್ದರು.)

ಟಿಪ್ಪಣಿ: ಜಿನದತ್ತ, ಕಪಿಲಮಿತ್ರ, ವಾರಿಷೇಣರ ಪರಿಚಯ

ಟಿಪ್ಪಣಿ ೧: ಜಿನದತ್ತ ಉಪಗೂಹನಾಂಗವನ್ನು ಸಾಧಿಸಿದ ಸಮ್ಯಕ್ತ್ವ ಶಿರೋಮಣಿಯಾಗಿದ್ದಾನೆ. ಒಬ್ಬ ಆಷಾಢಭೂತಿ, ಬ್ರಹ್ಮಚಾರಿಯಂತೆ ನಟಿಸಿ ಈ ಜಿನದತ್ತ ಶ್ರೇಷ್ಠಿಯ ನಂಬಿಕೆಗೆ ಪಾತ್ರನಾಗಿ, ಅವನ ಮನೆಯಲ್ಲೇ ಇದ್ದು, ಕೊನೆಗೆ ಆತನ ಮನೆಯಲ್ಲಿದ್ದ ಅಪೂರ್ವ ರತ್ನಬಿಂಬವನ್ನು ಅಪಹರಿಸಿ ಸಿಕ್ಕಿಹಾಕಿಕೊಳ್ಳುವನು. ಆಗ ಜಿನದತ್ತ ಆ ಬ್ರಹ್ಮಚಾರಿಯನ್ನು ಕ್ಷಮಿಸಿ ಆತನಿಗೆ ಸಮ್ಯಕ್ತ್ವವನ್ನು ಬೋಧಿಸಿ ದಾರಿಗೆ ಹಚ್ಚುವನು. – ರತ್ನಾಕರಶತಕತ್ರಯ – ಜಿ.ಬ್ರಹ್ಮಪ್ಪ (ಪುಟ ೪೩)

ಟಿಪ್ಪಣಿ ೨: ಕಪಿಲಮಿತ್ರ: ಕಪಿಲಮಿತ್ರ ಎಂಬುವನು ವಿದ್ಯೆ ಕಲಿಯಲು ಇಂದ್ರದತ್ತನೆಂಬ ಗುರುವನ್ನು ಆಶ್ರಯಿಸಿ ಅಭ್ಯಾಸ ಮಾಡಹತ್ತಿದ್ದನು. ಆಗ ಕನ್ಯೆಯೊಬ್ಬಳ ಕೃಪಾಕಟಾಕ್ಷ ಅನಿರೀಕ್ಷಿತವಾಗಿ ಇವನ ಮೇಲೆ ಬಿದ್ದು, ಅವಳಿಗಾಗಿ ಹಣ ಬೇಡಲು ನಾಡಿನ ದೊರೆಯ ಬಳಿಗೆ ಬೆಳಗಿನ ಜಾವದಲ್ಲಿ ಹೊರಟಿದ್ದನು. ಆ ವೇಳೆಯಲ್ಲಿ ಬರುತ್ತಿದ್ದ ಇವನನ್ನು ಸಂಶಯದಿಂದ ಬಂಧಿಸಿ ರಾಜನ ಬಳಿಗೆ ಕರೆತಂದರು. ರಾಜನು ಏನು ಬೇಕಾದರೂ ಕೇಳು ಎಂದಾಗ ಏನು ಕೇಳಬೇಕೆಂದು ವಿಚಾರ ಮಾಡುತ್ತಾ ಮಾಡುತ್ತಾ ಐಹಿಕ ಸಿರಿಗಳೆಲ್ಲ ನಶ್ವರವೆನಿಸಿ ರಾಜಾನುಗ್ರಹವನ್ನು ನಿರಾಕರಿಸಿ ಕರ್ಮಕ್ಷಯದತ್ತ ಗಮನವಿತ್ತು ವಿರಾಗಿಯಾದನು. ರತ್ನಾಕರಶತಕತ್ರಯ – ಜಿ.ಬ್ರಹ್ಮಪ್ಪ (ಪುಟ ೪೪).

೨–೬೪ **ರಾಗವ್ರತಿಕರ್** – ಸಂತೋಷಪಡುವ ವ್ರತವುಳ್ಳವರು; **ತೀರ್ಚುವರ್** – ಪೂರೈಸಿಕೊಳ್ಳುವರು; **ವಾರಸ್ತ್ರೀ** – ವೇಶ್ಯಾಂಗನೆ; **ಬಹುಲಾಂಗನಾ** – ಅನೇಕ ಪತ್ನಿಯರು; **ಚೇಟೀ** – ಸೇವಕಳು; **ಆಟಿಸರ್** – ಆಶಿಸುವುದಿಲ್ಲ; **ಅಘರೇ**? – ಪಾಪವುಳ್ಳವರೇ?; **ಸಾರಾತ್ಮರ್** – ಪವಿತ್ರಾತ್ಮರು.

೨–೬೫ **ಸತ್ಯಾಧಿಷ್ಠಿತ ಧರ್ಮಮಂ** – ಸತ್ಯದ ಆಧಾರದ ಮೇಲೆ ನಿಂತ ಧರ್ಮವನ್ನು; **ಅಪ್ರತ್ಯಾಖ್ಯಾನ ಕಷಾಯ ಸಂಭವದೆ** – ಅಪ್ರತ್ಯಾಖ್ಯಾನ ಕ್ರೋಧ ಮಾನ ಮಾಯಾ ಲೋಭಗಳೆಂಬ ಕಷಾಯಗಳ ಉದಯದಿಂದ.

ಟಿಪ್ಪಣಿ : ಕಷಾಯ – ಆತ್ಮನ ಹೊರತಾಗಿ ಭಿನ್ನ ಪದಾರ್ಥದ ಮೇಲೆ ರಾಗ ದ್ವೇಷ ಮಾಡುವುದೇ ಕಷಾಯ. ಕರ್ಮ ಕ್ಷೇತ್ರವನ್ನು ಸೆಳೆಯುವುದು ಕಷಾಯ. **ಕಷಾಯ ೪ ವಿಧ:** ೧. ಕ್ರೋಧ ಕಷಾಯ – ಸಿಟ್ಟು ಬರುವುದು; ೨. ಮಾನ ಕಷಾಯ – ಗರ್ವ, ವಾದ, ಅಹಂಕಾರಗಳು ಉತ್ಪನ್ನವಾಗುವುದು; ೩. ಮಾಯಾ ಕಷಾಯ

– ಕಪಟ, ಮೋಸ, ವಂಚನೆ ಮಾಡುವುದು; ೪. ಲೋಭ ಕಷಾಯ – ಆತ್ಮನ ಹೊರತಾಗಿ ಭಿನ್ನ ಪದಾರ್ಥದ ಮೇಲೆ ಅತ್ಯಂತ ಅಭಿಲಾಷೆ ಇಡುವುದು. ಲೋಭ ಕಷಾಯದಿಂದ ಪಾಪ ಬಂಧ ಆಗುತ್ತದೆ.

ಅಪ್ರತ್ಯಾಖ್ಯಾನ – ಸಂಯಮ ಎಂದರೆ ಪ್ರತ್ಯಾಖ್ಯಾನ. ಯಾವುದು ಪ್ರತ್ಯಾಖ್ಯಾನ ರೂಪವಲ್ಲವೋ ಅದು ಅಪ್ರತ್ಯಾಖ್ಯಾನ.

ರ–೬೬ **ಬೆಡಂಗೆಸೆಯೆ** – ಆಕರ್ಷಕವಾಗಿ ಕಾಣಲು; **ಪಲ್ಯಂಕಾಸನಂ** – ಪದ್ಮಾಸನ. ಧ್ಯಾನಕ್ಕೆ ತಕ್ಕುದಾದ ಆಸನ. ಬಲ ಪಾದವನ್ನು ಎಡತೊಡೆಯ ಮೇಲೂ, ಎಡಪಾದವನ್ನು ಬಲತೊಡೆಯ ಮೇಲೂ ಇಟ್ಟುಕೊಂಡು ಕುಳಿತುಕೊಳ್ಳುವ ಆಸನ; **ಸ್ಫಾಟಿಕೋಜ್ಜ್ವಲನ್** – ಸ್ಫಟಿಕರತ್ನದಂತೆ ಪ್ರಕಾಶಿಸುವನು.

ರ–೬೭ **ಒಜ್ಜರಮೈಯ್ಯಂ** – ಮೂತ್ರದ ಪ್ರವಾಹದಿಂದ ಕೂಡಿದ ಮೈ; **ಹೇಮಾಬ್ಜಂ** – ಬಂಗಾರದ ಕಮಲ; **ಸುಧಾರುಚಿ** – ಅಮೃತದರುಚಿ; **ಅನ್ಯರನ್ ಒಯ್ದೆನ್** – ಬೇರೆಯವರನ್ನು ತಪ್ಪು ದಾರಿಗೆ ಸೆಳೆದೆ.

ರ–೬೮ **ಆತ್ಮಬಾಹ್ಯರಂ** – ಆತ್ಮಸ್ವರೂಪವನ್ನು ತಿಳಿಯದವರು; **ಅಂಧಂಗೆ** – ಕುರುಡನಿಗೆ; **ತಮಿಸ್ರೆಯುಂ** – ಕತ್ತಲನ್ನು, ರಾತ್ರಿಯನ್ನು; **ಸಮ್ಯಕ್ತ್ವ** – ಜೀವ ದಯಾಪರವಾದ ದೇವ ಧರ್ಮ ಶಾಸ್ತ್ರ ಇವುಗಳನ್ನು ನಂಬುವ ಸದ್ಭಾವವು ಸಮ್ಯಕ್ತ್ವವಾಗಿದೆ.

ರ–೬೯ **ಕಲ್ಪವಲ್ಲಿ** – ಕಲ್ಪಲತೆ; **ಮೇರುವಿನೊಳ್** – ಮೇರುಪರ್ವತದಲ್ಲಿ; **ಉಣ್ಬರ್** – ಅನುಭವಿಸುವರು; **ಮಿಥ್ಯಾತ್ವ** – ಜೀವಾದಿ ಪದಾರ್ಥಗಳಲ್ಲಿ ಶ್ರದ್ಧೆಯಿಲ್ಲದಿರುವುದು; **ಮಾರವ** – ಮರುಭೂಮಿ.

ರ–೭೦ **ಲಂಪಟ ಭ್ರಮಣದ** – ವಿಷಯಾಸಕ್ತತೆಯ ಭ್ರಾಂತಿಯ; **ಬಂಡಾಟ** – ನಾಚಿಕೆಬಿಟ್ಟು ವರ್ತಿಸುವುದು; **ಕೊಳ್‌ಕೆಸರುಮಡು** – ನಾರುವ ಕೆಸರಿನ ಗುಂಡಿ; **ಪಾಲ್ಗಡಲ್** – ಕ್ಷೀರಸಾಗರ.

ರ–೭೧ **ವೇಣು** – ಕೊಳಲು; **ಮುರಜ** – ಮದ್ದಲೆ; **ಸಂಸಿದ್ಧಿ** – ಪ್ರಾಪ್ತಿ; ಸಿದ್ಧಿ – ಪಾಂಡಿತ್ಯ; **ಅಕ್ಕೆ** – ಉಂಟಾಗಲಿ; **ಕಲ್ಯಾಣಾರಾಧನೆ** – ಪಂಚಕಲ್ಯಾಣಗಳ ಸೇವೆ.

ಪಂಚಕಲ್ಯಾಣಗಳು : ೧. ಗರ್ಭಾವತರಣ ಕಲ್ಯಾಣ ೨. ಜನ್ಮಾಭಿಷೇಕ ಕಲ್ಯಾಣ ೩. ದೀಕ್ಷಾ ಕಲ್ಯಾಣ ೪. ಕೇವಲಜ್ಞಾನೋತ್ಪತ್ತಿ ಕಲ್ಯಾಣ ೫. ಪರಿನಿರ್ವಾಣ ಕಲ್ಯಾಣ.

ರ–೭೨ **ಹಮ್ಮಂ** – ಅಹಂಕಾರದ ಮಾತನ್ನು; **ತಳ್ತುದನ್** – ಸೇರಿರುವುದನ್ನು; **ಉಸಿರ್ಗುಂ** – ಹೇಳುವುದು; **ಯದ್ವಾತದ್ವಾ** – ಬಾಯಿಗೆ ಬಂದಂತೆ; **ಬಹುಭಾಷೆಯಿಂ** – ಹರಟೆ ಮಾತುಗಳಿಂದ.

೮–೭೩ **ದೃಷ್ಟದಿಂ** – ಪ್ರತ್ಯಕ್ಷ ಪ್ರಮಾಣದಿಂದ; **ಶ್ರುತದಿಂ** – ತರ್ಕಪ್ರಮಾಣದಿಂದಲೂ; **ಊಹಾ+ಅನುಮಾನಂಗಳಿಂ** – ಊಹೆ ಅನುಮಾನಗಳಿಂದಲೂ; **ಆಸ್ಥಾನ ಪಾಲರ್** – ರಾಜಸಭೆ ಒಡೆಯರು, ರಾಜರು; **ಕುವಾದಿ** – ದುಷ್ಟವಾದಿ;

೮–೭೪ **ಸೈರಣೆ** – ಸಹನಶೀಲತೆ; **ನಿಗರ್ವಂ** – ವಿನಯಶೀಲತೆ; **ನೀತಿ** – ಸಚ್ಚಾರಿತ್ರ್ಯ; **ಮೆಲ್ವಾತು** – ಮೃದುನುಡಿ; **ಮುಕ್ತಿಸ್ತ್ರೀಚಿಂತನೆ** – ಮೋಕ್ಷ ಚಿಂತನೆ; **ನಿಜಾತ್ಮಚಿಂತೆ** – ಸ್ವಾತ್ಮಚಿಂತನೆ; **ದುರ್ಮುಖಂಕಲಹಂ** – ಕ್ರೋಧಾದಿಗಳಿಂದ ಕೂಡಿದ ಮುಖವು; **ಮನಂಗೊಂಡೊಡೆ** – ಮನದಲ್ಲಿ ನೆಲೆ ನಿಂತರೆ; **ಶಸ್ತ್ರ**– ಆಯುಧ; **ಶಾಸ್ತ್ರಿ** – ವಿದ್ವಾಂಸ; **ಶಸ್ತ್ರಿಕ** – ಶಸ್ತ್ರಧಾರಿ.

೮–೭೫ **ತಳ್ಳಿಕವು** – ಆತಂಕಕಾರಿ; **ಧಾತ್ರೀ** – ರಾಜ್ಯ; **ಸಾಲ್ದಪ್ಪುದೇ** – ಸಾಕಾದೀತೇ?; **ದುರ್ಧ್ಯಾನಾಪೇಕ್ಷೆ** – ದುರಾಲೋಚನೆ, ದುರಾಸೆ; **ಪೆರ್ಚುಗುಂ** – ಹೆಚ್ಚುತ್ತದೆ; **ಬಗೆಯಲ್** – ವಿಚಾರ ಮಾಡಿದರೆ; **ಒಳ್ಳವೇ?** – ಶಕ್ಯವೇ?; **ಸಾಟಿ** – ಸರಿಸಮನಾದ.

೮–೭೬ **ಬಲ್ಲಿದನಾದೊಡೆ** – ಬಲಿಷ್ಠನಾದರೆ; **ಪಡೆಯಿನೇಂ** – ಆ ಸೇನಾಬಲದಿಂದ; **ಪಾಪಾರಿಯಂ** – ಪಾಪವೆಂಬ ಶತ್ರುವನ್ನು; **ಕಡುಪಿಂದಂ** – ಪರಾಕ್ರಮದಿಂದ; **ಜವನಂ** – ಯಮನನ್ನು; **ತೆರಳ್ಚುವನೇ?** – ಅಟ್ಟುವನೇ?; **ಬಲ್ಪಿಂ** – ಶಕ್ತಿಯಿಂದ; **ಕೊಂಬನೇ** – ಪಡೆಯಬಲ್ಲನೇ?; **ನಾಲ್ಗಳಿಗೆ** – ನಾಲ್ಕು ಘಳಿಗೆ (ಸ್ವಲ್ಪ ಹೊತ್ತಷ್ಟೆ); **ಬಿಡು** – ಆದ ಕಾರಣ ಆ ವಿಚಾರ ತೊರೆ.

೮–೭೭ **ಬಡಜಾಗಂ** – ಕಿಂಚಿತ್‌ದಾನ ಮಾಡುತ್ತಾನೆ; **ಅಡ್ಡಮೋರೆ** – ಮುಖ ತಿರುಗಿಸುವನು, ಅಲಕ್ಷ್ಯವನ್ನು ವ್ಯಕ್ತಪಡಿಸುತ್ತಾನೆ; **ಕಾವನೊಳ್ ಕಲಹವೇ?** – ರಕ್ಷಕನಲ್ಲಿ ಜಗಳವೇ?;

೮–೭೮ **ಅಣುಮಾತ್ರಮಿರ್ದ** – ಅತ್ಯಲ್ಪಕಾಲ ಮಾತ್ರ ಮಾಡಿದ; **ಜೀವಕೆ** – ಜೀವಾತ್ಮನಿಗೆ; **ಸಂಸಾರಾಂಭೋಧಿ** – ಸಂಸಾರ ಸಾಗರ; **ದಾಂಟಲು** – ಪಾರಾಗಲು; **ಅರಿವನೇ** – ಶಕ್ಯನಾಗುವನೇ? (ಇಲ್ಲ).

೮–೭೯ **ಪ್ರಣುತಕ್ಷ್ಮಾಪತಿ** – ಸ್ತುತ್ಯನಾದ ಭೂಪತಿಯಾದೆನು; **ದೇವಪದಮಂ** – ಸ್ವರ್ಗಪದವಿಯನ್ನು; **ಕೈವಲ್ಯಮಂ** – ಮೋಕ್ಷವನ್ನೂ; **ಉಜ್ಜುಗಿಪಾತನೇ** – ಪ್ರಯತ್ನಿಸುವವನೇ.

೮–೮೦ **ಉರ್ವೀಶ್ವರಂ** – ಭೂನಾಥ, ದೊರೆ; **ಭೃತ್ಯಂ** – ಸೇವಕನು; **ಕೆಯ್ಮುಗಿತಂ** – ಕೈಗಳನ್ನು ಮುಗಿಯುವಿಕೆ; **ಅಷ್ಟಾಂಗಾನತಂ** – ಸಾಷ್ಟಾಂಗ ನಮಸ್ಕಾರ (೮ ಅಂಗಗಳಿಂದ ಬಾಗುವಿಕೆ); **ಸಮ್ಮುಖ ಸ್ತೌತ್ಯಂ** – ಸನ್ನಿಧಾನದಲ್ಲಿ ಕೊಂಡಾಡುವುದು; **ನೆಗಳುತಂ** – ಮಾಡುತ್ತ; **ತತ್** – ಆತನ; **ಪ್ರತ್ಯರ್ಥಿಕ್ಷಿತಿ ಪಾಲರ್** – ಶತ್ರುರಾಜರು ಶರಣಾಗರೇ?

೮–೮೧ **ಸುರಪಂ** – ದೇವೇಂದ್ರನು; **ತನ್ನ+ಇಭವಿತ್ತು** – ತನ್ನಾನೆ ಐರಾವತವನ್ನೇ ಕೊಟ್ಟು; **ಮಾವತಿಗ** – ಮಾವಟಿಗ; **ಕಾಂತೆಯಿಂ** – ಶಚಿದೇವಿಯಿಂದ; **ಸಹವಾಗಿ** –

ಸಮೇತನಾಗಿ; **ಅಭಿಷವಕ್ಕೆ** – ಅಭಿಷೇಕಕ್ಕೆ; **ಒಲ್ದು** – ಪ್ರೀತಿಸಿ (ಒಲಿದು); **ಊಳಿಗಂಮಾಳ್ಪಂ** – ಸೇವೆಯನ್ನು, (ಕೈಂಕರ್ಯವನ್ನು) ಮಾಡುತ್ತಾನೆ; **ಛತ್ರಮನೆತ್ತುವಂ** – ಬೆಳ್ಗೊಡೆಯನ್ನು ಹಿಡಿಯುತ್ತಾನೆ; **ನಟಿಸುವಂ** – ಸ್ವತಃ ಇಂದ್ರನೇ ನರ್ತಿಸುತ್ತಾನೆ; **ತಾಳ್ವನ್** – ಹೊರುತ್ತಾನೆ; **ನರಕೀಟಾದಿಗಳು** – ಕ್ಷುಲ್ಲಕ ಮಾನವರು (ನರಕೀಟಗಳು);

ಜಿನ ಜನಿಸಿದಾಗ ಜನ್ಮಾಭಿಷೇಕ ಕಲ್ಯಾಣವನ್ನು ದೇವೇಂದ್ರನೆ ಹೇಗೆ ನಡೆಸುತ್ತಾನೆ ಎಂಬುದರ ಚಿತ್ರಣ ಈ ಪದ್ಯದಲ್ಲಿದೆ.

೭–೮೨ **ದೊರೆ ಏನಂಪಿಡಿದಿರ್ಪಂ** – ರಾಜ ಏನನ್ನು ವೆಚ್ಚುತ್ತಾನೋ ಅದನ್ನೇ; **ಲೋಕಂ** – ಜನ; **ಮೆಚ್ಚುಗಂ** – ಅನುಸರಿಸುತ್ತಾರೆ. **ತತ್‌ಧರಾವರಂ** – ಆ ರಾಜನು; **ದುರ್ಮತದತ್ತ** – ದುಷ್ಟಮತಕ್ಕೆ; **ಎಳಸಿದಂದು** – ಅಪೇಕ್ಷೆಪಟ್ಟಾಗ, ಆಕರ್ಷಿತನಾದಂದು; **ಸಾರ್ದರಂ** – ತನ್ನ ಅನುಯಾಯಿಗಳನ್ನು ತನ್ನನ್ನೂ; **ನರಕಕ್ಕಿಕ್ಕಿದಂ** – ನರಕಕ್ಕೆ ಎಲ್ಲರನ್ನೂ ಮತ್ತು ತಾನೂ ಹೋಗುತ್ತಾನೆ. ಆದರೆ ಜಿನ ಮತವನ್ನು; **ಒಲಿದವನು** – ತಾನೂ ತನ್ನ ಪ್ರಜೆಗಳನ್ನು ಉದ್ಧರಿಸುತ್ತಾನೆ.

೭–೮೩ **ಭವ್ಯರನೊಲ್ದು** – ಭವ್ಯರನ್ನು ಪ್ರೀತಿಸಿ; **ಮನ್ನಿಸಿ** – ಉಪಚರಿಸಿ; **ಈವುತ** – ದಾನ ಮಾಡುತ್ತಾ; **ಒವುತ್ತಂ ಇರ್ಪ** – ಕಾಪಾಡುತ್ತಿರುವ ರಾಜನು; **ಬರ್ದಿಲಕ್ಕೆ** – ಸ್ವರ್ಗಕ್ಕೆ; **ನಾಳಿನವನ್ನೈ** (ನಾಳೆ) – ಮುಂದಕ್ಕೆ ಸ್ವರ್ಗಾಧಿಪತಿಯಾಗುತ್ತಾನೆ.

ಟಿಪ್ಪಣಿ : ಭವ್ಯ – ಬಿಡುಗಡೆ ದೊರೆಯದಷ್ಟು ಕರ್ಮದ ಹೊರೆ ಹೊತ್ತ ಜೀವವೇ ಅಭವ್ಯಜೀವ. ಇಂಥ ಅಭವ್ಯಜೀವ ಪುಣ್ಯ ಬಲದಿಂದ ಉತ್ತಮ ಜನ್ಮ ಪಡೆಯಬಲ್ಲುದು. ಆದರೆ ಸಮ್ಯಕ್ತ್ವ ಪಡೆದು ಮುಕ್ತಿಗೆ ನಡೆಯಲಾರದು. ಕರ್ಮದಲ್ಲಿ ಇಷ್ಟು ಆಳವಾಗಿ ಮುಳುಗಿ ಹೋಗದೆ ಮುಂದೆ ಸಿದ್ಧಿ ಹೊಂದುವ ಸಾಮರ್ಥ್ಯವನ್ನು ಉಳಿಸಿಕೊಂಡಿರುವ ಜೀವವೇ **ಭವ್ಯಜೀವ.** (**ಆದಿಪುರಾಣಂ**)

೭–೮೪ **ಐಸಿರಿ** – ಸಂಪತ್ತು; **ಪೆರ್ಚುಗುಂ** – ಹೆಚ್ಚುತ್ತದೋ; **ಸದ್ಧರ್ಮಕೆ+ಉತ್ಕೃಷ್ಟಂ** – ಧರ್ಮಾಭಿವೃದ್ಧಿಯನ್ನು; **ನೋಂಪಿ** – ವ್ರತ; **ನಿರ್ಗ್ರಂಥರಂ** – ಪರಿಗ್ರಹರಹಿತರಾದ ಮುನಿಗಳನ್ನು; **ನಿಚ್ಚಂ** – ನಿತ್ಯವೂ, ಸದಾಕಾಲವೂ; **ಸಂತುಷ್ಟಂ ಮಾಡಲೆವೇಳ್ಕುಂ** – ಸಂತೋಷಚಿತ್ತರನ್ನಾಗಿ ಮಾಡಬೇಕು; **ಧಾರ್ಮಿಕ ಜನರಿಗೆ** – ಧರ್ಮಾತ್ಮರಿಗೆ; ಇಂಥ ಕಾರ್ಯಗಳನ್ನು **ಸುಕೃತಾನುಬಂಧಿ ಸುಕೃತ** ಎನ್ನುವರು.

೭–೮೫ **ಮಾಣ್ದೊಡೆ** – ಕೈಬಿಟ್ಟರೆ, ತೊರೆದರೆ; **ಬೆಚ್ಚುತಿರಲ್** – ಅಂಜಿದರೆ, ಭಯಪಟ್ಟರೆ; **ವಿವರ್ಜಿತಮಾಗಲ್** – ಬಿಡಲ್ಪಡುತ್ತಿರಲು; **ಚ್ಯುತಮಾಗಲ್** – ಲೋಪಗೊಂಡರೆ; **ಜಾರ್ವುದು** – ಕೈಬಿಟ್ಟು ಹೋಗುವುದು; **ಅರಿದೇ?** – ಅಸಾಧ್ಯವೇ?; **ಸಡಿಲದೆ** – ನಶಿಸದೇ?

೭–೮೬ **ಉಗ್ರಂ** – ಭೀತಿ; **ಶೋಕ** – ದುಃಖ; **ಗವ್ಯ** – ಗೋವು; **ವಾಃ** – ಕುದುರೆ; **ಉನ್ಮಾರಿ** – ಕ್ರೂರ ರೋಗಗಳು; **ದುಃಸ್ವಪ್ನ** – ಕೆಟ್ಟ ಕನಸು; **ಶಾಂಡಿಕ** – ಶಾಂತಿ ಕಾರ್ಯಗಳು.

೮-೮೭ **ದೀಕ್ಷಾಗ್ರಾಹಿ** – ದೀಕ್ಷಾಧಾರಿ, ಮುನಿ; **ದಯಾಶ್ರುತಮಂ** – ಜಿನಾಗಮವನ್ನೂ; **ಅಂದಣ** – ಅಂಬಾರಿ; **ಅಕ್ಷೋಣ ಉತ್ಸವದಿಂ** – ಅಪಾರ ಉತ್ಸಾಹದಿಂದ; **ಅಕ್ಷೂಣ** – ಪರಿಪೂರ್ಣ; **ನಿರ್ವಾಣಲಕ್ಷ್ಮಿ** – ಮೋಕ್ಷಲಕ್ಷ್ಮಿ.

೮-೮೮ **ಎಳಸರ್** – ಗಮನಕೊಡರು; **ಜಡಿವರ್** – ಬೆದರಿಸುತ್ತಾರೆ, ಅಪ್ಪಳಿಸುತ್ತಾರೆ. **ಹೊರಮಿಂಚಿಂ** – ಮೇಲಿನ ಥಳುಕಿಗೆ; **ಸೋಲ್ವತೆರದಿಂ** – ಮರುಳಾಗುವ ರೀತಿ; **ಆಮ್ಲಮಂ** – ಹುಣಿಸೆ ಹುಳಿಯನ್ನು.

೮-೮೯ **ಏಕ್ ಒಲ್ವರ್**? – ಯಾಕೆ ಮೆಚ್ಚುತ್ತಾರೆ?;

ಟಿಪ್ಪಣಿ: ನೇಮಿಚಂದ್ರ – ನೇಮಿನಾಥಪುರಾಣ ಕಾವ್ಯ ಕರ್ತೃ. ರನ್ನ – ಅಜಿತನಾಥ ಪುರಾಣ ಕಾವ್ಯದ ಕರ್ತೃ, ಕುಮುದೇಂದು – ಜಿನರಾಮಾಯಣದ ಕವಿ, ಜಿನಸೇನಾಚಾರ್ಯ – ಮಹಾಪುರಾಣದ ಮಹಾಕವಿ. ಇವರುಗಳ ಕಾವ್ಯಗಳಿಂದ ಶೃಂಗಾರವೂ ಮೋಕ್ಷವೂ ಸಿಗುತ್ತದೆ.

ಅಗ್ಗಳ – ಶ್ರೇಷ್ಠರಾದ, ಒಬ್ಬ ಕವಿ.

೮-೯೦ **ಚೇತೋರಂಗದೊಳಿಟ್ಟು** – ಮನಸ್ಸೆಂಬ ರಂಗವೇದಿಕೆಯಲ್ಲಿಟ್ಟು; **ಓಲಗ** – ಸಭೆ; **ರಾಗದೊಳ್** – ಉದಯರಾಗದಲ್ಲಿ; **ಪದದೊಳಂ** – ಸ್ತೋತ್ರಗಳಲ್ಲಿ; **ಪದ್ಯಂಗಳೊಳ್** – ಕೀರ್ತನೆಗಳು; **ನಿಮ್ಮ ಪಾಡಿಸುತ್ತ** – ತೀರ್ಥಂಕರರ ಗುಣಗಾನ ಇತರರಿಂದ ಮಾಡಿಸುತ್ತಾ; **ಪಾಡುತ್ತಾ ಅಳ್ತಿಯಿಂ** – ಭಕ್ತಿಯಿಂದ ತಾನು ಪಾಡುತ್ತಾ; **ಪಾಪಲೋಪಕ** – ಪಾಪ ನಾಶಕವಾಗುತ್ತಾನೆ.

೮-೯೧ **ಎಯ್ದೆ** – ಆಗಮಿಸಲು; **ಪರಿದೆ ಎಯ್ದುತ್ತಂ** – ಹರಿದು ಬರುತ್ತಿರಲು; **ಪರೆಯುತಂ** – ವ್ಯಾಪಿಸುತ್ತಿರಲು; **ಬೆಂಕೊಂಡಿರಲ್** – ಹಿಂಬಾಲಿಸುತ್ತಿರಲು, ಜತೆಗೇ ಬರುತ್ತಿರಲು; ಭರತನು ಮೋಕ್ಷವನ್ನು ಪಡೆದನು. ಇದನ್ನು ಇತರ ರಾಜರು ಗಮನಿಸದೆ ಮೋಕ್ಷ ಪಡೆಯಲಿಲ್ಲ.

೮-೯೨ **ಜಿಹ್ವಾರುಚಿಗಳುಂಟು** – ನಾಲಗೆಗೆ ಸವಿಯೆನಿಸುವ ಭಕ್ಷ್ಯ ಭೋಜ್ಯಗಳುಂಟು; **ಅಳ್ದಿ** – ಮುಳುಗಿದ್ದರೂ; **ಅಳ್ದದವೊಲ್** – ಮುಳಗದೆ ಹೊರಗಿದ್ದು; **ಊರ್ಧ್ವಕ್ಕೆ** – ಮೇಲ್ಭಾಗದಲ್ಲಿ ಇರುವಂತೆ; **ಕಣ್ಣಿಟ್ಟೊಡೆ** – ಅಂತರ್‌ದೃಷ್ಟಿ ಹೊಂದಿದ್ದರೆ; **ರಾಜಋಷಿ** – ಋಷಿಯಂತಿರುವ ರಾಜ.

೮-೯೩ **ಗರ್ಭದಿಂ ಬಂದಿತ್ತೆ**? – ಹುಟ್ಟಿದಾಗಲೇ ಜತೆಗೆ ಬಂದಿತ್ತೇ?; **ತಳ್ತೆ** – ಪಡೆದ; **ಮುನ್ನ ಕಂಡಿರ್ದ** – ಪೂರ್ವಜನ್ಮದಲ್ಲಿ ಗಳಿಸಿದ; **ಸೈಪಂದಂ** – ಪುಣ್ಯದಿಂದ.

೮-೯೪ **ಬರುವನ್ನಂ** – ಕೋಶ ತುಂಬುವವರೆಗೂ; **ಇರ್ಪನೆ** – ಜೀವಿಸಿರುವನೆ; **ಸಾಕೆನಲ್** – ಸಾಕಾಯಿತು ಇನ್ನು ಬೇಡ ಎನ್ನುವಷ್ಟು ಸಂತೃಪ್ತಿ ಅನುಭವಿಸುವನೇ?; **ಅಂತ್ಯದೊಳ್** – ಸಾಯುವಾಗ; **ಕೊಂಡೊಯ್ದಪ್ಪನೆ** – ಜತೆಗೆ ತೆಗೆದುಕೊಂಡು

ಹೋಗುವನೆ?; **ನಾಸ್ತಿ** – ಇಲ್ಲ; **ಐಸು** – ಅಷ್ಟೂ; **ತನತ್ತು** – ತನ್ನದು; **ಬರಿದೈ** – ಉಳಿದಿದ್ದು ವ್ಯರ್ಥ.

ರ–೯೫ **ಆಭರಣಂಗಳಂ ತೊಡೆ** – ಚಿನ್ನಾಭರಣಗಳನ್ನು ಧರಿಸಿದರೂ; **ತೊವಲ್ ಪೊನ್ನಾದುದೇ?** – ಮೈಚರ್ಮ ಚಿನ್ನದ ಬಣ್ಣವಾದೀತೇ?

ರ–೯೬ **ಭರತಂಬೊಲ್** – ಭರತ ಚಕ್ರವರ್ತಿಯಂತೆ; **ಸಗರಂಬೊಲ್** – ಸಗರ ಚಕ್ರವರ್ತಿಯಂತೆ; **ಒದ್ದಾಯನಂ ಅಂತೆ** – ಒದ್ದಾಯನ ಮಹಾರಾಜನಂತೆ; **ದಶರಥಂಬೊಲ್** – ದಶರಥ ಮಹಾರಾಜನಂತೆ; **ವಿರತಿಕ್ಷಾಂತಿಗೊಳ್** – ವೈರಾಗ್ಯ ಮತ್ತು ಸಹನೆಯಲ್ಲಿ; **ಸಂದೊಪ್ಪೆ** – ಆಸಕ್ತನಾಗಿ ವಿರಾಜಿಸಿರಲು; **ದುಷ್ಕಾರ** – ದುಃಖದಾಯಕ; **ಸುಖಕರಂ** – ಸುಖಕಾರಣ.

ರ–೯೭ **ಉದ್ಧೂಪದಿಂ** – ಶ್ರೇಷ್ಠವಾದ ಧೂಪದಿಂದ; **ತೇಯದ** – ತೀಡದ; **ನಾಂದಕ್ಕಿ** – ನೆನೆಸಿದ **ಅಕ್ಕಿ** – ಅಕ್ಷತೆ.

ರ–೯೮ **ಸಮಂತು** – ಹಾಗೆಯೇ; **ಸದ್ವಸ್ತುವಿಂ** – ಶ್ರೇಷ್ಠಪದಾರ್ಥದಿಂದ; **ಸಾವದ್ಯಂ** – ದೋಷವನ್ನು; **ಕಳೆಯಲ್ಕೆ** – ದೂರ ಮಾಡಲು; **ತೀರದೊಡಂ+ಏವಂ** – ಆಗದಿದ್ದರೂ ಏನಂತೆ.

ರ–೯೯ **ನಿಷ್ಕಾಂಕ್ಷಕಂ** – ಯಾವ ಅಪೇಕ್ಷೆಯೂ ಇಲ್ಲದವನು; **ರುಚಿಯೋ** – ಹಿತವೋ? ಇಷ್ಟವೋ; **ಇದರಂದಮಂ** – ಈ ನಿನ್ನ ರೀತಿಯನ್ನು ತಿಳಿದೆನು. ಅದೇನೆಂದರೆ,

ರ–೧೦೦ **ಪೂಜಾತಂತ್ರದ ವಸ್ತುವಂ ನೆನೆಯುತು** – ಪೂಜೆ ಮಾಡುವ ಕ್ರಮದಿಂದ ಪೂಜಾ ವಸ್ತುಗಳನ್ನು ನೆನೆಯುತ್ತಾ; **ಭ್ರಾಜಧ್ವಾನ** – ಸ್ಫುಟವಾದ ಧ್ವನಿಯನ್ನು; **ಆಲಿಸುತ್ತಾ** – ಕೇಳುತ್ತಾ; **ಬಹಿರಂಗಾಲೋಚನಂ** – ಹೊರಗಿನ ಆಲೋಚನೆಗಳು; **ಮೋಚನಂ** – ದೂರವಾಗುವುವು; **ಪೂಜಾರ್ಥಂ** – ಪೂಜೆಯ ಪ್ರಯೋಜನವು; **ಪುರುಷಾರ್ಥಂ** – ಚತುರ್ವಿಧ (ಧರ್ಮಾರ್ಥ ಕಾಮಮೋಕ್ಷ) ಪ್ರಯೋಜನವೆನಿಸುತ್ತದೆ.

ರ–೧೦೧ **ಉಪಹಾರಂ** – ಕೈಗಾಣಿಕೆ(ಉಡುಗೊರೆ) (ನೈವೇದ್ಯ); **ಸ್ತವನಂ** – ಸ್ತೋತ್ರವು; **ಉಪಚಾರಂಗಳ್** – ಸೇವೆಗಳು; **ರುಚಿ** – ಆಸಕ್ತಿ; **ಅಲ್ಲತ್ತು** – ಇಲ್ಲಿಲ್ಲ; **ಇವು+ಐಸೆ** = ಇವೈಸೆ – ಇವುಗಳೇ ಅಲ್ಲವೇ?

ರ–೧೦೨ **ಆರೋಪಿಸಲ್** – ಭಕ್ತಿಯಿಂದ ನೆನೆದರೆ; **ವ್ಯಂತರರ್** – ವ್ಯಂತರ ದೇವತೆಗಳು; **ಸುರರ್** – ಕಲ್ಪವಾಸಿ ದೇವತೆಗಳು; **ನಾಗರ್** – ನಾಗ ದೇವತೆಗಳು; **ತಿಥಿವರರ್** – ತಿಥಿದೇವತೆಗಳು; **ನಕ್ಷತ್ರರ್** – ಜ್ಯೋತಿರ್ದೇವತೆಗಳು.

ರ–೧೦೩ **ಉಪಚಾರ** – ಸತ್ಕಾರ; **ಉಡಲ್ ಈವವಂಗೆ** – ಬಟ್ಟೆಬರೆ ನೀಡುವವನಿಗೆ (ಉಡುಗೊರೆ ನೀಡುವವನಿಗೆ); **ಮತ್ತೇನನ್** – ಇನ್ನೇನನ್ನು ಬಯಸಿದರೂ; **ಈಯನೋ** – ಕೊಡುವುದಿಲ್ಲವೇ?; **ಅಲಂಪಿಂದೆ** – ವೈಭವದಿಂದ; ನಿಮ್ಮ ರೂಪಿನ **ಮುನೀಂದ್ರರ್ಗೆ** – ದಿಗಂಬರತ್ವವನ್ನು; **ಅಪವರ್ಗಂ** – ಮೋಕ್ಷವು; **ನಿಜದುರ್ಗಂ**

ಅಪ್ಪುದು – ನಿಜವಾದ ಆತ್ಮರಕ್ಷಣೆಯ ಕೋಟೆಯೇ ಆಗುವುದು; **ಅರಿದೇ?** – ಅಸಾಧ್ಯವೇ?

೮–೧೦೪ **ವಿಜ್ಞಾನಂ** – ಭೇದ ವಿಜ್ಞಾನ (ದೇಹ–ಆತ್ಮ ಬೇರೆ ಬೇರೆ); **ನಿರ್ಲೋಭಂ** – ಆಕಾಶರಹಿತನಾಗಿರುವುದು; **ಅನ್ನಮಂ** – ಆಹಾರ ದಾನವನ್ನು; **ಅಲಂಪಿಂದ** – ಭಕ್ತಿಯಿಂದ; **ಒಳ್ಪಂಪೆತ್ತನ್** – ಯೋಗ್ಯತೆ ಹೊಂದಿದವನು.

೮–೧೦೫ **ಪೊಡರ್ಪಂ** – ಸಾಮರ್ಥ್ಯವನ್ನು; **ಪಡೆಗೆಯ್ದು** – ಹೋಗಲಾಡಿಸಿ; **ತನ್ನಾತ್ಮನೊಳ್ತಾನೆ – ಮಾರ್ನುಡಿಯುತ್ತಂ** – ತನ್ನ ಆತ್ಮನೊಡನೆ ಸಂವಾದಿಸುತ್ತಾ; **ಭಜಕರ್ಗೆ** – ಭಕ್ತರಿಗೆ; **ಶಿವ** – ಸನ್ಮಂಗಳ ಸ್ವರೂಪಿ.

೮–೧೦೬ **ಭವಾಗ್ನಿತಾಪವು** – ಸಂಸಾರ ತಾಪವೆಂಬ ಅಗ್ನಿಯನ್ನು; **ಪಾಪಾರಿ** – ಪಾಪವೆಂಬ ಶತ್ರು; **ಬಡಬಾಗ್ನಿ** – ಸಾಗರದ ಬೆಂಕಿ; **ಕಾಲಾಗ್ನಿ** – ಪ್ರಳಯಕಾಲದ ಬೆಂಕಿ; **ಶೃಂಗಿಯೇಂ** – ಕೊಂಬುಳ್ಳ ಕ್ರೂರಮೃಗವಾಗಲಿ; **ಶೇಷನ ದಾಡೆಯೇಂ** – ಆದಿಶೇಷನ ಕೋರೆ ಹಲ್ಲಾಗಲಿ; **ನಿಲಲ್ ನೆರೆಗುಮೆ?** – ಪ್ರತಿಭಟಿಸಿ ನಿಲ್ಲಲು ಶಕ್ಯವಾಗುವುದೇ?; **ಅಗ್ಗಳೆಯಂ** – ಶೂರನನ್ನಾಗಲಿ.

೮–೧೦೭ **ಶ್ರುತಮಂ ನೋಳ್ಪ** – ಜೀವಶಾಸ್ತ್ರವನ್ನು ಅಧ್ಯಯನ ಮಾಡುವ; **ತದರ್ಥಮಂ** – ಆ ಶಾಸ್ತ್ರಗಳ; **ತನ್ಮರ್ಯಾದೆಯೊಳ್** – ಶಾಸ್ತ್ರಾನುಸಾರ ಆಚರಣೆಯಲ್ಲಿ; **ಮಾಯಾಜಾಡ್ಯಮಂ ಝಾಡಿಪ** – ಅಜ್ಞಾನದ ಜಡತೆಯನ್ನು ಒದ್ದೋಡಿಸುವ; **ಮದ್ಗುರು** – ನನ್ನ ಗುರು; **ನಾಳಿನ ಶಿವಂ** – ನಾಳೆಗೆ ಮುಕ್ತಿ ಪರಮೇಶ್ವರ.

೮–೧೦೮ **ತಾಂ ಪರನ್ ಎಂಬ ಅಂದಮಂ** – ತಾನು ದೇಹದಿಂದ ಭಿನ್ನವಾದ ಆತ್ಮನೆಂಬ ಅರಿವುಳ್ಳವನು; **ಪರಲೋಕ** – ಮೋಕ್ಷಸ್ಥಾನ; **ವ್ರತೀಶ್ವರ** – ಮುನೀಶ್ವರ.

೮–೧೦೯ **ವ್ಯವಹಾರ** – ವ್ಯಾಪಾರ; **ವ್ಯವಸಾಯ** – ಕೃಷಿ; **ಓಲಗಂ** – ಸಭೆ; **ಪಡೆಯಲುಂಟು** – ಸಿಗುವವರಿದ್ದಾರೆ; **ನೆಗಳ್ ಎಂಬರ್** – ಮಾಡು ಎಂಬುವರು; **ನೆಗಳೆ** – ಮಾಡಿದರೆ; **ನೆಚ್ಚಿ** – ನಂಬಿಕೆಯಿಟ್ಟು; **ಮಾಳ್ಪವರ್** – ಮಾಡುವವರನ್ನು; **ಎಲ್ಲಿಪಡೆಯೇಂ** – ಎಲ್ಲಿಯೂ ಸಿಗಲಾರರು.

೮–೧೧೦ **ವಿಂಧ್ಯಾಕುಕ್ಕುಟಂ** – ಕಾಡುಕೋಳಿಯು; **ಸಂಕ್ರಮಣಮಂ** – ಸಂಕ್ರಾಂತಿ ಕಾಲವನ್ನು; **ವಂಧ್ಯಂಮಾಡದೆ** – ವ್ಯರ್ಥ ಮಾಡದೆ; **ನಿಚ್ಚಲುಂ** – ನಿತ್ಯವೂ; **ಸಂಧ್ಯಾ ಕಾಲಮಂ** – ತ್ರಿಸಂಧ್ಯಾ ಕಾಲಗಳನ್ನು; **ಆಸೆವಟ್ಟು** – ಬಯಸಿ.

ಟಿಪ್ಪಣಿ: ಈರ್ಯಾಶುದ್ಧಿಯಿಂ – ಈರ್ಯಾಪಥದೃಷ್ಟಿ; ಹೊಸಕರ್ಮ ಹರಿದು ಬರದಂತೆ ತಡೆಯುವುದೇ ಸಂವರ ತತ್ತ್ವ. ಕರ್ಮದ ಹರಿತವನ್ನು ತಡೆಹಿಡಿಯುವುದರಲ್ಲಿ ಪಂಚಸಮಿತಿಗಳಲ್ಲಿ ಒಂದು ಈರ್ಯಾಸಮಿತಿ. ಈರ್ಯಾ ಸಮಿತಿಗಳು ೫ ಬಗೆ. ಅದರಲ್ಲಿ ಒಂದು ಈರ್ಯಾಪಥಶುದ್ಧಿ ಅಥವಾ ಈರ್ಯಾ ಶುದ್ಧಿ. ಎಂದರೆ ಮುನಿಗಳ ಸಂಯಮ ರಕ್ಷಣೆಗಾಗಿ ಹೇಳಿರುವ ೮ ಪ್ರಕಾರದ ಶುದ್ಧಿಗಳಲ್ಲಿ ಒಂದು: ಪ್ರಯಾಣ

ಮಾಡುವಾಗ ಹಗಲಿನ ಸಮಯದಲ್ಲಿ ಅನ್ಯಮನಸ್ಕನಾಗದೆ ಅತಿಉತ್ಸುಕನಾಗದೆ ಮುಂದೆ ನೋಡಿಕೊಂಡು ಎಂದರೆ ೪ ಮೊಳದಷ್ಟು ಮುಂದೆ ನೋಡುತ್ತಾ ಯಾವುದೇ ಸೂಕ್ಷ್ಮ ಮತ್ತು ಸ್ಥೂಲ ದೇಹವುಳ್ಳ ಜೀವಿಗಳಿಗೆ ಹಿಂಸೆಯಾಗದಂತೆ ಪ್ರಯಾಣವನ್ನು ಮಾಡುವುದು ಈರ್ಯಾಶುದ್ಧಿ.

ರ-೧೧೦ **ಟಿಪ್ಪಣಿ** : ತ್ರಿಸಂಧ್ಯಾ ಕಾಲ– ೩ ಕಾಲಗಳಲ್ಲಿ ಮಾಡುವ ಸಂಧ್ಯಾವಂದನೆಯನ್ನು ತ್ರಿಸಂಧ್ಯಾಕಾಲ ಎನ್ನುವರು. ಪ್ರಾತಃಸಂಧ್ಯಾ, ಮಾಧ್ಯಾಹ್ನಿಕ ಸಂಧ್ಯಾ, ಸಾಯಂ ಸಂಧ್ಯಾ ಎಂದು ಮೂರು ವಿಧ. ಪ್ರಾತಃ ಸಂಧ್ಯಾ ಎಂದರೆ ತಾರೆಗಳು ಕಾಂತಿಗುಂದಲು, ಮಧ್ಯಾಹ್ನಿಕ ಸಂಧ್ಯಾ ಎಂದರೆ ಎಳೆಬಿಸಿಲಲ್ಲಿ ದೇಹದ ನೆರಳು ಚಿಕ್ಕಾಗುತ್ತಿರುವುದರಿಂದ ತೊಡಗಿ ಪುನಃ ನೆರಳು ದೊಡ್ಡದಾಗಿ ಕಾಣತೊಡಗುವಾಗ ಮಾಡುವ ಸಂಧ್ಯಾಕರ್ಮ, ಸಾಯಂ ಸಂಧ್ಯಾ ಎಂದರೆ ತಾರೆಗಳು ಕಾಂತಿಗುಂದಲು ತೊಡಗಿ ಸೂರ್ಯ ಮುಳುಗುವ ಹೊತ್ತಿನಲ್ಲಿ ಮಾಡುವ ಸಂಧ್ಯಾಕರ್ಮ.

ರ-೧೧೧ **ಅಸ್ತಾದ್ರಿ ಸ್ಥಳ** – ಪಶ್ಚಿಮದಿಗ್ಭಾವ (ಸೂರ್ಯ ಮುಳುಗುವ ದಿಕ್ಕು); **ತಾರಾಳಿಯಂ** – ನಕ್ಷತ್ರ ಸಮೂಹವನ್ನು; **ನಿಸ್ತೇಜಕ್ಕೆಡೆಯಾದ** – ಕಾಂತಿಗುಂದಲು; **ಆರ್ಕೋದಯ** – ಸೂರ್ಯೋದಯ; **ಮೈನೆಳಲ್** – ಶರೀರದ ನೆರಳು; **ಮಗುಳೆ ವಿಸ್ತಾರಕ್ಕೆ ತೋರ್ಪನ್ನೆಗಂ** – ಚಿಕ್ಕದಾಗಿರುವುದರಿಂದ ತೊಡಗಿ ಮತ್ತೆ ದೊಡ್ಡದಾಗಿ ಕಾಣತೊಡಗುವವರೆಗೆ.

ರ-೧೧೨ **ಸಾಹರವ** – ಸಿಂಹ ಘರ್ಜನೆ; **ಭಟಾಳಿ** – ಯುದ್ಧವೀರರು; **ಬೆರ್ಚುಗುಂ** – ಬೆದರುತ್ತದೆ; **ಸಂಹಾರಂಗಳನ್ನೆಡವೇ** – ನಾಶವಾಗದೇ?; **ಹಸ್ತರೋಗಂ** – ಆನೆಗಜ್ಜಿ; **ಭವಚ್ಛ್ರೀಬಿಂಬ** – ನಿನ್ನ ಮಂಗಳ ಸ್ವರೂಪದಲ್ಲಿ ಬಿಂಬದಿಂದ; **ಸಂಹಾರಂಗಳನ್ನೈದವೇ** – ನಾಶವಾಗವೇ?

ರ-೧೧೩ **ಗರುಡ ಮಂತ್ರ** – ಗರುಡ ಮಂತ್ರವನ್ನು ಉಚ್ಚರಿಸುವುದರಿಂದ ವಿಷವು ನಾಶವಾಗುತ್ತದೆ; **ಯಕ್ಷರ್** – ಯಕ್ಷದೇವತೆಗಳ ಸಿದ್ಧಿಮಂತ್ರಗಳಿಂದ ಅನೇಕ ವಿದ್ಯೆಗಳು ಕರಗತವಾಗುತ್ತದೆ; **ಪೂಜ್ಯಪಾದಾಬ್ಜವಂ** – ಈ ಗರುಡ ಯಕ್ಷರು ಪೂಜಿಸಿಕೊಳ್ಳಲ್ಪಡುವವನು ಜಿನೇಂದ್ರ ಅವನನ್ನು; **ಅಲಂಪಿನಿಂ** – ಭಕ್ತಿಯಿಂದ **ಮನೋರಥಂ** – ಮನಸ್ಸಿನ ಇಚ್ಛೆಗಳು.

ರ-೧೧೪ **ಗೆಡೆಗೊಂಡಾಡುವ** – ಸ್ನೇಹವನ್ನು ಹೊಂದಿ ಮಾತಾಡುವ; **ಅಂಗಾಯತಂ** (ಅಂಗ+ಆಯತಂ) – ಶರೀರವೆಲ್ಲವೂ; **ಲೋಕಪಾತೇ** – ಲೌಕಿಕ ವಿಚಾರ; **ಮಾಳ್ಪಾಗಳುಂ** – ಮಾಡುವಾಗಲಂತೂ; **ಮೈಮುರಿ** – ಮೈಮುರಿಯುವಿಕೆ; **ಆಗುಳಿಕ್ಕೆ** – ಆಕಳಿಕೆ; **ದುಷ್ಕರ್ಮದ ಬಂಧ** – ಪಾಪದ ಕಟ್ಟು; **ಸಡಿಲ್ದು + ಒಡೆದು** – ಸಡಿಲವಾಗಿ ಒಡೆದುಹೋಗಿ; ಏ **ಸೋದಪ್ಪುದು** – ಕರ್ಮ ಪ್ರವಾಹವು ಸೋರಿಹೋಗುವುದು ಎಂಬುದಕ್ಕೆ ಸಾಕ್ಷಿ ಅಲ್ಲವೇ?

ರ-೧೧೫ **ವಣಿಜಂ** – ವರ್ತಕನು; **ಪಂಚಸರಂಗಳಂ** – ಐದು ಮುತ್ತಿನ ಸರಗಳನ್ನು; **ಮುಕ್ತಾಜಾಲಮಂ** – ಮುತ್ತುಗಳ ಸಮೂಹವನ್ನು; **ಪಂಚಮಂತ್ರದೊಳ್ ಒಡಂಬಟ್ಟ**

ಅಕ್ಷರವ್ರಾತಮಂ – ಪಂಚ ನಮಸ್ಕಾರ ಮಂತ್ರದಲ್ಲಿರುವ ಅಕ್ಷರಗಳನ್ನು; **ನಿಟಿಲ** – ಹಣೆಯಲ್ಲಿ; **ಜಾನಿಸಿ** – ಧ್ಯಾನಿಸುತ್ತ; **ಚರ್ಮದೃಷ್ಟಿ** – ಹೊರಗಿನ ನೋಟ; **ಸುಜ್ಞಾನ ದೃಷ್ಟಿ** – ಒಳಗಣ್ಣಿನ ನೋಟ, **ಅಂತರ್ಮುಖಿಯ ನೋಟ**; ರಿಸಿ – ಮುನಿ.

ರ–೧೧೬ **ಪಂಚ ನಮಸ್ಕಾರಗಳು** – ಒಟ್ಟು ೩೫ ಅಕ್ಷರಗಳಿವೆ. ಈ ಅಕ್ಷರಗಳ ಮೊದಲಲ್ಲಿ ಓಂಕಾರ ವೆಂಬ ಒಂದು ಅಕ್ಷರವಿದೆ. ಹೀಗೆ ಒಟ್ಟು ೩೬ ಅಕ್ಷರಗಳಿರುವ ಮಂತ್ರವೇ ಮೂಲಮಂತ್ರ.

೧. ಓಂ ಣಮೋ ಅರಹಂತಾಣಂ (೭)
೨. ಣಮೋ ಸಿದ್ಧಾಣಂ (೫)
೩. ಣಮೋ ಅಯಿರಿಯಾಣಂ (೭)
೪. ಣಮೋ ಉವಜ್ಝಾಯಾಣಂ (೭)
೫. ಣಮೋ ಲೋಯೇಸವ್ವಸಾಹೂಣಂ (೯)

ಒಟ್ಟು ೩೫ ಅಕ್ಷರಗಳು.

ಈ ೩೫ ಅಕ್ಷರಗಳ ಮೂಲಮಂತ್ರವು ೭ ರೀತಿಯ (ಸಪ್ತಮಂತ್ರ) ಮಂತ್ರವಾಗಿದೆ.

I. ೧. ಓಂ ಣಮೋ ಅರಹಂತಾಣಂ
೨. ಣಮೋ ಸಿದ್ಧಾಣಂ
೩. ಣಮೋ ಅಇರಿಯಾಣಂ
೪. ಣಮೋ ಉವಜ್ಝಾಯಾಣಂ
೫. ಣಮೋ ಲೋಏ ಸವ್ವಸಾಹೂಣಂ

II. ಅರಿಹಂತ ಸಿದ್ಧ ಅಇರಿಯಾ ಉವಜ್ಝಾಯಾ ಸಾಹು
III. ಅರಿಹಂತ ಸಿಸಾ
IV. ಅಸಿ ಆಉಸಾ
V. ಅಸಿಸಾಹು
VI. ಅಸಾ
VII. ಓಂ

ಪಂಚಾಕ್ಷರ ಮಂತ್ರ : ಅಸಿಆಉಸಾ

ರ–೧೧೭ **ನಳಿನೀನಾಳಕೆ** – ತಾವರೆಯದಂಟಿಗೆ; **ಮೂಲದಿಂತುದಿವರಂ** – ಬುಡದಿಂದ ತುದಿಯವರೆಗೂ; **ತಂತು** – ನಾರು; **ಕೆಂಬಜ್ಜೆ** – (ಕೆಂಪು ಅಡಿಯ ಪಾದ) ಅಂಗಾಲು; **ನೆತ್ತಿಮುಟ್ಟಳೆತಂ** – ತಲೆಯವರೆಗೂ; **ಪಳುಕಿಂ** – ಸ್ಫಟಿಕದಿಂದ ಮಾಡಿದ; **ಬಿಂಬೋಪಮಮಂ** – ಬಿಂಬಕ್ಕೆ ಹೋಲುವಂತೆ.

ರ–೧೧೮ **ಐವಣ್ಣಮುಂ** – ಐದು ಬಣ್ಣಗಳನ್ನು (ಕೃಷ್ಣ, ನೀಲ, ಕಾಪೋತ, ಪೀತ, ಪದ್ಮ) ೫ ಬಣ್ಣಗಳು; **ಸೋಣೆ** – ತಗುಲಲು; **ಮೆಯ್ಯತೊದಲು** – ಮೈಚರ್ಮ; **ಎನಿಪ್ಪನ್** –

ಎಂದೆನಿಸುತ್ತಾನೆ; **ಎಂದರುಪಿದೈ** – ಎಂಬುದಾಗಿ ಜಿನೇಶ್ವರಾ ಲೋಕಕ್ಕೆ ತಿಳಿಸಿರುವೆ.

ರ–೧೧೯ **ಉಪಾರ್ಜಿಸಿದ** – ಸಂಪಾದಿಸಿದ; **ಕರ್ಮಮುಂ ತುಚ್ಛಂ** – ನೀಚಕರ್ಮ; ಸಿಲ್ಕಿರ್ದಪಂ – ಸಿಕ್ಕಿಹಾಕಿಕೊಂಡಿದ್ದಾನೆ; **ಲೋಭಾರ್ಥದಿಂ** – ಲೋಭ ಕಷಾಯ, ಅತ್ಯಾಸೆಯಿಂದ; **ಮ್ಲೇಚ್ಛಾಕಾರ** – ಕ್ರೂರಾಕಾರ, ಅನಾಗರಿಕರ ಆಕಾರದಂತಿರುವ.

ರ–೧೨೦ **ಮೇಲೊಗೆದು** – ಮೇಲಕ್ಕೆ ಹೋಗಿ; **ಮಂಡಪದ** – ಲಕ್ಷ್ಮೀಪೀಠದ; **ಅರುಣಾಬ್ಜಕರ್ಣಿಕೆಗೆ** – ಕೆಂಪುತಾವರೆಯ ದಂಟಿಗೆ; **ಚಾತುಷ್ಕಾಂಗುಲ** – ನಾಲ್ಕು ಅಂಗುಲ; **ಉದ್ದೇಶದೊಳ್** – (ಉತ್+ದೇಶ) – ಉತ್ತರದ ಪ್ರದೇಶದಲ್ಲಿ; **ಅಂತಿರ್ದೆ** – ಜಯವನ್ನು ಹೊಂದಿರುವೆ, ಗೆಲುವಿನಿಂದ ಇರುವೆ.

ರ–೧೨೧ **ಜೊನ್ನಂಬೊಲ್** – ಬೆಳಂಗಳಂತೆ; **ವಿಮಲಸಿದ್ಧಕ್ಷೇತ್ರ** – ನಿರ್ಮಲವಾದ ಸಿದ್ಧಲೋಕ; **ಅಚ್ಛಿನ್ನಜ್ಞಾನ** – ಸಂಪೂರ್ಣಜ್ಞಾನ ಸ್ವರೂಪಿ.

ಟಿಪ್ಪಣಿ : ಅಷ್ಟಗುಣ – ಸಿದ್ಧಾತ್ಮನ ೮ ಗುಣಗಳು: ೧. ಸದ್ಯುಕ್ತ್ವ ೨. ಜ್ಞಾನ ೩. ದರ್ಶನ ೪. ವೀರ್ಯ ೫. ಸೂಕ್ಷ್ಮತ್ವ ೬. ಅವಗಾಹನತ್ವ ೭. ಅಗುರಲಘುತ್ವ ೮. ಅವ್ಯಾಭಾಧತ್ವ.

ರ–೧೨೨ **ಕುಡುವುದೇ** – ಕೊಡುವುದೇ; **ಚತುರ್ಗತಿ** – ದೇವಮಾನವ ತಿರ್ಯಕ್ ನಾರಕ ಜನ್ಮಗಳು; **ಕುಶಾಸ್ತ್ರ** – ಮಿಥ್ಯಾಶಾಸ್ತ್ರ; **ಪೊರೆವರೇ?** – ರಕ್ಷಿಸುವರೇ?; ವಿರೋಧಂ – ದ್ವೇಷ; **ಕ್ಷಮೆ** – ಸಹನಶೀಲತೆ.

ರ–೧೨೩ **ಪರದೇಶ** – ವಿದೇಶ; **ಪಗೆಗಳ್** – ಶತ್ರುಗಳು; **ಭಾವನ್ನಂ** – ಶ್ರೀಗಂಧ; **ವ್ಯಾಧಿ** – ರೋಗ; **ಸುಧೆ** – ಅಮೃತ; **ಇರ್ದುಂ** – ಇದ್ದರೂ; **ಎಳಸಿರ್ಪೆನ್** – ಆಸೆಪಡುತ್ತಿರುವೆನಲ್ಲಾ?

ರ–೧೨೪ **ದಾರಿದ್ರ್ಯ** – ಬಡತನ; **ಕಾನ್** – ಕಾಡು; ಎ – ಆಹಾರ; **ಕದನ್ನ**– ಹಳಸಿದ ಅನ್ನ; **ನಿರ್ಬಂಧಮಂ** – ಸೆರಮನೆ; **ರಾಜ್ಯಂ** – ಅರಮನೆ; **ವಿಧಿಯೆಲ್ಲಂ** – ವ್ಯವಹಾರ; **ಸಂಧಾನಂ** – ಸಂಯೋಗವು; **ನಿತ್ಯಸುಖ + ಏಕವು** (ನಿತ್ಯಸುಖೈಕವು) – ಶಾಶ್ವತಸುಖವು ಇದೊಂದೆ.

ರ–೧೨೫ **ಚಿತ್ತಕೆ ಬಂದವೊಲ್** – ಮನಸ್ಸಿಗೆ ಬಂದಂತೆ ಹುಚ್ಚಾಪಟ್ಟೆ; **ಬಾಯ್ಗಿಚ್ಚೆ ಬಂದಂತೆ** – ಬಾಯಿಗೆ ಬಂದ ಹಾಗೆ; **ಸೈಗೆಡೆದೆಂ** – ಧೈರ್ಯಗುಂದಿದೆ, ದಿಕ್ಕೆಟ್ಟೆನು; **ನಿಮ್ಮಂಘ್ರಿಗಳಂ** – ನಿಮ್ಮ ಪಾದಗಳನ್ನು, **ಬಿಡೆಂ** – ಬಿಡುವುದಿಲ್ಲ; **ತಳುವಿರ್ದೇಕೆ?** – ತಡವಿದೇಕೆ? ನಿಧಾನವೇಕೆ?

ರ–೧೨೬ **ತ್ರಿಜಗತ್ಸ್ವಾಮಿ** – ಮೂರುಲೋಕಗಳ ಒಡೆಯ; **ಸಿದ್ಧ** – ಸಿದ್ಧಕ್ಷೇತ್ರದಲ್ಲಿರುವ ಪೂಜ್ಯರು; **ಶಿವ** – ಶುಭಂಕರನೇ; **ಲೋಕಾರಾಧ್ಯ** – ಲೋಕಾಧಿಪತಿ; **ಸರ್ವಜ್ಞ** – ಸಮಸ್ತವನ್ನೂ ತಿಳಿದವನೆ; **ಶಂಭು** – ಶುಭಕರನೇ; **ಪಿತಾಮಹ** – ಅತಿಹಿರಿಯನು;

ಹರ – ಕರ್ಮನಾಶಿ; **ಶ್ರೀಕಾಂತ** – ಜ್ಞಾನಾದಿ ಸಂಪತ್ತಿಗೆ ಒಡೆಯ; **ವಾಣೀಶ** – ಸರಸ್ವತೀಪತಿ; **ವಿಷ್ಣು** – ಹರಿ; **ಜಿತಾನಂಗ** – ಮನ್ಮಥನನ್ನು ಜಯಿಸಿದವನು; **ತಳುವಿದೇಂ?** – ತಡವೇಕೆ ?

ರ–೧೨೭ **ತ್ರಾಹಿ** – ಕಾಪಾಡು; **ತ್ರೈಭುವನೇಂದ್ರ** – ಮೂರು ಲೋಕಗಳ ಇಂದ್ರರ; **ಮಸ್ತಕಮಣಿ** – ತಲೆಯ ಕಿರೀಟಗಳಲ್ಲಿರುವ ರತ್ನಗಳ; **ವ್ರಾತ** – ಸಮೂಹದಿಂದ; **ಅರ್ಚಿತ** – ಪೂಜಿಸಲ್ಪಟ್ಟ; **ಅಂಘ್ರಿದ್ವಯಾ** – ಎರಡು ಪಾದಗಳುಳ್ಳ ಸ್ವಾಮಿಯೇ; **ನಟನ್ನಟನರಂಗ** – ನರ್ತಕಿಯ ನರ್ತನಕ್ಕೆ ರಂಗಸ್ಥಳವೆನಿಸಿದ; **ಶ್ರೀರಮಣೀ** – ಮೋಕ್ಷಲಕ್ಷ್ಮಿ; **ರತ್ನತ್ರಯ** – ಸಮ್ಯಕ್‌ದರ್ಶನ, ಜ್ಞಾನ, ಚಾರಿತ್ರಗಳೆಂಬ ಮೂರು ರತ್ನದವನೇ; **ದೇಹಿ** – ಕೊಡು; **ಮಮ** – ನನಗೆ; **ಪುನರಪಿ** – ಪುನಃ ಪುನಃ.

ರ–೧೨೮ **ಪೂರಿಸಿದ** – ಪೂರ್ತಿಮಾಡಿದ; **ಶೃಂಗಾರವಿಹಂಸರಾಜ** – ರತ್ನಾಕರ ಕವಿ; **ಸಪಾದ ಶತಕ** – ೧೨೫ ಪದ್ಯಗಳ ಕೃತಿ.

ಪುಷ್ಪಿಕೆ

ಪಾದಾಂಭೋಜ – ಪಾದಕಮಲಗಳಲ್ಲಿ; **ಭೃಂಗಾಯಮಾನ** – ಭ್ರಮರದಂತಿರುವ ರತ್ನಾಕರ ಕವಿ.

* * *

II. ಅಪರಾಜಿತೇಶ್ವರಶತಕ
ಶಬ್ದಾರ್ಥ ಮತ್ತು ಟಿಪ್ಪಣಿಗಳು

ಶತಕ–ಪದ್ಯಸಂಖ್ಯೆ

ಅ–೧ **ಶ್ರೀಕುಲಂ** – ಸಂಪದ್ಭರಿತವಂಶ, **ಆಪ್ತಗೋತ್ರಂ** – ಉತ್ತಮ ಗೋತ್ರ; **ಅಮಲಾಂಗಂ** – ದೋಷವಿಲ್ಲದ ದೇಹ (ಆರೋಗ್ಯಕಾಯ); **ಅತಂದ್ರತೆ** – ಲವಲವಿಕೆ; **ಸಮ್ಯಗಾಯು** – ಪೂರ್ಣಾಯು; **ಎನುತ್ತೆ ಕಂಡು** – ಎಂಬುದನ್ನು ಅರಿತು; **ನಿರ್ವ್ಯಾಕುಲನಾಗಿ** – ನಿಶ್ಚಿಂತನಾಗಿ; **ರತ್ನಾಕರನಾದವಂ** – ಸಮುದ್ರದಂತಿರುವವನು; **ಕೃಪಾತ್ಮನು** – ದಯೆಗೆ ಪಾತ್ರನಾದವನು; **ತವ** – ನಿನ್ನ; **ಅಪರಾಜಿತೇಶ್ವರಾ** – ಬೇರೆಯವರಿಂದ ಜಯಿಸಲ್ಪಡದಿರುವ ಸ್ವಾಮಿಯೇ, ಅಜಾತಶತ್ರು.

ಪೂರ್ವ ವಿದೇಹದಲ್ಲಿರುವ ಅನಂತವೀರ್ಯರೆಂಬ ೨೦ನೆಯ ತೀರ್ಥಂಕರ ದ್ಯೋತಕವಾಗಿದೆ

ಸಪ್ತ ತತ್ವಗಳು : ಜೀವ, ಅಜೀವ, ಆಸ್ರವ, ಬಂಧ, ಸಂವರ. ನಿರ್ಜರಾ, ಮೋಕ್ಷ.

ಅ–೨ **ನಯಾರ್ಥಂಬರೆ** – ಯಥಾರ್ಥವಾಗಿ ನೋಡಿ; **ಬೋಧ** – ಸಮ್ಯಕ್‌ಜ್ಞಾನ; **ತದೀಯ** – ಆರತ್ನತ್ರಯಕ್ಕೆ.

ಅ–೩ **ಮೂಜಗ** – ಮೂರುಲೋಕ; **ಗೇಹ** – ಮನೆ; ಊರ್ಧ್ವ, ಮಧ್ಯಮ; **ಷಡ್ದ್ರವ್ಯ** (ಆರು ದ್ರವ್ಯಗಳು) (ವಸ್ತುಗಳು) (೬), ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ ಮತ್ತು ಕಾಲ.

ಕಾಯವೈದು : (೫) ಅಸ್ತಿಕಾಯಗಳು (ಜೀವಾಸ್ತಿಕಾಯ; ಪುದ್ಗಲಾಸ್ತಿಕಾಯ, ಧರ್ಮಾಸ್ತಿಕಾಯ, ಅಧರ್ಮಾಸ್ತಿಕಾಯ, ಆಕಾಶಾಸ್ತಿಕಾಯ)

ತತ್ತ್ವವೇಳು : (೭) ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರಾ ಮತ್ತು ಮೋಕ್ಷ.

ನವಪದಾರ್ಥ : (೯) ತತ್ತ್ವ ವೇಳಕ್ಕೆ ಪಾಪ ಮತ್ತು ಪುಣ್ಯ ಸೇರಿದರೆ ನವ ಪದಾರ್ಥಗಳಾಗುತ್ತವೆ.

ಸಂಯೋಜಿಸಿ – ೨೭ ತತ್ತ್ವಗಳನ್ನು ಸೇರಿಸಿ; **ಕೂಡೆ ಕೂಡೆ** – ಪದೇ ಪದೇ; **ಪರಿಭಾವಿಸಿ** – ವಿಚಾರ ಮಾಡಿ (ಮನನ ಮಾಡಿ); **ಚೇತೋಜಯನ್** – ಮನಸ್ಸನ್ನು ಜಯಿಸಿದವನಾಗಬೇಕು; **ಎಂದೆಯಲಾ** – ಮೊದಲೇ ಹೇಳಿದೆಯಲ್ಲವೇ?

ಅ–೪ **ಅಣುಪೆಕ್ಕೆ** (ಅನುಪ್ರೇಕ್ಷೆ) **ಪನ್ನೆರಡರಲ್ಲಿ** – ದ್ವಾದಶಾನುಪ್ರೇಕ್ಷೆಗಳಿವು:
೧. ಅನಿತ್ಯ ೨. ಅಶರಣ ೩. ಸಂಸಾರ ೪. ಏಕತ್ವ ೫. ಅನ್ಯತ್ವ ೬. ಅಶುಚಿತ್ವ ೭. ಆಸ್ರವ ೮. ಸಂವರಾ ೯. ನಿರ್ಜರಾ ೧೦. ಲೋಕ ೧೧. ಬೋಧಿದುರ್ಲಭ ೧೨. ಧರ್ಮ.

ಅನುಪ್ರೇಕ್ಷೆ ಎಂದರೆ ಶರೀರಾದಿ ಪರದ್ರವ್ಯ ಜ್ಞಾನಮಯ ಆತ್ಮದ್ರವ್ಯ ಮತ್ತು ಧರಾದಿ ದ್ರವ್ಯದ ಚಿಂತನೆ ಮೇಲಿಂದ ಮೇಲೆ ಮಾಡುವುದಕ್ಕೆ ಅನುಪ್ರೇಕ್ಷೆ ಅನ್ನುವರು.

ಧರ್ಮಧ್ಯಾನ ವೆಂದರೆ ಏಕಾಗ್ರತೆಯನ್ನು ಹೊಂದಿ ಮನಸ್ಸಿನ ಚತುಷ್ಕದ ದಮ್ಮ ಜಾನದೊಳ್ – **೪ ಬಗೆಯ ಧರ್ಮ ಧ್ಯಾನಗಳು.**

೧. ಆಜ್ಞಾವಿಜಯ ಧರ್ಮಧ್ಯಾನ (ಆಗಮೋದದೊಳ್)
೨. ಅಪಾಯವಿಜಯ ಧರ್ಮಧ್ಯಾನ (ಪಾಪಗಳ ಹಾಗೂ ಪುಣ್ಯಗಳ ವಿಚಾರ)
೩. ವಿಪಾಕವಿಚಯ ಧರ್ಮಧ್ಯಾನ (ನಾನಾಕರ್ಮದ ನಾನಾ ಪ್ರಕಾರದ ಫಲ)
೪. ಸಂಸ್ಥಾನವಿಚಯ ಧರ್ಮಧ್ಯಾನ (ಲೋಕರಚನೆಯ ಸ್ವರೂಪ)

ಕರ್ಮ ನಿರ್ಜರೆ ಇದಕ್ಕೆ ಸಾಧನವಾದದ್ದು ತಪಸ್ಸು. ಅದು ಎರಡು ಬಗೆ: ಬಾಹ್ಯ ತಪಸ್ಸು, ಅಭ್ಯಂತರ ತಪಸ್ಸು. ಅಭ್ಯಂತರ ತಪಸ್ಸಿನಲ್ಲಿ ೬ ವಿಧ ಪ್ರಾಯಶ್ಚಿತ್ತ ವಿನಯ ವೈಯಾವೃತ್ಯ ಸ್ವಾಧ್ಯಾಯಿ ವ್ಯುತ್ಸರ್ಗ ಧ್ಯಾನ. ಈ ಧ್ಯಾನದಲ್ಲಿ ೪ ಬಗೆ. ಆರ್ತಧ್ಯಾನ, ರೌದ್ರ ಧ್ಯಾನ, ಧರ್ಮ ಧ್ಯಾನ, ಶುಕ್ಲ ಧ್ಯಾನ. ಇದರಲ್ಲಿ ೪ನೆಯದಾದ ಧರ್ಮ ಧ್ಯಾನದಲ್ಲಿರುವ ೪ ಬಗೆಗಳನ್ನು ಮೇಲೆ ತಿಳಿಸಿದೆ. ಇದನ್ನೇ ರತ್ನಾಕರ ಅಪರಾಜಿತ ಶತಕದ ೪ನೇ ಪದ್ಯದಲ್ಲಿ ಹೇಳಿರುವುದು. (ನೋಡಿ: ಎಲ್.ಗುಂ. XL ಪಾಟೀಲ್ ಪು. ೬೦).

ಗುರು ಪಂಚಕ – ಪಂಚಪರಮೇಷ್ಠಿಗಳು : ಅರ್ಹತ್, ಸಿದ್ಧ, ಆಚಾರ್ಯ, ಉಪಾಧ್ಯಾಯ, ಸಾಧು.

ಅಗ್ಗಳಮು – ವೇಗವನ್ನು; **ಅಳಲ್ ಅಳಿದಿರ್ದನಂ** – ದುಃಖವನ್ನು ನಾಶ ಮಾಡಿದವನು.

ಅ–೫ **ಆ ಪದದೊಳ್** – ಮೇಲೆ ತಿಳಿಸಿದ ಹಾಗೆ (ಪದ್ಯ ೪ರಲ್ಲಿ) ಸಾಧನೆ ಮಾಡುವ ಪ್ರಸಂಗದಲ್ಲಿ; **ಸದ್ಗುಣ ಉದ್ದೀಪಿಕೆ ಅಪ್ಪುದು** – ಸದ್ಗುಣಗಳು ವೃದ್ಧಿಯಾಗುವುದು; **ಉದ್ದೀಪಿಕೆ** – ವೃದ್ಧಿ; **ಉಬ್ಬೆಯುಂ** – ತಾಪವು; **ಎಯ್ದುತಿರ್ಕುಂ** – ಹೊಂದುವುವು; ಅದನೇ (ಆತ್ಮಾಧ್ಯಾನ ಮಾಡುವುದನ್ನೇ); **ಸ್ಥಾಪಿಸಿ** – ಸಾಧಿಸಿ.

ಅ–೬ **ಲಘು ಕರ್ಮಿಗೆ** – ಕರ್ಮದ ಭಾರ ಕಡಿಮೆಯಿರುವವನು; **ಅಳ್ತಿಯುಳ್ಳವಂಗೆ** – ಪ್ರೀತಿಯುಳ್ಳವನಿಗೆ; **ಉದಯಿಸುವುದು** – ಉಂಟಾಗುವುದು; **ಭವತ್ಪ್ರಸಾದದ ಸುಖ** – ಅನುಗ್ರಹದ; **ಕುದಿದೊಡಂ** – ಕುದಿದರೂ; **ರುಚಿಯುಳ್ಳವನೇ** – ಆಸಕ್ತನೇ; **ಪರಿಕೀರ್ತಿಪೆನ್** – ನಾನು ನಿನ್ನನ್ನು ಸ್ತುತಿಸುತ್ತೇನೆ.

ಅ–೭ **ಕರ್ಮವೆಂಟು** – ೧. ಜ್ಞಾನಾವರಣ ೨. ದರ್ಶನಾವರಣ ೩. ವೇದನೀಯ ೪. ಮೋಹನೀಯಾ ೫. ಆಯುಷ್ಯೆ ೬. ನಾಮ ೭. ಗೋತ್ರ ೮. ಅಂತರಾಯ; **ತನು ಮೂರು** : ಔದಾರಿಕ, ತೈಜಸ, ಕಾರ್ಮಣ, ಶರೀರಗಳು.

ಬೇರುಗೆಯ್ದು –ಬೇರೆಮಾಡಿ (ಆತ್ಮ ಬೇರೆ–ಶರೀರ ಬೇರೆ ಎಂದು ತಿಳಿದು); **ಒಳಗೆ ನೋಳ್ಪುದಲಾ** – ಒಳಹೊಕ್ಕು ತಿಳಿಯಬೇಕು.

ಅ–೮ **ಪೊರಗೆ ಇದು** – ಹೊರಗಿರುವ; **ಧಾತುರೂಪದ ಒಡಲ್** – (ಸಪ್ತಧಾತುಗಳ ರೂಪದ ಶರೀರವಾಗಿದೆ)

ಔದಾರಿಕ ೧) ಸಪ್ತಧಾತುಗಳು: ರಸ, ರಕ್ತ, ಮಾಂಸ, ಮೇದಸ್ಸು, ಮಜ್ಜಾ, ಅಸ್ಥಿ ಮತ್ತು ಶುಕ್ಲ ಗಳಿಂದ ಕೂಡಿದ ದೇಹ ಔದಾರಿಕ. **ತುರುಗಿದ** – ಕಾಂತಿಯುಕ್ತ.

ಔದಾರಿಕ ಶರೀರ – ಶರೀರವು ಗರ್ಭಜನ್ಮ ಸಮ್ಮೂರ್ಛನ ಜನ್ಮಗಳಿಂದ ಉಂಟಾಗುವುವು. ಇಂದ್ರಿಯ ಗೋಚರವಾದ ದೇಹವು ಸ್ಥೂಲತನು, ದೇಹ, ಗರ್ಭ, ಸಮ್ಮೂರ್ಛನದಿಂದ ಉಂಟಾಗದ ಶರೀರ. ಉದಾರ ಭಾವಾರ್ಥವನ್ನು ಹೊಂದಿರುವುದೇ ಔದಾರಿಕ.

ಅ–೮ **ಕಾರ್ಮಣ ಶರೀರ (ಕಾರ್ಮಣಾಂಗ)** – ಔದಾರಿಕ, ವೈಶ್ರಮಿಕ, ಆಹಾರಕ, ತೈಜಸ, ಕಾರ್ಮಣವೆಂಬ ೫ ಶರೀರ ಭೇದಗಳಲ್ಲಿ ಒಂದು. ಜೀವ ಪ್ರದೇಶದೊಂದಿಗೆ ಬೆರೆತಿರುವ ಅಷ್ಟಕರ್ಮಗಳ ಸೂಕ್ಷ್ಮ ಪುದ್ಗಲ ಸ್ಕಂಧ ರೂಪಿ ಶರೀರ. ಕರ್ಮಗಳ ಕಾಯವು ಕಾರ್ಮಣ ಶರೀರವಾಗಿದೆ. ಸರ್ವ ಶರೀರವು ಕರ್ಮವಶದಿಂದಲೇ ಆಗುವುದಾದರೂ ರೂಢಿಯಿಂದ ವಿಶಿಷ್ಟ ಶರೀರವನ್ನು ಕಾರ್ಮಣ ಶರೀರವೆನ್ನಲಾಗಿದೆ. (ಸರ ಪು. ೧೦೬).

ತೈಜಸ ಶರೀರ – ಔದಾರಿಕ, ಕಾರ್ಮಣ, ವೈಶ್ರಮಿಕ ಆಹಾರ ತೈಜಸ ಎಂಬ ಐದು ಶರೀರಗಳಲ್ಲಿ ಒಂದು ತೈಜಸ ಶರೀರ. ಒಂದು ಜೀವಿಯಲ್ಲಿ ಔದಾರಿಕ ಕಾರ್ಮಣ ತೈಜಸ ಎಂಬ ಶರೀರಗಳಿರುತ್ತವೆ. ರತ್ನಾಕರ ಹೇಳಿರುವುದು ಇಲ್ಲಿ ಇದನ್ನೇ. ಜೀವವು ತೇಜದಲ್ಲಿ ಉತ್ಪನ್ನವಾಗಿರುವುದರಿಂದ ತೈಜಸ ಶರೀರವಾಗಿದೆ. ತೇಜ ಮತ್ತು ಪ್ರಭಾರೂಪ ಗುಣವನ್ನು ಹೊಂದಿರುವುದರಿಂದ ತೈಜಸವೆನಿಸುತ್ತದೆ. ತೈಜಸ ಶರೀರವು ನಿಃಸರಣಾತ್ಮಕ ಮತ್ತು ಅನಿಃಸರಣಾತ್ಮಕ ಎಂದು ೨ ಬಗೆಯಾಗಿರುತ್ತದೆ.

ಮೂರರೊಳ್‌ಪುದಿದನ್ ಆತ್ಮನು – ಈ ೩ ಬಗೆ (ತೈಜಸ, ಕಾರ್ಮಣ, ಔದಾರಿಕ) ದೇಹಗಳಲ್ಲಿ ಆತ್ಮನು ಸೆರೆಯಾಗಿದ್ದಾನೆ.

(ಅಷ್ಟಮಲಾಕೃತ) ಅಷ್ಟಕರ್ಮಾಶ್ರಿತ ಕಾರ್ಮಣಾಂಗಂ – ಆತ್ಮನ ಸಹಜ ಸ್ವಭಾವವನ್ನು ಮರೆಮಾಡುವ ೮ ಕರ್ಮಗಳು. ಇವು ೨ ಬಗೆ. **ಘಾತಿ ಕರ್ಮಗಳು** – ಜ್ಞಾನಾವರಣೀಯ, ದರ್ಶನಾವರಣೀಯ, ಅಂತರಾಯ, ಮೋಹನೀಯ ಕರ್ಮಗಳು ಇವು ಅಶುಭ ಕರ್ಮಗಳು.

ಅಘಾತಿಕರ್ಮಗಳು ೪ – ಆಯು, ನಾಮ, ಗೋತ್ರ, ವೇದನೀಯ ಇವು ಶುಭ ಕರ್ಮಗಳು. **ಉರೆ** – ಚೆನ್ನಾಗಿ; **ರೂಪವೇ** – ಸ್ವರೂಪದಿಂದೆ; **ಪುದಿದನ್** – ಅಡಗಿದ್ದಾನೆ; **ಮಿಶ್ರಿತಂಗಳ್** – ಒಂದರೊಳಗೊಂದು ಈ ಶರೀರತ್ರಯಗಳು ಬೆರೆತಿವೆ; **ಸೆರೆಮನೆ** – ಆತ್ಮನು ಇವುಗಳಿಂದ ಬಂಧಿತನಾಗಿದ್ದಾನೆ.

ಅ–೯ **ಆಗುತ–ಪೋಗುತ** – ಆಗುತ್ತಾ ಹೋಗುತ್ತಾ (ಶರೀರ ಧರಿಸುವುದು ಮತ್ತು ಕಳಚುವುದು); **ಯೋಗವಿಯೋಗಯಪ್ಪ** – ಮನ ವಾಚನ ಕಾಯಗಳೆಂಬ ಯೋಗಗಳಿಲ್ಲದಿರುವ; **ಪದಿನಾಲ್ಕೂ ಗುಣಸ್ಥಲಕಾಲಕೆ ಅಲ್ಲದೆ** – ಹದಿನಾಲ್ಕನೆಯ ಗುಣಸ್ಥಾನದ ಕಾಲದಲ್ಲಿರುವ ಅಯೋಗ ಕೇವಲಿ ಹೊರತು; **ಹೊರತು** – ಬೇರೆ ಕಾಲದಲ್ಲಿ; **ಪೋಗದು** – ಹೋಗುವುದಿಲ್ಲವು; **ಎಸಗೇವಳ್ಕುಂ** – ಪ್ರಾರಂಭಿಸಬೇಕು; **ತೊಟ್ಟು** – ಮೊದಲ್ಗೊಂಡು; **ಉದ್ಯೋಗಂ** – ಪರಿಶ್ರಮವನ್ನು.

ಅ–೯ **ಟಿಪ್ಪಣಿ : ಪದಿನಾಲ್ಕು ಗುಣಸ್ಥಾನಗಳು :** ಗುಣಸ್ಥಾನಗಳು ಎಂದರೆ ಮೋಹ ಮತ್ತು ಯೋಗಗಳ ನಿಮಿತ್ತದಿಂದ ಆತ್ಮದ ದರ್ಶನ, ಜ್ಞಾನ, ಚಾರಿತ್ರರೂಪ ಗುಣಗಳ ಕ್ರಮವಿಕಾಸ ರೂಪಾವಸ್ಥೆಗಳು. ಇವು ೧೪ ಬಗೆ. ೧. ಮಿಥ್ಯಾತ್ವ ೨. ಸಸಾಧನ ೩. ಮಿಶ್ರ ೪. ಅವಿರತ ಸಮ್ಯಕ್ತ್ವ ೫. ದೇಶರಡ ೬. ಪ್ರಮತ್ತವಿರತ ೭. ಅಪ್ರಮತ್ತವಿರತ ೮. ಅಪೂರ್ವಕರಣ ೯. ಅನಿವೃತ್ತಿಕರಣ ೧೦. ಸೂಕ್ಷ್ಮ ಸಂಪದಾಯ ೧೧. ಉಪಶಾಂತ ಮೋಹ ೧೨. ಕ್ಷೀಣಮೋಹ ೧೩. ಸಯೋಗ ಕೇವಲಿ ೧೪. ಅಯೋಗ ಕೇವಲಿ.

ಅ–೧೦ **ಬಾಹ್ಯರತಿಯಂ** – ಹೊರಗಿನ ವಸ್ತುಗಳ ಮೇಲಿನ ಮೋಹ; **ಉತ್ಸವದಿಂದೆ** – ಉತ್ಸಾಹದಿಂದ; **ಗೂಢ** – ರಹಸ್ಯವಾದ; **ಪಳುಕಿನ ಬೊಂಬೆ** – ಸ್ಫಟಿಕಪುತ್ಥಳಿ; **ಪೊಳೆಯದೆ** – ಗೋಚರಿಸದೆ; **ಮಾಣ್ಬುದೆ** – ಇರದೇ? ಹೋಗದೇ?

ಅ–೧೧ **ಜಿನಗೇಹ** – ಜಿನದೇವಾಲಯ; **ತನುಪರಿಮಾಣನ್** – ದೇಹಪರಿಮಾಣಕ್ಕೆ ಆತ್ಮಸೀಮಿತ; **ಭವಚ್ಯುತಿ** – ಕರ್ಮನಿರ್ಜರೆಯಾಗಿ ಹುಟ್ಟು ಸಾವುಗಳ ಜಂಜಾಟದಿಂದ ದೂರವಾಗುವುದು.

ಅ–೧೨ **ಅಂತು** – ಹಾಗೆ; **ಮಾಣದೆ** – ಬಿಡದೆ; **ಪರಿಭಾವಿಸುತ್ತಿರೆ** – ಭಾವಿಸಿದರೆ; **ಬಾಹ್ಯದಾಟದೊಳ್** – ಹೊರಗಿನ ವ್ಯವಹಾರಗಳಲ್ಲಿ; **ನಿಜಾತ್ಮರತಂ** – ತನ್ನಾತ್ಮದಲ್ಲಿ ಅನುರಕ್ತನಾದವನಿಗೆ; **ಆಸರ್ ಅಪ್ಪುದು** – ಆಯಾಸವಾಗುವುದು; **ಬೆದರಿಕೆ ಅಪ್ಪುದು** – ಭಯವಾಗುತ್ತದೆ.

ಅ–೧೩ **ಕಿರಿದಪ್ಪುದು** – ಮೊಟಕಾಗುತ್ತದೆ; **ಅರೋಚಕಮಪ್ಪುದು** – ರುಚಿ ಹೋಗುತ್ತದೆ; **ಸಿಡಿಮಿಡಿ ಅಪ್ಪುದು** – ಜುಗುಪ್ಸೆ ಉಂಟಾಗುವುದು; **ಒಲ್ಲವು** – ಒಪ್ಪುವುದಿಲ್ಲ; **ಅಡಕಕ್ಕೆ ಒಳಗಪ್ಪುದು** – ಸಂಕ್ಷೇಪಕ್ಕೆ ಒಳಗಾಗುತ್ತದೆ; **ತುಡುಕುತ** – ಹುಡುಕುತ್ತಾ.

ಅ–೧೪ **ರಿಪು ಬಂಧು** – ಶತ್ರು ಮಿತ್ರ; **ತಪಂಗಳಾರು** – ೬ ಬಗೆಯ ತಪಗಳು. ೧. ಅನಶನ ೨. ಅವಮೋದರ್ಯ ೩. ವೃತ್ತಿ ಪರಿಸಂಖ್ಯಾನ ೪. ರಸಪರಿತ್ಯಾಗ ೫. ವಿವಿಕ್ತ ಶಯ್ಯಾಸನ ೬. ಕಾಯಕ್ಲೇಶ. ಇವು ಬಾಹ್ಯ ತಪಸ್ಸುಗಳು.

ಭಾವನೆಯ ಶಾಸ್ತ್ರವಿಲೋಕಿತೆ ಬೇಕು – ಷೋಡಶ ಭಾವನೆಗಳ ಬಣ್ಣಿಸುವ ಶಾಸ್ತ್ರದ ಅವಲೋಕನ ಮಾಡಬೇಕು.

ಷೋಡಶ ಭಾವನೆಗಳು : ತೀರ್ಥಂಕರತ್ವ ಸಾಧಿಸಿಕೊಡುವ ೧೬ ಭಾವನೆಗಳು: ೧. ದರ್ಶನವಿಶುದ್ಧಿ ೨. ವಿನಯಸಂಪನ್ನತೆ ೩. ಶೀಲವ್ರತೇಷ್ವನತಿಚಾರ ೪. ಅಭೀಕ್ಷ್ಣ ಜ್ಞಾನೋಪಯೋಗ ೫. ಸಂವೇಗ ೬. ಶಕ್ತಿ ತಸ್ತ್ಯಾಗ ೭. ಶಕ್ತಿತಸ್ತಪ ೮. ಸಾಧು ಸಮಾಧಿ ೯. ವೈಯಾವೃತ್ಯ ೧೦. ಅರ್ಹದ್ಭಕ್ತಿ ೧೧. ಆಚಾರ್ಯಭಕ್ತಿ ೧೨. ಬಹುಶ್ರುತ ಭಕ್ತಿ ೧೩. ಪ್ರವಚನ ಭಕ್ತಿ ೧೪. ಅವಶ್ಯಕಾ ಪರಿಹಾಣಿ ೧೫. ಮಾರ್ಗ ಪ್ರಭಾವನಾ ೧೬. ಪ್ರವಚನ ವತ್ಸಲತ್ವ.

ಚಲಿಸದೆ ಈಕ್ಷಿಸುವಂಗೆ – ಏಕಚಿತ್ತನಾಗಿ ನೋಡಬೇಕು; **ಕಣ್ಣರಿದು** – ಕಣ್ಣಲ್ಲಿ ಕಣ್ಣಿಟ್ಟು.

ಅ–೧೫ **ಎನ್ನೆಗಂ** – ಎಲ್ಲಿಯವರೆಗೂ; **ಅನ್ನೆಗಂ** – ಅಲ್ಲಿಯವರೆಗೂ; **ಉಗ್ರಕಾಲನಾ**– ಕ್ರೂರಯಮನೆಂಬ; **ಒತ್ತಿ** – ತುಳಿದು; **ಕಳಲ್ಚದಾತನು** – ನಿಗ್ರಹಿಸದಾತನು, ಕಿತ್ತೊಗೆಯದವನು; **ಬಹುಕಷಾಯಗಳನು** – ನಾಲ್ಕು ಬಗೆಯ (ಕ್ರೋಧ, ಮಾನ, ಮಾಯ, ಮದ) ಕಷಾಯಗಳನ್ನು; **ಕಷಾಯ** – ತಿಳಿದೂ ತಿಳಿದು ಮಾಡುವ ಹಿಂಸೆ. ಆತ್ಮನನ್ನು ಕೆಡಿಸುವುದೂ ದುಃಖವನ್ನು ಉಂಟು ಮಾಡುವುದು ಇದರ ಸ್ವಭಾವ.

ಅ–೧೬ **ತನುಪಗೆಯೆಂಬವಂ** – ದೇಹವನ್ನು ಶತ್ರುವೆಂದು ಬಗೆವವನು; **ವಿಷಯಂ** – ಇಂದ್ರಿಯ ಸುಖಗಳನ್ನು; **ಬಿಟ್ಟವಂ** – ತೊರೆದವನು; **ಗುಣಸಂತತಿ** – ಗುಣಸಮೂಹ; **ತತ್ತ್ವಭಾವನೆ** – ವಸ್ತು ಸ್ವರೂಪಭಾವನೆ; **ಶಿವಂ** – ಶುದ್ಧಾತ್ಮ ಸ್ವರೂಪನು. **ಎಣೆಯಾರ್** – ಸಮಾನರಾರು ?

ಅ–೧೭ **ಸೇವೆಯಂ ಕೊಂಬ** – ದುಡಿಸಿಕೊಳ್ಳುವ; **ಉಂಬಅನಿತರ್ಕೆಕೊಟ್ಟು** – ಜೀವಾಧಾರವಾಗುವಷ್ಟೆ ಆಹಾರಕೊಟ್ಟು; **ವಿರಸ+ಅನ್ನಮನೇ** – ನೀರಸಾಹಾರವನ್ನು ಶರೀರಕ್ಕೆ ನೀಡಿ; **ಬೆಂಬಿಡದೆ** – ಎಡೆಬಿಡದೆ; **ನೆಗಳ್ವವಂಗೆ** – ಮಾಡುವವನಿಗೆ; **ಎಣೆಯಾರ್** – ಸರಿಸಮಾನರಾರು ?

ಅ–೧೮ **ಒಳ್ಳುಣಿಸು** – ರುಚಿಕರವಾದ ಷಡ್ರಸಾನ್ನ; **ಗೂಢವಾಸಂ** – ಏಕಾಂತವಾಸ; **ಆಡುಂಬೊಲಂ** – ವಿಹಾರಸ್ಥಳ; **ಒಳುವಾತು** – ಚೆನ್ನುಡಿ; **ಅಪ್ಪಪ್ರಣಾಶದೊಳಗೆ** – ಪಾಪನಾಶ ಕಾರ್ಯದಲ್ಲಿ; **ಈಕ್ಷಣಂ** – ದೃಷ್ಟಿಯನ್ನೆಲ್ಲ; **ಕ್ಷಣಕೆ** – ಒಂದೇ ಕ್ಷಣದಲ್ಲಿ; **ಧೀರಂ** – ವಿವೇಕಿ.

ಏಳುತತ್ತ್ವಂ ಆಡುಂಬೊಲಂ – ಜೀವ ಅಜೀವ ಆಸ್ರವ ಬಂಧ ಸಂವರ ನಿರ್ಜರಾ ಮೋಹ ಈ ಏಳು ತತ್ತ್ವಗಳ ನೆಲೆವೀಡು.

ಅ–೧೯ **ಉಳಿದಗೋಷ್ಠಿ** – ಬೇರೆ ಗೋಷ್ಠಿ (ಸಭೆಗಳು)

ಸಿದ್ಧಂನಮ ಎಂಬ ವಾಕ್ಯಮಿರೆ – ಸಿದ್ಧರು ಪಂಚಪರಮೇಷ್ಠಿಗಳಲ್ಲಿ ಒಬ್ಬರು. ಸಿದ್ಧಶಿಲೆಗೆ ಹೋಗಿ ಶಾಶ್ವತ ಸುಖದಲ್ಲಿ ನೆಲೆಸಿದವರು. ಅಯೋಗಿ ಕೇವಲಿ. ಸಿದ್ಧರಲ್ಲಿ ೨ ವಿಧ. ಸಾಮಾನ್ಯಸಿದ್ಧ. ತೀರ್ಥಂಕರ ಸಿದ್ಧ. (ತಸುಶಾ ಪು.೨೭೬). ಪಂಚಪರಮೇಷ್ಠಿಗಳಿಗೆ ಮಾಡುವ ನಮಸ್ಕಾರ ಮಂತ್ರದಲ್ಲಿ ಣಮೋ ಸಿದ್ಧಾಣಂ (ಸಿದ್ಧರಿಗೆ ನಮಸ್ಕಾರ) ಎಂಬುದು ೨ನೇ ಮಂತ್ರ.

ಚಿದ್ಗುಣೋತ್ಪನ್ನ – ಆತ್ಮಗುಣಗಳಿಂದ ಉಂಟಾದ.

ಒಳ್ಪುಣಿಸು – ರುಚಿಕರವಾದ ಷಡ್ರಸಾನ್ನ ಆಹಾರ; ಸುಧಾನ್ನ ಅಮೃತಾನ್ನ; **ಬೇರ್ನುಡಿಯೇಕೆ?** – ಉಳಿದ ಮಾತೇಕೆ?

ಅ–೨೦ **ಕಷಾಯಗಳು ೪** (ಕ್ರೋಧ, ಮಾನ, ಮಾಯಾ, ಲೋಭ); **ಪರೀಷಹಗಳು** (೨೨). ಪರೀಷಹ ಎಂದರೆ ತಪಸ್ಸಿಗೆ ವಿಘ್ನಗಳಾಗಿ ಬರುವ ೨೨ ಅಡ್ಡಿ (ಉಪದ್ರವಗಳನ್ನು) ಗೆಲ್ಲುವುದು.

೧. ಹಸಿವನ್ನು ಸಹಿಸುವುದು ೨. ಬಾಯಾರಿಕೆಯನ್ನು ತಡೆಯುವುದು ೩. ಚಳಿ ಸಹಿಸುವುದು ೪. ಬಿಸಿ ತಡೆಯುವುದು ೫. ಸೊಳ್ಳೆ ಇತ್ಯಾದಿ ಕೀಟಗಳ ಕಡಿತ ಸಹಸುವುದು ೬. ನಗ್ನತ್ವದಿಂದಾಗುವ ತೊಂದರೆಗಳನ್ನು ಸಹಿಸುವುದು ೭. ಅರತಿ–ಅಪ್ರೀತಿಯ ಬಾಧೆ ತಡೆಯುವುದು ೮. ಸ್ತ್ರೀ ಸಹವಾಸ ಬಿಡುವುದು ೯. ಒಂದೇ ಕಡೆ ಹೆಚ್ಚು ಕಾಲ ನಿಲ್ಲದೆ ಸಂಚರಿಸುವುದು ೧೦. ಮಲಗುವ ಎಡೆ ಆಗುವ ತೊಂದರೆ ೧೧. ಕುಳಿತಿರುವಾಗ ಆಗುವ ತೊಂದರೆ ಸಹಿಸುವುದು; ೧೨. ಬೈಗುಳನ್ನು ಸಹಿಸಿಕೊಳ್ಳುವುದು; ೧೩. ಹೊಡೆತವನ್ನು ಸಹಿಸಿಕೊಳ್ಳುವುದು ೧೪. ಯೋಜಿನಲ್ಲಾಗುವ ಕಷ್ಟವನ್ನು ಸಹಿಸಿಕೊಳ್ಳುವುದು ೧೫. ಭಿಕ್ಷೆ ಸಿಗದಿದ್ದರೆ ಖೇದ ಪಡದಿರುವುದು ೧೬. ತಪಸ್ಸಿಗೆ ತಕ್ಕ ಪ್ರತಿಫಲ ಸಿಗದಿದ್ದರೂ ಶಾಂತವಾಗಿರುವುದು ೧೭. ರೋಗ ಬಂದರೆ ಶರೀರ ನಶ್ವರವೆಂದು ಭಾವಿಸಿ ಚಿಕಿತ್ಸೆಯಿಲ್ಲದಿರುವುದು ೧೮. ಮುಳ್ಳು, ಕಲ್ಲು ತಾಕಿದ ನೋವನ್ನು ಸಹಿಸುವುದು ೧೯. ತನ್ನ ಪ್ರಜ್ಞೆಗೆ ಅಹಂಕಾರ ಪಡದೆ ಇರುವುದು ೨೦. ತನಗೆ ಸುಜ್ಞಾನ ಪ್ರಾಪ್ತಿ ಇನ್ನೂ ಆಗಿಲ್ಲವೆಂದು ಕೊರಗದೆ ಇರುವುದು ೨೧. ಸೂಕ್ಷ್ಮ ಕೀಟಗಳಿಗೆ ಬಾಧೆಯಾದೀತೆಂದು ಸ್ನಾನ ಮಾಡದಿರುವುದು ೨೨. ಜನ ತನಗೆ ಪುರಸ್ಕರಿಸಿಲ್ಲವೆಂದು ಕೊರಗದಿರುವುದು. (ಸರಸ್ವತಿ ಪು. ೨೧೦).

ಅ–೨೦ **ಸುಗುಪ್ತಿಗಳಂ** – ಕರ್ಮ ನಿರೋಧಕ್ಕೆ ಅಥವಾ ಸಂವರ ಸಾಧನಕ್ಕೆ ಅಗತ್ಯವಾದ ಆಚರಣೆ. ಮನ ವಚನ ಕಾಯಗಳ ವ್ಯಾಪಾರವನ್ನು ಬಾಹ್ಯ ಪ್ರವರ್ತನಕ್ಕೆ ಬಿಡುಗಡೆ ತಡೆಯುವುದು. ಇದರಲ್ಲಿ ೩ ವಿಧ. ಮನೋಗುಪ್ತಿ, ವಚನಗುಪ್ತಿ, ಕಾಯಗುಪ್ತಿ.

ಅ–೨೧ **ಅದ್ರಿಯೊಳ್** – ಪರ್ವತದೊಳ್; **ಆತಪ** – ಬಿಸಿಲು; **ಕ್ಷುಧಾ** – ಹಸಿವು; **ತೃಷಾ** – ಬಾಯಾರಿಕೆ; **ಭರಮಂ** – ತೀವ್ರತೆ; **ಅಡರ್ತು** – ನುಗ್ಗಿ; **ಕೋಡಿ** – ಮುದುಡಿಕೊಂಡಿರುವ; **ಜೋಕರಿಪ** – ಮಂಕಾಗಿರುವ; **ಕಾನನಾಂತರದೊಳಗೆ** – ಕಾಡಿನೊಳಗೆ; **ನಿರ್ಜರೆ** – ಕರ್ಮನಾಶ.

ಸಪ್ತತತ್ವಗಳಲ್ಲಿ ಒಂದು – **ನಿರ್ಜರೆ** ಎರಡು ವಿಧ. **ಭಾವ ನಿರ್ಜರೆ, ದ್ರವ್ಯ** ನಿರ್ಜರೆ. ಪೂರ್ವಬದ್ಧ ಕರ್ಮವನ್ನು ಹೊರ ಹಾಕುವುದು. ಸವಿಪಾಕ ರೂಪವಾದ ಕರ್ಮಫಲಗಳು ಸೋರುವುದು **ನಿರ್ಜರೆ.**

ಪುರುಪರಮೇಶ – ಆದಿನಾಥತೀರ್ಥಂಕರ.

ಅ–೨೨ **ಪರಿದಿಟ್ಟ** – ತ್ಯಜಿಸಿದ; **ನೆರೆಗೆಲ್ದ** – ಪೂರ್ಣಜಯ ಗಳಿಸಿದ; **ಆಮೋದತೆಯಿಲ್ಲ** – ಸಂತೋಷವಿಲ್ಲ **ಉರುಧರ್ಮ ಉರು** – ಅತಿಶಯಧರ್ಮ

ಅ–೨೩ **ಆಗಮಪದ್ಧತಿ ಬಾರದಾಯ್ತು** – ತತ್ತ್ವವಿಚಾರ ಶಾಸ್ತ್ರ ರೀತಿ ತಿಳಿಯದಾಯ್ತು; **ಸೋದಿಪೆನ್** – ಶೋಧಿಸುತ್ತಿದ್ದೇನೆ. **ಅಳ್ಳೆದೆತನ** – ಅಧೈರ್ಯ; **ಚಳಮಾಯ್ತು** – ಚಂಚಲವಾಯಿತು.

ಅ–೨೪ **ಭೂರಿಮತಂಗಳಂ** – ನಾನಾ ಹಿರಿಯ ಮತಗಳನ್ನು; **ಪಲರಂ** – ಸಾಧ್ಯವಾದಷ್ಟು ಜನರನ್ನು; **ಮಾಹೋಗ್ರ** – ಬಹು ಕಠಿಣವಾದ; **ಈಕ್ಷಿಸುತ್ತ** – ಕಾಣುತ್ತ; **ಭವಬಂಧನ** – ಸಂಸಾರಬಂಧನ; **ಇಕ್ಕುವ** – ನಾಶಮಾಡುವ; **ಕರುಣೋನ್ನತಿ** – ಅನುಗ್ರಹ ವಿಶೇಷ; **ಪಟುವಪ್ಪುದು** – ನಿಪುಣನಾಗುವುದು; **ಮನೋಗಾರ** – ಮನೋಮಂದಿರ.

ಅ–೨೫ **ಪೊರಗಾಗಿ** – ಹೊರತಾಗಿ; **ಪದಂಗಳ್** – ಸ್ಥಾನಗಳು; **ಬಲ್ಲವಂ** – ಜ್ಞಾನಿಯು; **ಸುವಸ್ತು** – ಶ್ರೇಷ್ಠವಸ್ತು; **ಮಣಿತ್ರಿತಯಂ** – ರತ್ನತ್ರಯ; **ಸೋಲ್ತು** – ಮನಸೋತು; **ಕಣ್ಣಿಡುವ** – ಕಣ್ಣಿಡುವ ಜಾಗ; **ಆತ್ಮವಿಭವ** – ಆತ್ಮಸಂಪತ್ತು.

ಅ–೨೬ **ಕುಟಿಲತೆ** – ಕಲ್ಮಶ; **ಮಲಕಲಂಕಮಂ** – ಕರ್ಮದ ಕೊಳೆಯನ್ನು; **ಕಳಲ್ಚಿ** – ಕಳೆದು; **ಕಾಂತಿಸಂಪುಟದಲ್ಲಿ** – ಆತ್ಮಕಾಂತಿಯ ಪುಟಕ್ಕೆ ಹಾಕಿ; **ಭವ್ಯನು** – ಭವ್ಯಜೀವಿ; **ಉತ್ಕಟತಪದ** – ಕಠಿಣ ತಪಸ್ಸಿನ; **ಉಬ್ಬೆಗೆ** – ತಾಪಕ್ಕೆ; **ಅಳ್ಕಿದೊಡೆ** – ಹೆದರಿದರೆ.

ಅ–೨೭ **ಅಂಗಕೋಟಿಗಳಂ** – ಕೋಟ್ಯಾಂತರ ಶರೀರಗಳನ್ನು ಕಳೆದನು; **ಅಂತದರಿಂ** – ಹಾಗೆ ಅದರಿಂದ; **ಧೃತಿದೋರು** – ಧೈರ್ಯಗೆಡು.

ಅ–೨೮ **ಪೋದಪೋದ** – ಕಳೆದುಹೋದ; **ಬಳಿಸಂದು** – ಹಿಂಬಾಲಿಸಿ; **ಉಗ್ರತಪೋಭರ** – ಕಠಿಣವಾದ ತಪಸ್ಸಿನ ಭಾರದಲ್ಲಿ, **ತಾಗುವೆನೆಂದು** – ಎದುರಿಸಿ ಹೋರಾಡುವೆನೆಂದು; **ತಳ್ತಿರಿದು** – ಮೇಲೆ ಬಿದ್ದು ಇರಿದು; **ಅದೆಂದು ಗೆಲ್ವೆನ್**? – ಅದಾವಾಗ ಗೆಲ್ಲುವೆನು?; **ಎಯ್ದುವೆನ್** – ಸೇರುವೆನು.

ಅ–೨೯ **ಹೇವರಮಂ** – ಜುಗುಪ್ಸೆಯನ್ನು; **ಕ್ಷಣಾಂತರಕೆ** – ಮರುಕ್ಷಣಕ್ಕೆ; **ಭೈಗಿನಾಗಳ್** – ಸಂಜೆಕಾಲಕ್ಕೆ; **ಬೇವ** – ಬೆಂದುಹೋಗುವ; **ಅರಿದಾಯ್ತು** – ತಿಳಿಯದೆ ಹೋಯ್ತು.

ಅ–೩೦ **ರುಚಿಯೆನಿಪ್ಪುದು** – ಹಿತಕರವೆನಿಸುವುದು; **ಕೈಪೆ** – ಕಹಿ; **ಕಡೆಗೊತ್ತಿ** – ಕಡೆಗಾಣಿಸಿ; **ಆಡದಿರ್ದೊಡೆ** – ವಿನೋದಿಸದಿದ್ದರೆ; **ಕಿಡನೇ?** – ನಾಶವಾಗುವುದಿಲ್ಲವೇ?

ಅ–೩೧ **ನಾಗ** – ನಾಗೇಂದ್ರ (ಭವನಾಮರಲೋಕದ ಒಡೆಯ ಧರಣೇಂದ್ರ); **ನರ** – ಚಕ್ರವರ್ತಿ; **ಅಮರೇಂದ್ರ** – ದೇವೇಂದ್ರ; **ನಿಜದಿಂದೆ ಭಾವಿಸಲ್** – ಸರಿಯಾಗಿ ವಿಚಾರ ಮಾಡಿದರೆ; **ಮಹೇಂದ್ರಜಾಲದ** – ಮಾಯಾ ವಿದ್ಯೆಯ; **ಕುಮಂತ್ರದೆ** – ಮಾಟಮಂತ್ರಗಳಿಂದ; **ಸಂಭ್ರಮದಂತೆ** – ಭ್ರಮೆಯಂತೆ; **ಆಯ್ತು ಪೋಯ್ತು** – ಬಂದಂತೆ ಹೋದಂತೆ ಆಗುತ್ತದೆ.

ಅ–೩೨ **ದುರಿತನಾಶ** – ಕರ್ಮನಾಶಕ್ಕೆ; **ರುಚಿದೋರದು** – ಇಷ್ಟವಾಗದು; **ಒಯ್ಯನೆ** – ಕೂಡಲೆ, ಮೆಲ್ಲಮೆಲ್ಲನೆ; **ಈವುದು** – ಕೊಡು, ದಯಪಾಲಿಸುವುದು;

ಅ–೩೩ **ಸುವ್ರತ** – ಶ್ರೇಷ್ಠವ್ರತ; **ಪರ್ವಕಾಲ ನೆಗಳ್ಚುತೆ** – ಆಚರಿಸುತ್ತಾ; **ಧರ್ಮ ಸಂಯುಕ್ತರು** – ಧರ್ಮಾತ್ಮರು; **ಮೇಳ** – ಗೋಷ್ಠಿ; **ಸಡಿಲ್ದು** – ಸಡಿಲವಾಗಿ; **ಕರ್ಮನಿರ್ಜರೆಯ** – ಸಾಧನಗಳಿವು.

ಅ–೩೪ **ಅನ್ಯರು** – ಅನ್ಯಸ್ವಧರ್ಮೀಯರು; **ಜೋಡಿಸಿಕೊಳ್ವುದರ್ಕೆ** – ಅಳವಡಿಸಿ ಕೊಳ್ಳುವುದಕ್ಕೆ; **ಬಿರಿಸುಂಟೆ?** – ಕಷ್ಟವಿದೆಯೆ?; **ಎಯ್ದುವುದು** – ಹೊಂದುವುದು; **ಒಚ್ಚತ** – ಅವಕಾಶ.

ಅ–೩೫ **ಒಯ್ಯನೆ** – ಕ್ರಮಕ್ರಮವಾಗಿ, ಮೆಲ್ಲಮೆಲ್ಲನೆ; **ಪರಿಗ್ರಹಮಂ** – ಕ್ಷೇತ್ರಾದಿ ರೂಪ ಬಾಹ್ಯ ಪದಾರ್ಥಗಳನ್ನು ಅಪೇಕ್ಷಿಸುವುದು. ಮಮತೆ ಅಥವಾ ಮಮತ್ವಭಾವ ಪರಿಗ್ರಹಣಕ್ಕೆ ಕಾರಣ. ಸ್ತ್ರೀ ಪುತ್ರ ಧನ ಧಾನ್ಯಾದಿ ವಸ್ತುಗಳಲ್ಲಿ ತನ್ನದು ಎಂಬ ಮೋಹ. ಪರಿಗ್ರಹದಲ್ಲಿ ಅಂತರಂಗ ಪರಿಗ್ರಹ ಮತ್ತು ಬಾಹ್ಯ ಪರಿಗ್ರಹ ಎಂಬ ಎರಡು ಬಗೆಗಳಿವೆ.

ಗತಿನಾಲ್ಕರ – ಚತುರ್ಗತಿಗಳ – ದೇವಮಾನವತಿರ್ಯಕ್ ನಾರಕ ಜನ್ಮಗಳ; **ಶಿವಪದ** – ಮೋಕ್ಷ; **ಕಾಯದಕಷ್ಟ** – ಶರೀರದ ದುಃಖ; **ವಿಪುಲ ಶುದ್ಧಿಯಂ** – ಅಧಿಕವಾದ ಪರಿಶುದ್ಧತೆಯನ್ನು; **ವಿರಕ್ತಿ** – ವೈರಾಗ್ಯ; **ಒರೆವುದು** – ಹೇಳುವುದು; **ಓಜೆಯೂ** – ಸರಿಯಾದುದು ಅಲ್ಲವೇ? ಕ್ರಮವಲ್ಲವೇ?

ಅ–೩೬ **ಮಿಕ್ಕ** – ಅಧಿಕ; **ಲೇಶಮಂ** – ರವಷ್ಟಾದರೂ – **ಲೆಕ್ಕಿಪನೇ?** – ಪರಿಗಣಿಸುವನೇ?; **ಮೆಲ್ಲೆರ್ದೆಲುಂಟೆ?** – ಉದಾರಹೃದಯಿ ಆಗಿರುವನೆ?; **ಮೇಳದಾಟ** – ಮಕ್ಕಳಾಟ.

ಅ–೩೭ **ಗ್ರಹವೆಡೆಗೊಂಡವನಿಗೆ** – ಗ್ರಹಚಾರ ಕಾಡಿದವನಿಗೆ; **ಒರ್ಮೆ** – ಒಂದು ಸಲ; **ಮರವೆ** – ವಿಸ್ಮೃತಿ; **ಕೂಡೆ** – ಆಗಲೇ; **ಸಂಗ್ರಹಿಸುತಮಿರ್ಕುಂ** – ಉಂಟಾಗುತ್ತಿರುವುದು ಅಲ್ಲದೆ ಅದರ ಹೊರತು; **ಯಥಾಸ್ಥಿತಿ** – ಸಹಜಸ್ಥಿತಿ; **ನಿರಂತರಂ** – ಸದಾ; **ಕ್ಷಣಿಕಂಗಳ್** – ಚಂಚಲವಾಗಿರುತ್ತವೆ; **ನಿರುಗೆ** – ಸ್ಥಿರವಾಗಿರುವುದು; **ಸಹಜಚರಿತ್ರ** – ಸ್ವಾಭಾವಿಕ ನಡೆ; **ಎತ್ತಣದು?** – ಎಲ್ಲಿಯ ಮಾತು?

ಅ–೩೮ **ಸೊಕ್ಕಿ** – ಗರ್ವದಿಂದ ಉಬ್ಬಿ; **ಕಣ್ಮನಂಸಿರ್ಕಿ** – ಕಣ್ಮನನೆಟ್ಟು ತಲ್ಲೀನರಾಗಿ; **ಒಲ್ಲದೆ** – ಒಪ್ಪದೆ; **ಕೂಳಕೊರ್ಬಿಮಾಳ್** – ಆಹಾರದ ಸೊಕ್ಕಿನಲ್ಲಿ (ಅನ್ನ ಮದದಿಂದ); **ಕರ್ಕಶ ವೃತ್ತಿಯೊಳ್** – ಕ್ರೂರಾಚರಣೆಯಲ್ಲಿ; **ಪಲ್ಗಿರಿವರ್** – ಬಾಯಿ ಬಾಯಿ ಬಿಡುವರು.

ಅ–೩೯ **ರಚ್ಚೆಯ ಸಂಭ್ರಮಕ್ಕೆ** – ಬಾಹ್ಯಾಡಂಬರ ವಿಳಾಸಕ್ಕೆ; **ಇಚ್ಛೆಯ ಕೂಳುಣುತಂ** – ಮನಸ್ಸಿಗೆ ಬಂದಹಾಗೆ ಉಣ್ಣುತ್ತ; **ಕ್ಷಣಾಂತದೊಳ್** – ಮರುಕ್ಷಣದಲ್ಲಿ; **ಕಿಚ್ಚಿನ ಕೊಂಡಮಂ ಪುಗುವ ರಂಡೆಯವೊಲ್** – ಅಗ್ನಿಕುಂಡವನ್ನು ಪ್ರವೇಶಿಸುವ ವಿಧವೆಯಂತೆ; **ವಿಷಯಂಗಳಿಚ್ಛೆಯಂ** –ಇಂದ್ರಿಯಸುಖದ ಆಸೆಗೆ; **ಮೆಚ್ಚಿ** –ಒಲಿದು; **ಸುವ್ರತಗಳನ್ನು ಒಲ್ಲದೆ** – ಶ್ರೇಷ್ಠ ವ್ರತಗಳನ್ನು ಆಚರಿಸಲು ಒಪ್ಪದೆ; **ದುರ್ಗತಿಸ್ಥಳಕೆ** – ನರಕಕ್ಕೆ; ಬೀಳ್ವರು – ಸೇರುವರು; **ಅದೇಕೆ?** – ಯಾಕೆ ಹೀಗೆ? ಮಾಡುತ್ತಾರೆ; **ಹುಚ್ಚರು** – ಭ್ರಾಂತರು.

ಅ–೪೦ **ಭವದತ್ತ** – ಈ ಜನ್ಮದತ್ತ; **ಹಿಂದಣ** – ಹಿಂದಿನ; **ಆರ್‌ತಂದರ್**? – ಯಾರು ಕರೆತಂದರು?; **ಕುಂದದೆ** – ಹೆಚ್ಚಾಗಿ; **ಉಪಾರ್ಜಿಸಿರ್ದ** – ಸಂಪಾದಿಸಿದ; **ತಂದುದೇ?** – ತಂದೀತೇ; **ನಚ್ಚಿರದೆ** – ನಂಬದೆ; **ಇನ್ನು ಎಡೆ?** – ಇನ್ನಾವ ಸ್ಥಳ?; **ತಾಣತಾಣದೊಳ್** – ಪ್ರತಿ ಜಾಗದೊಳು.

ಅ–೪೧ **ಇತ್ತೊಡೆ** – ದಾನ ಮಾಡಿದರೆ; **ಬರ್ಪುದು** – ಬರುವುದೇ?; **ಕುಡದಿರ್ದೊಡೆ** – ದಾನ ಮಾಡದಿದ್ದರೆ; **ಲಯವಾದನೆ** – ನಾಶವಾದನೆ ?; **ಬರುತಂ** – ಬಡತನ–ಸಿರಿತನ, ಹುಟ್ಟು–ಸಾವು ಇವುಗಳು ಬರುತ್ತಲೂ; **ಸಿದ್ಧಿಯೂ** – ಆತ್ಮಸಿದ್ಧಿಯನ್ನು ಮಾಡುವುದಿಲ್ಲವೇ?

ಅ–೪೨ **ಪದಾಬ್ಜಭಕ್ತಿ** – ಪಾದಕಮಲಗಳಲ್ಲಿ ಭಕ್ತಿ; **ವಿಷಯಾರ್ಥವಿರಕ್ತಿ** – ಭೋಗೋಪಭೋಗ ವಿಷಯಗಳಲ್ಲಿ ವೈರಾಗ್ಯ; **ತಪೋಭರಕ್ಕೆ** – ತಪಸ್ಸಿನ ತೀಕ್ಷ್ಣತೆಗೆ; **ಅನುರಕ್ತಿ** – ಪ್ರೀತಿ; **ಅಚ್ಚಿನ್ನದೆ ಕಾಣ್ಬ** – ಅಖಂಡವಾಗಿ ಕಾಣುವ.

ಅ–೪೩ **ಗಡ, ಗಡಂ, ಗಡಾ** – ಅಲ್ಲವೇ; **ನಿರ್ವೃತಿ** – ಮೋಕ್ಷ; **ಸನ್ನಿಗಡಂ** – ಶೀತವಾಗುವುದಿಲ್ಲವೇ?; **ಭವತ್‌ಪ್ರತಿಗಡಾ** – ನಿನ್ನಲ್ಲಿಯಲ್ಲವೆ?; **ಆಂತುದು** – ತೆಗೆದುಕೊಂಡದ್ದು ದೀಕ್ಷೆ; **ಬಾಯ್ ಸವಿಯಾಸೆಯುಂ** – ಬಾಯಿಗೆ ಸವಿಯುವ ಚಪಲವುಂಟಾಗುತ್ತದೆ.

ಅ–೪೪ **ಬೆಳರ್ಪ** – ಪ್ರಕಾಶಿಸುವ; **ಮಣಿದೀಪ** – ರತ್ನದೀಪ; **ಪೊಯ್‌ಮಾಲೆಯ ವೆಯ್** – ಅನುಸರಿಸಿ ಬಂದಿರುವ; **ಎನ್ನ ಚಿತ್ಪಾಲಕ** – ನನ್ನ ಆತ್ಮರಕ್ಷಕನೇ.

ಅ–೪೫ **ತೊಗಲ ಪಸುಂಬೆಯೊಳ್** – ಚರ್ಮದ ಚೀಲದಲ್ಲಿಯೂ; **ಪೊಲಸಿನ** – ಹೊಲಸಿನ; **ಓವರಿಯೊಳ್** – ಕೋಣೆಯಲ್ಲಿ; **ರುಜೆಯೆಂಬ ಚೇಳ್ಗಳ** – ರೋಗವೆಂಬ ಚೇಳುಗಳ; **ಆ ಪಗವಿನೊಳ್** – ಆ ಕುಳಿಯಲ್ಲಿಯೂ; **ಇರ್ಪವೊಲ್** – ಇರುವಂತೆ; **ಕವಿದಿರ್ದಪಸ್**

– ಆದರಿಸಿಕೊಂಡಿರುವನು; **ತೂಗಿ ನೋಳ್ಪಿನಿಂ** – ಆಳವಾಗಿ ವಿಚಾರ ಮಾಡಿದರೆ **ಎಡೆಯುಂಟೆ**? – ಅವಕಾಶವಿದೆಯೆ?; **ತುತ್ತಿಡೆ** – ಬಾಯಿಗೆ ತುತ್ತಿಡಲು.

ಅ–೪೬ **ಮಾಸು ಮುಸುಂಕಿ** – ಗರ್ಭಕೋಶದಲ್ಲಿ ಸಿಲುಕಿ; **ಎಂತುಟು**? – ಹೇಗೆ?; **ಕಕ್ಕು ಜವ್ವನಂ** – ಸುಳ್ಳು ಯೌವನವು; **ಸಾಸದ** – ಶಾಶ್ವತ, ಚಿರ; **ನಚ್ಚಿದೆನಲಾ** – ನಂಬಿದೆನಲ್ಲಾ; **ಮತಿದೋರಾ** – ಸನ್ಮತಿ ಕರುಣಿಸು.

ಅ–೪೭ **ಪಗೆಯ** – ಶತ್ರುವಿನ; **ಸಿಲ್ಕಿ** – ಸಿಕ್ಕಿ; **ಮಹಾನುಭವ** – ಮಹಾಶಯ; **ತಾನೊಗೆವುದೊ** – ತಾನು ಉಂಟಾಗುವುದೋ?; **ವಿಡಾಯವೆ** – ಆಡಂಬರವೇ?; **ಮಚ್ಚರ** – ಮತ್ಸರ, ಅಸೂಯೆ; **ಕಳೆವಂದು** – ಕಳಚಿಕೊಂಡಾಗ; **ಜೋಕೆಯ** – ಜಾಗರೂಕತೆಯ; **ಉಜ್ಜುಗ** – ಪ್ರಯತ್ನವು; **ಪೆರತೊಂದಿಹುದೇ**? – ಬೇರೆ ಚಿಂತನೆಗಳಿಲ್ಲ.

ಅ–೪೮ **ಪರ್ವದಿನಗಳು** – ನೋಂಪಿಯ ದಿನಗಳು, **ಪರಿಭಾವಿಪ** – ವಿಚಾರ ಮಾಡುವ; **ಬಲ್ಲ ಅನಿತಂ** – ತಿಳಿದಷ್ಟನ್ನು; **ಪೆರರ್ಗೆ** – ಇತರರಿಗೆ; **ಮೂರು ಸಂಜೆಗಳು** – ಬೆಳಿಗ್ಗೆ ಮಧ್ಯಾಹ್ನ ಸಂಜೆ ಎಂಬ ಮೂರು ಸಂಧ್ಯಾ ಸಮಯಗಳಲ್ಲಿ ಪಂಚ ನಮಸ್ಕಾರ, ಪಠನ, ಸ್ತವನ ಪೂಜಾದಿಗಳನ್ನು ಮಾಡುವುದು; **ಆರು ಸುಪರ್ವ ದಿನಂಗಳಂ** – ೨ ಪಂಚಮಿ, ೨ ಅಷ್ಟಮಿ, ೨ ಚತುರ್ದಶಿಗಳೆಂಬ ೬ ವ್ರತ ದಿನಗಳನ್ನು ಉಪವಾಸಾದಿ ವ್ರತಮಾಡಿ ಧರ್ಮಧ್ಯಾನದಲ್ಲಿ ನಿರತನಾಗುವುದು; **ತಕ್ಕ** – ಯೋಗ್ಯವಾದ; **ನೆಗಳ್ದು** – ನಡೆಸುವ; **ಇಂತುಟು** – ಈ ರೀತಿಯಾದ; **ದಂದುಗಳಿಂ** – ಕಾಯಕ್ಲೇಷ ರಹಿತವಾದ ಕಾರ್ಯಗಳಲ್ಲಿ.

ಅ–೪೯ **ಓಜೆಯಿಂ** – ಔಚಿತ್ಯಪೂರ್ಣವಾಗಿ; **ಮಹಾಸಭೆಯೊಳ್** – ಸಮವಸರಣದಲ್ಲಿ; **ನುಡಿವಂತಿಕೆ** – ತೀರ್ಥಂಕರರ ದಿವ್ಯಧ್ವನಿಯಂತೆ; **ಮುಳುವಟ್ಟೆಯೊಳ್** – ಮುಳ್ಳು ಹಾದಿಯಲ್ಲಿ; **ಎಯ್ದುವವನಂತೆ** – ಎಚ್ಚರದಿಂದ ನಡೆಯುವವನಂತೆ **ಓಜೆಯಿಂ** – ಕ್ರಮಬದ್ಧವಾಗಿ ನಡೆಯಬೇಕು; **ಒಡನೆ** – ಕೂಡಲೇ; **ನಿಜಾತ್ಮಚಿಂತೆಯೊಳ್** – ಆತ್ಮಚಿಂತನೆಯೊಳ್; **ಅಘವೇನ್**? – ಪಾಪದ ಭಯವೆಲ್ಲಿ ಬಂತು; **ಇಹಂಗೆ** – ತೊಡಗಿದವನಿಗೆ.

ಅ–೫೦ **ಲೋಕದವಾರ್ತೆ** – ಲೌಕಿಕ ಸಮಾಚಾರಗಳಲ್ಲಿ; **ಬಧಿರನ್** – ಕಿವುಡನು; **ಮೂಕತೆ** – ಮೂಗನಂತೆ ವರ್ತಿಸುವುದು; **ಅಂಧಕಂ** – ಕುರುಡನು; **ಪ್ರಮಾದೈಕದೆ** – ಪ್ರಮಾದವಶಾತ್; **ಓಕರಿಪಾತಂ** – ಅಸಹ್ಯಪಡುವವನು; **ಅಂತಕನಂ** – ಯಮನನ್ನೂ; **ಅಂಜಿಸನೇ** – ಹೆದರಿಸುತ್ತಾನೆ ಅಲ್ಲವೇ?

ಅ–೫೧ **ಮತಿಸೋಲದೆ** – ಚಂಡಾಲನಾಗದೇ, ಬುದ್ಧಿಗೇಡಿಯಾಗದೆ; **ಶುದ್ಧಜೀವನಂ ನೋಡುವ** – ಪರಿಶುದ್ಧಾತ್ಮನನ್ನು ಕಾಣುವ; **ಪವಣಾಗೆ ಪೇಳ್ವ** – ಔಚಿತ್ಯವರಿತು ಹೇಳುವ; **ತೊನೆದಾಡದೆ** – ತೂಗಾಡದೆ, ಚಂಚಲನಾಗದೆ; **ಕಡುವಿರಾಗಿ** – ಶ್ರೇಷ್ಠ ವೈರಾಗ್ಯಮೂರ್ತಿ ಆಗಿರುತ್ತಾನೆ, ಅನಾಸಕ್ತಯೋಗಿ ಎನಿಸುತ್ತಾನೆ.

ಅ–೫೨ **ಕಣ್ಮಲರ್** – ನಯನಪುಷ್ಪ, ಕಣ್ಣೆಂಬ ಹೂ; **ಅಳ್ಕರಿಂದ** – ಪ್ರೀತಿಯಿಂದ; **ಒಸರೆ** – ಆನಂದಾಶ್ರು ಸುರಿಯಲು; **ವಿಶೋಧಿ ಪೊಣ್ಮೆ** – ವಿಶುದ್ಧತೆ ಹೊರಹೊಮ್ಮಲು, **ರಾಗಿಸೆ** – ಅನುರಕ್ತಿಯಿಂದ ಪಾಡುತ್ತಾ; **ರೋಮಜಾಲವು ಉಣ್ಮೆರೆ** – ರೋಮಾಂಚನ ಹೊರಹೊಮ್ಮುತ್ತಿರಲು; **ಅನುಕಂಪನವೆತ್ತ** – ವಾತ್ಸಲ್ಯಭಾವಗಳಿಂದ ಕೂಡಿ; **ಅಣ್ಮಿ** – ಸ್ಪರ್ಶಿಸಿ; **ತವಾಂಘ್ರಿಗಳಿಗೆ** – ನಿನ್ನ ಪಾದಗಳಿಗೆ; **ಅಲರಂ ಅರ್ಚಿಪೆನ್** – ಪುಷ್ಪಾರ್ಚನೆ ಮಾಡುತ್ತೇನೆ.

ಅ–೫೩ **ತಳುವೇನ್**? – ತಡಮಾಡದೆ ಶೀಘ್ರದಲ್ಲಿ; **ಅಳಲ್ ಎಯ್ದಿದನ್** – ದುಃಖ ಭರಿತನಾದನು; **ಮಹಾಭೀತಿಯನ್ ಎಯ್ದಿದಂ** – ಭೀಕರ ಭಯವನ್ನು ಹೊಂದಿದನು; **ಆತ್ಮಸಂಭೂತಿಗೆ** – ಆತ್ಮಸಂಪತ್ತಿಗೆ.

ಅ–೫೪ **ಅಕ್ಕೆ** – ಆಗಲಿ; **ಶ್ರುತಯೋಗ ಸಮೃದ್ಧನ್** – ಪರಿಪೂರ್ಣ ಶಾಸ್ತ್ರವಿಶಾರದ ನಾದವನು; **ಸಂಜೀವಕನ್** – ಪ್ರಾಣರಕ್ಷಕನು; **ಎಂಬೆನ್** – ಎಂದು ಸಾರುವೆನು; **ಇನಿತು ಪಕ್ಷವಿದೆಂಬೆಯ** – ಇದೇಕೆ ಇಷ್ಟೊಂದು ಪಕ್ಷಪಾತ ಎನ್ನುವಿಯಾ?; **ಎನಗನ್ಯನೇ**? – ಅವನು ನನ್ನವನೇ ಬೇರೆಯವನಲ್ಲ.

ಅ–೫೫ **ಸ್ಮರಪಿಶಾಚ ವಿಜೃಂಭಿತಂ** – ಮೋಹಪಿಶಾಚಿಯ ಕಾಟದಿಂದ ಕೂಡಿದೆ; **ಇಂದ್ರಕಾಲ ವಿದ್ಯಾಕಥನಂ** – ಮಾಯಾವಿದ್ಯೆಯ ಮಹಿಮೆಯ ಮಾತೇ ಆಗಿದೆ; **ದೀಪನದಾಹುತಿ** – ಅಗ್ನಿ ಜ್ವಾಲೆಯಲ್ಲಿ ಬಲಿಯಾಗಿದೆ; **ಆರ್ಗೆಮಾಳ್ಪೆನ್** – ಯಾರಲ್ಲಿ ಹೇಳಿಕೊಳ್ಳಲಿ; **ಕನಲ್ವೆನ್** – ಕೋಪಿಸಿಗೊಳ್ಳಲಿ; **ಪಕ್ಷದಿಂ** – ಒಲವಿನ ಪಕ್ಷಪಾತದಿಂದ; **ಮೂಕತೆ** – ಮೌನ; **ದಯೋಕ್ತಿ** – ವಾತ್ಸಲ್ಯದಿಂದ.

ಅ–೫೬ **ಮೃತವಾದನೆ? ಆದನು** – ಸತ್ತೇ ಹೋದನಲ್ಲಾ; **ಸುಗೋಷ್ಠಿಗೆ** – ಧರ್ಮಸಭೆಗೆ; **ಇವನೊಳ್ ಎಯ್ದೆನ್** – ಜತೆಯಲ್ಲಿ ಹೋಗಿದ್ದೆ; **ಲಯವಾದನೆ** – ಮರಣಿಸಿದನೇ, ಪಂಚಭೂತಗಳಲ್ಲಿ ಲೀನನಾದನೆ?; **ಕಡೆಗಂಡನೇ** – ಅಂತ್ಯವಾದನೆ; **ನಚ್ಚುವೆನ್** – ನಂಬುವೆನು.

ಅ–೫೭ **ಎಲೆಯಲೆ** – ಅರರೇ; **ಕಂಡರೊಳ್** – ನೋಡಿದವರಿಲ್ಲ; ಭೇಟಿಯಾದವರಿಲ್ಲ; **ಮೆಯ್ಬಲೆಯೊಳೆ** – ಶರೀರಜಾಲದಲ್ಲಿ; **ಬಾಳ್ವೆನ್** – ಜೀವಿಸುವೆನು; **ತತ್ತನುವಂ** – ಆ ದೇಹವನ್ನು; **ನಿಜತ್ವಂ** – ಮೋಕ್ಷವನ್ನು, ಆತ್ಮಸ್ವರೂಪವನ್ನು.

ಅ–೫೮ **ಇಳಿವಾಯತಂ** – ಕಳೆದುಹೋಗುವ ಆಯುಷ್ಯವನ್ನು; **ಗಳಿಯಾರ ಸನ್ನೆಯುಂ** – ಗಡಿಯಾರದ (ಕಾಲನ) ಸಂಕೇತವೂ; **ಓದುತ್ತಿರ್ಪ** – ವಾಚಿಸುತ್ತಿರುವ, ಸಾರುತ್ತಿರುವ; **ತಿಥಿಪಾಕರ** – ಅಂತ್ಯಕಾಲ ಘೋಷಿಸುತ್ತಿರುವವರ; **ನಿನ್ನ ಊಳಿಗದಿಚ್ಛೆಯು** – ಸೇವಾ ಕೈಂಕರ್ಯ.

ಅ–೫೯ **ಸಮಾನಚಿತ್ತ** – ಸಮಾನಭಾವನೆ; **ಕರ್ಮನಿಬಂಧಮಂ** – ಕರ್ಮದ ಕಟ್ಟುಪಾಡನ್ನು; **ಉಪಶಾಂತಿ** – ನೆಮ್ಮದಿ, ಶಾಂತಿ, ಸಮತೆ.

ಮೂರುಗಂಟಿಕ್ಕಿದ ಗಾದೆ – ಕಗ್ಗಂಟಾದ ಕಥೆ; ಪರಿಹಾರ ಸೂಚಿಸಲು ಹೋಗಿ ಫಜೀತಿಗೆ ಸಿಲುಕಿಕೊಂಡೆ.

ಅ–೬೦ **ತುಟ್ಟಿದ ಪಟ್ಟಣಕ್ಕೆ** – ಬೇಕಾದ ನಗರಕ್ಕೆ; **ಬಿಟ್ಟೆಡೆಯೊಳ್** – ಬೀಡುಬಿಟ್ಟ ಜಾಗಗಳಲ್ಲಿ; **ಅಲ್ಲಿಗಲ್ಲಿ** – ಅಲ್ಲೆಲ್ಲಾ; **ಪಲಂಬರಲ್ಲಿ** – ಹತ್ತಾರು ಜನರಲ್ಲಿ; **ಸಮಂಬಡೆದಿರ್ಪನ್** – ಸಮಭಾವ ಹೊಂದಿರುವಂತೆ; **ಪಲರಲ್ಲಿ ಮುಟ್ಟಿಯುಂ** – ಅನೇಕರ ಸಂಪರ್ಕಕ್ಕೆ ಬಂದರೂ; **ನಡೆಯವೇಳ್ಕುಂ** – ನಡೆದುಕೊಳ್ಳಬೇಕು.

ಅ–೬೧ **ಕುಮತಿ** – ದುರ್ಬುದ್ಧಿ; **ಕಾಳ್ನುಡಿ** – ಕೆಟ್ಟಮಾತು; **ಕೀಳ್ನಡೆ** – ಹೀನಾಚಾರ; **ತದೀಯ ಕಷಾಯ ಗುಣಂಗಳ್** – ಅವನಲ್ಲಿರುವ ರಾಗ ದ್ವೇಷ ಲೋಭ ಮೋಹ ಮೊದಲಾದ ಕಷಾಯಗುಣಗಳೆಂದು ಭಾವಿಸಬೇಕು; **ತನ್ನೊಳ್ ಆಗದಂತೆ** – ತನ್ನೊಳಗೆ ಮನೆ ಮಾಡದಂತೆ; **ಸ್ವಪರವೇದಿ** – ಆತ್ಮಸ್ವಭಾವಂ – **ಪರಭಾವ ಭಿನ್ನಂ** – ಎಂದು ತಿಳಿದು ಬಾಳುವವನು ಎಂದರೆ ಆತ್ಮಜ್ಞಾನಿ ಪರವಸ್ತುಜ್ಞಾನಿ ಆದವನು.

ಅ–೬೨ **ಗುಣಿ** – ಗುಣವಂತ; **ಗಣಿಯಿಸಿದಂದು** – ಪರಿಗಣಿಸಿದಾಗ; **ಗುಣವಿಹೀನನೆ** – ಗುಣರಹಿತನೆ ಆಗುತ್ತಾನೆ; **ಅಂತದರಿಂದೆ** – ಆದುದರಿಂದ; **ಸರ್ವರೊಳ್ ಗುಣವನೆ ಕಾಣ್ಬೊಡ** – ಎಲ್ಲರನ್ನು ತನ್ನಂತೆ ಭಾವಿಸಬೇಕು; **ಅವರಂ ತರಲಾರೆರ್ಪೊಡೆ** – ಇತರರನ್ನು ಉತ್ತಮ ಗುಣಿಗಳನ್ನಾಗಿ ಮಾಡಬೇಕು. ಹಾಗೆ ಮಾಡಲಾಗದಿದ್ದರೆ ಅವರ ಚಿಂತೆಯೇಕೆ? ಪರರ ಚಿಂತೆ ಮಾಡಬಾರದು.

ಅ–೬೩ **ಪರ್ವಿದ ಮಿಥ್ಯೆಯೊಳ್** – ಹಬ್ಬಿರುವ ಮಿಥ್ಯಾತ್ವದಲ್ಲಿ; **ಒಂದು ಗುಣಮಂ ಗುಣಕೋಟಿಯೆನುತ್ತೆ** – ಅಲ್ಪವನ್ನು ಕಲ್ಪವೆಂದು ಭಾವಿಸಿ; **ಉಬ್ಬುವವಂಗೆ** – ಹೆಮ್ಮೆ ಪಡುವವನಿಗೆ; **ಒಲ್ದು ಇರವೇ?** – ಪ್ರಿಯವಾಗವೇ?

ಅ–೬೪ **ಆರ್ತ** – ಆರ್ತಧ್ಯಾನ; **ವಿರೋಧ** – ಹಗೆಭಾವ; **ಮೋಹ** – ಮಮಕಾರ; **ಉರ್ವಿನ** – ಸೊಕ್ಕಿನ; **ವತ್ಸನಾಭಿ** – ಘೋರವಿಷಮೂಲಿಕೆ, ಎಳೆನಾಗವಿಷ; **ನಿರ್ವಿಷಂ** – ವಿಷಪರಿಹಾರಕ ಔಷಧಿ; **ಮರೆದು** – ನೆನೆಯದೆ; **ನೋವರ್** – ದುಃಖದಿಂದ ಬಳಲುತ್ತಾರೆ.

ಅ–೬೫ **ಅರಿಯಲೆ** – ತಿಳಿದುಕೊಳ್ಳಲು; **ಈಯದು** – ಬಿಡದು; **ಅಷ್ಟಸಂತತಿ ಚಿತ್ತಂ** – ಪಾಪ ಸಮೂಹದ ಮನಸ್ಸು; **ಅಸ್ತಬೆಸ್ತವನೆ ಮಾಡುವುದು** – ಏರುಪೇರಾಗಿಸುವುದು; **ಅರಿವಿನೊಳ್ ಈಕ್ಷಿಸಲ್ಕೆಬಿಡದು** – ಜ್ಞಾನ ಚಕ್ಷುವಿನಿಂದ ಪರಿಕಿಸಲು ಬಿಡದು; **ಅಚ್ಚರಿನೋಡಾ** – ಇದು ನಿಜಕ್ಕೂ ಆಶ್ಚರ್ಯದ ಸಂಗತಿಯಾಗಿದೆ; **ಭೇದಿಸಿ** – ಆತ್ಮ ಬೇರೆ ದೇಹ ಬೇರೆ ಎಂದು ತನ್ನಲ್ಲೇ ಪ್ರತ್ಯೇಕಿಸಿ ನೋಡಲು; **ಬಿಡದು** – ಅಘಸಂತತಿ ಅವಕಾಶ ನೀಡದು.

ಅ–೬೬ **ಎಯ್ದೆ** – ಚೆನಾಗಿ; **ಎರಳ್ ಫಲಂಗಳಂ** – ಪಾಪ–ಪುಣ್ಯಗಳೆಂದು ಎರಡು ಫಲಗಳನ್ನು; **ಪುಲ್‌ಪುಳು** – ಕ್ಷುದ್ರಕರವ? ಹುಲ್ಲು, ಹುಳು; **ಬಹುಸ್ಥಿತಿ** – ಅನೇಕ

ಜನ್ಮಗಳನ್ನು; **ಅಪ್ಪನ್** – ಹೊಂದುತ್ತಾನೆ; **ಆ ಮಳಕುಳಮು** – ಆ ಕರ್ಮ ಮಲಿವನ್ನು; **ಕಳಲ್ಚೆ** – ಕಳಚಿದರೆ; **ಸುಖಿಯಪ್ಪನ್** – ನಿತ್ಯ ಸುಖಿಯಾಗುತ್ತಾನೆ.

ಅ–೬೭ **ಕರ್ಮನಿಬಂಧನ್** – ಕರ್ಮವಶನು; **ಅಬಂಧನಮೂರ್ತನೆ** – ಮೂರ್ತನಾಗಿದ್ದರೂ, ಕರ್ಮಮುಕ್ತನಾಗಿರುತ್ತಾನೆ; **ಕೂರ್ಮೆ** – ಹರ್ಷ, ಸುಖ; **ವಿಷಾದ** – ದುಃಖ; **ನಭದಂತೆ** – ಆಕಾಶದಂತೆ; **ಧರ್ಮಗುಣಾತಿಶಯಿಕನ್** – ಅನಂತಜ್ಞಾನ, ಅನಂತದರ್ಶನ, ಅನಂತಸುಖ, ಅನಂತವೀರ್ಯಗಳೆಂಬ ಅನಂತಚತುಷ್ಟಯ ಗುಣಗಳುಳ್ಳವನು; **ತಿಳಿಯ ಬಲ್ಲಿದರಾರ್** – ತಿಳಿಯುವ ಜಾಣನಾರು ?

ಅ–೬೮ **ನೆರೆವನ್** – ವ್ಯಾಪಿಸುವವನು; **ಅಂಗದ ನೋಟದೆ** – ವ್ಯವಹಾರ ದೃಷ್ಟಿಯಿಂದ; **ಬದ್ಧನ್** – ಕರ್ಮಬದ್ಧನೂ; **ಆ ಲೋಕನದಿಂದ** – ನಿಶ್ಚಯ ದೃಷ್ಟಿಯಿಂದ; **ಇದಂ ಶೌರ್ಯಂ ಅದಾರ್ಗೆ**? – ಇದು ಯಾರಿಗೆ ಸಾಧ್ಯ?

ಅ–೬೯ **ಕುವಾದಿವಿವರ್ಜನಕ್ಕೆ** – ಮಿಥ್ಯಾವಾದ ಮಾಡುವವರನ್ನು ದೂರಮಾಡಲು; **ನಯ** – ಪದಾರ್ಥದ ಸಂಪೂರ್ಣತೆಯ ಕಡೆಗೆ ಅಷ್ಟೊಂದು ಲಕ್ಷ್ಯವನ್ನಿಡದೆ ಪ್ರಮಾತೃವಿನ ಅಭಿಪ್ರಾಯಕ್ಕೆ ವಿಷಯವಾದ ಯಾವುದೊಂದೇ ಭಾವವನ್ನು ಅನುಲಕ್ಷಿಸಿ ವಿಷಯವನ್ನು ನಿರೂಪಿಸುವುದು ನಯವೆನಿಸುವುದು. (ತಸು ಪು.೧೪೯)

ಅ–೭೦ **ಮಣಿತ್ರಯ** – ರತ್ನತ್ರಯ. ರತ್ನತ್ರಯ ಎರಡು ವಿಧ. **ವ್ಯವಹೃತಿ** (ವ್ಯವಹಾರ) **ನಿಶ್ಚಯತೆ** ಎಂದು ೨ ಬಗೆ. **ವ್ಯವಹಾರವಯವೆಂದರೆ ದೇವ ವಚನತಾಪಕೇಳವ ಧಾರಣೆ** – ವೇದ ಶಾಸ್ತ್ರ ಗುರುಗಳ ನಂಬಿಕೆಯು. **ದೇವ** – ಶಾಸ್ತ್ರ ಗುರುಗಳ ನಂಬಿಕೆಯು ; **ದೇವ** – ೧೮ ದೋಷರಹಿತನು; **ಗುರು** – ಇಂದ್ರಿಯಲಾಲಾಸೆ ಇಲ್ಲದೆ ಎಲ್ಲ ಪ್ರಕಾರದ ಆರಂಭ ಪರಿಗ್ರಹ ರಹಿತನಾಗಿ ಜ್ಞಾನಧ್ಯಾನದಲ್ಲಿರುವವನು.

ಶಾಸ್ತ – ಸರ್ವಜ್ಞ ದೇವರ ಉಪದೇಶ.

ಅ–೭೧ **ತತ್ತ್ವಸಪ್ತಕಂ** – ಜೀವ, ಅಜೀವ ಆಸ್ರವ ಬಂಧ ಸಂವರಾ ನಿರ್ಜರಾ ಮೋಕ್ಷ (ವಿವರಗಳಿಗೆ ಪಾ...... ಪು. ೪೫–೪೬ ನೋಡಿ.). **ಆಪ್ತನೊಳ್** – ಭಗವಂತನಲ್ಲಿ; **ಆಗಮದೊಳ್** – ಜಿನಾಗಮಗಳಲ್ಲಿ; **ತಪಸ್ವಿಯೊಳ್** – ತಪಸ್ವಿಗಳಲ್ಲಿ; **ಪುದಿದುರು** – ಅಡಕವಾಗಿದೆ; **ಎರವಿಲ್ಲಂ** – ಬೇರೆಯಾಗಿಲ್ಲ ಅವುಗಳಿಂದ; **ತವಆಜ್ಞೆ**– ನಿನ್ನಾದೇಶ.

ಅ–೭೨ **ನಿಜಮಂತಿಳಿದು** – ಸತ್ಯಸ್ವರೂಪವನ್ನು ಅರಿತು; **ಅಲ್ಲಿಯೇ ಲೀನವಾಗಿ** – ಆ ನಿಜಾತ್ಮ ಸ್ವರೂಪದಲ್ಲಿಯೇ ಲೀನವಾಗಿ; **ಚೇತಸ್** – ಮನಸ್ಸನ್ನು; **ಚಿರಂ** – ಶಾಶ್ವತವಾಗಿ; **ನೆಗಳ್ಚೆ** – ತೊಡಗಿಸಿದರೆ; **ಶಿವಂ** – ಮೋಕ್ಷ ಪ್ರಾಪ್ತಿ ಆಗುವುದು.

ಅ–೭೩ **ನಿನ್ನೊಳಗೆ ಐಕ್ಯವಾಗು** – ನಿನ್ನಾತ್ಮನೊಳಗೆ ಐಕ್ಯವಾಗು; **ಅದುವೆ** – ಆ ಐಕ್ಯವೇ; **ಇಂತುಟೆಂದು** – ಈ ಪ್ರಕಾರವಾದುದೆಂದು; **ಬುಧಂಗೆ** – ಜ್ಞಾನಿಗಳಿಗೆ; **ರತ್ನೋನ್ನತಿ** – ರತ್ನತ್ರಯದ ಉನ್ನತಿ.

ಅ–೭೪ **ವರಗುರುಪಂಚಕಂ** – ಶ್ರೇಷ್ಠರಾದ ಪಂಚಪರಮೇಷ್ಠಿಗಳು (ಅರ್ಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ, ಸಾಧು); **ಚಿತ್ಪರಿಣತೆಯಲ್ಲಿ** – ನಿನ್ನ ಆತ್ಮಾನುಭವದಲ್ಲಿ; **ನಿಟ್ಟಿಸು ಒಳಗೆ** – ಅಂತರಂಗದಲ್ಲಿ ಆತ್ಮ ಸ್ವರೂಪದಲ್ಲಿ ನೋಡು; **ತೋರ್ಕುಂ** – ಆತ್ಮರೂಪದಲ್ಲಿ ತೋರುವುವು.

ಅ–೭೫ **ಪೊರಗೆ ಅರಸಲ್ಕೆವೇಡ** – ಹೊರಗೆ (ಬಾಹ್ಯಜಗತ್ತಿನಲ್ಲಿ) ಹುಡುಕಬೇಡ; **ಏರಕಕ್ಕೆ ಅಧಿವೈವಮುಂ** – ಐಕ್ಯಕ್ಕೆ ಅಧಿದೇವತೆಯೂ; **ಶರಣಂ** – ರಕ್ಷಕವೂ; **ಶರಣಾರ್ಥಿ** – ರಕ್ಷಣೆಯನ್ನು ಇಚ್ಛಿಸುವವನು; **ಕಾಣ್ಕೆ** – ದರ್ಶನ; **ಅಡರ್ಪುಂ** – ಪ್ರತಿಬಿಂಬವಿದ್ದ ಹಾಗೆ; **ಅಂತದೆ** – ಆ ಜ್ಞಾನವೇ; **ಆತ್ಮತತ್ತ್ವ** – ಸಮ್ಯಕ್ ದರ್ಶನಜ್ಞಾನ; **ಚಾರಿತ್ರಗಳೇ** – ಆತ್ಮತತ್ತ್ವಗಳಾಗಿವೆ.

ಅ–೭೬ **ಅದನ್ ಅರಿದಾತನ್** – ಆತ್ಮತತ್ತ್ವವನ್ನು ತಿಳಿದವನು; **ಅದೊಂದು ಪೊರಗಾದೊಡೆ** – ಆತ್ಮಜ್ಞಾನ ವಿರಹಿತನಾದರೆ; **ಚದುರರೆನಿಕ್ಕುಂ** – ಶಾಸ್ತ್ರಪ್ರವೀಣರೆನಿಸಿಕೊಳ್ಳುವವರಾದರೆ; **ಆತ್ಮಪದಸಾಧಕರೇ?** – ಆತ್ಮಸಾಕ್ಷಾತ್ಕಾರಪಡೆದ ಸಿದ್ಧರಾಗುವರೇ ? (ಆಗುವುದಿಲ್ಲ)

ಅ–೭೭ **ಉದ್ಗತದೃಷ್ಟಿ** – ಹೊರದೃಷ್ಟಿಯಿಂದ; **ಸಕಲಮಂ** – ಬಾಹ್ಯಜಗತ್ತನ್ನೆಲ್ಲ; **ಈಕ್ಷಿಸವರ್ಪುದು** – ನೋಡುವುದಕ್ಕಾಗುತ್ತದೆ; **ಹೃದ್ಗತರೂಪದ** – ಸ್ಪರ್ಶ, ರಸ, ಗಂಧ ಮತ್ತು ವರ್ಣವುಳ್ಳದ್ದು ಪುದ್ಗಲ; **ಷಡ್ರಸಗಳು** – ಕಾರ, ಒಗರು, ಕಹಿ, ಹುಳಿ, ಸಿಹಿ, ಉಪ್ಪು ರಸಗಳಿಂದ ಇಂದ್ರಿಯ ಸುಖ ಸಿಗಬಹುದು. ಆತ್ಮ ಸುಖ ಸಿಗದು.

ಅ–೭೮ **ತಡೆತಡೆದೋಡುತಿರ್ಪ ಮನಮಂ** – ಹೊರಗಿನ ವಿಷಯಗಳಲ್ಲಿ (ಲೌಕಿಕ ವಿಚಾರಗಳಲ್ಲಿ) ಓಡುತ್ತಿರುವ ಮನಸ್ಸನ್ನು ತಡೆತಡೆದು ಹಿಡಿದು; **ಸ್ವಪರತತ್ತ್ವ ರಹಸ್ಯಮಂ** – ಆತ್ಮಸ್ವರೂಪದ ರಹಸ್ಯವನ್ನೂ ಪರವಸ್ತು ಸ್ವರೂಪದ ರಹಸ್ಯವನ್ನೂ; **ಅಡಿಗಡಿಗೊಲ್ದು** – ಪದೇ ಪದೇ ಪ್ರೀತಿಸಿ; **ಶಮಾಮೃತಮಂ** – ಶಾಂತಿಯೆಂಬ ಅಮೃತವನ್ನು; **ಸಲೆಪೀರ್ದು** – ಚೆನ್ನಾಗಿ ಹೀರಿ; **ತಂಪರ್ದದ** – ಪರಮಶಾಂತತೆ ಪಡೆದ ತಪಸ್ವಿಯೇ ಸುಖಿ; **ಪೆರಂ** – ಇತರರು ಸುಖಿಗಳಲ್ಲ.

ಅ–೭೯ **ಕುರುಪಾಟ** – ದುಶ್ಚೇಷ್ಟೆ; **ಪಲವುಂ ಕೊಸರೇಕೆ?** – ಹೆಚ್ಚಿನ ವಿವರಣೆ ಏಕೆ?; **ಪರೀಷಹಗಳು** – ಬಾಧೆಗಳು; **ಎತ್ತ** – ಎಲ್ಲಿಯದು?; **ಎತ್ತಣದು** – ಎಲ್ಲಿಂದ ಬಂತು?; **ಆರ್ತರೌದ್ರಂ** – ಆತ್ಮ ರೌದ್ರಧ್ಯಾನಗಳು; **ಕೊಸರೇಕೆ?** – ಹೆಚ್ಚಿನದೇಕೆ?

ಅ–೮೦ **ಆಗಿಪುದು** – ಉಂಟು ಮಾಡುತ್ತದೆ; **ಕರ್ಮಲಬ್ಧಿ** – ಕರ್ಮಪ್ರಾಪ್ತಿ; **ನಿರ್ಜರೆ** – ನಿರ್ಜರೆಯಾಗಲು; (ಅಂಟಿಕೊಂಡು ಬಂದ ಕರ್ಮ ಜೀರ್ಣವಾಗಿ ಕಳಚಿ ಬೀಳುವುದು); ಕರ್ಮಕ್ಷಯಾಗಲು. (ಗುಂ ಪು. ೨೪); **ವಿಕಲ್ಪ** – ಚಂಚಲತೆ; **ಮಗ್ನವಂ ಎಯ್ದಿದ ಮೇಲೆ** – ಲೀನವಾದ ಮೇಲೆ; **ಎತ್ತ** –ಎಲ್ಲಿದೆ?; **ಕರ್ಮನಿರ್ಜರೆಗೆ** – ಆತ್ಮ ತಲ್ಲೀನತೆಯೊಂದೇ ಸಾಕು.

ಅ–೮೧ **ಕುಭಾವನೆ** – ದುಷ್ಟಭಾವನೆ; **ಸುಭಾವನೆ** – ಒಳ್ಳೆಯ ಭಾವನೆ; **ದುರಿತಂ** – ಪಾಪ; **ಪಗೆ** – ಶತ್ರು; **ವಿನಿಶ್ಚಯಕೆ** – ಶಾಶ್ವತಸ್ಥಾನ ಪಡೆಯಲಿಕ್ಕೆ; ಮೋಕ್ಷಪಡೆಯಲು; **ಈ ಎರಳ್** – ಈ ಪಾಪ ಪುಣ್ಯಂಗಳೆಂಬೆರಡೂ ಇಲ್ಲದ ಮನವೇ; **ಸುಮ್ಮನೆ ನಿಲೆ** – ಸ್ಥಿರವಾಗಿ ನಿರ್ಮಲವಾಗಿ ನಿಂತರೆ; **ಅಂತದರಿಂ** – ಹಾಗಾಗುವುದರಿಂದ.

ಅ–೮೨ **ಇಷ್ಟರುಂ** – ಪ್ರೀತಿಸುವವರು, ಆಪ್ತರು; **ಅನಿಷ್ಟರುಂ** – ಶತ್ರುಗಳು; **ಜಿನ ಉದ್ದಿಷ್ಟೂ** – ಜಿನರಿಂದ ಉಪದೇಶಿಸಲ್ಪಟ್ಟ ವಾಣಿ; ತತ್ತ್ವಾದಿಜ್ಞಾನ ಇರುವಾಗ; **ಪೊರಗೆ** – ಬಾಹ್ಯದಲ್ಲಿ; **ಅಭೀಕ್ಷಿಪೆನ್** – ನೋಡುತ್ತೇನೆ; **ಅಷ್ಟಗುಣಂಗಳೊಳ್ ನಲಿವುತ್ತ** – ಅಷ್ಟಗುಣಾಸಕ್ತನಾಗಿ ಸಂತೋಷಿಸುತಾ, ಅಷ್ಟಗುಣಗಳು:

೧. **ಅನಂತ ಜ್ಞಾನ** – ಜ್ಞಾನಾವರಣವೆಂಬ ಕರ್ಮದ ಅಭಾವದಿಂದ ಅನಂತಜ್ಞಾನ ಗುಣವು ಉಂಟಾಗುತ್ತದೆ.

೨. **ಅನಂತದರ್ಶನ** – ದರ್ಶನಾವರಣವೆಂಬ ಕರ್ಮದ ಅಭಾವದಿಂದ ಅನಂತ ದರ್ಶನವೆಂಬ ಗುಣ ಉಂಟಾಗುತ್ತದೆ.

೩. **ಅನಂತವೀರ್ಯ** – ಮೋಹನೀಯವೆಂಬ ಕರ್ಮದ ಅಭಾವದಿಂದ ಅಚಲವಾದ ಸಮ್ಯಕ್ತ್ವ ಉಂಟಾಗುತ್ತದೆ.

೪. **ಅಂತರಾಯ**ವೆಂಬ ಕರ್ಮದ ಅಭಾವದಿಂದ ಅನಂತಶಕ್ತಿ ಗುಣ ಉಂಟಾಗುತ್ತದೆ.

೫. **ಅವ್ಯಾಬಾಧತ್ವ** – ವೇದನೀಯವೆಂಬ ಕರ್ಮದ ಅಭಾವದಿಂದ ಅನಂತ ಅವ್ಯಾಬಾಧ್ಯ ಸುಖಗುಣ ಉಂಟಾಗುತ್ತದೆ.

೬. **ಅನಂತಸೂಕ್ಷ್ಮತ್ವ** – ನಾಮವೆಂಬ ಕರ್ಮದ ಅಭಾವ ಅನಂತ ಸೂಕ್ಷ್ಮತ್ವಗುಣ ಉಂಟಾಗುತ್ತದೆ.

೭. **ಅಗುರುಲಘುತ್ವ** – ಗೋತ್ರವೆಂಬ ಕರ್ಮದ ಅಭಾವದಿಂದ ಉಂಟಾಗುತ್ತದೆ.

೮. **ಅವಗಾಹತ್ವ** – ಆಯು ಎಂಬ ಕರ್ಮದ ಅಭಾವದಿಂದ ಅನಂತ ಅವಗಾಹ ಗುಣ ಉಂಟಾಗುತ್ತದೆ. (ಸರಸ್ವತಿ ಪು. ೩೮)

ಅಷ್ಟಕರ್ಮಗಳು : ಆತ್ಮನ ಸಹಜಸ್ವಭಾವವನ್ನು ಮರೆಮಾಡುವ ೮ ಕರ್ಮಗಳು. ೧. ಜ್ಞಾನಾವರಣೀಯ ೨. ದರ್ಶನಾವರಣೀಯ ೩. ಅಂತರಾಯ ೪. ಮೋಹನೀಯ – ಇವು ನಾಲ್ಕು ಘಾತಿಕರ್ಮಗಳು. ೫. ಆಯು ೬. ನಾಮ ೭. ಗೋತ್ರ ೮. ವೇದನೀಯ – ಇವು ನಾಲ್ಕು ಅಘಾತಿ ಕರ್ಮಗಳು. ಒಟ್ಟು ೮ ಅಷ್ಟಕರ್ಮಗಳು. (ಎಲ್ (L)ಗುಂಪು. ೩೩) (ಸರಸ್ವತಿ ಪು. ೩೮)

ಅ–೮೩ **ಅರಸುವೆಂ** – ಹುಡುಕುತ್ತೇನೆ; **ಅಮೂರ್ತ ಸಿದ್ಧಾತ್ಮನಂ** – ಅವ್ಯಕ್ತ ರೂಪನಾದ ಸಿದ್ಧನನ್ನು; **ತರುಬುವೆನು** – ಸಿದ್ಧಾತ್ಮದ ಬಳಿಗೆ ಮನಸ್ಸನ್ನು ಕಳಿಸುತ್ತೇನೆ; **ಆಳ್ದಪೆನ್** – ತಲ್ಲೀನನಾಗುತ್ತೇನೆ, ಮುಳುಗುತ್ತೇನೆ.

೮–೮೪ **ಮೂಷೆ** – ಮೂಸೆ – ಕೋವೆ. ಚಿನ್ನ ಬೆಳ್ಳಿಯನ್ನು ಕರಗಿಸಿ ಶುದ್ಧ ಮಾಡುವ ಪಾತ್ರೆ; **ಬಾಗ್ತದೆ** – ಬಗ್ಗಿಸದೆ; **ತೂಗದೆ** – ವಾಲಾಡಿಸದೆ; **ಓರೆಪುಗದೆ** – ಅಡ್ಡಾಗಿಸದೆ; **ಸೈಕನೆ** – ಉಚ್ಚಾರವುಳ್ಳವನಾಗಿ; **ತಪೋಗ್ನಿಗೆ ಒಡ್ಡಿ** – ತಪಸ್ಸೆಂಬ ಅಗ್ನಿಗೆ ಅಡ್ಡಿ.

೮–೮೫ **ಅಚೇತನಂ** – ಜಡಸ್ವರೂಪವು; **ಆಗಸಂ** – ಆಕಾಶವು; **ಭೇದವಿಡಲಿಲ್ಲ** – ಭೇದವಿಲ್ಲ; **ಪುರುಷಾಕೃತಿಯು** – ಪುರುಷರೂಪವನ್ನು ತಾಳಿತೋ; **ಎಂಬ** – ಎನ್ನುವ ಹಾಗೆ; **ಆತುರವಿಟ್ಟು** – ಅವಸರಪಟ್ಟು; **ಓತುನೋಳ್ಪೆನ್** – ಪ್ರೀತಿಸಿ ನೋಡುವೆನ್; **ಒಳಗೆನೋಳ್ಪೆನ್** – ಅಂತರಂಗದಲ್ಲಿ ಕಾಣುವೆ.

೮–೮೬ **ಸಿದ್ಧರ ರೂಪಿನೊಳ್** – ಸಿದ್ಧಪರಮೇಷ್ಠಿಯ ಸ್ವರೂಪವನ್ನು; **ಸಂಶುದ್ಧದೊಳ್** – ಶುದ್ಧನಿಶ್ಚಯನಯದಿಂದ; **ಇಂತೆಯೆನುತ** – ಈ ಸಿದ್ಧಾತ್ಮರ ಹಾಗೆ ಶುದ್ಧನೆಂದು ಎಂಬುದಾಗಿ ಭಾವಿಸುತ್ತಾ; **ಅಡಂಗಿ** – ಮರೆಯಾಗಿ; **ನಿಜಾತ್ಮನಲ್ಲಿ** – ತನ್ನ ಆತ್ಮದಲ್ಲಿ; **ಸನ್ನದ್ಧನಾಗಿ** – ಸಜ್ಜಾಗಿ; **ಐಕ್ಯವಾಗುವನೆ** – ಏಕೀಭವಿಸುವನೇ; **ಸಿದ್ಧನಲಾ** – ಸಿದ್ಧಪರಮೇಷ್ಠಿಯೆನಿಸುತ್ತಾನೆ.

೮–೮೭ **ನಾಸಿಕದ ಅಗ್ರದೊಳ್** – ಮೂಗಿನ ತುದಿಯಲ್ಲಿ; **ಸೂಸದೆ** – ಚಲಿಸದೆ; **ಕೂರ್ಮನಂತೆ** – ಆಮೆಯಂತೆ; **ಒಳಗಡಂಗಿನ** – ಒಳಕ್ಕೆ ಎಳೆದುಕೊಂಡು; **ಒಯ್ಯನೆ** – ಮೆಲ್ಲಮೆಲ್ಲನೆ ಸೆಳೆದುಕೊಳ್ಳಲು; **ಹರಿಯಂಕ** – ಪರ್ಯಂಕಾಸನ (ಪಲ್ಯಂಕಾಸನ) – ಧ್ಯಾನಾಸನಗಳಲ್ಲಿ ಒಂದು. ಬಲಪಾದವನ್ನು ಎಡ ತೊಡೆಯ ಮೇಲೂ ಎಡಪಾದವನ್ನು ಬಲತೊಡೆಯ ಮೇಲೂ ಇಟ್ಟು ಧ್ಯಾನಕ್ಕೆ ಕುಳಿತುಕೊಳ್ಳುವ ಭಂಗಿ. (ಸರಸ್ವತಿ ೨೧೬). ಇದನ್ನು ಸುಖಾಸನವೆಂದೂ ಪಲ್ಯಂಕಾಸನವೆಂದೂ ಕರೆಯುವುದುಂಟು.
ಚಂದ್ರಾಸನ – (ನಿತ್ಯಯೋಗಾಸನ ಪುಟ ೪೯–೫೧) ನೋಡಿ.
ಭದ್ರಾಸನ –?

೮–೮೮ **ಮಯೂರಾಸನ** – ಸೇತುವಂಧ ಮಯೂರಾಸನ, ಪದ್ಮ ಮಯೂರಾಸನ, ಉತ್ಥಾನಪಾದ ಮಯೂರಾಸನ, ಐಂಥ ಮಯೂರಾಸನ ಮೊದಲಾದ ಭೇದಗಳ ಮಯೂರಾಸನಗಳಿವೆ.

ಆಸನದ ಕ್ರಮ : ಮೊದಲು ಮಂಡಿಗಳನ್ನು ಸ್ವಲ್ಪ ಅಗಲಿಸಿ ಊರಿ ಕುಳಿತುಕೊಳ್ಳಬೇಕು. ಬಳಿಕ ಮುಂಬಾಗಿ ಅಂಗೈಗಳನ್ನು ಹಿಂದಿರುಗಿಸಿ ನೆಲದ ಮೇಲೂರಿ, ಎರಡೂ ಕೈಗಳ ಕಿರುಬೆರಳುಗಳು ಒಂದನ್ನೊಂದು ಸೋಂಕುವಂತೆಯೂ ಬೆರಳುಗಳು ಪಾದಗಳ ಕಡೆ ತುದಿಮಾಡುವಂತೆಯೂ ಇರಬೇಕು. ಆಮೇಲೆ ಮೊಣಕೈಗಳನ್ನು ಬಾಗಿಸಿ ಮುಂದೋಳುಗಳನ್ನು ಜೊತೆಗೂಡಿಸಬೇಕು. ಆ ಬಳಿಕ ಹೊಟ್ಟೆಯೊಳಗಿನ ವಪೆಯೆಂಬ ಪೊರೆಯು ಮೊಣಕೈಗಳ ಮೇಲೆಯೂ ಎದೆಯ ಮೇಲ್ತೋಳಿನ ಹಿಂಬದಿಯ ಮೇಲೆಯೂ ಒರಗಿರುವಂತೆ ಅಳವಡಿಸಬೇಕು. ಅನಂತರ ಕಾಲುಗಳನ್ನು ಒಂದೊಂದಾಗಿ ಹಿಗ್ಗಿಸಿಟ್ಟು ಆಮೇಲೆ ಅವೆರಡನ್ನೂ ಜೊತೆಗೂಡಿಸಿ ಬಿಗಿ ಮಾಡಿಡಬೇಕು. ಇದಾದ ಮೇಲೆ ಉಸಿರನ್ನು ಹೊರಕ್ಕೆ ಬಿಟ್ಟು ದೇಹದ

ಭಾರವನ್ನೆಲ್ಲವನ್ನೂ ಮಣಿಕಟ್ಟುಗಳ ಮತ್ತು ಕೈಗಳ ಮೇಲೆ ಹೊರಿಸಿ ಕಾಲುಗಳನ್ನು ಒಂದೊಂದಾಗಿಯೇ ಇಲ್ಲವೆ ಜೊತೆಗೂಡಿಸಿಯೋ ನೆಲದಿಂದ ಮೇಲೆತ್ತುತ್ತಿರುವಂತೆಯೇ ಮುಂಡವನ್ನೂ ತಲೆಯನ್ನೂ ಹಿಗಿಸಿಡಬೇಕು. ಬಳಿಕ ದೇಹವೆಲ್ಲವನ್ನೂ ನೆಲಕ್ಕೆ ಸಮಾನಾಂತರವಾಗಿ ಇರಿಸಿ ಕಾಲುಗಳನ್ನು ಜೊತೆಯಲ್ಲಿಯೇ ಹಿಗ್ಗಿಸಿ ಪಾದಗಳನ್ನು ಜೋಡಿಸಿ ಕೈಗಳ ಮೇಲೆ ಸಮತೋಲನ ಸ್ಥಿತಿಯಲ್ಲಿ ನೆಲೆಸಬೇಕು. (ಯೋಗದೀಪಿಕಾ ಪು.೨೦೨)

ವಜ್ರಾಸನ : (ಲಘು ವಜ್ರಾಸನ): ಲಘುವೆಂದರೆ ಹಗುರ, ಶೀಘ್ರ ಸುಂದರ ರಮ್ಯ ಎಂಬ ಅನೇಕ ಅರ್ಥಗಳಿವೆ. ವಜ್ರ ಎಂದರೆ ಇಂದ್ರನ ವಜ್ರಾಯುಧ ಮೊದಲು ಮಂಡಿ ಪಾದಗಳನ್ನು ಜೋಡಿಸಿ ನೆಲದ ಮೇಲೆ ಮೊಣಕಾಲೂರಿ ಕುಳಿತುಕೊಳ್ಳಬೇಕು. ಬಳಿಕ ಅಂಗೈಗಳನ್ನು ಟೊಂಕದ ಇಬ್ಬದಿಗಳಲ್ಲಿ ಒತ್ತಿರಿಸಬೇಕು. (ಯೋಗದೀಪಿಕಾ ಪು. ೨೭೪)

ಕೂರ್ಮಾಸನ : ಕೂರ್ಮ ಎಂದರೆ ಆಮೆ. ಆಮೆ ತನ್ನ ತಲೆಯನ್ನು ಹೊರಚಾಚಿರುವ ಭಂಗಿಯನ್ನು ಹೋಲುತ್ತದೆ ಕೂರ್ಮಾಸನ. ಮೊದಲು ಕಾಲುಗಳನ್ನು ಉಂದೆ ಚಾಚಿ ನೇರ ಕುಳಿತುಕೊಳ್ಳಬೇಕು. ಈಗ ಮುಂದೆ ಬಾಗಿ ಕೈಗಳನ್ನು ತೊಡೆಯ ಕೆಳಗೆ ತೆಗೆದುಕೊಂಡು ಹೊರಕ್ಕೆ ಚಾಚಿ ಕಾಲುಗಳು ನೇರವಾಗಿರಬೇಕು. ಭುಜಗಳು ಮತ್ತು ಎದೆಯಭಾಗ ನೆಲಕ್ಕೆ ತಾಗಿರಬೇಕು. (ನಿತ್ಯಯೋಗ ಪು.೯೯)

ಅ–೮೮ **ಪರ್ಯಂಕಾಸನ :** ಪರ್ಯಂಕ ಎಂದರೆ ಮಂಚ. ಈ ಆಸನದ ಭಂಗಿಯು ಮಂಚದ ಮೇಲೆ ಹಾಸಿದ ಹಾಸಿಗೆಯನ್ನು ಹೋಲುವುದರಿಂದ ಈ ಹೆಸರು.

ಆಸನ ವಿಧಾನ : ವೀರಾಸನದಲ್ಲಿ ನೆಲದ ಮೇಲೆ ಕುಳಿತುಕೊಳ್ಳಬೇಕು. ಬಳಿಕ ಉಸಿರನ್ನು ಹೊರಕ್ಕೆ ಬಿಟ್ಟು ಬೆನ್ನನ್ನು ಹಿಂದಕ್ಕೆ ಒರಗಿಸಬೇಕು. ಆಮೇಲೆ ಬೆನ್ನನ್ನು ಮೇಲೆತ್ತಿ ಬಿಲ್ಲಿನಂತೆ ಬಗ್ಗಿಸಿ, ನೆಲದ ಮೇಲೆ ನಡುನೆತ್ತಿಯನ್ನೂರಿ ಅದನ್ನೇ ಆಧಾರ ಮಾಡಿಕೊಂಡು ಕತ್ತನ್ನೂ ಎದೆಯನ್ನೂ ಮೇಲೆತ್ತಿ ಮುಂಡದ ಯಾವ ಭಾಗವನ್ನೂ ನೆಲಕ್ಕಂಟದಂತಿಡಬೇಕು. ಇದಾದಮೇಲೆ ತೋಳುಗಳನ್ನು ಮೊಳ ಕೈಗಳಲ್ಲಿ ಬಾಗಿಸಿ ಬಲಗೈಯಿಂದ ಎಡದ ಮೇಲ್ತೋಳನ್ನೂ ಎಡಗೈಯಿಂದ ಬಲದ ಮೇಲ್ತೋಳನ್ನೂ ಮೊಣಕೈ ಬಳಿ ಗಟ್ಟಿಯಾಗಿ ಹಿಡಿದು ಈ ಬಾಗಿಸಿದ ತೋಳ್ಬಲೆಯನ್ನು ತಲೆಯ ಹಿಂಬದಿಗೆ ತಂದು ನೆಲದಮೇಲೆ ಊರಿಡಬೇಕು. ಇದೇ ಪರ್ಯಂಕಾಸನ. ಇದನ್ನು ಪಲ್ಯಂಕಾಸನ ಎಂದೂ ಕರೆಯುವರು. (ಯೋಗದೀಪಿಕಾ ಪು. ೮೦)

ಅ–೮೮ **ಸರೋಜಾಸನ (ಪದ್ಮಾಸನ) :** ಪದ್ಮವೆಂದರೆ ತಾವರೆ ಹೂ. ಕಮಲಪುಷ್ಪ. ಧ್ಯಾನಕ್ಕೆ ತಕ್ಕ ಆಸನ. ಮೊದಲು ಬಲದಡಿಯನ್ನು ಎಡಪಾದದ ಮೇಲೆ ಎತ್ತಿರಿಸಿ ಬಳಿಕ ಎಡದಡಿಯನ್ನು ಬಲದೊಡೆಯ ಮೇಲಿಟ್ಟು ಆಮೇಲೆ ಬಲಗೈಯಿಂದ ಎಡಗಾಲ ಹೆಬ್ಬೆರಳನ್ನೂ ಎಡಗೈಯಿಂದ ಬಲಗಾಲ ಹೆಬ್ಬೆರಳನ್ನೂ ಹಿಡಿದೆಳೆದು ಆಯಾ ಸ್ಥಾನಗಳಲ್ಲಿ ಮೇಲ್ಮೊಗಮಾಡಿದ ಅಂಗಾಲುಗಳನ್ನು ಸರಿಯಾಗಿ ಅಳವಡಿಸಿ ಅನಂತರ ಎದೆಯ ಬಳಿ ಎಂದರೆ ಅದರಲ್ಲಿನ ೪ ಬೆಟ್ಟಿನಷ್ಟು ಪ್ರದೇಶದಲ್ಲಿ ತಲೆತಗ್ಗಿಸುವುದರ

ಮೂಲಕ ಗದ್ದವನ್ನು ಒತ್ತಿಟ್ಟು ದಿಟ್ಟಿಯನ್ನು ಮೂಗಿನ ತುದಿಯಲ್ಲಿ ನೆಟ್ಟಿರಬೇಕು. ಇದೇ ಪದ್ಮಾಸನದ ಭಂಗಿ. (ಯೋಗದೀಪಿಕಾ ಪು. ೮೪)

ಅ–೮೮ **ಕುಕ್ಕುಟಾಸನ :** ಕುಕ್ಕುಟ ಎಂದರೆ ಕೋಳಿ. ಈ ಆಸನವು ಅದನ್ನು ಹೋಲುವುದರಿಂದ ಇದಕ್ಕೆ ಆ ಹೆಸರು.

ಪದ್ಮಾಸನದಲ್ಲಿ ಕುಳಿತ ಬಳಿಕ ತೊಡೆ ಮತ್ತು ಮೀನಖಂಡಗಳ ನಡುವೆ ಮಂಡಿಗಳ ಬಳಿ ಕೈಗಳನ್ನು ತೂರಿಸಬೇಕು. ಇದಕ್ಕಾಗಿ ಮೊದಲು ಕೈಬೆರಳುಗಳನ್ನು ಸಂದುಗಳ ನಡುವೆ ಹೊಗಿಸಿ ಆಮೇಲೆ ಮೆಲ್ಲಮೆಲ್ಲಗೆ ಕೈಗಳನ್ನು ನುಗ್ಗಿಸಬೇಕು. ಆಮೇಲೆ ಉಸಿರನ್ನು ಹೊರಕ್ಕೆಬಿಟ್ಟು ಕೈಬೆರಳುಗಳು ಒಂದನ್ನೊಂದು ಮುಟ್ಟುವಂತೆ ಅಂಗೈಗಳನ್ನು ನೆಲದ ಮೇಲೆ ಊರಿ ದೇಹವನ್ನು ಮೇಲೆಬ್ಬಿಸಿ ಅದರ ಭಾರವನ್ನು ಕೈಗಳಿಗೆ ಆಧರಿಸಿ ಸಮತೋಲನದಲ್ಲಿ ನಿಲ್ಲಿಸಬೇಕು. ಸಾಮಾನ್ಯ ಉಸಿರಾಟದಿಂದ ಈ ಭಂಗಿಯಲ್ಲಿ ಸಾಧ್ಯವಾದಷ್ಟು ಕಾಲ ಕಳೆಯಬೇಕು. (ಯೋಗದೀಪಿಕಾ ಪು.೯೨)

ಅ–೮೮ **ವೀರಾಸನ :** ವೀರ ಎಂದರೆ ಶೂರ, ದಿಟ್ಟನಾದ ಯೋಧ. ಇದೊಂದು ಕುಳಿತು ಮಾಡುವ ಆಸನ. ಇದರಲ್ಲಿ ಮಂಡಿಗಳೆರಡನ್ನೂ ಜೋಡಿಸುವಂತೆ ಕಾಲುಗಳನ್ನು ಮಡಿಸಿ ಹಿಂದಕ್ಕೆ ಚಗಿಸಿ ಅವುಗಳನ್ನು ರೊಂಡಿ (ಅಂಡು)ಗಳ ಪಕ್ಕಕ್ಕಿಟ್ಟು ಕುಳಿತುಕೊಳ್ಳುವ ಭಂಗಿ. ಈ ವೀರಾಸನವು ಧ್ಯಾನಕ್ಕೂ, ಪ್ರಾಣಾಯಾಮಕ್ಕೂ ಯೋಗ್ಯವಾದುದು. (ಯೋಗದೀಪಿಕಾ ಪು. ೭೭)

ಅ–೮೮ **ಮಕರಾಸನ :** ಕೆಳಮೊಗ ಮಾಡಿಕೊಂಡು ನೆಲದ ಮೇಲೆ ಮಲಗಿ ಎದೆಯನ್ನು ನೆಲಕ್ಕೆರಗಿಸಿ ಕಾಲುಗಳೆರಡನ್ನು ನೀಳವಾಗಿ ಚಾಚಿಟ್ಟು ತಲೆಯನ್ನು ತೋಳುಗಳಿಂದ ಹಿಡಿದುಕೊಳ್ಳಬೇಕು, ಮಕರ ಎಂದರೆ ಮೊಸಳೆ. ಮೊಸಳೆಯಾಕಾರದ ಭಂಗಿಯಾದುದರಿಂದ ಮಕರಾಸನ ಎನ್ನುತ್ತಾರೆ. ಈ ವಿಧದ ಆಸನದಿಂದ ದೇಹದ ಕಾವು ಹೆಚ್ಚುತ್ತದೆ. (ಯೋಗದೀಪಿಕಾ ಪು. ೫೮)

ಅ–೮೮ **ಉತ್ಕುಟಿಕಾಸನ (ಉತ್ಕಟಾಸನ) :** ಉತ್ಕಟ ಎಂದರೆ ಕುರ್ಚಿ ಎಂದರ್ಥ. ಕುರ್ಚಿ ಕೂರುವ ಈ ಭಂಗಿಗೆ ಉತ್ಕಟಾಸನ ಎನ್ನುತ್ತಾರೆ. ಮೊದಲು ಸಮಸ್ಥಿತಿಯಲ್ಲಿ ನಿಂತು ಎರಡು ಕೈಗಳನ್ನು ನಿಧಾನವಾಗಿ ಮೇಲಕ್ಕೆ ಭುಜದ ನೇರಕ್ಕೆ ತೆಗೆದುಕೊಳ್ಳಬೇಕು. ಅಂಗೈಗಳನ್ನು ಮೇಲ್ಮುಖಮಾಡಿ ಎರಡೂ ಕೈಗಳನ್ನು ಸಂಪೂರ್ಣ ಮೇಲಕ್ಕೆ ತೆಗೆದುಕೊಳ್ಳಬೇಕು. ನಮಸ್ಕಾರ ಮಾಡುವ ಭಂಗಿಯಲ್ಲಿರಬೇಕು. ಮಂಡಿಯ ನೇರದಲ್ಲಿ ತೊಡೆಯ ಮೂಲ ಭೂಮಿಗೆ ಸಮಾನಾಂತರ ಬರುವವರೆಗೆ ಕೆಳಗೆ ಕುಳಿತುಕೊಳ್ಳಬೇಕು. ಎರಡೂ ಮೊಣಕೈಗಳನ್ನು ಹತ್ತಿರಕ್ಕೆ ತೆಗೆದುಕೊಳ್ಳಬೇಕು. ರಟ್ಟೆಯ ಭಾಗ ಕಿವಿಗಿಂತ ಸ್ವಲ್ಪ ಹಿಂದಕ್ಕಿರಬೇಕು. (ನಿತ್ಯಯೋಗ ಪು. ೭)

ಅ–೮೮ **ಚಂದ್ರಾಸನ :** ಇದರಲ್ಲಿ ಪರಿವೃತ ಅರ್ಧ ಚಂದ್ರಾಸನ, ಅರ್ಧ ಚಂದ್ರಾಸನ ಎಂದು ೨ ಬಗೆಗಳಿವೆ. ಪರಿವೃತ ಎಂದರೆ ಶರೀರವನ್ನು ತಿರುಗಿಸುವುದು. ಮೊದಲಿಗೆ ಉತ್ತಾನಾಸನದ ರೀತಿಯಲ್ಲಿ ಮುಂದೆ ಬಾಗಿ ನಿಂತುಕೊಳ್ಳಬೇಕು. ನಂತರ ಬಲಗೈಯನ್ನು ಎಡಪಾದದ ನೇರಕ್ಕೆ ನೆಲಕ್ಕೆ ಒತ್ತಿ ಬಲಗಾಲನ್ನು ಸೊಂಟದ

ನೇರಕ್ಕೆ ಮೇಲೆ ತೆಗೆದುಕೊಳ್ಳಬೇಕು. ಎಡಗೈಯನ್ನು ಭುಜದ ನೇರಕ್ಕೆ ಮೇಲಕ್ಕೆ ತೆಗೆದುಕೊಳ್ಳಬೇಕು. ದೃಷ್ಟಿ ಮೇಲೆ ಇರಲಿ. ಇದೇ ರೀತಿ ಮತ್ತೊಂದು ಕಡೆ ಮುಂದುವರಿಸುವುದು. (ನಿತ್ಯಯೋಗ ಪು. ೫೧)

ಅ–೮೯ **ಸಂಕುಲಗಳ** – ಸಮೂಹಗಳ; **ಅನುಬಂಧದಿ** – ಸಂಬಂಧದಿಂದ; **ಜಾಡ್ಯಹರಂ** – ಆಲಸ್ಯ ಪರಿಹಾರ; **ಪಟುತ್ವ** – ನೈಪುಣ್ಯ; **ಪುರಾಣರುಜೆ** – ಹಳೆಯ ಕಾಯಿಲೆ; **ವಿಕಲ್ಪಂಒತ್ತುಗು** – ದೂರಮಾಡುತ್ತದೆ; **ಸಮಂತು** – ಹಾಗೆ; **ಸಮಕಟ್ಟು** – ಸಿದ್ಧತೆ, ತಯಾರಿ; **ಪೂರಕ** – ಉಸಿರನ್ನು ಒಳಕ್ಕೆ ತೆಗೆದುಕೊಳ್ಳುವುದು; **ರೇಚಕ** – ಉಸಿರನ್ನು ಹೊರಕ್ಕೆ ಬಿಡುವುದು; **ಕುಂಭಕ** – ಉಸಿರನ್ನು ಒಳಗೆ ನಿಲ್ಲಿಸುವುದು. ಪ್ರಾಣಾಯಾಮದ ವಿಧಾನದ ಪದಗಳು ಇವು. **ಪ್ರಾಣಾಯಾಮ** ಎಂದರೆ ಉಸಿರಿನ ವಿಸ್ತಾರ ಮತ್ತು ಸಂಕೋಚ.

ಪ್ರಾಣ ಎಂದರೆ ಉಸಿರು. **ಆಯಾಮ** – ವಿಸ್ತಾರ, ಸಂಕೋಚ.

ಅ–೯೦ **ಪೊಳೆ** – ಹೊಳೆ; **ಕೆರೆಯೊತ್ತು** – ಕೆರೆದಡ; **ವಾರ್ಧಿತಟಂ** – ಸಮುದ್ರತೀರ; **ಅಹದಗಾರ**(ಅರ್ಹತ್+ಅಗಾರ) – ಜಿನದೇವಾಲಯ; **ಪುಳಿಲಚಲಂ** – ಮರಳಿನ ದಿಬ್ಬ; **ನಿಷೇದಿಕೆ** – ಚಿಕ್ಕದೇವಾಲಯ; **ವಿವಿಕ್ತಂ ಅಕ್ಕೆ** – ನಿರ್ಜನ ಪ್ರದೇಶವಾಗಲಿ; **ಷಂಡ** – ನಪುಂಸಕರು; **ಖಳಜಂತು** – ದುಷ್ಟಮೃಗಗಳು; **ಸುಳಿಯದ ತಾಣಂ** – ಸಂಚರಿಸದಿರುವ ನೆಲೆಗಳು; **ಆದೊಡೆ** – ಆದರೆ; **ಲೇಸು** – ಒಳ್ಳೆಯದು.

ಅ–೯೧ **ಬಾರದ ಜಾನಮಂ** – ಧ್ಯಾನ ಮಾಡಲು ತಿಳಿಯದ; **ಬರಿಸಿಕೊಂಬ** – ಆದರೆ ಧ್ಯಾನಾಭ್ಯಾಸಕ್ಕೆ ಯತ್ನಿಸುವ; **ಇವಲ್ಲದೇ?** – ಇವೆಲ್ಲಾ ಅವರಿಗೆ ತಾನೇ ಅಲ್ಲವೇ? ಹೌದು; **ಸೀರುಡು** – ಈಚಲುಹುಳು, **ಜೀರುಂಡೆ; ಉಪಸರ್ಗ** – ಅಡ್ಡಿ, ಆತಂಕ, ಬಾಧೆ; **ಮನೋಧೀರದೆ** – ಮನೋಸ್ಥೈರ್ಯ ದಿಂದ; **ನಿತ್ಯಪದ** – ಮೋಕ್ಷ.

ಅ–೯೧ **ಉಪಸರ್ಗ** – ಮುನಿಗಳ ತಪಸ್ಸಿಗೆ ಉಂಟಾಗುವ ತೊಂದರೆ; ದೇವೋಪಸರ್ಗ; ತಿರಿಕೋಪಸರ್ಗ; ಮನುಷ್ಯೋಪಸರ್ಗ; ಅಚೇತುನೋಪಸರ್ಗ ಎಂದು ನಾಲ್ಕು ಬಗೆ ಉಪಸರ್ಗಗಳಿವೆ.

ಅ–೯೨ **ರಂಭೆ** – ದೇವಲೋಕದ ಅಪ್ಸರೆ. **ಪುಳಕ** – ರೋಮಾಂಚನ; **ಶುಂಭಿ** – ಆನೆ; **ಚಮೂರು** – ಹುಲಿ; **ಬೃಂಹಿಸುತೆ** – ಘೀಳಿಡುತ್ತಾ; **ಬಲ್ಪುಗುಂದದೇ** – ಶಕ್ತಿ ಗುಂದದೆ, ಎದೆಗುಂದದೆ, ಧೈರ್ಯಗೆಡದೆ, ಕಂಗೆಡದೆ; **ಜೃಂಭಿಸಿ** – ವಿಸ್ತಾರವಾಗಿ ಹತ್ತಿಕೊಂಡು; **ಕಾಳುಗಿಚ್ಚು** – ಕಾಡಿನ ಬೆಂಕಿ; **ಬುದ್ಧಿಕಲಂಕದೇ** – ಮನಸ್ಸು ಚಂಚಲವಾಗದೇ; **ಶಿಲಾಸ್ತಂಭ** – ಕಲ್ಲಿನಕಂಬ; **ಎನ್ನೊಳಗೆ** – ನನ್ನಲ್ಲಿರುವ ಆತ್ಮನೊಂದಿಗೆ; **ಅದೆಂದು ನಿಲ್ವೆನ್** – ಯಾವತ್ತಿಗೆ ಸೇರುವೆನು?

ಅ–೯೩ **ಕೊಕ್ಕರಿಸಿ** – ಅಸಹ್ಯಪಟ್ಟು; **ಭವಬಂಧಮಂ** – ಸಂಸಾರದ ಸೆರೆಯನ್ನು; **ಪರೀಷಹಂ** – ೨೨ ಪರೀಷಹಗಳು; **ಬರಿಸಿ** – ಬರುವಂತೆ ಮಾಡಿ; **ತೆರಳದೆ** – ಬಿಟ್ಟು ಹೋಗದೆ.

ಪರೀಷಹಗಳು : ತಪಸ್ಸಾಧನೆಗೆ ಅಡ್ಡಿ ಮಾಡುವ ಕೋಟಲೆಗಳು. ಕರ್ಮ ನಿರ್ಜರೆಯಾಗಿ ಯಾವುದನ್ನು ಸಹಿಸಿಕೊಳ್ಳಲು ಯೋಗ್ಯವೋ ಅದು ಪರೀಷಹವಾಗಿದೆ. ಪರೀಷಹಗಳು ೨೨ ಇವೆ. ಹಸಿವು ಸಹಿಸುವುದು, ಬಾಯಾರಿಗೆ ತಡೆಯುವುದು, ಸ್ತ್ರೀ ಸಹವಾಸ ಬಿಡುವುದು, ಒಂದೇ ಕಡೆ ಹೆಚ್ಚುಕಾಲ ನಿಲ್ಲದೆ ಸಂಚರಿಸುತ್ತಿರುವುದು, ಭಿಕ್ಷೆ ಸಿಗದಿದ್ದರೆ ಖೇದಗೊಳ್ಳದಿರುವುದು ಇತ್ಯಾದಿ.

ಅ–೯೪ **ನಷ್ಪರಿದು** – ಸ್ಮರಿಸಿಕೊಂಡು; **ನಿಲೆ** – ಆಸ್ವರೂಪದಲ್ಲೇ ಲೀನನಾಗಿರಲು; **ಲೆಪ್ಪದರೂಪೋ** – ಎರಕದ ಗೊಂಬೆಯೋ; **ಪರಿಜೋ** – ಪ್ರತಿಮೆ; **ಅಷ್ಟಕರ್ಮಗಳು** – ಸಮ್ಯಕ್ತ್ವ, ಅನಂತಜ್ಞಾನ, ಅನಂತದರ್ಶನ, ಅನಂತವೀರ್ಯ, ಸೂಕ್ಷ್ಮತ್ವ, ಅವಗಾಹಿತ್ವ, ಅವ್ಯಾಭಾಧತ್ವ, ಅಗುರುಲಘುತ್ವ.

ಅಷ್ಟಕರ್ಮಗಳು : ಜ್ಞಾನಾವರಣ, ದರ್ಶನಾವರಣ, ವೇದನೀಯ, ಮೋಹನೀಯ, ಆಯಹ್ಯ, ನಾಮ, ಗೋತ್ರ, ಅಂತರಾಯ.

ತಪನಂಪುಗದೇ – ಉರಿಯನ್ನು ಪ್ರವೇಶಿಸುವುದಿಲ್ಲವೇ?

ಅ–೯೫ **ಉಷ್ಣವಾತಾದಿ** – ಸೆಕೆ ಗಾಳಿ ಮುಂತಾದವುಗಳ ಬಾಧೆಗಳನ್ನು; **ಆದಿಯ** – ಪೂರ್ವಕಾಲದ.

ಮುನಿಗಳಾದ ವಜ್ರ, ವೃಷಭ, ನಾರಾಜ, ಸಂಹನನರು? **ಬಿಸವಂದಂ** – ಆಶ್ಚರ್ಯ; **ನೆಗಳ್ಚುಗುಂ** – ಮಾಡುವರು; **ಮೇದಿನಿಗೆ** – ಭೂಮಿಗೆ.

ಅ–೯೬ **ಕೀಸುವ** – ಹಿಸುಕುವ (ಸಿಪ್ಪೆ ಸುಲಿಯುವ); **ಒತ್ತಿ** – ಅದುಮಿ; **ಗೋಣರಿವುದಂ** – ಕುತ್ತಿಗೆ ಕೊಯ್ಯುವುದನ್ನು; **ಉಬ್ಬರದ** – ಉಬ್ಬಿದ; **ಗಬ್ಬ** = ಗರ್ಭ (ಹೊಟ್ಟೆ); **ಉಬ್ಬಸದಿಂ** – ಮೇಲುಸರಿನಿಂದ; **ಬಳಲ್ದ** = ಆಯಾಸಗೊಂಡ; **ಇರವನೇ** – ಸ್ಥಿತಿಯನ್ನೇ; **ಬಿರಿಸೇಕೆ** = ಅಧೈರ್ಯನೇಕೆ?

ಅ–೯೭ **ನೇಮವು** – ನಿಯಮಗಳು; **ನಿಂದೊಡೆ** – ತಪಸ್ಸಿಗೆ ನಿಂತರೆ; **ಎದೆಯೊಳ್ ಭಯವೇ?** – ಹೃದಯದಲ್ಲಿ ಭಯವಾಗದು.

ಟಿಪ್ಪಣಿಗಳು

ಟಿಪ್ಪಣಿ ೧ : ಕುಮಾರಸ್ವಾಮಿ (ಅ–೯೭)

ಕಾರ್ತಿಕಪುರದ ರಾಜ ಅಗ್ನಿದತ್ತನಿಗೂ, ರಾಣಿ ವೀರಮತಿಗೂ ಕೃತ್ತಿಕಾ ಎಂಬಾಕೆ ಪುತ್ರಿಯಾಗಿ ಜನಿಸಿದಳು. ಕೃತ್ತಿಕಾ ಯುವತಿಯಾದಾಗ ತಂದೆಯೇ ಅವಳ ರೂಪಿಗೆ ಮರುಳಾಗಿ ಆಕೆಯೊಡನೆ ಕೂಡಿ ಸಂಸಾರ ಮಾಡಿದಾಗ ಕಾರ್ತಿಕೇಯನೆಂಬ ಮಗನು ಜನಿಸಿದನು. ಅವನು ದೊಡ್ಡವನಾದಮೇಲೆ ತಾಯಿಯ ಅಕ್ರಮ ಪ್ರಣಯದ ಅರಿವಾಗಿ ಸಂಸಾರದ ಬಗ್ಗೆ ಜುಗುಪ್ಸೆಯುಂಟಾಗಿ ದಿಗಂಬರ ಮುನಿಯಾದನು. ಈತನಿಗೆ ಕುಮಾರಸ್ವಾಮಿ ಎಂದೂ ಹೆಸರಿತ್ತು. ಈತನ ತಂಗಿ ಮದುವೆಯಾಗಿ ಗಂಡನ ಮನೆಯಲ್ಲಿದ್ದಳು. ಮಗ ಕಾರ್ತಿಕೇಯನ ಅಗಲಿಕೆಯನ್ನು ಸಹಿಸಲಾರದೆ

ತಾಯಿ ವೀರಮತಿ ಆರ್ತಧ್ಯಾನದಲ್ಲಿ ಸತ್ತು ವ್ಯಂತರದೇವತೆಯಾದಳು.

ಒಮ್ಮೆ ಕಾರ್ತಿಕೇಯನು ತಂಗಿಯ ಮನೆಗೆ ಬಂದಾಗ ತಂಗಿಯು ಉಪಚರಿಸಿದರೆ ಆಕೆಯ ಪತಿಯು ಯತಿಯನ್ನು ಮೂರ್ಛೆಹೋಗುವಷ್ಟು ಹಿಂಸಿಸುವನು. ಆಗ ವ್ಯಂತರದೇವತೆಯಾದ ತಾಯಿ ಈ ಉಪಸರ್ಗವನ್ನು ಅವಧಿಜ್ಞಾನದಿಂದ ಅರಿತು ಅಲ್ಲಿಗೆ ಬಂದು ಮಗ ಕಾರ್ತಿಕೇಯ ಮುನಿಯನ್ನು ಉಪಚರಿಸುವಳು. ಆದರೂ ಕಾರ್ತಿಕೇಯ ಉಳಿಯಲಿಲ್ಲ. ಸಮಾಧಿಮರಣದಿಂದ ದೇಹತ್ಯಾಗ ಮಾಡಿದನು. ಆ ಸ್ಥಳ ಕಾರ್ತಿಕೇಯ ತೀರ್ಥವೆಂದು ಪ್ರಸಿದ್ಧವಾಯಿತು.

(ಆಕರ: ಜಿ.ಬ್ರಹ್ಮಪ್ಪ: ರತ್ನಾಕರನ ಶತಕ ಸಾಹಿತ್ಯ, ಪುಟ ೧೭೩).

ಟಿಪ್ಪಣಿ ೨: ಗಜಕುಮಾರ (ಅ–೯೭)

ಅರ್ಧಚಕ್ರಿಯಾದ ವಿಷ್ಣು ತನ್ನ ಹಗೆಯಾದ ಪೌದನಪುರದ ಅರಸನಾದ ಅಪರಾಜಿತನನ್ನು ಸೆರೆ ಹಿಡಿದು ತಂದವರಿಗೆ ಕೇಳಿದ್ದನ್ನು ಕೊಡುವುದಾಗಿ ಡಂಗೂರ ಹೊಡೆಯಿಸಿದನು. ವಿಷ್ಣುವಿನ ತಮ್ಮ ಗಜಕುಮಾರನು ಅಪರಾಜಿತನನ್ನು ಸಾಹಸದಿಂದ ಗೆದ್ದು ತಂದು ಅಣ್ಣನಿಗೆ ಒಪ್ಪಿಸಿದನು. ರಾಜಧಾನಿಯ ಅಂತಃಪುರವನ್ನು ಬಿಟ್ಟು ಉಳಿದ ಊರಿನ ಸ್ತ್ರೀಯರೊಂದಿಗೆ ಕ್ರೀಡಿಸಿ ಅವರನ್ನೆಲ್ಲ ಕೆಡಿಸಿದನು. ಆಗ ಪಂಗುಲನೆಂಬಾತ ತನ್ನ ಮಡದಿಯನ್ನು ಯುವರಾಜ ಕೆಡಿಸಿದ್ದಕ್ಕೆ ಅಸಹಾಯಕನಾಗಿ ಒಳಗೊಳಗೇ ಕುದಿದನು. ಇತ್ತ ಒಮ್ಮೆ ಅರಿಷ್ಟನೇಮಿ ಮುನಿಗಳ ಸಮವಸರಣ ದ್ವಾರಕೆಗೆ ಬಂದಾಗ ಗಜಕುಮಾರ ಅವರ ಉಪದೇಶದಿಂದ ತನ್ನ ಕೃತ್ಯಗಳಿಗೆ ಪಶ್ಚಾತ್ತಾಪ ಹೊಂದಿ, ವೈರಾಗ್ಯದಿಂದ ಯತಿಯಾಗಿ ಸಂಚರಿಸುತ್ತಾ ದ್ವಾರಕೆಗೆ ಬಂದಾಗ ಪಂಗುಲನು ತನ್ನ ಮಡದಿಯನ್ನು ಕೆಡಿಸಿದ ಸೇಡಿಗಾಗಿ ಮುನಿಗೆ ಕೆಂಪಗೆ ಕಾಸಿದ ಸಲಾಕೆಯಿಂದ ಬರೆಗಳನ್ನೆಳೆದು ಹಿಂಸಿಸಿದನು. ಆಗ ಧ್ಯಾನಾರೂಢನಾದ ಗಜಕುಮಾರಮುನಿ ಕ್ಷಮಾಶೀಲನಾಗಿ ಸಮಾಧಿಮರಣ ಹೊಂದಿ ಅಹಮಿಂದ್ರನಾದನು.

(ಆಕರ: ಜಿ.ಬ್ರಹ್ಮಪ್ಪ: ರತ್ನಾಕರನ ಶತಕ ಸಾಹಿತ್ಯ, ಪುಟ ೧೭೩).

ಟಿಪ್ಪಣಿ ೩: ಸುಕುಮಾರಸ್ವಾಮಿ (ಅ–೯೭)

ಕಾಶ್ಯಪಿ ಎಂಬಾಕೆಯು ತನ್ನ ಮಕ್ಕಳಾದ ಅಗ್ನಿಭೂತಿ ಮತ್ತು ವಾಯುಭೂತಿ ಎಂಬುವರನ್ನು ತನ್ನ ಸೋದರನಾದ ಸೂರ್ಯಮಿತ್ರನ ಬಳಿಗೆ ವ್ಯಾಸಂಗಕ್ಕೆ ಕಳಿಸಿದಳು. ಅವನು ಸಕಲ ವಿದ್ಯೆಗಳನ್ನು ಕಲಿಸಿದಮೇಲೆ ತಾನು ಅವರಿಗೆ ಸೋದರಮಾವನೆಂದು ತಿಳಿಸಿದನು. ಮೊದಲೇ ಈ ವಿಚಾರವನ್ನು ತಿಳಿಸದೆ ಇದ್ದುದ್ದಕ್ಕೆ ವಾಯುಭೂತಿ ಅಪಾರ್ಥ ಕಲ್ಪಿಸಿಕೊಂಡು ಒಳಗೊಳಗೇ ಕುದಿದನು. ಗುರು ಸೂರ್ಯಮಿತ್ರ ದಿಗಂಬರ ಯತಿಯಾಗಿ ಬಹುಕಾಲದ ನಂತರ ತನ್ನ ಶಿಷ್ಯರಾದ ಅಳಿಯಂದಿರನನು ನೋಡಲು ಬಂದಾಗ ವಾಯುಭೂತಿ ಅವನನ್ನು ಅಪಮಾನಗೊಳಿಸಿದನು. ಅಗ್ನಿಭೂತಿ ಅವನನ್ನು ಸತ್ಕರಿಸಿ ಉಪದೇಶ ಹೊಂದಿ ಯತಿದೀಕ್ಷೆ ಪಡೆದನು.

ಇತ್ತ ಸೂರ್ಯಮಿತ್ರನನ್ನು ನಿಂದಿಸಿ ಅವಮಾನಿಸಿದ ವಾಯುಭೂತಿ ಕುಷ್ಠರೋಗಿಯಾಗಿ ಸತ್ತು ಮಾದಿಗನ ಮನೆಯಲ್ಲಿ ಹುಟ್ಟುಕುರೂಪಿ ಹೆಣ್ಣುಮಗುವಾಗಿ ಜನಿಸಿದನು. ಅಗ್ನಿಭೂತಿಯು ಒಮ್ಮೆ ಇವಳಿಗೆ ಪಂಚಾಣುವ್ರತವನ್ನು ಬೋಧಿಸಿದಾಗ ಮರುಭವದಲ್ಲಿ ಸದ್ಗುಣಸಂಭೂತಳಾದ ನಾಗಶ್ರೀ ಆಗಿ ಜನಿಸಿದಳು. ಇವಳೂ ತಪವೆಸಗಿ ಸಮಾಧಿಮರಣ ಹೊಂದಿ ಸುಕುಮಾರಸ್ವಾಮಿ ಆಗಿ ಜನಿಸಿದಳು. ಒಂದು ದಿನ ಸುಕುಮಾರಸ್ವಾಮಿಯು ದಯಾಭದ್ರರೆಂಬ ಮುನಿಗಳು ತ್ರಿಲೋಕಪ್ರಜ್ಞಪ್ತಿಯನ್ನು ಉಚ್ಚಕಂಠದಲ್ಲಿ ಪಾರಾಯಣ ಮಾಡುತ್ತಿರುವುದನ್ನು ಕೇಳಿಸಿಕೊಂಡು, ಸುಕುಮಾರಸ್ವಾಮಿಗೆ ಭವಾಂತರ ಸ್ಮರಣೆ ಆಗಿ ಸಂನ್ಯಾಸ ಸ್ವೀಕರಿಸಿ ತಪಸ್ಸಿನಲ್ಲಿ ನಿರತನಾದನು. ಜನ್ಮಾಂತರ ಶತ್ರುವಾದ ಅಗ್ನಿಭೂತಿಯ ಹೆಂಡತಿಯಾದ ಸೋಮದತ್ತೆ ಹೆಣ್ಣುನರಿಯಾಗಿ ಜನಿಸಿದ್ದಳು. ಆ ನರಿಯು ಈತನ ಕೈಕಾಲುಗಳನ್ನು, ದೇಹವನ್ನು ತಿನ್ನುತ್ತಾ ಹೋದರೂ ಆ ಉಪಸರ್ಗವನ್ನು ಶಾಂತಚಿತ್ತನಾಗಿ ಸಹಿಸುತ್ತಾ ಶುಕ್ಲಧ್ಯಾನದಿಂದ ಸತ್ತು ಸರ್ವಾರ್ಥಸಿದ್ಧಿಯಲ್ಲಿ ಅಹಮೀಂದ್ರನಾದನು.

(ಆಕರ: ಜಿ.ಬ್ರಹ್ಮಪ್ಪ: ರತ್ನಾಕರನ ಶತಕ ಸಾಹಿತ್ಯ, ಪುಟ ೧೭೪).

ಟಿಪ್ಪಣಿ ೪: ಗುರುದತ್ತ (ಅ–೯೭)

ಸಾವಸ್ತಿ ನಗರದ ಮಹಾರಾಜ ಉಪರಿಚರ ತನ್ನ ಮಡದಿಯೊಡನೆ ಜಲಕ್ರೀಡೆಯಾಡುತ್ತಿದ್ದಾಗ ವಜ್ರದಾಡನೆಂಬ ವಿದ್ಯಾಧರನು ಜಲಾಶಯದ ಮೇಲೆ ಹಾಸುಗಲ್ಲು ಮುಚ್ಚಿ ಪ್ರಣಯಿಗಳನ್ನು ಕೊಂದನು. ಮರುಜನ್ಮದಲ್ಲಿ ಉಪರಿಚರವೆಂಬ ಹೆಬ್ಬಾವಾಗಿ ಹುಟ್ಟಿ ಸಾರಸ್ವತಾಚಾರ್ಯರೆಂಬ ಮುನಿಗಳ ಬೋಧನೆಯಿಂದ ಉಪವಾಸವ್ರತವನ್ನು ಆಚರಿಸಿ ನಾಗೇಂದ್ರನಾಗಿ ಜನಿಸಿ ಭವಾಂತರ ದ್ವೇಷದಿಂದ ವಜ್ರದಾಡನನ್ನು ಕೊಂದುಹಾಕಿದನು. ವಜ್ರದಾಡ ಹುಲಿಯಾಗಿ ಜನಿಸಿದನು. ಹಸ್ತಿನಾಪುರದ ರಾಜನ ಮಗನಾಗಿ ಜನಿಸಿದ ಗುರುದತ್ತನು ಹುಲಿಯನ್ನು ಕೊಂದನು. ಮರುಜನ್ಮದಲ್ಲಿ ವಜ್ರದಾಡ ಹಾರುವನಾಗಿ ಜನಿಸಿದರೆ ಗುರುದತ್ತ ಅಮೃತಾಸ್ರವ ಮುನಿಯ ಉಪದೇಶದಿಂದ ಸಂನ್ಯಾಸಿಯಾದನು.

ಒಂದು ದಿನ ಸಮಾಧಿಯಲ್ಲಿದ್ದ ಗುರುದತ್ತ ಮುನಿಯನ್ನು ಕಂಡು ಹುಲಿಮುಖ ಹಾರುವನು ಪ್ರತೀಕಾರದ ಬುದ್ಧಿಯಿಂದ ಮುನಿಯ ಸುತ್ತಲೂ ಬೆಂಕಿ ಹಾಕಿದಾಗ ಮುನಿಯ ತಪೋಮಹಿಮೆಯಿಂದ ಜ್ವಾಲೆಯು ನಂದಿಹೋಯಿತು. ಈ ಪವಾಡವನ್ನು ಕಂಡು ಅಚ್ಚರಿಗೊಂಡ ಹಲಧರ ಕೊನೆಗೆ ಗುರುದತ್ತ ಮುನಿಯ ಕೈಯಾರೆ ದೀಕ್ಷೆ ಪಡೆದನು.

ಟಿಪ್ಪಣಿ ೫: ಚಿಲಾತಪುತ್ರ (ಅ–೯೭)

ರಾಜಗೃಹದ ಅರಸು ಉಪಶ್ರೇಣಿಕ ಬೇಡರೊಡೆಯನ ಪುತ್ರಿಯಾದ ಚಿಲಾತೆಯನ್ನು ಮೋಹಿಸಿ ಮದುವೆಯಾದನು. ಚಿಲಾತಪುತ್ರನು ಉಪಶ್ರೇಣಿಕನ ಕಡುವಗೆಯಾದ ಪ್ರದ್ಯೋತನನ್ನು ಸೆರೆಹಿಡಿದು ತಂದು ತಂದೆಗೊಪ್ಪಿಸಿ ಮೆಚ್ಚುಗೆಗೆ ಪಾತ್ರನಾದನು.

ಅಂದಿನಿಂದ ಚಿಲಾತಪುತ್ರ ಕಾಮೋನ್ಮತ್ತನಾಗಿ ಊರಿನ ಕನ್ಯೆಯರನ್ನೆಲ್ಲ ಕೆಡಿಸುತ್ತಾ ಉಪಟಳವೆಸಗಿದನು. ಆಗ ತಂದೆ ಉಪಶ್ರೇಣಿಕ ಅವನನ್ನು ನಾಡಿನಿಂದ ಹೊರಗಟ್ಟಿ ಇನ್ನೊಬ್ಬ ಮಗನಾದ ಶ್ರೇಣಿಕನಿಗೆ ಪಟ್ಟಗಟ್ಟಿದನು. ಇತ್ತ ಚಿಲಾತಪುತ್ರ ಸುಭದ್ರೆ ಎಂಬಾಕೆಯನ್ನು ಅಪಹರಿಸಿದಾಗ ರಾಜಭಟರು ಅಟ್ಟಿಸಿಕೊಂಡು ಬಂದಾಗ ಆಕೆಯನ್ನು ತುಂಡುತುಂಡಾಗಿ ಕತ್ತರಿಸಿ ಪಲಾಯನ ಮಾಡಿದನು. ಕೊನೆಗೆ ಪಶ್ಚಾತ್ತಾಪದಿಂದ ಚಿಲಾತಪುತ್ರ ಮುನಿಯಾದನು. ಇತ್ತ ಸುಭದ್ರೆ ಸತ್ತು ವ್ಯಾಂತರದೇವತೆಯಾಗಿ ಚಿಲಾತಪುತ್ರ ಮುನಿಯ ಕಣ್ಣುಗಳನ್ನು ಕಿತ್ತಳು. ಗಾಯಕ್ಕೆ ಇರುವೆಗಳು ಮುತ್ತಿ ಹಿಂಸಿಸತೊಡಗಿದವು. ಆದರೆ ಮುನಿ ಕಂಗೆಡದೆ ಶುಭ ಪರಿಣಾಮದಲ್ಲಿ ಸತ್ತು ಅಹಮಿಂದ್ರನಾದನು.

(ಆಕರ: ಜಿ.ಬ್ರಹ್ಮಪ್ಪ: ರತ್ನಾಕರನ ಶತಕ ಸಾಹಿತ್ಯ, ಪುಟ ೧೭೫).

ಟಿಪ್ಪಣಿ ೬: ಧರ್ಮರಾಯ (ಅ-೯೭)

ದ್ವಾರಾವತಿ ಅಗ್ನಿಗಾಹುತಿಯಾದುದನ್ನು ಕೇಳಿ ಪಾಂಡವರು ವ್ಯಾಕುಲರಾಗಿ ಅಭಿಮನ್ಯುವಿನ ಪುತ್ರನಾದ ಪರೀಕ್ಷಿತನಿಗೆ ಪಟ್ಟಗಟ್ಟಿ ನೇಮಿತೀರ್ಥಂಕರರ ಸಮನಹರಣಕ್ಕೆ ಬಂದರು. ತಮ್ಮ ಭವಾವಳಿಯನ್ನು ಕುರಿತು ಹೇಳಿದರು:

ಮೇಘರಾಜನ ಮಂತ್ರಿಯ ಮಗ ಸೋಮಭೂತಿ ತನ್ನ ಮಡದಿ ನಾಗಶ್ರೀಯೊಡನೆ ವನಕೇಳಿಗೆ ಹೊರಟಾಗ ದಿಗಂಬರಮುನಿಯೊಬ್ಬನು ಬಂದನು. ಸೋಮಭೂತಿ ಅವನ ಕೇಳಿಗೆ ಹೋಗದೆ ಆ ಮುನಿಗೆ ಆಹಾರದಾನವೀಯಲು ನಾಗಶ್ರೀಗೆ ತಿಳಿಸಿದನು. ತನ್ನ ವನಕೇಳಿಗೆ ಅಡ್ಡಿಯಾದನಲ್ಲಾ ಎಂದು ನಾಗಶ್ರೀ ಆ ಮುನಿಗೆ ಆಹಾರದಲ್ಲಿ ವಿಷವಿಟ್ಟು ಕೊಂದಳು. ಈ ವಿಷಯ ತಿಳಿದು ಸೋಮಭೂತಿ ಮತ್ತು ಅವನ ಅಣ್ಣಂದಿರಿಬ್ಬರು, ಅವರ ಮಡದಿಯರಿಬ್ಬರು, ಒಟ್ಟು ೫ ಜನರು, ಜೈನದೀಕ್ಷೆ ಪಡೆದು ತಪವೆಸಗಿ ಕೊನೆಗೆ ಪಾಂಡವರಾಗಿ ಜನಿಸಿದರು.

ನಾಗಶ್ರೀ ನಾನಾ ಭವದಲ್ಲಿ ಜನಿಸಿ ಕೊನೆಗೆ ನಿರ್ವೇಗ ಹೊಂದಿ ತಪವೆಸಗಿ ಕಾಲಕ್ರಮೇಣ ಪಾಂಚಾಲಿಯಾಗಿ ಅರ್ಜುನನನ್ನು ವರಿಸಿದಳು ಎಂದು ತಿಳಿಸಿದರು.

ಅ-೯೮ **ಕಾಂಕ್ಷೆ** – ಇಚ್ಛೆ; **ಮೂಲ** – ಬುಡ; **ಕುಯ್ಯನೆ** – ಕೊಯ್ಯದಿರುತ್ತಾನೆಯೇ? **ಶಿವನಾಗಿರನೇ** – ಪರಮಾತ್ಮನಾಗಿರನೇ?

ಅ-೯೯ **ಪರೆಯಲಿ ಎಂದು** – ಹರಿದುಹೋಗಲೆಂದು; **ಉರೆ** – ಹೆಚ್ಚಾಗಿ; **ಎನವೇಳ್ಕೆ** – ಹೇಳಬೇಕೆ?; **ನಷ್ಟಮಂ ಎಯ್ದಿಪನ್** – ನಾಶ ಮಾಡುತ್ತಾನೆ;

ಘಾತಿ ಕರ್ಮಗಳು (೪): ಅಷ್ಟಕರ್ಮಗಳು ೧, ಜ್ಞಾನಾವರಣೀಯ (ಅನಂತ ಜ್ಞಾನವನ್ನು ಮರೆಮಾಡುವ ಕರ್ಮ) ೨, ದರ್ಶನಾವರಣೀಯ (ಅನಂತ ದರ್ಶನವನ್ನು ಮರೆಮಾಡುವ ಕರ್ಮ) ೩, ಅಂತರಾಯ (ಅನಂತವೀರ್ಯಕ್ಕೆ ತಡೆ ಮಾಡುವ ಕರ್ಮ) ೪, ಮೋಹನೀಯ (ಜೀವನನ್ನು ಮೋಹಗೊಳಿಸಿ ಅದರ ಅನಂತ ಸುಖವನ್ನು ನುಸುಳಿಸುವ ಕರ್ಮ).

ಅಘಾತಿ ಕರ್ಮಗಳು ೫) **ಆಯುಃಕರ್ಮ** – ಜೀವಿಯ ಆಯುಸ್ಸನ್ನು ನಿರ್ಧರಿಸುವ ಕರ್ಮ ೬) **ನಾಮಕರ್ಮ** – ದೇಹ, ಎತ್ತರ, ಆಕಾರ, ಬಣ್ಣ ಮೊದಲಾದ ವ್ಯಕ್ತಿತ್ವ ಲಕ್ಷಣಗಳನ್ನು ಗೊತ್ತು ಮಾಡುವ ಕರ್ಮ. ೭) **ಗೋತ್ರಕರ್ಮ** – ಜೀವಿ ಹುಟ್ಟುವ ಜಾತಿ ಕುಲಗೋತ್ರಗಳನ್ನು ನಿರ್ಧರಿಸುವ ಕರ್ಮ. ೮) **ವೇದನೀಯ ಕರ್ಮ** – ಜೀವಿ ಅನುಭವಿಸುವ ಸುಖದುಃಖಗಳನ್ನು ನಿರ್ಣಯಿಸುವ ಕರ್ಮ; ಮೇಲಿನ ೮ ಬಗೆ ಕರ್ಮಗಳನ್ನು ಒಟ್ಟಿನಲ್ಲಿ ಕರ್ಮಾಷ್ಟಕ ಎನ್ನುತ್ತಾರೆ. (ಎಲ್‌ಗುಂಡಪ್ಪ ಆದಿಪುರಾಣ ಸಂಗ್ರಹ: ಪೀಠಿಕೆ : ಪು.XXXII)

ಅ–೧೦೦ **ಸುಭವ್ಯನ** – ಆಸನ್ನಭವ್ಯನ; **ಎನವೇಳ್ಕುಂ** – ಹೇಳಬೇಕು; **ಉದ್ಧತ** – ಅಧಿಕವಾದ; **ನಾಗ, ದೇವ, ಮರ್ತ್ಯ** – ನಾಗದೇವತೇ ಕಲ್ಪವಾಸಿ ದೇವತೆ ಹಾಗೂ ಮನುಷ್ಯರ ಅಧಿಕ ಸೇವೆಗೆ ಹೋಲಿಸಲಾಗುವುದು; **ಅಸ್ತಮಲಮಪ್ಪುದರಿಂದ** – ಕರ್ಮಮಲರಹಿತವಾದುದರಿಂದ (ಸಿದ್ಧರ ಸುಖದ ಅಂಶಕ್ಕೆ ಸರಿಸಮಾನವಾದುದು).

ಅ–೧೦೧ **ದಂದುಗವಿಲ್ಲದೆ** – ಇವುಗಳ ಬಾಧೆಯಿಲ್ಲದೆ; **ತೆಪ್ಪಗಿರ್ಪ** – ಸುಮ್ಮನಿರುವ; **ಬಗೆತೋರದಲಾ** – ರೀತಿಯು (ವಿಧಾನ); ತೋರುವುದಿಲ್ಲವಲ್ಲ; **ಸುಖ ಸ್ಥಳಾಂಧಕರ್** – ಸುಖವಿರುವ ಸ್ಥಾನವನ್ನು ತಿಳಿಯದವರು; **ತೆಪ್ಪಗಿರ್ಪ** – ಸುಮ್ಮನಿರುವ; **ದಂದುಗ** – ಬಾಧೆಯಿಲ್ಲದೆ.

ಅ–೧೦೨ **ನೋಡಿದುಚಿತ್ರಂ** – ಇದು ಆಶ್ಚರ್ಯವು; **ನಿಜತ್ವಂ** – ನಿಜಸ್ವರೂಪವನ್ನು; **ಅಲಸಿ** – ಸೋಮಾರಿ; **ಬಯಲ್ಗೆಗೋಡಾಡಿಸಿ** – ಅಪಹಾಸ್ಯಕ್ಕೆ ಈಡುಮಾಡಿ; **ಅಜ್ಞತೆಯಿಂದ** – ಮೂರ್ಖತನದಿಂದ; **ಕರ್ಮಮಂ ಕರೆವೆಂ** – ಕರ್ಮವನ್ನು ಕರೆಯುತ್ತೇವೆ.

ಅ–೧೦೩ **ಚಿಂತಿಕೆ** – ಚಿಂತಿಸಲಿ; **ಐದು ಭೇದಭವಮಂ** – ದ್ರವ್ಯ ಕ್ಷೇತ್ರ ಕಾಲ ಭವ ಭಾವಗಳೆಂಬ ಐದು ವಿಧವಾದ ಸಂಸಾರವನ್ನೂ; **ನವಭೇದ ಪದಾರ್ಥಮಂ** – ಜೀವ ಅಜೀವ ಆಸ್ರವ ಬಂಧ ಸಂವರ ನಿರ್ಜರ ಮೋಕ್ಷ ಪುಣ್ಯ ಪಾಪ (ತಸುಶಾ ಪು. ೧೪೧).

ಅರ್ಹಾಹಾದಿಗಳು : ಅರ್ಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ, ಸಾಧುಗಳೆಂಬ ಪಂಚಪರಮೇಷ್ಠಿಗಳನ್ನು.

ಅ–೧೦೪ **ಪನಿ** – ಮಳೆಹನಿ; **ಅಳ್ಕಿ** – ಹೆದರಿ; **ಗೇಹದೊಳ್** – ಮನೆಯೊಳ್; **ಅಗ್ಗಳಿಪ** – ಬಲವಾದ; **ಜೃಂಭಣದ** – ಮೆರೆದಾಡುವ; **ಪ್ರಜ್ವಲಿಸುತೆ** (ಪ್ರಜ್ವಲಿಸುತ್ತಾ) ಬೆಳಗುತ್ತಾ.

ಅ–೧೦೫ **ದುಷ್ಷಮ ಕಾಲ** : ಜೀವ ಅಜೀವ ಧರ್ಮ ಅಧರ್ಮ ಕಾಲ ಆಕಾಶ ಎಂಬ ಷಡ್ದ್ರವ್ಯಗಳಲ್ಲಿ ಕಾಲವೂ ಒಂದು. ಕಾಲಗಳಲ್ಲಿ ಉತ್ಸರ್ಪಿಣೀ ಅವಸರ್ಪಿಣೀ ಎಂಬ ಎರಡು ಕಾಲ ಪ್ರಮಾಣಗಳಿವೆ. ಅವಸರ್ಪಿಣೀ ಕಾಲದಲ್ಲಿ ಸುಷಮ ಸುಷಮ, ಸುಷಮ, ಸುಷಮದುಷ್ಷಮ, ದುಷ್ಷಮ ಸುಷಮ ದುಷ್ಷಮ ಅತಿದುಷ್ಷಮ ಎಂದು ಆರುಭಾಗಗಳಲ್ಲಿ ದುಷ್ಷಮ ಅತಿಕೆಟ್ಟಕಾಲಗಳಲ್ಲಿ ಒಂದು. (ಮಪ್ರವೂಜಾರ ಪು.೭೮)

ಅ–೧೦೫ **ಅಳೆದು ಇರಿಸಿರ್ದುದಂ** – ಅಳತೆಮಾಡಿ ಇರಿಸಿದ ಪದಾರ್ಥವನ್ನು; **ಪವಣ್ ನುಡಿದೆ** – ಔಚಿತ್ಯದ ಮಾತಿನಿಂದ; **ಉರ್ವಿ** – ಭೂಮಿ; **ವಿವಿಕ್ತಮಂ** – ಏಕಾಂತ ಪ್ರದೇಶವನ್ನು; **ಬೈತ** – ಬಚ್ಚಿಟ್ಟ; **ನಿಧಾನ** – ನಿಧಿ, ಐಶ್ವರ್ಯ; **ಈಕ್ಷಿಪಾತ** – ನೋಡುವವನು.

ಅ–೧೦೬ **ನಿಡುದಿನಂ** – ಇಡೀ ದಿವಸವೆಲ್ಲಾ; **ಸಂಸ್ಕೃತನಾದಮೇಲೆ** – ಸಂಸ್ಕಾರ ಹೊಂದಿದ ಮೇಲೆ, ಅಭ್ಯಾಸವಾದ ಮೇಲೆ; **ಪೊರ್ದುವುದು**–ಆಕ್ರಮಿಸುವುದು; **ಮರಲ್ದು** – ಮತ್ತೆ; **ಪೊರಗೆ ಮೆಚ್ಚನಲಾ** – ಬಾಹ್ಯ ವಸ್ತುಗಳಲ್ಲಿ ಆಸಕ್ತಿ ಹೊಂದುವುದಿಲ್ಲ.

ಅ–೧೦೭ **ಸಿರಿ** – ಐಶ್ವರ್ಯ; **ತಿರುಳ್** – ಸಾರ; **ಕಟ್ಟಕಡೆ** – ಅಂತೆಯೇ, ಕೊನೆಯದು; **ಸದ್ಗುರುಗಳುಂ+ಐವರ್ ಇರ್ದರ್** – ಪಂಚಪರಮೇಷ್ಠಿಗಳೆಂಬ ಐವರು ನಿಜಾತ್ಮ ಸ್ವರೂಪದಲ್ಲಿರುತ್ತಾರೆ; **ವರದರ್ಶನಬೋಧವೃತ್ತಿಗಳ್** – ಸಮ್ಯಕ್ ದರ್ಶನ ಜ್ಞಾನ ಚಾರಿತ್ರಗಳು; **ಪರಮತಪ** – ಶ್ರೇಷ್ಠತಪ.

ಅ–೧೦೮ **ಬಹುವಚನಗಳೇಕೆ ?** – ಹೆಚ್ಚಿಗೆ ಮಾತುಗಳೇಕೆ?; **ಭುವನತ್ರಯಸಾರ** – ಮೂರು ಲೋಕಗಳಲ್ಲಿ ಶ್ರೇಷ್ಠವಾದುದು ಆತ್ಮತತ್ತ್ವ; **ಮುಕ್ತಿ ಎಯ್ದುಗುಂ** – ಮುಕ್ತಿ ದೊರಕುತ್ತದೆ; **ಅವೇಂ** – ಅವುಗಳೇನು?; **ವ್ಯವಹಾರವು** – ವ್ಯವಹಾರತತ್ತ್ವವು, ನಿಶ್ಚಯತತ್ತ್ವವಲ್ಲ, ನಿಷ್ಪ್ರಯೋಜಕವು; **ಭವಗಳಲ್ಲಿ** – ಜನ್ಮಾಂತರಗಳಲ್ಲಿ.

ಅ–೧೦೯ **ಶ್ರುತಮುಂ** – ಶಾಸ್ತ್ರವೂ; **ಅಕ್ಕೆ** – ಆಗಲಿ; **ಚಿದ್ಭಾವದ** – ಆತ್ಮಭಾವನೆಯ; **ಅಷ್ಟಕರ್ಮಾವಳಿ** – ಎಂಟು ಕರ್ಮಗಳು (ಘಾತಿ ಅಘಾತಿಕರ್ಮಗಳು) **ಶಿವಂ** – ಮುಕ್ತಿ; **ಪುಣ್ಯಬಂಧ** – ಪುಣ್ಯಕರ್ಮದ ಸಂಬಂಧವನ್ನು ಉಂಟು ಮಾಡುವುದು; **ನಿರ್ಜರೆಗೊಳಿಸುತ್ತದೆ** – ಕರ್ಮವನ್ನು ಕಳಚುವುದು.

ಅ–೧೧೦ **ಭವ್ಯ** – ಸಿದ್ಧಿಹೊಂದುವ ಸಾಮರ್ಥ್ಯ; ಉಳಿಸಿಕೊಂಡಿರುವ ಜೀವ(ತಸುಶಾ ಪು. ೧೯೧) **ಅಭವ್ಯ** – ಬಿಡುಗಡೆ ದೊರೆಯದಂತೆ ಮಾಡುವಷ್ಟರ ಮಟ್ಟಿಗೆ ಕರ್ಮದ ಹೊರೆ ಹೊತ್ತ ಜೀವ; **ಉದಗ್ರ**– ಅತಿ ಶ್ರೇಷ್ಠ; **ಸುರಸಂಪದಂ** – ದೇವ ಸಂಪತ್ತು; **ಯೋಜಿಸಿದೊಡೆ** – ಸೇರಿಸಿದರೆ.

ಅ–೧೧೧ **ಪೂಳ್ದ** – ಹೂತಿರುವ, ಅಡಗಿಸಿಟ್ಟಿರುವ; **ಭವ್ಯತ್ ಇಲ್ಲದಿರ್ದವಂ** – ಸಮ್ಯಕ್ತ್ವಗುಣವಿಲ್ಲದವನು; **ಉರೆ** – ಚೆನ್ನಾಗಿ; **ಮುನಿಮತ** – ಮುನಿದೀಕ್ಷೆ; **ಶಿವವಂ** – ಮುಕ್ತಿಯನ್ನು; **ಎಯ್ದುವನೇ** – ಪಡೆಯುವವನೇ? (ಇಲ್ಲ).

ಅ–೧೧೨ **ವಿಶದಂ** – ಸ್ಪಷ್ಟವಾಗಿ ತೋರುತ್ತದೆ; **ಸಂಸೃತಿ** – ಸಂಸಾರ; **ಮಾಳ್ಪುವು** – ಉಂಟುಮಾಡುತ್ತದೆ; **ಮನೋವಶನ್** – ಮನಸ್ಸು ಲೀನವಾದರೆ.

ಅ–೧೧೩ **ವ್ರತತತಿ** – ವ್ರತಗಳ ಸಮೂಹ; **ಪವಣಿಲ್ಲ** – ಸಾಮರ್ಥ್ಯವಿಲ್ಲ; **ಕೆಡಿಪ್ಪೆನ್** – ನಾಶ ಮಾಡುವೆನು; **ಅರಿಮತಿಯುಳ್ಳೊಡಂ** – ಅತಿಶಯ ಅರಿವಿದ್ದಾಗಲೂ; **ಭವಬೀಜಂ** – ಸಂಸಾರಕ್ಕೆ ಕಾರಣ; **ಸುಕೃತ** – ಪುಣ್ಯ; **ಮನಃಕ್ಷತಿ** – ಮನೋವೈಕಲ್ಯವು; **ಕಿಡೆ** – ನಾಶವಾಗಿ; **ತನ್ನೊಳಿರ್ದೊಡೆ** – ಮನಸ್ಸು ಆತ್ಮನಲ್ಲೇ ಇದ್ದರೆ.

ಅ–೧೧೪ **ಅಧ್ಯಯನ** – ಶಾಸ್ತ್ರಾಭ್ಯಾಸ; **ಪ್ರಬೋಧೆಯಿಂ** – ಸಮ್ಯಕ್ ಜ್ಞಾನದಿಂದಲೂ; **ಸಾಧ್ಯಮನಸ್ಕನಾಗಿ** – ಮನಸ್ಸನ್ನು ಸಾಧಿಸಿದವನಾಗಿ; **ಅಪ್ಪಿದವಂಗೆ** – ಸ್ವೀಕರಿಸಿದವನಿಗೆ; **ಮೆರೆಯವು** – ರುಚಿಸುವುದಿಲ್ಲ; ವಿಕಲ್ಪ – ಮನೋವಿಕಲ್ಪ; **ಆರಾಧ್ಯನ್** – ಲೋಕಪೂಜ್ಯನು.

ಅ–೧೧೫ **ಪಗರಣದ ಆಟಂ** (ಪ್ರಕರಣ>ಪಗರಣ – ದಶರೂಪಕಗಳಲ್ಲಿ ಒಂದು ಲೋಕ ವ್ಯವಹಾರಕ್ಕೆ ಸಂಬಂಧಿಸಿದಂತೆ ಕವಿಕಲ್ಪಿತ ಇತಿಹಾಸವುಳ್ಳದ್ದು. ಶೃಂಗಾರರಸ ಪ್ರಧಾನವಾದುದು. ಜೀವಿನ್ ಚಕ್ರವರ್ತಿ, ಪು. ೬೬೦. ಸಂ.ಕ. ನಿಘಂಟು) ಪಗರಣವೆಂಬ ನಾಟಕದ ವಿನೋದವೆಂದು; **ದುರ್ವಿಕಲ್ಪಮಂ** – ಮನೋವಿಕಲವನ್ನು; **ತೆಗೆದುಬಿಸಾಡು** – ತ್ಯಜಿಸು; **ವಿಶೋಧಿಯೊಳ್** – ವಿಶುದ್ಧತೆಯಲ್ಲಿ ಕರ್ಮಮಲರಹಿತವಾದ ಆನಂದಾವಸ್ಥೆಯಲ್ಲಿ; **ಶಮರಸಾಮೃತಮಂ** – ಶಾಂತಿರಸವೆಂಬ ಅಮೃತವನ್ನು; **ತಪಿಸುವಂಗೆ** – ತಪಸ್ಸು ಮಾಡುವ ಯೋಗಿಗೆ; **ಎಣೆಯಾರ್** – ಸಮಾನರಾರು?

ಅ–೧೧೬ **ಮೂರು ಶರೀರದೊಳ್** – ಔದಾರಿಕ, ತೈಜಸ, ಕಾರಣಗಳೆಂಬ ಶರೀರಗಳಲ್ಲಿ; **ತಡೆಯದೆ** – ತಡೆದು ನಿಲ್ಲಿಸದೆ; ಏರುವ – ಒದಗುವ; **ದುಷ್ಪರೀಷಹವು** – ದುಷ್ಟ ಬಾಧೆಯನ್ನು; **ಉಪಶಾಂತನ್ ಅಪ್ಪುದು** – ಶಾಂತಮನಸ್ಕನಾಗಿರಬೇಕು; **ಚಿದಾವರಣಾದಿಗಳ್** – ಜ್ಞಾನಾವರಣಾದಿ ಕರ್ಮಗಳು; **ಒಯ್ಯನೊಯ್ಯನೆ** – ಮೆಲ್ಲ ಮೆಲ್ಲನೆ; **ಮೆಯ್‌ತೋರುಗುಂ** – ಕಾಣಿಸಿಕೊಳ್ಳುವುದು.

ಅ–೧೧೭ **ಲಾಲಿಸುವ** – ಪ್ರೀತಿಸುವ; **ಮೆಯ್ಮರವೆ** – ಪರವಶನಾಗುವ; **ಓಲಾಡುವ** – ಆನಂದದಲ್ಲಿ ತೇಲಾಡುವ; **ಜೋಗಿ** – ಯೋಗಿ.

ಅ–೧೧೮ **ಇಂಗಡಲೊಳ್** – ಕ್ಷೀರಸಾಗರದಲ್ಲಿ; **ಬೆರಸಿದಂತೆ** – ಮಿಶ್ರವಾದಂತೆ; **ಸಿದ್ಧರಾಶಿಯೊಳ್** – ಮುಕ್ತಾತ್ಮರ ವೃಂದದಲ್ಲಿ; **ಸಂಗತವಾದವೊಲ್** – ಸೇರಿಕೊಂಡಂತೆ; **ಮೆರೆವುದು** – ಶೋಧಿಸುವುದು; **ಕಂಡಂಗೆ** – ನೋಡಿದ ಹಾಗೆ; **ಆತ್ಮನಿಂದೆ** – ಆತ್ಮನಿಂದ; **ಅರಿಪಂದದಿ** – ತಿಳಿಯುವ ಹಾಗೆ; **ಎನ್ನಳವೇ** – ನನಗೆ ಸಾಧ್ಯವೇ?

ಅ–೧೧೯ **ಬರ್ದುಂಕು**>ಬರ್ದುಕು>ಬದುಕು – ಜೀವನ, ಬಾಳ್ವೆ; **ವಿಶಿಷ್ಟ** – ವಿಶೇಷವಾದ; **ಸುವಿಚಾರಕೋಟಿಗೆ** – ಅಸಂಖ್ಯಾತ ಒಳ್ಳೆಯ ವಿಚಾರಗಳಲ್ಲೆಲ್ಲ; **ಕಟ್ಟಕಡೆಯ** – ಅಂತಿಮವಾದುದು; **ಉಳಿದರ್ದವಂಗೆ** – ತೊರೆದವನಿಗೆ; **ಭವವೆತ್ತಣದು** – ಹುಟ್ಟು ಸಾವುಗಳ ಜಂಜಾಟವೆಲ್ಲಿರುತ್ತದೆ?

ಅ–೧೨೦ **ಸಿದ್ಧಸದೃಶ** – ಮುಕ್ತಾತ್ಮರಿಗೆ ಸರಿಸಮಾನವಾದ; **ವಿಶೋಧಿ** – ಪರಿಶುದ್ಧತೆಯು; **ಸಂಜನಿತದೊಳ್** – ಪ್ರಕಟವಾದ ಸಮಯದೊಳಗೆ; **ಏನನಾಡಿದನ್** – ಏನನ್ನೇ ಹೇಳಿದರೂ; **ಆಗಮವು** – ವೇದವಾಕ್ಯವು; **ಎಲ್ಲರ ಇಚ್ಛೆ** – ಈ ಆತ್ಮದರ್ಶನ ಎಲ್ಲರಿಗೂ ಇಷ್ಟವಾದುದು; **ಇನಿತಿನಿತು** – ಇಷ್ಟಿಷ್ಟು.

ಅ–೧೨೧ **ನಟ್ಟು** – ನಾಟಿ; **ತೀರ್ಥವು** – ಪಾವನಸ್ಥಳ; **ಸರ್ವರ ಉತ್ಸವಂ** – ಎಲ್ಲರೂ ಉತ್ಸವ ಮಾಡುತ್ತಾರೆ, ಇಂದ್ರೋತ್ಸವ ಸಾಗಿದಂತೆ; **ನಿನ್ನಮಾರ್ಗದ** – ಮೋಕ್ಷಮಾರ್ಗದ.

ಅ–೧೨೨ **ಆರ್ ಇದನ್ ಒಲ್ದು ಕೈವಿಡಿದರ್ ?** – ಯಾರು ಈ ಆತ್ಮಸ್ವರೂಪವನ್ನು ಮೆಚ್ಚಿ ಸ್ವೀಕರಿಸಿದರು?; **ಯಥಾರ್ಥದಿಂದ** – ಹೇಗಿದೆಯೋ ಹಾಗೆ; **ಲಯವನ್ನೈದಿ** – ಲೀನರಾಗಿ; **ನಿಜಂಬಡೆದರ್** – ಸಾಕ್ಷಾತ್ಕಾರ ಪಡೆದರು; **ಅನುಶಾಸನಂ** – ಬೋಧಿಸಿದವರು; **ವಿಸ್ತಾರಿತವಸ್ತುವಂ** – ಸಮಸ್ತ ಪದಾರ್ಥಗಳನ್ನು; **ಬೆಳಗಿದೈ** – ಪ್ರಕಾಶಗೊಳಿಸಿದೆ.

ಅ–೧೨೩ **ಸತ್ಕಲಾ ಬಲರ** – ಬಲಾಢ್ಯ, ಉತ್ತಮ ವಿದ್ಯೆಗಳಲ್ಲಿ ನಿಪುಣರಾದವರಲ್ಲಿ ನಿಪುಣನಾದವನು; **ಬಲ್ಲಿದರ ಬಲ್ಲಹ** – ಜ್ಞಾನಿಗಳಲ್ಲಿ ಸುಜ್ಞಾನಿ; **ನಿಧಾನ** – ನೆಲೆ, ಆಶ್ರಯಿಸು; **ನಿಚ್ಚಮದುಮುಕ್ಕಳಕಾಂತಿ** – ಸಮ್ಯಕ್ತ್ವ ಸಂಪನ್ನರಿಗೆ ಮಾಣಿಕ್ಯಕಾಂತಿಯಂತಿರುವವನು; **ಶಾಂತಿಶೀತಲರ** – ಕ್ಷಮಾಗುಣದಿಂದ ಶಾಂತರೂಡಿಗಳಾದವರಿಗೆಲ್ಲ; **ಶಿರೋಮಣಿ** – ಭೂಷಣಪ್ರಾಯ; **ಪಾಸಟಿ** – ಸಮಾನರು.

ಅ–೧೨೪ **ಜಡಮತಿ** – ಮಂದಬುದ್ಧಿಯವನು; **ಮನಂಬಿಡಿಯೆ** – ತಿಳಿಯುವುದಕ್ಕೆ; **ವರಕಾಂಚನಾದ್ರಿ** – ಶ್ರೇಷ್ಠವಾದ ಮೇರುಪರ್ವತ; **ಅವಧಾರಿಸು** – ಚಿತ್ತವಿಟ್ಟು ಆಲಿಸು. (ನನ್ನ ಅಲ್ಪಮತಿಯನ್ನು).

ಅ–೧೨೫ **ಕಡಂಗದಿರು** – ಆತುರಪಡಬೇಡ, ನಿಧಾನಿಸು; **ಎಮ್ಮಂದವೆ** – ಆತ್ಮನಾದ ನೀನು ಪರಮಾತ್ಮನಾಗುವೆ; **ಎಂಬನುಡಿ** – ಎಂಬ ಆಕಾಶನುಡಿಯನ್ನು; **ಅದೆಂದು** – ಎಂದಿಗೆ?

ಅ–೧೨೬ **ಭವದಿಂ ಎತ್ತಿ** – ಸಂಸಾರ ಸಾಗರದಿಂದೆತ್ತಿ; **ಆದೊಡೇಂ** – ಆದರೇನು?; **ಅದು ವಿಶೇಷಮೆ?** – ಅದೇನು ನಿನಗೆ ಮಹತ್ತಾದುದಲ್ಲ; **ಆರ್ತ ರೌದ್ರನಂ** – ಆತ್ಮಧ್ಯಾನ, ರೌದ್ರ ಧ್ಯಾನ ಪರಾಯಣನಾದ ನನ್ನನ್ನು; **ಪವಿತ್ರ ಮಾಡಿದೊಡೆ** – ಉದ್ಧರಿಸಿದರೆ; **ಭೂತುಎನ್ನದಿರ್** – ಅತಿಶಯೋಕ್ತಿಯೆಂದು ಹೇಳಬೇಡ ನನ್ನ ಮಾತನ್ನು; **ಶರಣಾಗೆ** – ನಾನು ಶರಣಾಗಿರಲು; **ಒಪ್ಪಿಕೊಳ್ ನಗದಿರ್ಮೈ** – ನಗದಿರಯ್ಯ.

ಅ–೧೨೭ **ವಿಜಿತಘಾತಿ ಚತುಷ್ಕ** – ನಾಲ್ಕು ಘಾತಿಕರ್ಮಗಳನ್ನು ಜಯಿಸಿದವನೇ; **ಶ್ರೀ ಶುಭವೆತ್ತ** – ಶೋಭಾಯಮಾನವೂ, ಮಂಗಳಕರವೂ ಆದ; **ಮೇರು ನಗದ + ಇಂದ್ರದಿಶಾಸ್ಥಿತ** – ಮೇರು ಪರ್ವತದ ಪೂರ್ವದಿಕ್ಕಿನಲ್ಲಿರುವ; **ಇರ್ದಪೈ** – ಇರುತ್ತೀಯೆ; **ಪುದಿದ ಪುದ್ಗಲದಲ್ಲಿ** – ಕರ್ಮಾಣುಗಳ ನಡುವೆ; **ಶರಣ್ಯ** – ಶರಣಾಗತ, ರಕ್ಷಕನೆ; **ಗಣ್ಯ** – ಶ್ರೇಷ್ಠನೇ; **ತಳುವೇಂ** – ಸಾವಕಾಶವೇಕೆ? ತಡವೇಕೆ?

ಅ–೧೨೮ **ತ್ರಿಜಗತ್‌ಸ್ವಾಮಿಗಳ್** – ತ್ರಿಲೋಕಾಧಿಪತಿಗಳಾದ ತೀರ್ಥಂಕರರು; **ಈಗಳ್ ದೂರವು ಇರ್ದಪರ್** – ಈಗ ದೂರದಲ್ಲಿದ್ದಾರೆ; **ಅಲ್ಲಿರ್ದೊಡೆ** – ಅಲ್ಲಿದ್ದರೂ; **ಪೆರ್ಗೋಡೆಗಳ್** – ನಾಲ್ಕು ದೊಡ್ಡ ಅಡ್ಡಗೋಡೆಗಳು ಇದೆಯಲ್ಲವೇ ಆದರೂ; **ಅಡರ್ತು** – ಚೆನ್ನಾಗಿ ಹೊಂದಿಕೊಂಡು; **ಆರಾಧನಂ ಮಾಡಿರೋ** – ಆರಾಧಿಸಿ ಪೂಜಿಸಿ.

* * *

III. ತ್ರಿಲೋಕಶತಕ
ಶಬ್ದಾರ್ಥ ಮತ್ತು ಟಿಪ್ಪಣಿಗಳು

ಶತಕ–ಪದ್ಯಸಂಖ್ಯೆ

ತ್ರಿ–೧ **ಪೂರ್ವ ವಿದೇಹ ಕ್ಷೇತ್ರ:** ಜಂಬೂದ್ವೀಪದ ಸಪ್ತಕ್ಷೇತ್ರಗಳಲ್ಲಿ ಒಂದು. ಮಂದರ ಪರ್ವತದ ಪೂರ್ವಕ್ಕೆ ಇದೆ. ಮಂದಿರವು ವಿದೇಹ ಕ್ಷೇತ್ರಗಳ ನಡುವೆ ಇರುವ ಪರ್ವತ. ಸುಮೇರು ಪರ್ವತ. **ಮನಃಪೂರ್ವಕದೆ** – ತ್ರಿಕರಣ ಪೂರ್ವಕವಾಗಿ.

ಅಪರಾಜಿತ ವಿಮಾನ – ಮುನಿ ಸುವ್ರತ ತೀರ್ಥಂಕರ (೨೦ನೆಯವರು)ರ ಪೂರ್ವಜನ್ಮದ ಅಪರಾಜಿತವಿಮಾನ ತಂದೆ ತಾಯಿ ಸುಮಿತ್ರ–ಪದ್ಮಾವತಿ (ಸುಪ್ರ – ಪು.೧೩೪)

೧೬ ಸ್ವರ್ಗಗಳಲ್ಲಿ (ಕಲ್ಪಗಳಲ್ಲಿ) ಒಂದು. ವಿಜಯ, ವೈಜಯಂತ, ಜಯಂತ, ಅಪರಾಜಿತ ಎಂಬ ೪ ಶ್ರೇಣೀಬದ್ಧಗಳು. ಪೂರ್ವದಿಕ್ಕಿನವು. **ಅಪರಾಜಿತ** – ಪಂಚಾಣೂತ್ತರ ವಿಮಾನಗಳಲ್ಲಿ ಉತ್ತರ ದಿಕ್ಕಿಗೆ ಇರುವುದು. **ಅನುತ್ತರ ವಿಮಾನ** – ಕಲ್ಪಾತೀತ ಸ್ವರ್ಗಗಳಲ್ಲಿ ಒಂದು. (ತಸುಶಾ ಪುಟ ೧೭)

ಪೂರ್ವ ವಿದೇಹವು ಜಂಬೂದ್ವೀಪದ ೭ ಕ್ಷೇತ್ರಗಳಲ್ಲಿ ನಾಲ್ಕನೆಯದು. ನಿಷಧ ಮತ್ತು ನೀಲ ಪರ್ವತಗಳ ಹಾಗೂ ಪೂರ್ವ ಪಶ್ಚಿಮ ಸಮುದ್ರಗಳ ನಡುವಣ ಕ್ಷೇತ್ರವು. ದೇಹವಿದ್ದರೂ ದೇಹ ಸಂಸಾರವಿಲ್ಲದವರು ಅರ್ಹಂತ ಭಗವಾನರು ವಿದೇಹರಾಗಿದ್ದಾರೆ. ಅವರಿಗೆ ಕರ್ಮಬಂಧನವಿಲ್ಲ. ಆ ಯೋಗದಿಂದ ಆ ದೇಶವನ್ನು ವಿದೇಹದೇಶ ಎನ್ನುತ್ತಾರೆ. ವಿದೇಹವು ಪೂರ್ವ ವಿದೇಹ ಪಶ್ಚಿಮ ವಿದೇಹ ಎಂದು ಪರ್ವತ ನದಿಗಳಿಂದ ವಿಭಜಿಸಲಾಗಿದೆ. (ನೋಡಿ: ವಿದೇಹ ಸರಸ್ವತಿ ಪು. ೨೭೦–೨೭೧)

ತ್ರಿ–೨ **ಅರುಪಿದ** > ಅರುಹಿದ – ತಿಳಿಸಿದ; **ಕಿರಿದರೊಳೆ** – ಸಂಕ್ಷಿಪ್ತವಾಗಿ; **ಮಂದಮತಿಗಳ್** – ಅಲ್ಪಬುದ್ಧಿಯವರು, ಸಾಮಾನ್ಯರು.

ತ್ರಿ–೩ **ಕಡೆಯಿಲ್ಲದ** – ಅನಂತವಾದ; **ಮೂರುಬಗೆ ಗಾಳಿಗಳಿವೆ** – ಲೋಕದ ಹೊರಭಾಗದಲ್ಲಿ ಅದನ್ನು ಸುತ್ತಿಕೊಂಡು; ಘನೋದಧಿವಾತ – ೧. ವಲಯ, ೨. ಘನವಾತವಲು, ೩. ತನುವಾತವಲಯ ಎಂಬ ಮೂರು ಗಾಳಿಯ ಆವರಣಗಳಿವೆ. ಅವುಗಳ ಮಧ್ಯೆ ಷಡ್ದ್ರವ್ಯಗಳಿಗೆ. (ಜೀವ–ಪುದ್ಗಲ ಧರ್ಮ ಅಧರ್ಮ ಆಕಾಶ ಕಾಲ).

ತ್ರಿ–೪ **ಪುದ್ಗಲ ಜೀವಾವಳಿ** – ಜೀವಸಮೂಹ; **ಪುದ್ಗಲಚಯ** – ೬ ದ್ರವ್ಯಗಳ ಗುಂಪು; **ತೀವಿದ** – ತುಂಬಿದ, ಕಾಲಾಣುಗಳು.

ತ್ರಿ–೫ **ರಜ್ಜು ಓತೊರರದೇ** – ಸಮಯಕ್ಕೆ ಹೊಂದಿಕೊಂಡು ಒಂದೇ ಕಾಲಕ್ಕೆ; **ಪೋಪ** – ಸಂಚರಿಸುವ; **ಸುರವಿಮಾನಂ** – ದೇವವಿಮಾನವು; **ಸೈತು** – ಸೈರಿಸಿಕೊಂಡು; **ರಜ್ಜು** – ಮನಸ್ಸು ಗ್ರಹಿಸಲಾರದಷ್ಟು ದೊಡ್ಡದಾದ ಅಳತೆ. (ಎಲ್.ಗುಂ)

"ಒಂದು ಸಮಯ ಕಾಲದಲ್ಲಿ (ಒಂದು ಪರಮಾಣುವು ಲೋಕಾಕಾಶದಲ್ಲಿ ಅರ್ಧ ಕಾಲಾಣುವನ್ನು ಮಂದಗತಿಯಿಂದ ದಾಟುವ ಹೊತ್ತಿಗೆ ಒಂದು ಸಮಯ ಎಂದು ಹೆಸರು. ಈ ಸಮಯರೂಪ ಕಾಲವು ವ್ಯವಹಾರ ಕಾಲವು) (ಮಪ್ರ ಪು.೭೨).

ಅಸಂಖ್ಯಾತ ಯೋಜನ ಹೋಗುವ ಸುರವಿಮಾನವು ಹಗಲಿರುಳು ಒಂದೇ ಸಮನೆ ಅಸಂಖ್ಯಾತಾಬ್ದ ಹೋಗಲು ಎಷ್ಟು ದಾರಿಯಾಗುವುದೋ ಅದು ಒಂದು ರಜ್ಜು ಎನಿಸುವುದು. (ಮಪು ಪು.೪೭).

ತ್ರಿ–೬ **ಅಡಿಯಿಂ ತುದಿಗೆ** – ಕೆಳಗಿನಿಂದ ಮೇಲಕ್ಕೆ (ಎತ್ತರ); ೧೪ ರಜ್ಜುಗಳ ಉದ್ದವಿದೆ; ಉತ್ತರದಿಂದ ದಕ್ಷಿಣಕ್ಕೆ (ಅಗಲ) ೭ ರಜ್ಜುಗಳಷ್ಟು ಉದ್ದವಿದೆ; **ಬಡಗಲ್>ಬಡಗಣ** – ಉತ್ತರದಿಕ್ಕು; **ತೆಂಕಲ್>ತೆಂಕಣ** – ದಕ್ಷಿಣ ದಿಕ್ಕು.

ತ್ರಿ–೭ **ಮೂಡಲ್‌ಪಡುವಲ್** – ಬ್ರಹ್ಮ ಎಂಬ ಸ್ವರ್ಗ; **ಕಲ್ಪ** – ದೇವತೆಗಳ ನಿವಾಸವಾದ ಊರ್ಧ್ವಲೋಕ ಕೆಳಗಿನಿಂದ ಮೇಲಕ್ಕೆ ಜೋಡಿಯಾಗಿ ೧೬ ಕಲ್ಪಗಳಿವೆ. (ತಸು ಪು.೬೭) ೧೬ ಕಲ್ಪಗಳಲ್ಲಿ ೫ನೆಯದು ಬ್ರಹ್ಮಕಲ್ಪ (ಸ್ವರ್ಗ) (ಸರಸ್ವತಿ ಪು.೩೬೧)

ಬ್ರಹ್ಮಲೋಕದ ದೇವತೆಗಳಿಗೆ ಲೌಕಾಂತಿಕರೆನ್ನುವರು. ಅವರು ಒಂದು ಜನ್ಮದ ನಂತರ ಮೋಕ್ಷ ಹೊಂದುವರು. ತೀರ್ಥಂಕರರ ದೀಕ್ಷಾ ಕಲ್ಯಾಣದಲ್ಲಿ ಆ ಉತ್ಸವವನ್ನು ಇವರೇ ಮಾಡುವರು. ಬೇರೆ ಸಮಯದಲ್ಲಿ ಅವರು ಬರುವುದಿಲ್ಲ. (ಮಪ್ರ ಪು.೫೯)

ತ್ರಿ–೮ **ಕೆಚ್ಚು** – ದಿಂಡು(ತಿರುಳು); **ತುದಿಮುಟ್ಟ** – ತುದಿವರೆಗೆ; **ಚತುರಸ್ರ** – ಚಚ್ಚೌಕ;

ತ್ರಸನಾಳಿ – ತ್ರಸನಾಡಿ ಇಲ್ಲಿರುವ ತ್ರಸ (ಚಲಿಸುವ ಜೀವಗಳು) ಹೊರಬರಲಾರವು. ತ್ರಸನಾಳಿ ಎಂದರೆ ತ್ರಸಜೀವಿಗಳು ವಾಸಮಾಡುವ ಜಾಗ ತ್ರಸನಾಳಿಯ ಹೊರಗೆ ಸ್ಥಾವರಗಳೇ ಜೀವಿಸುವುವು. (ಮಪ್ರ ಪು.೪೮).

ತ್ರಿ–೯ ತ್ರಸನಾಳಿ ವಿವರಣೆ
ತ್ರಸ (ಚಲಿಸುವ ಜೀವ); **ನಾಳಿ>ನಾಡಿ** – ಪ್ರದೇಶ.
ಅಸವಸದಿಂ – ಒತರ್ತಿಂತ್ತಾಗಿ ಬಿಕ್ಕಟ್ಟಿನಿಂದ.

ತ್ರಿ–೧೦ **ಕ್ಷಿತಿ** – ಭೂಲೋಕ; **ಈಕ್ಷಿಸೆ** – ಗಮನಿಸಿದರೆ; **ಮೇರು** – ಮೇರುಪರ್ವತ; **ಅಗ್ರದೆ** – ತುದಿಯಿಂದ; **ಅವಧಿಗೆ** – ತುದಿವರೆಗೆ; **ಸಾಕ್ಷಾತ್** – ನೇರವಾಗಿ; **ತಳಲೋಕ** – ಅಧೋಲೋಕ (ನರಕ).

ಭವನ ಲೋಕ – ಭವನವಾಸಿ ದೇವತೆಗಳು ವಾಸ ಮಾಡುವ ಲೋಕ ಇಲ್ಲಿನ ದೇವತೆಗಳು ಮನುಷ್ಯರಾದರೆ ಶರೀರದಿಂದ ಕಾಮಸೇವನೆ ಮಾಡುವರು.

ಭವನವಾಸಿಗಳು ೧೦ ವಿಧವಾಗಿದ್ದಾರೆ. ೧. ಅಸುರಕುಮಾರ ೨. ನಾಗಕುಮಾರ ೩. ವಿದ್ಯುತ್ ಕುಮಾರ ೪. ಸುಪರ್ಣ ಕುಮಾರ ೫. ಅಗ್ನಿಕುಮಾರ ೬. ವಾತಕುಮಾರ ೭. ಸ್ತನಿತಕುಮಾರ ೮. ಉದಧಿಕುಮಾರ ೯. ದ್ವೀಪಕುಮಾರ ೧೦. ದಿಕ್ಕುಮಾರ್ (ತಸು ಪು.೧೯೦)

ದ್ವೀಪ – ಸುತ್ತಲೂ ನೀರು ಮಧ್ಯೆ ಭೂಪ್ರದೇಶ ಇರುವ ಜಾಗ; **ಅಂಬೋಧಿ** – ಸಮುದ್ರ; **ಊರ್ಧ್ವಲೋಕ** – ಮೇಲಿನಲೋಕ (ಸ್ವರ್ಗ)

ತಳಲೋಕಏಳು – ಜೀವಿಗಳು ಪಾಪದ ಫಲವನ್ನು ಅನುಭವಿಸುವ ಲೋಕ ದುಷ್ಕರ್ಮಗಳು ಪರಿಪಾಕವಾಗುವ ಕ್ಷೇತ್ರ; ಮಧ್ಯಲೋಕದ ಕೆಳಗಿದೆ ಇದು.

ಏಳು ಹೆಸರುಗಳು : ೧. ರತ್ನಪ್ರಭೆ ೨. ತಮಃಪ್ರಭೆ ೩. ಮಹಾತಮಃಪ್ರಭೆ ೪. ಪಂಕಪ್ರಭೆ ೫. ಧೂಮಪ್ರಭೆ ೬. ಶರ್ಕರಾಪ್ರಭೆ ೭. ವಾಲುಕಾಪ್ರಭೆ (ತಸು ಪು.೧೪೦)

ತ್ರಿ–೧೧ **ನೇರ್ಪಡೆದು+ಇರಿಸಿದಂತೆ** – ನೆಟ್ಟಗಿರಿಸಿದಂತೆ; **ಲೋಕದಾಕೃತಿ** – ಲೋಕದಾಕಾರ; **ಜಕ್ಕಳ** – ಬೆತ್ತದ ಕುರ್ಚಿ; **ಝಲ್ಲರಿ** – ಜರಡಿ; **ಮೊದಲಿಂಕಡೆ ಮುಟ್ಟಲ್** – ಬುಡದಿಂದ ತುದಿಯವರೆಗೆ; **ಎಸೆಗುಂ** – ಕಂಗೊಳಿಸುತ್ತದೆ.

ತ್ರಿ–೧೨ **ನಿರಯಭೂಮಿ** – ನರಕಲೋಕ; **ಅಳವಟ್ಟು** – ಸೇರಿಕೊಂಡು; **ಎರಡುವುಂಕಾಲ್** – ೨೧/೪ ; **ನೆಲಂಗಳ್** – ಭೂಮಿಪ್ರದೇಶ; **ಕೊಳೆ** – ಒಳಗೊಂಡಿರಲಾಗಿ.

ತ್ರಿ–೧೩ ಇಳಿಯೊಳ್ – ಭೂಮಿಯಲ್ಲಿ; ನಿಡುಲೋಹಾಚಳಂ – ಬೆಟ್ಟಾಗಿರುವ ಲೋಹದ ಬೆಟ್ಟ; ಘಳಿಲನೆ – ಬೇಗನೆ; ಬಲಿಯಿಸುವ ಶಕ್ತಿ – ಗಟ್ಟಿಗೊಳಿಸುವ ಸಾಮರ್ಥ್ಯ; ಕೆಳಗಣಶೈತ್ಯಂ – ಕೆಳಗಿರುವ ಲೋಕದ ಶೈತಕ್ಕೆ ಇದೆ.

ತ್ರಿ–೧೪ **ನೆಲನೆಲ್ಲಂ** – ನೆಲದ ಭಾಗವೆಲ್ಲ; **ದುರ್ಗಂಧದಿಂ** – ದುರ್ವಾಸನೆಯಿಂದ; **ಕಲಸಿದ** – ಬೆರಸಿದ; **ಎಲೆಯೆಲ್ಲಂ** – ಎಲೆಗಳೆಲ್ಲ; **ಕೂಡಲಗಿನವೊಲ್** – ಹರಿತವಾದ ಕತ್ತಿಯಂತೆ ಇದೆ (**ಅಸಿಪಾತ್ರ**–ಹತ್ತಿಯೆಲೆ); **ಪರಿವ ನದೀಜಲಂಮೆಲ್ಲಂ** – ಹರಿಯುವ ನದಿಯ ನೀರು; **ಕಾಯ್ದು** – ಕಾದ, ಬಿಸಿಯೇರಿದ; **ಲೋಹರಸ** – ಕಬ್ಬಿಣದ ರಸದಂತೆ; **ಇರ್ಕುಂ** – ಇದೆ.

ತ್ರಿ–೧೫ **ಬೀಳ್ದು** – ಬಿದ್ದು; **ಅಜ್ಞಾನಿಗಳು** – ಮಂದಮತಿಗಳು; **ಬೀಳ್ದು** – ಒಳಗಾಗಿ; **ನಾನಾದುಃಖಂಬಡುತಿಹ** – ಅನೇಕ ರೀತಿಯ ದುಃಖ (ಕಷ್ಟ)ಗಳನ್ನು ಅನುಭವಿಸುತ್ತಿದ್ದಾರೆ; **ಏನೆಂಬೆಂ** – ಏನೆಂದು ಹೇಳಲಿ; **ಪೇಳ್ವೊಡೆ** – ಹೇಳಲು ಹೊರಟರೆ; **ಮೆಯ್ಕಂಪಿಸಾಗುಂ** – ಶರೀರ ಝಲ್ಲೆನ್ನುತ್ತದೆ.

ತ್ರಿ–೧೬ **ಓರ್ವರ್‌ಂ+ಒರ್ವರ್ ಕನಲ್ದು ತರಿವರ್** – ಒಬ್ಬರನ್ನೊಬ್ಬರು ಕ್ರೋಧದಿಂದ ಕೊಲ್ಲುವರು; **ಪೂರ್ವಭವ ಸ್ಮರಣೆ ತೋರಿ ಕೆಡಪುವರ್** – ಹಿಂದಿನ ಜನ್ಮದ ನೆನಪನ್ನು ಕಾಣಿಸಿ

ಕೆಡುವುತ್ತಾರೆ; **ಕನಲ್ದು**– ಕೆರಳಿ ತರಿಯುತ್ತಾರೆ. ಸೊಪ್ಪು ತರಿದಂತೆ ಸಾಲಾಗಿ ಕೀಳುತ್ತಾರೆ. **ಜರ್ವಿಸಿ** – ಜಬರಿಸಿ, ಜರಿದು; **ಪಳಿವರ್** – ದೂಷಿಸುತ್ತಾರೆ; **ಸೀಳವ್** – ಕತ್ತರಿಸುತ್ತಾರೆ; **ಬೈವರ್** – ಬೈಯುತ್ತಾರೆ; **ಪೊಯ್ವರ್** – ಹೊಡೆಯುತ್ತಾರೆ.

ತ್ರಿ–೧೭ **ಕಳ್ಳು+ಇದೆ** – ಹೆಂಡವಿದೆ; **ಬಿಡದೆಲುರೆಕುಡಿ** – ಬಿಡದೆ ಚೆನ್ನಾಗಿ ಕುಡಿ; **ಒಡಲಂ** – ದೇಹವನ್ನು; **ಗಿಡಿವರ್** – ತುರುಕುವರು; **ಜಡಿವರ್** – ಹೊಡೆಯುವರು.

ತ್ರಿ–೧೮ **ಲೋಹದ ಪೆಣ್ಬುತ್ಥಳಿ** – ಕಬ್ಬಿಣದ ಹೆಣ್ಣಿನ ಗೊಂಬೆ, ಸ್ತ್ರೀ ಪ್ರತಿಮೆ; **ಕಾಹೇರಿಸಿ** – ಕಾಯಿಸಿ ಬಿಸಿಯೇರಿಸಿ; **ಪರಸತಿ** – ಪರನಾರಿ; **ಮೋಹಿಸುತ ಅಪ್ಪು** – ಕಾಮಿಸುತ್ತಾ ಆಲಂಗಿಸು; **ಹಾದರದರಿಕೆಯವರ್ಗೆ** – ವ್ಯಭಿಚಾರಿಗಳಿಗೆ; **ಅಪ್ಪಿಸುವರ್** – ಆಲಿಂಗಿಸುವಂತೆ ಮಾಡುತ್ತಾರೆ.

ತ್ರಿ–೧೯ **ದರದರನೆ ಎಳೆಯಲ್ಕೆ** – ಸರಸರನೆ ಎಳೆದಾಡಿದಾಗ; **ಹಲ್ಕಿರಿವರ್** – ಹಲ್ಲು ಗಿಂಜುತ್ತಾರೆ; **ಕಿರಿಕಿರಿದಾಗಿರೆ ಕೊರೆವಾಗಳ್** – ಚೂರುಚೂರಾಗಿ ಮೈಯನ್ನು ತರಿದಾಗ; **ಪುಯ್ಯಲಿಡುವರ್** – ಗೋಳಾಡುತ್ತಾರೆ.

ತ್ರಿ–೨೦ **ಕಡಿಖಂಡವೆಸಗೆ** – ಕತ್ತರಿಸಿ ತುಂಡು ಮಾಡಿದರೆ; **ಅಂತುಟು** – ಅಲ್ಲ, ಹಾಗಲ್ಲ; **ಒಡಗೂಡಿದೊಡೆ** – ಒಂದುಮಾಡಿದರೆ.

ತ್ರಿ–೨೧ **ನಿಡುಬೆಟ್ಟದನಿತು** – ಎತ್ತರವಾದ ಬೆಟ್ಟದಷ್ಟು; **ಕೂಳು+ಉಂಬೊಡೆ** – ಅನ್ನ ತಿನ್ನುವಷ್ಟು; **ಕಡುಹಸಿವುಂಟು** – ವಿಪರೀತ ಹಸಿವಿರುತ್ತದೆ; **ತಮಗಿಲ್ಲ** – ಆಹಾರ ಇವರಿಗಿಲ್ಲ; **ಪನಿ** – ಹನಿ, ತೊಟ್ಟು; **ಪೀರ್ವ** – ಹೀರುವ; **ಮಹಾತೃಷೆ** – ವಿಪರೀತ ಬಾಯಾರಿಕೆ; **ನೋವರ್** – ಒದ್ದಾಡುವರು; **ಅಡಸಿರ್ಪುದು** – ಅವರಲ್ಲಿ ಇರುತ್ತದೆ.

ತ್ರಿ–೨೨ **ಸಪ್ತನರಕಗಳು** ಒಂದರ ಕೆಳಗೊಂದು ಇವೆ. ಮೇಲಿನ ನರಕಗಳಾದ **ಉರ್ವರೆಯಿಂ** – ಪ್ರದೇಶದಿಂದ; **ಕೆಳಕೆಳಗೆ** – ಕೆಳಕೆಳಕ್ಕೆ ಹೋದಂತೆಲ್ಲಾ; **ಅಕ್ಕುಂ** – ಉಂಟಾಗುತ್ತದೆ; **ಆಯುಷಂ ಪಿರಿದಕ್ಕುಂ** – ಜೀವಿತಾವಧಿ ಹೆಚ್ಚುತ್ತಾ ಹೋಗುತ್ತದೆ, ಕಠಿಣ ಶಿಕ್ಷೆಗಳನ್ನು ಹೆಚ್ಚು ಹೆಚ್ಚು ಕಾಲ ಅನುಭವಿಸುವಂತಾಗುತ್ತದೆ.

ತ್ರಿ–೨೩ ದುಃಖವನ್ನು ಕಠಿಣ ಶಿಕ್ಷೆಯನ್ನು ಅನುಭವಿಸುವ ಅವಧಿಯನ್ನು ನರಕ ಜೀವಿಯ ಆಯುಷ್ಯದ ಪ್ರಮಾಣವನ್ನು 'ಸಾಗರ'ವೆಂಬ ಮಾನದಂಡದಲ್ಲಿ ಹೇಳಲಾಗುತ್ತದೆ.

ಒಂದು ಸಾಗರದ ಪ್ರಮಾಣ ಎಂದರೆ ೨೫ ಸಮಯಕ್ಕೆ ಒಮ್ಮೆ ತೆಗೆದು ಆರುಬಾರಿ ಭೂಮಿಗೆ ಭೋಗಭೂಮಿಯ ಕುರಿಯ ರೋಮದಿಂದ ಉಪ್ಪುನೀರಿನ ಸಮುದ್ರವನ್ನು ಬರಿದು ಮಾಡುವ ಅವಧಿಯನ್ನು ಒಂದು ಸಾಗರದ ಪರಿಮಾಳ್ ಎನ್ನುವರು. **ಸಾಗರೋಪಮಕಾಲ**ವೆನ್ನುತ್ತಾರೆ.

೨೫ **ಸಮಯಕೆ** – ಇಲ್ಲಿ ಸಮಯವೆಂದರೆ "ಒಂದು ಆಕಾಶ ಪ್ರದೇಶದಿಂದ ಅದಕ್ಕೆ ಹೊಂದಿದ ಇನ್ನೊಂದು ಆಕಾಶ ಪ್ರದೇಶಕ್ಕೆ ಮಂದಗತಿಯಿಂದ ಹೋಗುವುದಕ್ಕೆ

ಒಂದು ಪರಮಾಣುವಿಗೆ ಎಷ್ಟು ಕಾಲವು ಹಿಡಿಯುವುದೋ. ಅದಕ್ಕೆ 'ಸಮಯ' ಎಂದು ಹೆಸರು. (ಮಪ್ರ ಪು.೭೫) ಸಾಗರ – ಭೂಮಿಸುತ್ತಲೂ ಇರುವ ಜಲರಾಶಿ. ಸಾಮಾನ್ಯ ಎಣಿಕೆಗೆ ಸಿಗದ ಬಹುದೀರ್ಘಕಾಲ: ಪಲ್ಯಕಾಲಗಳ ಕೋಟ್ಯಾನುಕೋಟಿ ಕಾಲ (ತಸು ಪು.೨೭೨).

ತ್ರಿ–೨೪ **ಆಯುಷ** – ಆಯಸ್ಸು; **ದಶಕಂ** – ಹತ್ತು; **ಅಂತ್ಯದೊಳು** – ಕೊನೆಯ ೭ನೇ ನರಕದಲ್ಲಿ.

ತ್ರಿ–೨೫ **ಎವೆಯಿಕ್ಕುವನಿತು** – ರೆಪ್ಪೆಮಿಟುಕುವಷ್ಟು ಕಾಲ (ಮುಚ್ಚಿ ತೆಗೆಯುವಷ್ಟು ಕಾಲ); **ಎಡವಿಲ್ಲ** – ಅವಕಾಶವಿಲ್ಲದೆ; **ನವೆಯುತಿರ್ಪರ್** – ತೊಳಲಾಡುವರು; **ಮುನ್ನಿನ** – ಮೇಲೆ ಹೇಳಿದ; **ಭವದೊಳ್** – ಸಾಗರೋಪಮ ಕಾಲದವರೆಗೆ ತಾವು; **ಎಸಗಿದ** – ಮಾಡಿದ; **ಉಗ್ರಪಾಪ** – ಮಹಾಪಾಪದ; **ಫಲದಿಂ** – ಪರಿಣಾಮವಾಗಿ.

ಇಲ್ಲಿಗೆ ನರಕಲೋಕ ವರ್ಣನೆ ಮುಗಿಯಿತು.

ತ್ರಿ–೨೬ **ಉರ್ವರೆಯಿಂ** – ನರಕಭೂಮಿಯಿಂದ; **ನರಲೋಕ** – ಭೂಲೋಕ; **ನಲ್ನಾಡು** + **ಇರ್ಕುಂ** – ಚೆನ್ನಾಗಿ ಮಧ್ಯದಲ್ಲಿ; **ಅಂತದು** – ಹಾಗಿರುವ ಅದನ್ನು; **ಆಗಮದಲ್ಲಿ** – ಶಾಸ್ತ್ರದಲ್ಲಿ; **ಎನಿಕ್ಕುಂ** – ಎನಿಸುತ್ತದೆ ಎಂದು ಕರೆಯುವರು.

ತ್ರಿ–೨೭ ನೆರೆದ – ಸಂಪೂರ್ಣವಾಗಿ; ಅರುಹನಾಲಿಯಮುಂ – ಜಿನ ದೇವಾಲಯಗಳು; ಅನಿತೇ – ಅಷ್ಟೇ ಸಂಖ್ಯೆಯಲ್ಲಿವೆ; ಸುರರು – ದೇವತೆಗಳು; ಪುಟ್ಟಿದವರುಂ – ಜನಿಸಿದವರು.

ಇಲ್ಲಿಗೆ ಭವನಲೋಕ ವರ್ಣನೆ ಮುಗಿಯಿತು.

ತ್ರಿ–೨೮ **ಭೂತಳ** – ಭೂಲೋಕ; **ತಾನೆ** – ಅದೇ; **ನಡುವಣಲೋಕ** – ಮಧ್ಯಮಲೋಕ; **ಕ್ರಮದಿಂ** – ಒಂದಾದ ಮೇಲೆ ಒಂದರಂತೆ; **ದ್ವೀಪಸಾಗರಂ** – ದ್ವೀಪಗಳೂ ಸಮುದ್ರಗಳೂ ವಿರಾಜಿಸುತ್ತವೆ.

ತ್ರಿ–೨೯ **ತೆರಪಿನೊಳ್** – ವಿಸ್ತಾರದಲ್ಲಿ; **ಲಕ್ಕ** – ಲಕ್ಷ; **ಬಟ್ಟಿತ್ತಾಗಿ** – ದುಂಡಾಗಿ; **ಇಮ್ಮಡಿತೆರಪಿನೊಳ್** – ಎರಡರಷ್ಟು ವಿಸ್ತಾರದಲ್ಲಿ; **ಸುತ್ತಿಬಂದು** – ಆವರಿಸಿ; **ಸುತ್ತಂ** – ಸುತ್ತಲೂ.

ತ್ರಿ–೩೦ **ಅಗಲದೊಳ್** – ವಿಸ್ತಾರದಲ್ಲಿ; **ವಾರ್ಧಿ** –ಸಮುದ್ರ; **ಬಳಸಿಹುದು** – ಸುತ್ತುವರಿದಿದೆ; **ಇರ್ಮಡಿ** – ಎರಡರಷ್ಟು; **ಒಳ್ಪಿಂ** – ಚೆನ್ನಾಗಿ.

ತ್ರಿ–೩೧ **ಆಲಂಬಿಪ ತೆರವು** – ವಿಸ್ತಾರವನ್ನು ಅವಲಂಬಿಸಿರುವ; **ಬಳಸಿರ್ಕುಂ** – ಸುತ್ತುವರಿದಿದೆ; **ಅಬ್ಧಿಗೆ** – ಸಾಗರಕ್ಕೆ; **ಸುತ್ತೋಲಗಿಸೆ** – ಸುತ್ತಲೂ ಆವರಿಸಿರಲು.

ತ್ರಿ–೩೨ ಗಿರಿಯಂ – ಪರ್ವತವನ್ನು; **ಬಳಸಿ** – ಸುತ್ತುವರಿದು; **ದ್ವೀಪಪತಿ** – ದ್ವೀಪಗಳ ಗುಂಪು; **ಕವೆಯಾರ** – ದುಂಡಾಗಿ ಬಳಸಿಬರುವ ಸಾಧನ.

ತ್ರಿ–೩೩ ದೀವಿ – ದೀಪ; **ತಿರ್ಯಂಚಗಳ್** – ದೇವಮಾನವ ನರಕ ಜೀವಿಗಳಣ್ನು ಬಿಟ್ಟು ಉಳಿದ ಪ್ರಾಣಿವರ್ಗ.

ತ್ರಿ–೩೪ **ತೆರಪು** – ವಿಸ್ತಾರ; **ಎನಿತೆನೆ** – ಎಷ್ಟೆಂದರೆ; **ಆಗಮಸಿದ್ಧಂ** – ಶಾಸ್ತ್ರಗಳಲ್ಲಿ ಪ್ರತಿಪಾದಿತವಾದ ವಿಚಾರ.

ತ್ರಿ–೩೫ **ಅಭಿರಾಜಿಸುಗುಂ** – ವಿರಾಜಿಸುತ್ತಿದೆ; **ನಗೇಂದ್ರಂ** – ಪರ್ವತರಾಜ; **ನೀಟಂ** – ಬುಡದಲ್ಲಿ.

ತ್ರಿ–೩೬ **ಸರಿತದಲ್ಲಿ** – ಬಳಿಯಲ್ಲಿ; **ಮೂಡಲು** – ಪೂರ್ವ; **ಪಡುವಲು** – ಪಶ್ಚಿಮ.

ತ್ರಿ–೩೭ **ಅನಿತೇ** – ಅಷ್ಟೇ; **ಗಾವುದ** – ಉದ್ದಂ **ಬಗೆವೊಡೆ** – ಉದ್ದದಲ್ಲಿ ಗಮನಿಸಿದರೆ; **ಪೊಂಬೆಟ್ಟಂಗಳ್** – ಚಿನ್ನದ ಪರ್ವತಗಳು; **ಯುತಂಗಳ್** – ಒಳಗೊಂಡಿವೆ.

ತ್ರಿ–೩೮ **ಹೇಮಪರ್ವತ** – ಚಿನ್ನದ ಬೆಟ್ಟ; **ರೂಹಿಂದಂ** – ರೂಪಿನಿಂದ; **ಪೂರ್ವವಿದೇಹ** – ಪೂರ್ವದಿಕ್ಕಿಗಿರುವ ವಿದೇಹ **ಅಪರವಿದೇಹ** – ಪಶ್ಚಿಮದಿಕ್ಕಿಗಿರುವ ವಿದೇಹ; **ಉರ್ವಿ** – ಭೂಮಿ; **ಮೋಹರಿಸಿ** – ಆವರಿಸಿ.

ತ್ರಿ–೩೯ **ತೆಂಕಬಡಗಲ್** – ದಕ್ಷಿಣೋತ್ತರವಾಗಿ; **ಸಾರಿರ್ದಹವು** – ಸೇರಿಕೊಂಡಿವೆ; **ಆರುಭೋಗ ಭೂಮಿಗಳವರಿಂ** – ಆರು ಭೋಗ ಭೂಮಿಗಳು ಎಂದೊಂದು ಪರ್ವತಕ್ಕೆ, ಪರ್ವತದ ಆಕಡೆ ಈ ಕಡೆ ೩ ಹೊಂದಿಕೊಂಡಿವೆ. **ತೆಂಕ** – ದಕ್ಷಿಣ; **ಬಡಗಣ** – ಉತ್ತರ.

ತ್ರಿ–೪೦ **ಲೇಸು** – ಒಳ್ಳೆಯದು; **ಭೋಗಮಹಿ** – ಭೋಗಭೂಮಿ; **ಅದಿಲ್ಲಂ** – ಅದು ಕಾಣದು; **ಮುನ್ನಂ** – ಹಿಂದೆ, ಪೂರ್ವಕಾಲದಲ್ಲಿ; **ಭುಕ್ತಿಯಿಕ್ಕಾದ ಫಲದಿಂ** – ಆಹಾರ ದಾನ ಮಾಡಿದ್ದರ ಫಲವಾಗಿ.

ತ್ರಿ–೪೧ **ಪತ್ತಂದವು** – ಹತ್ತು ಆದುವು; **ಒರ್ಮೆ** – ಒಂದು ಸಲ; **ಉದ್ಧತಂ ಅರ್ಕು** – ದೃಷ್ಟಿಯೂ ಉಂಟು; **ಪ್ರಳಯಂ ಅರ್ಕುಂ** – ನಾಶವೂ ಉಂಟು.

ತ್ರಿ–೪೨ **ಪರಮಸ್ಥಿತಿ** – ಅನ್ಯಮತ ಪ್ರಭಾವ; **ಮೆರೆಗುಂ** – ಮೆರೆಯುತ್ತದೆ; **ಸರ್ವಜ್ಞಮತ** – ಜೈನಮತ, **ವೀತರಾಗನಮತ; ಪರ್ವದಿನಂ** – ಎಲ್ಲಾ ಕಾಲದಲ್ಲೂ; **ಮುಕ್ತಿಗೈದುವರ್** – ಮುಕ್ತಿಹೊಂದಲು.

ತ್ರಿ–೪೩ **ಸಮಂತು** – ಸಮಾನ ಆಕಾರವಾಗಿ; **ವಿದ್ಯಾಧರರು** – ವಿಜಯಾರ್ಧಪರ್ವತ ಶ್ರೇಣಿಯಲ್ಲಿರುವವರು; ಜಾತಿ ಕುಲ ತಪ ವಿದ್ಯೆಗಳು ವಿದ್ಯಾಧರರರಿಗೆ ಇವೆ. ಎಲ್ಲ ವಿದ್ಯೆಗಳನ್ನೂ ಬಿಟ್ಟು ಸಂಯಮಗ್ರಹಣ ಮಾಡುವವರೂ ವಿದ್ಯಾಧರರು ಎನ್ನಿಸುತ್ತಾರೆ. ವಿದ್ಯಾಧರರು ಮೂರು ವಿದ್ಯೆಗಳಿಂದ ಹಾಗೂ ಷಟ್ಕರ್ಮಗಳಿಂದ ಕೂಡಿರುವುದರಿಂದ ವಿದ್ಯಾವಿಜಯಿ ವಿದ್ಯಾಧರರು ಎನಿಸುತ್ತಾರೆ. ವಿದ್ಯಾಧರರು ವಿದ್ಯಾಬಲದಿಂದ ಗಗನಗಾಮ ವಿದ್ಯೆ ಬಲ್ಲವರಾಗಿರುತ್ತಾರೆ. (ಸರಸ್ವತಿ ಪು. ೨೭೨)

ತ್ರಿ-೪೪ **ನಭದೊಳ್** – ಆಕಾಶದಲ್ಲಿ; **ಚಲಿಸುವರ್** – ಸಂಚಾರ ಮಾಡುತ್ತಾರೆ. ಗಗನ ಗಾಮಿಗಳು ಖೇಚರರಂತೆ.

ವ್ರತ – ಧರ್ಮಾನುಷ್ಠಾನವನ್ನು ನಿಯಮಪೂರ್ವಕವಾಗಿ ಆಚರಿಸುವುದು. ವ್ರತಗಳು ಹಲವು ವಿಧ: ೫ ಅಣುವ್ರತಗಳು, ೩ ಗುಣ ವ್ರತಗಳು ಮತ್ತು ೪ ಶಿಕ್ಷಾ ವ್ರತಗಳು.

ದಾನ ೪ ಬಗೆ: ಶಾಸ್ತ್ರ ದಾನ, ಆಹಾರ ದಾನ, ಔಷಧ ದಾನ, ಅಭಯ ದಾನ.

ಪೂಜೆ ೮ ವಿಧ : ಜಲ, ಗಂಧ, ಅಕ್ಷತ, ಪುಷ್ಪ, ಚರು, ಧೂಪ, ದೀಪ, ಫಲ – ಈ ೮ ವಸ್ತುಗಳಿಂದ ಮಾಡುವ ಪೂಜೆ.

ತ್ರಿ-೪೫ **ಭವನೋರ್ವರೆ ಮುಟ್ಟಲ್** – ಭವನ ಭೂಮಿಯವರೆಗೆ; **ಎನಿಸುಗುಂ** – ಎನಿಸುತ್ತಿರೆ. **ತಾವುಂ** – ಅವರು ಪರಿಗಣಿಸಲ್ಪಡುತ್ತಾರೆ.

ವ್ಯಂತರರ್ – ನಾಲ್ಕು ಪ್ರಕಾರದ ದೇವತೆಗಳ ಸಮೂಹಗಳಿವೆ. ವ್ಯಂತರ, ಭವನವಾಸಿ, ಕಲ್ಪವಾಸಿ, ಜ್ಯೋತಿಷ... ಇವರಲ್ಲಿ ವ್ಯಂತರ ದೇವತೆಗಳಲ್ಲಿ ೮ ವಿಧಗಳಿವೆ: ಇಂದ್ರ, ಸಾಮಾನಿಕ ಪಾರಿಷದ ಆತ್ಮರಕ್ಷ ಅನೀಕ ಪ್ರಕೀರ್ಣಕ ಅಭಿಯೋಗ್ಯ. ೮ ಕಿಲ್ಬಿಷಕ ಪಟ್ಟು ಅಷ್ಟ ವಿಕಲ್ಪಗಳು. ವ್ಯಂತರನಿಕಾಯದಲ್ಲಿ ಈ ಒಂದೊಂದು ಕುಲದಲ್ಲಿ ಇಬ್ಬಿಬ್ಬರು ಇಂದ್ರರಿರುತ್ತಾರೆ. (ಸರಸ್ವತಿ ಪು. ೧೩೦). ಗಿರಿ ಗುಹೆ ಸಮುದ್ರ ಮೊದಲಾದ ವಿವಿಧ ಪ್ರದೇಶಗಳಲ್ಲಿ ವಾಸಿಸುವ ಕಿನ್ನರ ಕಿಂಪುರುಷ ಯಕ್ಷರೇ ಮೊದಲಾದವರು ವ್ಯಂತರ ದೇವತೆಗಳು. (ಗುಂ ಪು.XXV)

ತ್ರಿ-೪೬ **ಆ ಮಾತಂತಿರಲಿ** – ಆ ವಿಚಾರ ಹಾಗಿರಲಿ; **ಉದ್ದಾಮ** – ವಿಸ್ತಾರ; **ದಟ್ಟಂ** – ಒತ್ತಾಗಿ, ದಪ್ಪ.

ತ್ರಿ-೪೭ **ತಾರಾಮಂಡಲ–ಜ್ಯೋತಿರ್ಲೋಕ–ಜ್ಯೋತಿಷ್ಕಲೋಕ** – ಜ್ಯೋತಿರ್ಲೋಕವು ೧ ರಜ್ಜು ಉದ್ದ ೧ ರಜ್ಜು ಅಗಲ ೧೧೦ ಯೋಜನ ದಪ್ಪವಿದೆ. ಆಕಾಶ ಕ್ಷೇತ್ರವು ಜ್ಯೋತಿಷ್ಯ ದೇವರ ಸಂಚಾರ ಸ್ಥಾನವಾಗಿದೆ. ಅದರ ಮೇಲೆ ಕೆಳಗೆ ಅವರ ಸಂಚಾರ ಸ್ಥಾನವಿರುವುದಿಲ್ಲ. ಮೇರುವಿನಿಂದ ೧೧೨೧೦ ಯೋಜನ ಅಂತರದಲ್ಲಿ ಅವರ ಸಂಚಾರವಿರುತ್ತದೆ. (ಸರಸ್ವತಿ ಪು. ೧೪೫)

ತ್ರಿ-೪೮ **ಪದಿನಾರುಂಸ್ವರ್ಗಂಗಳು** – ೧೬ ಸ್ವರ್ಗಗಳು
೧. ಸೌಧರ್ಮ ೨. ಈಶಾನ ೩. ಸನತ್ಕುಮಾರ ೪. ಮಾಹೇಂದ್ರ ೫. ಬ್ರಹ್ಮ ೬. ಬ್ರಹ್ಮೋತ್ತರ ೭. ಲಾಂತವ ೮. ಕಾಪಿಷ್ಠ ೯. ಶುಕ್ರ ೧೦. ಮಹಾಶುಕ್ರ ೧೧. ಶತಾರ ೧೨ ಸಹಸ್ರಾರ ೧೩. ಆನತ ೧೪. ಪ್ರಾಣತ ೧೫. ಆರಣ ೧೬. ಅಚ್ಯುತ (ಸರಸ್ವತಿ ಪು.೩೬೧)

ತ್ರಿ-೪೯ **ರತ್ನವಿಮಾನ** – ರತ್ನಗಳ ವಿಮಾನ; **ಕೂರ್ಪಂಗನೆಯರ್ಕಳ್** – ಪ್ರಿಯದೇವತಾ ಸ್ತ್ರೀಯರು; **ನೇರ್ಪಟ್ಟ** – ರೂಪಿಸಿದ; **ಆರ್ಪೊಗಳಲ್ ಬಲ್ಲರ್** – ಯಾರಿಗೆ ತಾನೆ ವರ್ಣಿಸಲು ಶಕ್ಯ?; **ಸದ್ಗನಸುಖವುಂ** – ಸ್ವರ್ಗ ಸುಖವನ್ನು.

ತ್ರಿ–೫೦ **ಕಲ್ಪಂಗಳ್** – ಸ್ವರ್ಗಗಳು; **ಆಖ್ಯಂ** – ಹೆಸರಿನ, ಪ್ರಸಿದ್ಧವಾದ; **ಗ್ರೈವೇಯಕ** – ಗ್ರೈವೇಯಕ, ಅನುದಿಶ, ಅನುತ್ತರ ಎಂಬ ಮೂರು ಕಲ್ಪಾತೀತ ಸ್ವರ್ಗ ಪಟಲಗಳಲ್ಲಿ ಒಂದು. ಇವುಗಳಲ್ಲಿ ಕ್ರಮವಾಗಿ ಮೂರು ಮೂರು ಇಂದ್ರಕಗಳಿವೆ. ಇಂದ್ರಕ ಎಂದರೆ ಅಂತರ್ಭೂಮಿ, ಬಿಲಗಳ ಮಧ್ಯೆ ಇರುವುದೇ ಇಂದ್ರಕ.

ಇಂದ್ರಕ : ಸೌಧರ್ಮ, ಈಶಾನ ಮೊದಲಾದ ಇಂದ್ರರ ಸ್ವರ್ಗವಿಮಾನಗಳು. ಒಟ್ಟು ೬೩ ಇಂದ್ರಕಗಳಿವೆ. (ಸರಸ್ವತಿ ಪು.೭೦) ಗ್ರೈನೇಯಕವು ಒಟ್ಟು ಒಂದು ರಜ್ಜು ಪ್ರಮಾಣದ ವಿಸ್ತಾರದಲ್ಲಿದೆ.

ತ್ರಿ–೫೧ **ನವಾಣುದಿಶ** – ೯ ವಿಮಾನಗಳ ವಿಮಾನಕ್ಷೇತ್ರ (೮ ದಿಕ್ಕಿನಲ್ಲಿ ೮ ವಿಮಾನಗಳು ಮಧ್ಯದಲ್ಲಿ ಒಂದು ಸೇರಿ ೯ ವಿಮಾನಗಳ ಕ್ಷೇತ್ರ).

ತ್ರಿ–೫೨ **ಮಹೋತ್ತಮ** – ಅತ್ಯುತ್ತಮ; **ನಾಲ್ದೆಸೆಗೆ ನಾಲ್ಕು** – ವಿಜಯ, ವೈಜಯಂತ, ಜಯಂತ, ಅಪರಾಜಿತ ಎಂಬ ವಿಮಾನಗಳಿವೆ ನಾಲ್ಕು ದಿಕ್ಕುಗಳಲ್ಲಿ. ಮಧ್ಯದಲ್ಲಿ ಸರ್ವಾರ್ಥ ಸಿದ್ಧಿ ಎಂಬ ಶ್ರೇಷ್ಠ ವಿಮಾನವಿದೆ.

ಸರ್ವಾರ್ಥ ಸಿದ್ಧಿ : ಕಲ್ಪಾತೀತ ಸ್ವರ್ಗಲೋಕದಲ್ಲಿ ಎಲ್ಲಕ್ಕೂ ಎತ್ತರದಲ್ಲಿರುವ ಪಂಚಾಣುತ್ತರ ವಿಮಾನಗಳಲ್ಲಿ ಒಂದು. ಸರ್ವಾರ್ಥಸಿದ್ಧಿ ಎಂಬ ಶ್ರೇಷ್ಠವಾದ ಅನುತ್ತರ ವಿಮಾನದ ಕೊನೆಗೆ ಹನ್ನೆರಡು ಯೋಜನೆಗಳಿವೆ. ಜಂಬೂದ್ವೀಪಕ್ಕೆ ಸಮಾನವಾಗಿ ಉದ್ದಗಲವುಳ್ಳ, ವರ್ತುಲಾಕಾರವಾದ ಆ ವಿಮಾನವು ೧೬ ಸ್ವರ್ಗಗಳ ಸಂಬಂಧವಾದ ೬೩ ಪಟಲಗಳ ಅಗ್ರಭಾಗದಲ್ಲಿ ಚೂಡಾರತ್ನದಂತಿದೆ. ಈ ವಿಮಾನದಲ್ಲಿ ಹುಟ್ಟಿದವರಿಗೆ ಸಮಸ್ತ ಅರ್ಥಗಳೂ ಯತ್ನವಿಲ್ಲದೆ ಸಿದ್ಧಿಸುವುದರಿಂದ ಸರ್ವಾರ್ಥ ಸಿದ್ಧಿ ಎಂಬ ಸಾರ್ಥಕ ಹೆಸರನ್ನು ಪಡೆದಿದೆ. (ಸರಸ್ವತಿ ಪು.೩೧೯).

ತ್ರಿ–೫೩ **ಅಬಲೆಯರ್ಕಳ್** – ಅಬಲೆಯರು, ಸ್ತ್ರೀಯರು; **ಇಲ್ಲದೊಡೇನ್**? – ಇಲ್ಲದಿದ್ದರೇನಂತೆ.

ತ್ರಿ–೫೪ **ಸ್ವರ್ಗಮೆ** – ಸ್ವರ್ಗನೆ; **ಸುಖವಹುದು** – ಸುಖಕರವಾಗಿರುತ್ತದೆ. **ತಳದಿಂ ಮೇಲ್ಮೇಲೆ** – ನರಕಲೋಕದಿಂದ ಮಧ್ಯಮಲೋಕ ಮಧ್ಯಮಲೋಕದಿಂದ ದೇವಲೋಕ ಹೀಗೆ ಊರ್ಧ್ವಮುಖವಾಗಿ ಹೋದರೆ ಸೌಖ್ಯವು; **ಉಗ್ಗಡಂ ಅಕ್ಕು** – ಅಧಿಕವಾಗುತ್ತಾ ಹೋಗುತ್ತದೆ; **ವೆಗ್ಗಳಂ** – ವೃದ್ಧಿಸುತ್ತದೆ.

ತ್ರಿ–೫೫ **ಮೇಗಣಿಂಕೆಳಗೆ** – ನರಕಲೋಕದಲ್ಲಿ ಮೇಲಿನಿಂದ ಕೆಳಕ್ಕೆ ಹೋದಂತೆಲ್ಲಾ ಆಯುಷ್ಯ ಹೆಚ್ಚುತ್ತಾ ಹೋಗುತ್ತದೆ. ಕಷ್ಟಪಡುವ ಪ್ರಮಾಣ ಹೆಚ್ಚುತ್ತದೆ. ಆದ್ದರಿಂದ ಇದು ಕಷ್ಟವಾಗಿದೆ; **ತಳದಿಂ ಮೇಲೆ** – ಕೆಳಗಿನ ಲೋಕದಿಂದ ಮೇಲೆ ಸ್ವರ್ಗಕ್ಕೆ ಹೋದಂತೆಲ್ಲಾ; **ಉರುಸುಖಮುಂ** – ಅಧಿಕ ಸುಖವು; **ದೀರ್ಘದಾಯ** – ದೀರ್ಘಾಯುಷ್ಯ ಉಂಟಾಗುತ್ತದೆ; ಆದ್ದರಿಂದ ಇದು **ಶಿಷ್ಟ** – ಶಿಷ್ಟ– ಸುಖಕರ, ಉತ್ತಮ, ಯೋಗ್ಯ.

ತ್ರಿ–೫೬ **ಸಾಗರೋಪಮ ಆಯುಕ್ಸ** – ಸಾಗರೋಪಮ ಕಾಲ ಎಂದರೆ ಒಂದು ಉತ್ಸರ್ಪಿಣೀ ಅಥವಾ ಅವಸರ್ಪಿಣೀಕಾಲ, ೧೦ ಸಾಗರ ಕೋಟಿ ಕೋಟಿ ಕಾಲ – ಆಯುಕ್ಸ. (ಮಪ್ರ ಪು.೭೫); ಪಲ್ಯಕಾಲಗಳ ೧೦ ಕೋಟಾಕೊರು ಕಾಲ; **ಮೊದಲಿಗಂ** –

ಮೊದಲಿನಿಂದ; **ಯುಗ್ಮಂಗಳ್ಗೆ** – ಎರಡು ಆಯುಷ್ಯ ಪರಿಮಾಣಗಳಿಂದ; **ಈರೆಂಟು** – ಹದಿನಾರು; **ಒಪ್ಪಿದುದು** – ಆಗಿದೆ; **ಅಗ್ರದ್ವಿಕದೊಳ್** – ಮೇಲಿನ ಎರಡು ಕಲ್ಪಗಳು ಸೇರಿ.

ತ್ರಿ–೫೭ ಗ್ರೈವೇಯಕದಿಂದ – ಗ್ರೈವೇಯಕ ವಿಮಾನದಿಂದ ಮುಂದಕ್ಕೆ; **ವಾರಿಧಿ ಪೆರ್ಚುತ** – ಸಾಗರೋಪಮ ಆಯುಷ್ಯ ಹೆಚ್ಚುತ್ತಾ ಹೋಗಿ; **ಪಂಚಾಣುತ್ತರೆಯೊಳ್** – ಐದು ಅಣುತ್ತರೆಗಳಲ್ಲಿ; **ಅಧಿಕಾಯುಷ್ಯಂ** – ಉತ್ಕೃಷ್ಟಾಯುಷ್ಯ; **ದೇವರ್ಕಳ ಮೊತ್ತಕೆ** – ದೇವತೆಗಳ ಗುಂಪಿಗೆ ಇರುತ್ತದೆ; **ಐದಣುತ್ತರೆ** – ಪಂಚಾಣುತ್ತರೆ – ಅನುತ್ತರ ವಿಮಾನ, ನವಗ್ರೈವೇಯಕ ನವ ಅನುದಿಶೆ, ಪಂಚಾಣುತ್ತರೆಗಳೆಂಬ ಕಲ್ಪಾತೀತ ಸ್ವರ್ಗದ ಒಂದು ಭೇದ ವಿಜಯ, ವೈಜಯಂತ ಜಯಂತ, ಅಪರಾಜಿತ ಮತ್ತು ಸರ್ವಾರ್ಥ ಸಿದ್ಧಿ ಎಂದು ಅನುತ್ತರ ವಿಮಾನಗಳು ಐದು. ಇದನ್ನು ಪಂಚಾಣುತ್ತರೆ ಸ್ವರ್ಗಗಳೆಂದು ಕರೆಯುತ್ತಾರೆ. ಅಣುತ್ತರೆಗಳಲ್ಲಿರುವ ಐದು ವಿಮಾನಗಳಿಗೆ ಆಕಾಶ ಪ್ರತಿಷ್ಠಗಳು ಎನ್ನುತ್ತಾರೆ. ಇಲ್ಲಿನ ದೇವತೆಗಳ ಆಯುಷ್ಯ ೩೩ ಸಾಗರೋಪಮ ವರ್ಷ ಉತ್ಕೃಷ್ಟ ಆಯುಷ್ಯವುಳ್ಳವರು.

ದ್ವಿಚರಮದೇಹಿಗಳು : ಪಂಚಾಣುತ್ತರೆಯಲ್ಲಿ ಮೊದಲಿನ ೪ ವಿಮಾನಗಳಲ್ಲಿ ಇರುವವರು ಅಂದರೆ ವಿಜಯ, ವೈಜಯಂತ, ಜಯಂತ, ಅಪರಾಜಿತ ವಿಮಾನಗಳಲ್ಲಿ ಇರುವವರು ಚ್ಯುತರಾಗಿ ಸಮ್ಯಕ್ತ್ವದಿಂದ ಮನುಷ್ಯ ಗತಿಯಲ್ಲಿ ಹುಟ್ಟುತ್ತಾರೆ. ಮತ್ತೆ ಸಂಯಮವನ್ನು ಆರಾಧಿಸಿ ವಿಜಯಾಧಿಗಳಲ್ಲಿ ಹುಟ್ಟುತ್ತಾರೆ. ಮತ್ತೆ ಅಲ್ಲಿಂದ ಚ್ಯುತರಾಗಿ ಸಮ್ಯಕ್ತ್ವದೊಂದಿಗೆ ಮನುಷ್ಯಭವವನ್ನು ಧರಿಸಿ ಮುಕ್ತರಾಗುವುದರಿಂದ ಇವರನ್ನು ದ್ವಿಚರಮದೇಹಿಗಳು ಎನ್ನುತ್ತಾರೆ. ಸರ್ವಾರ್ಥಸಿದ್ಧಿಯಲ್ಲಿ ಅಹಮಿಂದ್ರರು ಏಕಚರಮ ದೇವತೆಗಳು (ಸರಸ್ವತಿ ಪು.೮)

ತ್ರಿ–೫೮ ಪಲ್ಯ – ಪಲ್ಯೋಪಮಕಾಲವೆಂದರೆ ಒಂದು ಪಲ್ಯಕ್ಕೆ ಸಮಾನವಾದ ಕಾಲ ಇದನ್ನು ವ್ಯವಹಾರ ಪಲ್ಯ ಎಂದೂ ಕರೆಯುವರು. "ಒಂದು ಯೋಜನ ವಿಸ್ತೀರ್ಣವೂ ಒಂದು ಯೋಜನ ಆಳವೂ ಆದ ವರ್ತುಲಾಕಾರವಾದ ಮೂರು ತಗ್ಗು (ಹಳ್ಳ)ಗಳನ್ನು ತೋಡಿ ಉತ್ತಮ ಭೋಗ ಭೂಮಿಯಲ್ಲಿ ಶೀತಾ ತಪರಹಿತವಾದ ಭೂಗೃಹದಲ್ಲಿ ಸಲಹಿದ ಗಂಡು ಹೆಣ್ಣು ಕುರಿಗಳ ಏಳನೆಯ ತಲೆಯ ಮರಿಗುರಿಯ ಏಳನೆಯ ದಿನದ ರೋಮಗಳನ್ನು ತಲೆಯ ಮರಿ ಗುರಿಯ ಏಳನೆಯ ದಿನದ ರೋಮಗಳನ್ನು ತುದಿಮೊದಲು ಅಲಿಯಬಾರದಂತೆ (ಅತ್ಯಂತ ಸೂಕ್ಷ್ಮವಾಗಿ) ಕತ್ತರಿಸಿ ಅವನ್ನು ಮೊದಲನೆಯ ಕುಣಿಯಲ್ಲಿ ಹತ್ತೆಯಾಗಿ ತುಂಬಬೇಕು. ಆ ಕೂದಲುಗಳನ್ನು ೧೦೦ ವರ್ಷಕ್ಕೊಂದರಂತೆ ತೆಗೆಯುತ್ತಾ ಹೋಗಬೇಕು. ಹೀಗೆ ತೆಗೆಯಲು ಎಲ್ಲ ರೋಮಗಳೂ ಎಲ್ಲ ಕುಣಿಗಳೂ ತೀರುವುದಕ್ಕೆ ಬೇಕಾಗುವ ಕಾಲಾವಧಿಗೆ ವ್ಯವಹಾರ ಪಲ್ಯ ಎಂದು ಹೆಸರು. (ಮಪ್ರ ಪು.೭೪). ಈ ಪಲ್ಯಗಳ ಕಾಲ ೧೦ ಕೋಟಾಕೋಟಿ ಯಿಂದ ಸಾಗರೋಪಮಕಾಲ ಆಗುತ್ತದೆ. ಎಂದರೆ ಒಂದು ಉತ್ಸರ್ಪಿಣೀ ಅಥವಾ ಅವಸರ್ಪಿಣೀ ಕಾಲದ ಅವಧಿ. (ಮಪ್ರ ಪು.೭೫)

ತ್ರಿ-೫೯ **ಕೆಯ್ಕೊಂಡೊಂಡೆ** – ಕೈಗೊಂಡರೆ; **ಸುಜ್ಞಾನದೆ** – ಒಂದು ಪರಿಮಾಣದ ಸಂಖ್ಯೆ? ಎಷ್ಟು ಕಾಲಪಯಣದ್ದು?; **ಪಲ್ಯ** – ಸಾಗರವನ್ನು ೧೦ ಕೋಟಿಸಲ ಕೋಟಿಯನ್ನು ಇಟ್ಟು ಸುಜ್ಞಾನದಿಂದ ಭಾಗಿಸಿ ಒಂದು ಭಾಗ ತೆಗೆದುಕೊಂಡರೆ ಆ ಕಾಲ ಪರಿಮಾಣವೇ ಪಲ್ಯ.

ತ್ರಿ-೬೦ **ಅಬ್ದಂ** – ವರ್ಷ; **ಅಂಗ** – ೮೪ ಲಕ್ಷ ವರ್ಷಗಳು; **ಪೂರ್ವ** – ೮೪ ಲಕ್ಷ ಅಂಗಗಳು; **ಪೂರ್ವಕೋಟಿ** – ೧ ಕೋಟಿ ಪೂರ್ವಗಳು.

ತ್ರಿ-೬೧ **ಐರಾವತ** – ಜಂಬೂದ್ವೀಪದ ೭ನೇ ಕ್ಷೇತ್ರ. ಇಲ್ಲಿ ವಿಜಯಾರ್ಧಪರ್ವತವಿದೆ. ಇಲ್ಲಿ ರಕ್ತಾ, ರಕ್ತೋದಾನದಿಗಳನ್ನೂ ಒಳಗೊಂಡು ೧೪೦೦೦ ಉಪನದಿಗಳು ಹರಿಯುತ್ತವೆ. ಭೂರಚನೆ, ಆಯುಷ್ಯ, ಶಕ್ತಿ, ಶರೀರ – ಇವುಗಳಲ್ಲಿ ಕಾಲಭೇದಾನುಸಾರ ಏರಿಳಿತಗಳಾಗುತ್ತವೆ.

ತ್ರಿ-೬೨ **ಭರತ (ಭರತಭೂಮಿ)** – ಜಂಬೂದ್ವೀಪ ಇದರಲ್ಲಿ ೭ ಕ್ಷೇತ್ರಗಳಿವೆ. ೧ ಭರತ ೨ ಹೈಮವತ ೩ ಹರಿ ೪ ವಿದೇಹ ೫ ರಮ್ಯಕ ೬ ಹೈರಣವತ ೭ ಐರಾವತ. ಇವುಗಳಲ್ಲಿ ಭರತವರ್ಷ ಮೊದಲನೆಯದು. ಐರಾವತ ಕೊನೆಯದು. (೭ನೆಯದು). ಹಿಮವತ್ ಪರ್ವತದ ದಕ್ಷಿಣದಲ್ಲಿ ಲವಣ ಸಮುದ್ರದವರೆಗೂ ವ್ಯಾಪಿಸಿರುವುದು ಭರತಕ್ಷೇತ್ರ. ಇದರ ನಡುವೆ ವಿಜಯಾರ್ಧ ಪರ್ವತವಿದೆ. ಜಂಬೂದ್ವೀಪದ ಉಳಿದ ಕ್ಷೇತ್ರಗಳಲ್ಲೂ ವಿಜಯಾರ್ಧ ಪರ್ವತಗಳಿವೆ. (ಎಲ್‌ಗುಂ LI)

ತ್ರಿ-೬೩ **ಎಂಬನ್ನೆಗಂ** – ಎನ್ನುವಂತೆ ಒಪ್ಪುವ; **ಖಚರರಿಗೆ** – ಖೇಚರರಿಗೆ; **ಪಿರಿದು ಇಳಿವಿಲ್ಲಂ** – ಹೆಚ್ಚಾಗಿರುವುದು ಕಡಿಮೆಯಾಗದು; **ಪೂರ್ವಕೋಟಿ** (ಪದ್ಯ ೬೦ ನೋಡಿ) ಒಂದು ಕೋಟಿ ಪೂರ್ವಗಳಿಗೆ; ೧ ಪೂರ್ವಕೋಟಿ – ೮೪ ಲಕ್ಷ ಅಂಗಗಳಿಗೆ ಒಂದು; ಪೂರ್ವ – ೮೪ ಲಕ್ಷ ವರ್ಷಗಳಿಗೆ ೧ ಅಂಗ.

ತ್ರಿ-೬೪ **ಕಾಂತಾನಿವಡ** – ಸ್ತ್ರೀಸಮೂಹ; **ಅನವರತ** – ಸದಾ; **ಇಂದ್ರಿಯಸುಖ** – ದೈಹಿಕಸುಖ.

ತ್ರಿ-೬೫ **ಮುಟ್ಟೆ ಕೆಲರ್ ನೋಡಿ ಕೆಲರ್** – ಸ್ಪರ್ಶದಿಂದ ಕೆಲವರು ನೋಟದಿಂದ ಕೆಲವರು (ದರ್ಶನ); **ನೆಟ್ಟನೆ ನುಡಿಗೇಳ್ದು** (ಶ್ರವಣ) – ನೇರವಾಗಿ ಮಾತು ಕೇಳಿ; **ತೊಟ್ಟನೆ** – ಕೂಡಲೆ; **ನುಡಿಕೇಳ್ದು ನೆನೆದು** – ಶ್ರವಣ ಮತ್ತು ಸ್ಮರಣದಿಂದ; **ಈರೆಂಟೆಡೆ** – ೧೬ ಸ್ವರ್ಗಗಳಲ್ಲಿ; **ಇಟ್ಟಣಿಸಿದ** – ದಟ್ಟೈಸಿದ; **ಪೆಣ್ಗಳಾಟ** – ಸ್ತ್ರೀಯರ ವಿನೋದ.

ತ್ರಿ-೬೬ **ಮೇಲೆ ಪೆಣ್ಣಿಲ್ಲ** – ಈ ೧೬ ಸ್ವರ್ಗಗಳ ಆಚೆ ಮಹಿಳೆಯರಿಲ್ಲ; **ಆಲಿಸೆ** – ಇಲ್ಲದಿದ್ದರೂ ಗಮನಿಸಿದರೆ; **ಸುಖಂ ಅಧಿಕಂ ಉಂಟು** – ಹೆಚ್ಚಿನ ಸುಖ ಅಲ್ಲಿಯೂ ಇದೆ; **ಅರಿವೊಡೆ+ಅಶಕ್ಯಂ** – ಆದರೆ ಆ ಸುಖವೇನೆಂದು ತಿಳಿಯಲು ಅಸಾಧ್ಯ. ಏಕೆಂದರೆ ಬಾಲಕಿಗೆ ಪುಟ್ಟ ಹುಡುಗಿಗೆ ಯುವತಿ ಅನುಭವಿಸುವ ದೇಹಭೋಗದ ಸುಖ (ರತಿಸುಖ)ದ ಸೊಗಸನ್ನು; **ಒರೆವಂತೆ** – ಹೇಳಿದಂತೆ ಆಗುತ್ತದೆ; **ಅನುಭವವಿಲ್ಲಂ** – ಹೇಳಿ ಪ್ರಯೋಜನವಿಲ್ಲ. ಏಕೆಂದರೆ ಬಾಲಕಿಗೆ ಆ ಅನುಭವ ಇರುವುದಿಲ್ಲವಲ್ಲಾ!

ತ್ರಿ–೬೭ **ಹೋಹೋ** – ಅಚ್ಚರಿಯ ಉದ್ಗಾರ; **ವಾರ್ತೆ** – ವಿಷಯ, ಸುದ್ದಿ; **ದೇಹವು** – ವಿವರವು; **ಅಂತು+ಇರಲಿ** – ಅದು ಹಾಗೆ ಇರಲಿ; **ಸೋತ್ಸಾಹಂ** – ಉತ್ಸಾಹದಿಂದ; **ಊಹಿಸೆ** – ವಿಚಾರ ಮಾಡಿದರೆ.

ತ್ರಿ–೬೮ **ನಾಲ್ದೆಸೆಗಳೊಳಂ** – ನಾಲ್ಕು ದಿಕ್ಕುಗಳಲ್ಲಿ; **ನಾಲ್ದೆಸೆಯಂ ಕೂಡಿದೊಡೆ** – ೪ x ೧೩ = ೫೨ ಪರ್ವತಗಳಾದವು; **ಪುದಿದ** – ೫೨ ಪರ್ವತಗಳಲ್ಲಿ ೫೨ ಬಸದಿಗಳಿವೆ. ಎಂದರೆ ಪ್ರತಿ ಪರ್ವತದಲ್ಲೂ ಒಂದೊಂದು ಬಸದಿಯಿದೆ.

ತ್ರಿ–೬೯ ದೀವಿ – ದ್ವೀಪ; **ನಗಕೆ** – ಪರ್ವತಕ್ಕೆ; **ಭೂಸ್ಥಾನಕ್ಕೆ** – ಭೂಭಾಗದ; **ದೀವಿಯೊಲೆ** – ದ್ವೀಪವಾಗಿ.

ತ್ರಿ–೭೦ **ಅದ್ರಿ** – ಪರ್ವತ; **ಅವನಿ** – ಭೂಮಿ; **ಬಳಸಿರ್ದು** – ಸುತ್ತುಗಟ್ಟಿದ್ದು; **ದಿವಿಜತತಿ** – ದೇವತಾಸಮೂಹ; **ವಿಭ್ರಾಜಿಸುಗುಂ** – ಶೋಭಿಸುತ್ತವೆ.

ತ್ರಿ–೭೧ **ಮೊದಲರುಪಿದ** – ಈ ಮೊದಲು ತಿಳಿಸಿದ; **ಅಬ್ಧಿ** – ಸಮುದ್ರ; **ಕುರುವಂಗಳಲ್ಲಿ** – ದಿಣ್ಣೆಗಳಲ್ಲಿ; **ಮುಸುಡ** – ಮೋರೆ, ಮೂತಿ.

ತ್ರಿ–೭೨ **ಓರಗೆ** – ಸಮವಾಗಿರುವುದು; **ಲಡ್ಡುಗೆ** – ಲಾಡು; **ಸಮಂ** – ಸಮಾನ; **ತರುಲತೆ** – ಗಿಡಮರಬಳ್ಳಿಗಳು; **ಸಾರಫಲಂ** – ರಸಭರಿತವಾದ ಹಣ್ಣುಗಳು; **ಧಾರಿಣಿಲೇಸು** – ಸೊಗಸಾದ ಪ್ರದೇಶ; **ಅತಿಕಷ್ಟರ್** – ಬಹಳ ದುಃಖಿಗಳು.

ತ್ರಿ–೭೩ **ಪಂದಿಮೊಗಂ** – ಹಂದಿಮುಖದವರು; **ಕೆಲರ್** – ಹಲವರು; **ಕೋಡಗನ** ಮೊಗಂ – ಕೋತಿ ಮೂತಿಯವರು; **ಬಹುಮುಖರ್ ಇಪ್ಪರ್** – ಅನೇಕ ಬಗೆಯ ಮುಖದವರು ಅನೇಕರಿದ್ದಾರೆ.

ತ್ರಿ–೭೪ **ಬಾಸುಂಗಿವಿ** – ಹಾಸಿಗೆಯಂಥ ಕಿವಿಯವರು; **ಪೊದೆಕಿವಿಗಳ್** –ಹೊದಿಕೆಯಂಥ (ಹೊದೆದುಕೊಳ್ಳುವಂತದು) ಕಿವಿಯುಳ್ಳವರು; **ಕೊರಂಟು** – ಮುದುಡಿದ.

ತ್ರಿ–೭೫ **ಅಂತುಟಾದರದಿಂ** – ಹಾಗೆ ಮಾಡಿದ್ದರಿಂದ ಅವರು ಹೀಗಾದರು; **ವ್ರತಿಕರಿಗೆ** – ಸತ್ಪಾತ್ರರಾದ ವ್ರತಿಕರಿಗೆ; **ಅನ್ನವನೀವುದು** – ಆಹಾರದಾನ ಮಾಡಬೇಕು; **ಅನ್ನಿಗರಂ** – ಸತ್ಪಾತ್ರರಲ್ಲದಂಥವರನ್ನು (ಅಪಾತ್ರರಿಗೆ); **ಕೂಳಂ** – ಆಹಾರವನ್ನು; **ಪೂಜಿಸಿ+ಈಯಲಾಗದು** – ಭಕ್ತಿಯಿಂದ ಕೊಡಬಾರದು.

ತ್ರಿ–೭೬ **ಆ ನುಡಿ ಅಂತಿರಲಿ** – ಆ ಮಾತು ಹಾಗಿರಲಿ; **ಬಳಿಕ್ಕೆ ಏನೆಂಬೆಂ** – ಮುಂದಕ್ಕೆ ಏನು ಹೇಳುತ್ತೇನೆಂದರೆ; **ಬೇನೆಯನುಣುತೆ** – ದುಃಖವನ್ನು ಅನುಭವಿಸುತ್ತಾ; **ಬಾಳ್ಗುಂ** – ಜೀವಿಸುತ್ತವೆ; **ನಿಗೋದ ಸ್ಥಾನ** – ಸಾಧಾರಣ ನಾಮಕರ್ಮದ ಉದಯದಿಂದ ಜೀವನಿಗೆ ಉಂಟಾಗುವ ಈ ನಿಗೋದ ಜೀವಗಳು ೭ ನರಕ ಭೂಮಿಯ ಕೆಳಗೆ ಒಂದು ಗಜದ ಪ್ರಮಾಣ ಕ್ಷೇತ್ರದ ನಿಗೋದ ಭೂಮಿಯಲ್ಲಿ ತಮೋಮಯವಾದ ಶೂನ್ಯ ಸ್ಥಳದಲ್ಲಿರುತ್ತವೆ. ಈ ಸ್ಥಳ ನರಕಕ್ಕಿಂತ ಕೀಳು ಸ್ಥಾನ.

ತ್ರಿ-೭೬ **ನಿಗೋದ** – ಅನಂತ ಜೀವಿಗಳಿಗೆ ಆಶ್ರಯವಾದ ಒಂದು ಶರೀರ ವಿಶೇಷ. ಸಾಧಾರಣವೆಂಬ ನಾಮಕರ್ಮದ ಉದಯದಿಂದ ಜೀವವು ನಿಗೋದ ಶರೀರಿಯಾಗುತ್ತದೆ. 'ನಿ' ಎಂದರೆ ಅನಂತತೆ, 'ಗೋ' ಎಂದರೆ ಒಂದೇ ಕ್ಷೇತ್ರ. 'ದ' ಎಂದರೆ ನೀಡುವುದು. ಅಂದರೆ ಅನಂತ ಜೀವಕ್ಕೆ ಒಂದೆ ನಿವಾಸವನ್ನು ನೀಡುವುದು. ನಿಗೋದ. (ಸರಸ್ವತಿ ಪು.೧೯೩)

ತ್ರಿ-೭೭ **ದೂಪಿನ** – ?; **ಮೂಡಿಮುಳುಗಿ** – ತೇಲಿ ಮುಳುಗಿ; **ಬಾಧಾಸಿಂಧುವಿನೊಳ್** – ದುಃಖಸಾಗರದಲ್ಲಿ; **ಸಂದ ಒಂದೊಂದಂಗಮಾಗಿ** – ಒಂದರೊಳಗೊಂದು ಒಂದು ಅಂಗವಾಗಿ ಏಕೀಭವಿಸಿ.

೧ ಸ್ಕಂಧ ೨ ಅಂಡರ ೩ ಆವಾಸ ೪ ಪುಳವಿ ೫ ಮೂರ್ತಿ ಎಂಬುದಾಗಿ ಸೂಕ್ಷ್ಮನಿಗೋದ ಜೀವಿಗಳು ಐದು ತೆರನಾಗಿವೆ.

೧ ಸ್ಕಂಧ – ಎರಡು ಅಥವಾ ಹೆಚ್ಚು ಸೇರಿರುವ ಪುದ್ಗಲ ಪರಮಾಣುಗಳು; ಹಲವು ಅಣುಗಳು ಸೇರಿ ವಸ್ತುರೂಪವನ್ನು ಪಡೆಯುವುದು.

೨ ಅಂಡರ – ?

೩ ಆವಾಸ – ?

೪ ಪುಳವಿ – ?

೫ ಮೂರ್ತಿ ?

ತ್ರಿ-೭೮ **ಸೂಳ್** – ಸಲ; **ಕಡಿಮೆಯೊಳಂ** – ಕಡಿಮೆಯಲ್ಲಿ; **ಗಾರಾಗಿ** – ಹುದುಗಿ ಒಂದಕ್ಕೊಂದು ಸೇರಿಕೊಂಡು; **ನೋವವು** – ದುಃಖಿಸುತ್ತವೆ; **ಆರುಸಾಸಿರದೊಡನೆ – ಈರಾರುಂ** – ೧೮೦೦೦ (೧+೬x೨ = ೧೮).

ತ್ರಿ-೭೯ **ಕಡುಪಿರಿದು** – ಅತಿಹೆಚ್ಚಿನ ಪರಿಮಾಣದಲ್ಲಿ; **ಸ್ಥಿರಮೆಂದಸ್ಥಿರಮೆಂದು** – ಸ್ಥಿರದುಃಖ ಅಸ್ಥಿರದುಃಖವೆಂದು ಎರಡು ಬಗೆಯ ದುಃಖಗಳು ಜಿನಮತಾನುಸಾರ ನಿಗೋದದಲ್ಲಿರುತ್ತದೆ.

ತ್ರಿ-೮೦ **ಅನಿತೆನಿತು+ಎಂಬೊಡೆ ಸಾಗರಂ** – ಅಷ್ಟು ಸಾಗರಕಾಲ ಇಷ್ಟು ಸಾಗರ ಕಾಲವೆಂದು; **ಆಗದು** – ಹೇಳಲಾಗುವುದಿಲ್ಲ; **ಸಂಖ್ಯಾಗಣಮಂ** – ಸಂಖ್ಯೆಯ ಲೆಕ್ಕಕ್ಕೆ; **ಎಂಬಾಗಳ್** – ಎನ್ನುವಾಗ; **ಜಿನ! ಜಿನ!** – ಅಯ್ಯೋ! ದೇವರೇ!

ತ್ರಿ-೮೧ **ಎಂದಾದೊಡಂ** – ಎಂದಾದರೂ ಒಂದು ದಿನ; **ತ್ರಸತ್ವಕೆ ಬಂದೊಡೆ ಬಹುದು** – ತ್ರಸತ್ವಕೆ ಬಂದರೂ ಬರಬಹುದು; **ಒರ್ಮೆ ಬಾರದಮೊಡಂ ಇಹವು** – ಒಂದುವೇಳೆ ಬಾರದೆಯೂ ಇರಬಹುದು.

ತ್ರಿ-೮೨ **ನುಡಿವಾಗಳ್** – ಇಂಥ ದುಃಖವನ್ನು ನೆನೆದರೆ; **ಆರದೇ** – ತಡೆಯಲಾರದೆ; **ಅಂತಿರಲಿ** – ಆ ವಿಚಾರ ಆಕಡೆ ಇರಲಿ; **ಬಳಿಕ್ಕೆ+ಒಡನೇ** – ಈ ಕೂಡಲೇ

ಮುಂದಕ್ಕೆ; **ಒಡನೆ** – ಈಗ, ಇನ್ನು ಮುಂದೆ, **ಅಂದಮಂ** – ಸ್ವರೂಪವನ್ನು; **ಒರೆವಂ** – ವಿವರಿಸುವೆನು.

ತ್ರಿ–೮೩ **ಉರ್ವಿದ** – ಹಬ್ಬಿದ; **ಪೋವೆಡೆಯೊಳ್** – ಹೋದೆಡೆಯಲ್ಲಿ; **ತೋರ್ಪುದು** – ಸಿಗುವುದು; **ತದುರ್ವಿಯ ಮೇಲೆ** – ಅದರಮೇಲೆ ತಾಗಿಕೊಂಡು.

ತ್ರಿ–೮೪ **ಬಿಟ್ಟಿತದು (ಬಿಟ್ಟಿತು+ಅದು)** – ದುಂಡಾಗಿದೆ; **ಎಸೆದಿರ್ಪುದು** – ಕಂಗೊಳಿಸುತ್ತದೆ. **ದಟ್ಟಂ** – ಒತ್ತಾಗಿ, ವಿಸ್ತಾರವಾಗಿ; **ಅಪ್ರತಿಯದು** – ಅಸದೃಶವಾಗಿದೆ; **ಪೇಳ್ವೊಡೆ** – ಹೇಳುವುದಾದರೆ.

ತ್ರಿ–೮೫ **ಗಾಳಿಗಳಿಂದಂ ಪೊರಗೆ** – ೩ ಗಾಳಿ ವಲಯಗಳಿಂದ ಆಚೆಗೆ; **ಗಗನಮೊಂದಿಲ್ಲದೆ** – ಆಕಾಶದ ವಿನಾ; **ಮಿಕ್ಕ** – ಬೇರೆ; **ಸಿದ್ಧಶಿಲೆ** – ಈಷತ್ ಪ್ರಾಗ್ಭಾರವೆಂಬ ಸಿದ್ಧಕ್ಷೇತ್ರದ ಮಧ್ಯದಲ್ಲಿರುವ ಶುದ್ಧ ಸ್ಫಟಿಕದ ಶಿಲೆ; ಇದು ಬಿಚ್ಚಿದ ಕೊಡೆಯ ಆಕಾರದಲ್ಲಿದೆ. ಇದು ೮ ಗಾತ್ರದ ದಪ್ಪವಾಗಿಯೂ ೪೫ ಲಕ್ಷ ಯೋಜನ ವಿಸ್ತಾರವಾಗಿಯೂ ಇದೆ. ಇಲ್ಲಿ ಘನೋದಧಿ, ಘನವಾತ, ತನುವಾತ ಎಂಬ ಮೂರು ವಾಯುಗಳು ಮಾತ್ರ ಇವೆ. ಇನ್ನೇನೂ ಇಲ್ಲ. ಈ ಶಿಲೆಯ ನೆತ್ತಿಯಲ್ಲಿ ಮುಕ್ತರಾದ ಸಿದ್ಧರು ನೆಲಸುತ್ತಾರೆ. (ತಸುಶಾ ಪು.೨೭೬)

ತ್ರಿ–೮೬ **ಘನೋದಧಿ** – ಲೋಕವನ್ನು ಸುತ್ತಿರುವ ಮೂರು ಗಾಳಿಗಳಲ್ಲಿ ಒಂದು. ಕೆಳಗಿನದು. ಇದು ಎರಡು ಹರಿದಾರಿಗಳ್ಟು ದಪ್ಪವಾಗಿದೆ. ಇದರ ಬಣ್ಣ ಗೋಮೂತ್ರದ್ದು.

ಘನವಾತ : ಒಂದು ಹರಿಯ ದಪ್ಪವಾಗಿ ಅದಕ್ಕೆ ಸೇರಿರುತ್ತದೆ.

ತನುವಾತ : ೪೨೫ ಬಿಲ್ಲು ದೂರ ಕಡಿಮೆಯಾದ ಒಂದು ಹರಿದಾರಿಯಟ್ಟು ದಪ್ಪವಾಗಿರುತ್ತದೆ.

ಅರೆಗಾವುದ (ಅರ್ಧಗಾವುದ) – ಎರಡು ಹರಿದಾರಿ (ಒಂದು ಗಾವುದ– ೪ ಹರಿದಾರಿ).

ತ್ರಿ–೮೭ **ವಾಯುವಲಯ** – ಕೊನೆಯದಾದ ತನುವಾತವು; **ಉದ್ದಾಮದೊಳ್ ಶ್ರೀಮಂತ್ ಸಿದ್ಧರ್ ಬುದ್ಧರ್ ಸ್ವಾಮಿಗಳ್** – ಜ್ಞಾನಿಗಳು, ಅಧಿಪತಿಗಳು, ಅತ್ಯಂತ ಪವಿತ್ರರೂ; **ಅವರೆ** – ಆಗಿರುವ ಅವರೇ ಅತಿ ಶ್ರೇಷ್ಠತೆಯಲ್ಲಿ; **ಉಪಮಾತೀತರ್** – ಅಸದೃಶರಾಗಿರುತ್ತಾರೆ.

ತ್ರಿ–೮೮ **ಅಪ್ಪಿ** – ಆಲಂಗಿಸಿ; **ಸುಖಾಯತಿ** – ಅಧಿಕಸುಖವು; **ಪರವಶಂ ತಟ್ಟಿದವೊಲ್** – ಪರಾಧೀನತೆ ಹೊಂದಿರುವಂತೆ; **ಮಿಸುಕದೆ** – ಅಲ್ಲಾಡದೆ; **ಮೆರೆಯುವರ್** – ವಿರಾಜಿಸುತ್ತಾರೆ.

ತ್ರಿ–೮೯ **ಕಂದಿದೊಡೆ** – ಕಡಿಮೆಯಾದಾಗ; **ಪೆರ್ಚಿದಂದು** – ಮುಂದೆ ಹೆಚ್ಚಿದಾಗ.

ತ್ರಿ–೯೦ **ಸರಿತದೊಳ್** – ಎತ್ತರದಲ್ಲಿ(ಅಳತೆಯಲ್ಲಿ); **ಸಂದ** – ಪ್ರಾಪ್ತವಾಗುವ; **ಶಕ್ತಿಬೋಧ** – ಜ್ಞಾನಶಕ್ತಿ; **ಅಚ್ಚರಿ** – ಇದು ಆಶ್ಚರ್ಯದ ಸಂಗತಿ.

ತ್ರಿ–೯೧ **ಬಲ್ದೊರೆಯಂ ಪಾಯ್ವಂದು** – ದೊಡ್ಡ ಹೊಳೆಯನ್ನು ದಾಟುವಾಗ; **ಸರಿಸಂಗಳ್** – ಸಮವಾಗಿರುತ್ತವೆ (ಸಮ ಎತ್ತರದಲ್ಲಿರುತ್ತವೆ); **ಅರ್ಥದುಪಾಯಂ** – ತಿಳಿಸಲು ಹೇಳಿದ ಉಪಾಯದಿಂದ.

ತ್ರಿ–೯೨ **ಬೊಮ್ಮನೆರೂಪೆನಿಸಿದವರೆ** – ಪರಮಾತ್ಮನ ಸ್ವರೂಪವೇ ಆಗಿರುವ ಅವರಿಗೆ; **ಉಮ್ಮಳ** – ಖೇದ; **ಉಬ್ಬಸ** – ಏದುಸಿರು; **ಸಿಡಿಮಿಡಿ ಉಂಟೆ?** – ಭಯವುಂಟೆ? ಅಸಹನೆ ಉಂಟೆ?

ತ್ರಿ–೯೩ **ಮೈಯ್ಯುಳ್ಳವರು** – ಶರೀರಧಾರಿಗಳಾಗಿರುವವರು; **ಇಟ್ಟಣಿಸಿದೊಡೆ** – ದಟ್ಟಣಿಸಿದರೆ; **ಉಬ್ಬೆಯಾಯ್ತು** – ಸೆಕೆ ಆಯಿತು; **ಎನಲಕ್ಕುಂ** – ಎಂದು ಉಸುರುವರು; **ನೋವುಂಟೇ?** – ನೋವಿರುವುದೇ? (ಇಲ್ಲ)

ತ್ರಿ–೯೪ **ಸಂಗಲಿಸಿ** – ಸೇರಿ; **ಸಮಂತು** – ಚೆನ್ನಾಗಿ; **ಅಲೆಬಲೆ** – ಬಿಗಿತ; **ನೂಕುಂ** – ನೂಕುನುಗ್ಗಲು; **ತಾಕುಂ** – ತಾಕಲಾಟ, ಘರ್ಷಣೆ; **ನೆಲಸಿರ್ಕುಮೆ** – ಉಂಟಾದೀತೆ? ಇಲ್ಲ; **ಅಂತೆ** – ಅದರಂತೆಯೇ ಸಿದ್ಧಪರಮೇಷ್ಠಿಗಳು ಒಂದಾಗಿ ಸೌಹಾರ್ದದಿಂದ ಕೂಡಿರಬಲ್ಲರು.

ತ್ರಿ–೯೫ **ಗಾಳಿಯೊಳು+ಇರುತಿಹರು** – ಸಿದ್ಧಪರಮೇಷ್ಠಿಗಳು; **ಇರ್ದುಂ** – ತನುವಾತ ವೆಂಬ ಗಾಳಿವಲಯದಲ್ಲಿದ್ದರೂ; **ಸೂಕ್ಷ್ಮಮೆನಿಪ್ಪಾ** – ಸೂಕ್ಷ್ಮವೆನಿಸುವ ಗಾಳಿಯೇ; **ಸ್ಥೂಲಮುಂ ಆಯ್ತು** – ಅವರಿಗೆ ಸ್ಥೂಲಪ್ರಾಯವಾಗಿರುತ್ತದೆ. ಏಕೆಂದರೆ, ಆ ತನುವಾತದ ಸೂಕ್ಷ್ಮತೆಗಿಂತ ಸಿದ್ಧಪರಮೇಷ್ಠಿಗಳು ಅತಿಸೂಕ್ಷ್ಮರಾಗಿರುತ್ತಾರೆ; ಅಚ್ಚರಿಯೆಲ್ತೆ – ಇದು ಆಶ್ಚರ್ಯಕರ ಸಂಗತಿಯಾಗಿದೆ.

ತ್ರಿ–೯೬ **ತನುವು + ಅವಗೇ + ಇಲ್ಲ** – ಆ ಸಿದ್ಧಪರಮೇಷ್ಠಿಗಳಿಗೆ ಶರೀರವಿಲ್ಲ; **ಸುಬೋಧಮೆ** – ಸುಜ್ಞಾನವೇ; **ತನುವಾಗಿಹುದು** – ದೇಹವಾಗಿರುವುದು; **ತೆಕ್ಕನೆ ತುಂಬಿಹುದು** – ಸಂಪೂರ್ಣವಾಗಿ ಸುಖ ಆವರಿಸಿರುವುದು; **ಬಿಸವಂದಂ** – ಅದ್ಭುತವಾದುದು, ಸೋಜಿಗ, ಆಶ್ಚರ್ಯಕರ.

ತ್ರಿ–೯೭ **ಸಿದ್ಧಪರಮೇಷ್ಠಿಗಳು** – ಅರ್ಹಂತ, ಆಚಾರ್ಯ, ಸಿದ್ಧ, ಉಪಾಧ್ಯಾಯ, ಸಾಧು ಈ ಐದರಲ್ಲಿ ಒಬ್ಬರು ಸಿದ್ಧರು.

ಸಿದ್ಧರು : ಅಘಾತಿ ಕರ್ಮಕ್ಷಯಾನಂತರದಲ್ಲಿ ವಿದೇಹಮುಕ್ತಿಯಲ್ಲಿ ಇರುವ ಸಾಮಾನ್ಯ ಕೇವಲಿಗಳೂ ತೀರ್ಥಂಕರರೂ ಸಮಾನರೇ. ವಿದೇಹ ಮುಕ್ತಿಯನ್ನೈದಿದ ಈ ಸರ್ವಜ್ಞರಿಗೆ ಸಿದ್ಧರೆಂಬ ಹೆಸರು. (ಮಪ್ರ ಪು.೧೧೦).

ವರ್ಣಂಗಳೈದುಮಿಲ್ಲ – ಸಿದ್ಧರಿಗೆ ಶ್ವೇತ, ಪೀತ, ಹರಿತ, ಅರುಣ, ಕೃಷ್ಣ ಎಂಬ ಪಂಚವರ್ಣಗಳು ಅವರಿಗಿರುವುದಿಲ್ಲ.

ಪೂರ್ಣಪ್ರಭೆ – ಪೂರ್ಣಕಾಂತಿ; **ದಿವ್ಯಗುಣಾರ್ಣವಂ** – ಶ್ರೇಷ್ಠ ಗುಣಸಾಗರರು; **ಎಸೆದಿರ್ಪುದು** – ಕಂಗೊಳಿಸುತ್ತಾರೆ.

ತ್ರಿ–೯೮ **ಜ್ಞಾನಾಕ್ಷಿಗೆ ತೋರುವರು** – ಜ್ಞಾನದೃಷ್ಟಿಯಿಂದ ನೋಡುವವರಿಗೆ ಕಾಣುವರು; **ಅಜ್ಞಾನದ ಚರ್ಮಾಕ್ಷಿಗಳ್ಗೆ** – ಕೇವಲ ಅರಿವಿಲ್ಲದ ಚರ್ಮದ ಕಣ್ಣುಗಳಿಗೆ ಕಾಣರು; **ಧ್ಯಾನಕ್ಕೆ ಸಿಲ್ಕುವರು** – ಧ್ಯಾನದೃಷ್ಟಿಗೆ ಕಾಣುವರು; **ಮತ್ತೇನೆಂಬೆ** – ಇನ್ನೇನೆಂದು ಹೇಳಲಿ! **ಮೆಯೆ ಕೆಯ್ಗೆ ಸಿಲ್ಕರು** – ಉಳಿದವರ ಕೈಗೆ ನಶ್ವರ ಶರೀರಿಗಳಿಗೆ ಎಟುಕರು; **ಅಮೋಘಂ** – ಸಾರ್ಥಕ ಸ್ವರೂಪರು ಸಿದ್ಧ ಪರಮೇಷ್ಠಿಗಳು.

ತ್ರಿ–೯೯ **ಆಕಾರಮೆ ಅಹುದು** – ಸಾಕಾರವೂ ಹೌದು. ಏಕೆಂದರೆ **ಅರಿಕೆಗೆ ತಾಂ ಸ್ವೀಕೃತಂ** – ಜ್ಞಾನಕ್ಕೆ ಗೋಚರವಾಗುತ್ತದೆ; **ನಿರಾಕಾರಮಂ ಎನಲೆ? ಬಹುದು** – ನಿರಾಕಾರವೆನ್ನಬಹುದೇ? ಅದೂ ನಿಜ. ಏಕೆಂದರೆ, **ಇಂದ್ರಿಯಕ್ಕೆ ಸಿರ್ಕದ ದೆಸೆಯಿಂ** – ಇಂದ್ರಿಯಗಳಿಗೆ ಎಟುಕದ ಕಾರಣ ಅಗೋಚರವಾಗಿದೆ. ನಿರಾಕಾರವಾಗಿದೆ.

ತ್ರಿ–೧೦೦ **ತಿಳಿಬೆಳ್ದಿಂಗಳ್** – ಹುಣ್ಣಿಮೆಯ ಬೆಳ್‌ದಿಂಗಳು; **ಪಿಡಿದು ತೆಗೆಯಲ್ ಅರಿದು ಅಂತೆ** – ಅದನ್ನು ಹಿಡಿದು ಕೈಯಲ್ಲಿ ತೆಗೆದುಕೊಳ್ಳಲು ಸಾಧ್ಯವಿಲ್ಲ; **ನಿರ್ಮಳರು** – ಪವಿತ್ರರೂಪಿಗಳಾದ; **ಅಳವಡುವರ್** – ಗೋಚರರು, **ಪಂಚೇಂದ್ರಿಯಕಂ** – ಕಣ್ಣು ಕಿವಿ ಮೂಗು ಕೈಕಾಲು ಮುಂತಾದ ಪಂಚೇಂದ್ರಿಯಗಳಿಗೆ; **ಗಮ್ಯರಲ್ಲ** – ಎಟುಕುವವರಲ್ಲ.

ತ್ರಿ–೧೦೧ **ತುಂಬಿದ ಚಿದ್ಗುಣಂ ಅಂಬರಂ** – ಪರಿಪೂರ್ಣ ಚಿತ್‌ಸ್ವರೂಪ ಹೊಂದಿದ ಆತ್ಮಸ್ವರೂಪಿ; **ಬಯಲರೂಪಿ** – ಆಕಾಶದಂಥ ಬಯಲಾಕಾರ ಮತ್ತು ಮನುಷ್ಯಾಕಾರ. ಈ ಮೂರೂ ಉಳ್ಳ ಚಿದಂಬರ ಪುರುಷ ಎಂಬ ಹೆಸರು ಸಾರ್ಥಕವಾಗಿದೆ; **ಮೂರುಂಟು ಅವರ್ಗೆ** – ಸಿದ್ಧಪರಮೇಷ್ಠಿಗಳಿಗೆ ಈ ೩ ಲಕ್ಷಣಗಳಿವೆ.

ತ್ರಿ–೧೦೨ **ಅಹುದು** – ಆಗಿದೆ; **ಜ್ಞಾನಿಯಲ್ಲ** – ಆಕಾಶವು ಸಿದ್ಧಪುರುಷರ ಹಾಗೆ ಜ್ಞಾನರೂಪಿ ಅಲ್ಲ; **ಆಲೋಚಿಸೆ** – ವಿಚಾರ ಮಾಡಿದರೆ; **ತಾನಿಷ್ಟೆ ಭೇದವಲ್ಲದೆ ಪೆರತೇ** – ಇಷ್ಟೇ ಭೇದ ಹೊರತು ಮತ್ತೇನಿಲ್ಲ.

ತ್ರಿ–೧೦೩ **ಸುರಮ್ಯಗುಣಾಷ್ಟಕಮೆ** : ಸಿದ್ಧಪರಮೇಷ್ಠಿಗಳಿಗೆ ಎಂಟು ರಮ್ಯ ಗುಣಗಳು ಭೂಷಣವು.

ಸಮ್ಯಕ್ತ್ವದ ಅಷ್ಟಗುಣಗಳು : ೧. ಸಂವೇಗ ೨. ನಿರ್ವೇದ ೩. ನಿಂದಾ ೪. ಗರ್ಹಣೆ ೫. ಅಸ್ತಿತ್ವ ೬. ಅರ್ಹದಾದಿಭಕ್ತಿ ೭. ಪ್ರಾಣಿದಯಾ ೮. ವಾತ್ಸಲ್ಯ (ತಸು ಪು.೨೬೫)

ಸಮ್ಯಕ್ತ್ಯ – ಜಿನಮತದಲ್ಲಿ ಸಂಪೂರ್ಣವಾದ ನಂಬಿಕೆ. ಸಮ್ಯಕ್ ದರ್ಶನ

ತ್ರಿ–೧೦೪ **ತಲೆಯಿಂದಡಿಮುಟ್ಟಂ** – ಮುಡಿಯಿಂದ ಅಡಿಯವರೆಗೆ; **ಮುಟ್ಟಂ** – ವರೆಗೆ; **ಅರಿವುತ** – ತಿಳಿಯುತ್ತ; **ಕಾಣುತಿರ್ಪರ್** – ಕಾಣುತ್ತಾರೆ; **ಸಲೆ** – ಚೆನ್ನಾಗಿ.

ತ್ರಿ–೧೦೫ **ಒಳಗು ಹೊರಗುಮಂ** – ಅಂತರಂಗ ಬಹಿರಂಗಗಳನ್ನು; **ಆಲೋಕಿಸುತ + ಅರಿವುತಿರ್ಪರ್** – ವೀಕ್ಷಿಸುತ್ತಾ ತಿಳಿಯುವರು; **ಹೊರಗೆ + ಅವರ್ಗೆ + ಆಲದಬಿತ್ತಿನ** – ಆ ಸಿದ್ಧಪರಮೇಷ್ಠಿಗಳಿಗೆ ಆಲದಬಿತ್ತಿನ; **ಅಸಮಾನ ಅರಿಕೆ** – ಸಮಾನವಾದರೂ ವಿಶಾಲವಾಗುವ.

ತ್ರಿ–೧೦೬ **ಎತ್ತುವ** – ಮೇಲೆತ್ತುವ, ಉದ್ಧರಿಸುವ; **ವೀರ್ಯಂ** – ಶಕ್ತಿ; **ನಿಜವಾಗಿಹುದು ಅವರ್ಗೆ** – ಅವರಿಗೆ ಸಹಜವಾಗಿರುತ್ತದೆ; **ಚೇಷ್ಟಿಸದೆ ತೆಪ್ಪಗಿಹರ್** – ಆದಾಗ್ಯೂ ಆ ಶಕ್ತಿಯನ್ನು ಬಳಸದೆ ಸುಮ್ಮಗಿರುತ್ತಾರೆ; **ತ್ರಿಜಗದ ಸುಖಕ್ಕೆ** – ಮೂರು ಲೋಕದ ಸುಖಕ್ಕಿಂತ; **ನಿಜವಾಗಿಹುದು** – ನಿಜಕ್ಕೂ ಇರುತ್ತದೆ; **ಇಂತುಂಟೆಂದು** – ಅದು ಹೀಗಿದೆಯೆಂದು; **ನುಡಿಯುಂ** – ಬಣ್ಣಿಸಲು.

ತ್ರಿ–೧೦೭ **ಭೋಗ ಮಹೀ ಖಚರಸುರಗಣಂ** – ಭೋಗ ಭೂಮಿಯ ಆರ್ಯರೂ, ಖೇಚರರೂ, ದೇವತೆಗಳೂ; **ಬಹುಭವದೊಳ್** – ಅನೇಕ ಜನ್ಮಗಳಲ್ಲಿ; **ಭೋಗಿಸಿದ ಭೋಗಮಂ** – ಅನುಭವಿಸಿದ ಸುಖಗಳನ್ನು, **ನೋಳ್ಪಾಗಲ್** – ಹೋಲಿಸಿ ನೋಡಿದಾಗ; **ಸಿದ್ಧಪರಮೇಷ್ಠಿಗಳ ಸುಖಾಬ್ಧಿಗೆ** – ಸುಖ ಸಾಗರಕ್ಕೆ ಅದು; **ತುಂತುರ್ವೊಲ್** – ನೀರಿನ ಹನಿಯಂತೆ.

ತ್ರಿ–೧೦೮ **ಪಂಚಾಣುತ್ತರೆಯು** – ಐದು ವಿಮಾನಗಳಿವೆ ಅವು ಆಕಾಶ ಪ್ರತಿಷ್ಠೆಗಳು. ವಿಜಯ, ವೈಜಯಂತ, ಜಯಂತ, ಅಪರಾಜಿತ, ಸರ್ವಾರ್ಥ ಸಿದ್ಧಿ ಎಂಬ ಅಣುತ್ತರ ವಿಮಾನಗಳು. ಇವು ಇರುವುದೇ ಅಣುತ್ತರೆ. ಆದ್ದರಿಂದ ಪಂಚಾಣುತ್ತರೆ; **ಭವನಾಂಚಿತಧರೆ ಮುಟ್ಟಲಿರ್ದ** – ಭವನಲೋಕದ ತುದಿವರೆಗೆ ಇರುವ; **ಸುರರಂ** – ದೇವತೆಗಳಿಗೆಲ್ಲ; **ಮಡಿವರ್** – ಸಾವವರು; **ಕಿಂಚಿತ್ ಸುಖಂ** – ಅವರದು ಅಲ್ಪಸುಖ; **ಚಂಚನ್ಮುಕ್ತಿಯ** – ತೇಜೋಪೂರ್ಣ ಮುಕ್ತಿಯ; **ಛೀ ಸುಡು!** (ಉದ್ಗಾರ) – ಬೆಂಕಿಹಾಕ, ನಾಶವಾಗಲಿ.

ತ್ರಿ–೧೦೯ **ಅತಿತರ ದುಃಖದಾಗರಂ** – ವಿಪರೀತ ದುಃಖದ ನೆಲೆ; **ಅಲ್ಪಸುಖಿಗಳ್** – ನಶ್ವರಸುಖ ಅನುಭವಿಸುವವರು; **ಮಡಿವರ್** – ಸಾವಿಗೆ ಒಳಗಾದವರು.

ತ್ರಿ–೧೧೦ **ಕೇಡಿಲ್ಲದ ಸುಖಂ** – ನಾಶರಹಿತಸುಖ; **ನೋಡಿದೊಡೆ** – ಗಮನಿಸಿದರೆ; **ಮತ್ತಿನವೆಲ್ಲಂ** – ಉಳಿದುವೆಲ್ಲ; **ಕೇಡುಳ್ಳವು** – ನಾಶವಾಗುವಂಥವು; **ಆದುಂ** – ಆದ್ದರಿಂದ; **ತಕ್ಕುಜ್ಜುಗಂ** – ತಕ್ಕ ಪ್ರಯತ್ನವನ್ನು.

ತ್ರಿ–೧೧೧ **ಯೆಂತುಟು** ? – ಹೇಗಿರುತ್ತದೆ; **ಹೊಲಬು** – ರೀತಿ; **ಭಾವಿಸೆ** – ವಿಚಾರ ಮಾಡಿದರೆ; **ದ್ವೈವಿಧಂ** – ಎರಡುಬಗೆ; **ಆಗಿರ್ಕುಂ** – ಆಗಿರುವುದು; **ಅರಿದು** – ಚೆನ್ನಾಗಿ ತಿಳಿದು; **ನೆಗಳ್ದೊಡೆ** – ಆಚರಿಸಿದರೆ.

ತ್ರಿ–೧೧೨ **ಶ್ರೀ ಸಮವಸರಣದೊಳ್ ಉದಗ್ರ** – ಅತ್ಯುನ್ನತ; **ಅಭ್ಯಾಸಿಸಿ** – ಅಧ್ಯಯನ ಮಾಡಿ; **ಬೇರಿಟ್ಟು** – ಬೇರೆ ಬೇರೆಯಾಗಿ ಇಟ್ಟು; **ಲೇಸಿಂ** – ಚೆನ್ನಾಗಿ.

ತ್ರಿ–೧೧೪ **ಇತ್ತಲ್** – ಇತ್ತಕಡೆ; **ತನ್ನೊಡಲೊಳಿರ್ದ** – ತನ್ನ ದೇಹದಲ್ಲಿರುವ; **ಪತ್ತಿಸಿ** – ಸಮೀಕರಿಸಿ, ಸೇರಿಸಿ; **ಸುತ್ತು** – ಬಳಸು; **ಎನಿಕ್ಕುಂ** –ಎನ್ನಿಸುತ್ತದೆ.

ತ್ರಿ–೧೧೫ **ನೆಗಳೆ** – ಆಚರಿಸಿದರೆ; **ಭಾವಿಸಲ್** – ಧ್ಯಾನಿಸಿದರೆ; **ಬೇರಾಗದೆ** –ಬೇರೆ ಎನಿಸದೆ; **ಭಾವಿಸಲ್** – ತಿಳಿಯಲು; **ಅದಕ್ಕೂ** – ಅದು ಲಭ್ಯವಾಗುತ್ತದೆ.

ತ್ರಿ–೧೧೬ **ಆದರಿಪುದು** – ಗೌರವಿಸಬೇಕು; **ಸುಮೋಕ್ಷಕ್ಕೆ** – ಶ್ರೇಷ್ಠ ಮುಕ್ತಿಗೆ; **ರತ್ನತ್ರಯ** – ಸಮ್ಯಕ್‌ದರ್ಶನ ಜ್ಞಾನ ಚರಿತ್ರಗಳ ಆಚರಣೆಯೂ ಆಗಿರುತ್ತದೆ.

ತ್ರಿ–೧೧೭ **ಅದರಿಂದ** – ಆ ಭಕ್ತಿಯಿಂದ; **ಪದಮುಮಂ** – ಸಿದ್ಧಸ್ಥಾನವನ್ನೂ; **ಮೋಕ್ಷಮುಮಂ** – ಮೋಕ್ಷಗತಿಯನ್ನೂ; **ಅನುಭವಿಸುವನು** – ಹೊಂದುತ್ತಾನೆ.

ತ್ರಿ–೧೧೮ **ಶಿಲೆಯಂ** – ಕಲ್ಲನ್ನೂ; **ಲೆಪ್ಪವಂ** – ಎರಕದಲ್ಲಿರುವುದನ್ನು; **ಆಲಿಸದೆ** – ಅಲಕ್ಷ್ಯಮಾಡಪೆ (ಆಯಾಸಗೊಳ್ಳದೆ); **ಆತ್ಮನನು** – ತನ್ನಾತ್ಮವನ್ನು; **ಒಲಿದೀಕ್ಷಿಸೆ** – ಪ್ರೀತಿಸಿ ಸ್ಥಿರವಾಗಿ ಧ್ಯಾನಿಸಿ ಕಂಡರೆ; **ಅಪ್ಪುದು** – ಹೊಂದುವುದು; **ಒಂದಚ್ಚರಿಯೇ?** – ಅದೊಂದು ಆಶ್ಚರ್ಯ ಸಂಗತಿಯೇ? (ಅಲ್ಲ).

ತ್ರಿ–೧೧೯ **ಇರ್ದುಂ** – ಇದ್ದರೂ; **ಎನಿಕ್ಕುಂ** – ಎನಿಸುತ್ತಾನೆ; **ಎಂತೆನೆ** – ಹೇಗೆಂದರೆ; **ಪೇಳ್ವೆಂ** – ಹೇಳುತ್ತೇನೆ ಕೇಳಿ; **ಪಾಲಂತೆ** – ಹಾಲಿನಂತೆ; **ವಲಂ** – ಅಲ್ಲವೇ?

ತ್ರಿ–೧೨೦ **ಹೊಸೆದರೆ** – ಮಸೆದಾಟಕ್ಕೆ ಒಳಗಾದರೆ ಅದರಿಂದ ಬರುವ ಬೆಂಕಿ; **ಮರನಂ ತಾ ಸುಡುವುದು** – ಮರವನ್ನು ಆ ಬೆಂಕಿ ಸುಡುವುದು; **ಅಂತೆ** – ಅದರಂತೆಯೇ; **ಕರ್ಮದೊಳಿರ್ಪಂ** – ಕರ್ಮದಲ್ಲಿ ಅಡಗಿರುತ್ತಾನೆ; **ದುರಿತಮಂ** – ಪಾಪಕರ್ಮಗಳನ್ನು; **ಉರೆ** – ಪೂರ್ಣವಾಗಿ; ಚೆನ್ನಾಗಿ; **ಒಡನೆ** – ಕೂಡಲೆ **ಧ್ಯಾನಿ ಮುಕ್ತಿಗೆ ಪೋಪಂ** – ಮೋಕ್ಷಕ್ಕೆ ಸಲ್ಲುತ್ತಾನೆ.

ತ್ರಿ–೧೨೧ **ಮುಂಪೇಳ್ದ** – ಈ ಮುಂಚೆ ಹೇಳಿದ; **ಇಂಪಿನೊಳ್** – ಆನಂದದಲ್ಲಿ; **ಪಾವನನೆಂದೀಕ್ಷಿಸಿ** – ಪವಿತ್ರನೆಂದು ಭಾವಿಸಿ ನೋಡಿ; **ಸಿದ್ಧಾಂತ** – ಖಚಿತ ತತ್ತ್ವನಿರ್ಣಯ.

ತ್ರಿ–೧೨೨ **ಲೋಕತ್ರಯಂ** – ಮೂರು ಲೋಕಗಳು **ಶ್ರೀಕರಂ** – ಸಂಪತ್ಕರನು; **ಅದನರಿಯಳ್ವೇಕಾದೊಡೆ** – ಮೂರು ಲೋಕವನ್ನು ತಿಳಿಯಬೇಕಾದರೆ; **ಅಫಲಂ** – ವ್ಯರ್ಥ, ಪ್ರಯೋಜನವಿಲ್ಲ; **ಅಲ್ಲದೊಡೆ** – ಇಲ್ಲದಿದ್ದರೆ.

ತ್ರಿ–೧೨೩ **ಸಲ್ಲದು** – ಸರಿಯಲ್ಲ; **ಎಂಬರ್** – ನಂಬು ಹೇಳುತ್ತಾರೆ; **ಪೊಲ್ಲದು** – ಸುಳ್ಳು, ಸರಿಯಲ್ಲ ಈ ಮಾತು; **ಎಂಬರ್ಗೆ** – ಎಂಬುದಾಗಿ ಹೇಳುವರಿನ್ನು ಮೆಚ್ಚಬೇಡಿ; **ಪ್ರಾಭೃತ** – ಪರಮಾಗಮ ಗ್ರಂಥ ಜೈನ ಶಾಸ್ತ್ರ ಗ್ರಂಥ.

ತ್ರಿ–೧೨೪ **ಆಸನ್ನ ಭವ್ಯರ್ (ಸಮೀಪ ಭವ್ಯರ್)** – ಸಮ್ಯಕ್ತ್ವ ದೊರೆಯುವ ಸಂಭವ ಬೇಗ ಮುಕ್ತಿ ಬರುವುದಾದರೆ ಆ ಜೀವ ಆಸನ್ನಭವ್ಯ ಜೀವರು.

ದೂರಭವ್ಯರ್ : ನಿಧಾನವಾಗಿ ತುಂಬ ಕಾಲ ಕಳೆದ ಮೇಲೆ ಮುಕ್ತಿ ಬರುವುದಾದರೆ ದೂರಭವ್ಯರು.

ಅಭವ್ಯರ್ : ಬಿಡುಗಡೆ ದೊರೆಯದಂತೆ ಮಾಡುವಷ್ಟು ಮಟ್ಟಿಗೆ ಕರ್ಮದ ಹೊರೆ ಹೊತ್ತ ಜೀವರೇ ಅಭವ್ಯರು. (ಗುಂ. ಪು.LX)

ಓಸರಿಸದೆ : ಹಿಂಜರಿಯದೆ; **ಒಲಿವರ್** – ಉರಿದು ಬೀಳುತ್ತಾರೆ, ಆಕ್ರೋಶಗೊಳ್ಳುತ್ತಾರೆ.

ತ್ರಿ–೧೨೫ **ಧ್ಯಾನಿಗೆ** – ಆತ್ಮಧ್ಯಾನಿಗೆ; **ಭವಗಳು** – ಜನ್ಮಗಳು; **ಒಡಂಬಟ್ಟವಂಗೆ** – ಒಪ್ಪಿಕೊಂಡವನಿಗೆ; ಹತ್ತೆಂಟು ಜನ್ಮಗಳು ಬೇಕು; **ತಾನೊಡನೆ ಮುಕ್ತಿಯಹುದು** – ಅನಂತರ ತಾನಾಗಿ ಮುಕ್ತಿ ದೊರಕುವುದು; **ಮುನಿಯಾದವನಿಗೆ** – ದ್ವೇಷಿಸುವವನಿಗೆ, ಕೋಪಿಸಿಕೊಳ್ಳುವವನಿಗೆ.

ತ್ರಿ–೧೨೬ **ಪ್ರಣವ ಸ್ವರೂಪ** – ಓಂಕಾರ ರೂಪಿ; **ಮಣಿತ್ರಯೈಕಾರ್ಥನೇ** – ರತ್ನತ್ರಯನೇ ಮುಖ್ಯವೆನಿಸಿದ ಚಿದಂಬರ ಪುರುಷನೇ.

ತ್ರಿ–೧೨೭ **ಉದ್ಧೂತಮಾಲಾಯ** – ಕರ್ಮಮಲವನ್ನು ದೂರಮಾಡಿದವನಿಗೆ; **ತೇ** – ನಿನಗೆ; **ಅಮೃತ ಸಮುದ್ರ ಸಾರಾಯ** – ಅಮೃತಸಾಗರಸಾರನಿಗೆ; **ನಮಃ** – ನಮಸ್ಕಾರ.

ತ್ರಿ–೧೨೮ **ಮಣಿ** – ನವರತ್ನ–೯; ಶೈಲ – ಸಪ್ತಶೈಲ ೭; ಗತಿ – ಚತುರ್ಗತಿ ೪; ಇಂದು – ಚಂದ್ರ ೧; ಈ ಸಂಖ್ಯೆಗಳನ್ನು ಬಲದಿಂದ ಎಡಕ್ಕೆ ಓದಿದರೆ ಶಾಲಿವಾಹನ ಶಕ ೧೪೭೯ ಆಗುತ್ತದೆ ಎಂದರೆ ಕ್ರಿ.ಶ. ೧೫೫೭ ಆಗುತ್ತದೆ. ಈ ಕೃತಿಯ ರಚನೆಯ ಕಾಲ.

ತೌಳವಾಂಗಣ – ತೌಳವದೇಶ; **ವೇಣುಪುರಾಂಶದೊಳ್** – **ವೇಣುಪುರ**– ಮೂಡಬಿದಿರೆಯಲ್ಲಿ; **ಆರ್ಯ** – ಶ್ರೇಷ್ಠನು; **ವೀರಾಂಗದಯೋಗಿಮುಟ್ಟುತ** – ಪಂಚಮಕಾಲದ ಕೊನೆಯ ವೀರಾಂಗದನೆಂಬ ಯೋಗಿಯವರೆಗೆ ಈ ಕೃತಿ; **ಸಲ್ಲೀಲೆಯಿಂದ** – ಉತ್ತಮ ವಿನೋದದಿಂದ; **ಒಪ್ಪುಗುಂ** – ಸಲ್ಲಲಿ.

* * *

ಅನುಬಂಧಗಳು

೧. ಸಹಾಯಕ ಸಾಹಿತ್ಯ

೧. ಎ. ಶಾಂತಿರಾಜಶಾಸ್ತ್ರಿ – **ಶತಕತ್ರಯೀ**
೧೯೨೨ ಪ್ರ: ಕ್ರೌನ್ ಎಲೆಕ್ಟ್ರಿಕ್ ಪ್ರೆಸ್, ಬೆಂಗಳೂರು
೧೯೪೪ ಶ್ರೀ ಬಸವೇಶ್ವರ ಎಲೆಕ್ಟ್ರಿಕ್ ಪ್ರೆಸ್, ಬೆಂಗಳೂರು
೧೯೬೨ ಶ್ರೀ ವೀರ ಮುದ್ರಣಾಲಯ, ಬೆಳಗಾವಿ
೧೯೮೮ ಮಂಜುಶ್ರೀ ಪ್ರಿಂಟರ್ಸ್, ಉಜಿರೆ

೨. ಎ.ಆರ್. ನಾಗರಾಜ್ ೧) **ರತ್ನಾಕರ ಶತಕ** (ಟೀಕೆ) – ೨೦೧೭
ಪ್ರ: ಕನ್ನಡ ಸಾಹಿತ್ಯ ಪರಿಷತ್ತು

೩. ಎಂ.ಆರ್. ನಾಗರಾಜ್ ೨) **ಅಪರಾಜಿತೇಶ್ವರ ಶತಕ** – ೧೯೮೧
ಪ್ರ: ಚಂದ್ರಗುಪ್ತ ಗ್ರಂಥಮಾಲೆ, ಶ್ರವಣಬೆಳಗೊಳ

೪. ವಿವಿಧ ಲೇಖಕರು **ರತ್ನಾಕರವರ್ಣಿ** – ಕವಿಕಾವ್ಯ ವಿಚಾರ (ವಿಮರ್ಶಾ ಲೇಖನಗಳು) ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೧೯೮೦

೫. ಬಿ.ಎಸ್. ಸ್ವಾಮಿ **ರತ್ನಾಕರವರ್ಣಿ** (ಐತಿಹಾಸಿಕ ಕಾದಂಬರಿ)
ಪ್ರ: ಕಿರಣ್ ಎಂಟರ್‌ಪ್ರೈಸಸ್, ಕಬ್ಬನ್ ಪೇಟೆ, ಬೆಂಗಳೂರು – ೨೦೧೧

೬. ಕೆ. ಕಾಂತ ರೈ **ರತ್ನಾಕರ ಶತಕ** (ಮೂಲ, ತಾತ್ಪರ್ಯ)
ಬಿ. ದೇವೇಂದ್ರಕುಮಾರ ಜೈನ್
ಪ್ರ: ಕೆ. ಗುಣವತಿ ಅಮ್ಮ, ಮೂಡಬಿದಿರೆ

೭. ಜಿ. ಬ್ರಹ್ಮಪ್ಪ ೧. **ರತ್ನಾಕರ ವೈಭವ** (ಗದ್ಯಾನುವಾದ) – ೧೯೯೭
ಪ್ರ: ರತ್ನತ್ರಯ ಪ್ರಕಾಶನ, ಮೈಸೂರು

೮. ಜಿ. ಬ್ರಹ್ಮಪ್ಪ **೨. ರತ್ನಾಕರ ಮಹಾಕವಿ** (ಪರಿಚಯ ಗ್ರಂಥ)
ಪ್ರ: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ – ೧೯೧೧

೯. ಹೇಮಲತಾ ಪದಕಿ — ರತ್ನಾಕರವರ್ಣಿ (ವಿಮರ್ಶಾ ಗ್ರಂಥ)
ಪ್ರ: ಸಮಾಜ ಪುಸ್ತಕಾಲಯ, ಧಾರವಾಡ – ೧೯೭೪

೧೦. ಎಂ. ರಾಮಚಂದ್ರ — **ರಸಾಯನ** (ವಿಮರ್ಶಾ ಲೇಖನಗಳು)
ಪ್ರ: ಗೀತಾ ಬುಕ್ ಹೌಸ್, ಮೈಸೂರು – ೧೯೮೭

೧೧. ಪಿ.ಡಿ. ಪಾಟೀಲ — **ಜೈನ ತತ್ತ್ವಸಾರ** (ಜಿನಧರ್ಮ ಶಬ್ದಕೋಶ)
ಪ್ರ: ವೈಶಾಲಿ ಪ್ರಕಾಶನ, ಧಾರವಾಡ – ೧೯೮೧

೧೨. ಎಂ.ಎ. ಜಯಚಂದ್ರ ಮತ್ತು ಇತರರು — ಸರಸ್ವತಿ ವಿಜಯಕುಮಾರ್ ಮತ್ತು ಬಾ.ವೇ. ಶ್ರೀಧರ
ಜೈನ ಪಾರಿಭಾಷಿಕ ಪದವಿವರ ಕೋಶ
ಪ್ರ: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ– ೨೦೦೬

೧೩. ಸಂ: ಎಸ್. ಜೀತೇಂದ್ರ ಕುಮಾರ್ & ಇತರರು — **ವರ್ತೂರು ಶಾಂತಿರಾಜಶಾಸ್ತ್ರಿ ಬದುಕು ಬರಹ**
ಪ್ರ: ಪಂಡಿತರತ್ನ ಶಾಂತಿರಾಜಶಾಸ್ತ್ರಿ ಟ್ರಸ್ಟ್(ರಿ), ಬೆಂಗಳೂರು

೧೪. ಸಂ: ಎಲ್. ಗುಂಡಪ್ಪ — **ಆದಿಪುರಾಣ ಸಂಗ್ರಹ**
ಪ್ರ: ಮೈಸೂರು ವಿಶ್ವವಿದ್ಯಾಲಯ – ೧೯೫೬


೧೫. ಡಿ. ಪದ್ಮನಾಭಶರ್ಮ — ಜೈನಧರ್ಮ ಬೋಧೆ ಭಾಗ ೧ ಮತ್ತು ೨ – ೧೯೭೩
ಶ್ರೀ ಮಹಾವೀರ ಮಿಷನ್, ಬೆಂಗಳೂರು

೧೬. ಸಂ: ವಿ.ಲೋಕನಾಥ ಶಾಸ್ತ್ರಿ — ಬಾಲಬೋಧ ಜೈನಧರ್ಮ (೪ ಭಾಗಗಳು)
– ೧೯೩೫, ೧೯೩೯
ಪ್ರ:ಶ್ರೀವೀರವಾಣೀವಿಲಾಸ ಜೈನಸಿದ್ಧಾಂತಭವನ,
ಮೂಡಬಿದ್ರಿ, ೧೯೩೫, ೧೯೩೯

೧೭. ಮ.ಪ್ರ. ಪೂಜಾರ — **ಜೈನಧರ್ಮ ಪರಿಭಾಷೆ** – ೧೯೭೬
ಪ್ರ: ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

೧೮. ಸಂ: ತ.ಸು. ಶಾಮರಾಯ ಪ. ನಾಗರಾಜಯ್ಯ — **ಜೈನ ಪರಿಭಾಷಾ ರತ್ನಕೋಶ** – ೧೯೮೧
ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೧೯. ಲೇ: ಬಿ.ಕೆ.ಎಸ್. ಅಯ್ಯಂಗಾರ್ ಅನು: ಪ್ರೊ.ಬಿ.ಭೀಮಸೇನರಾವ್ — **ಯೋಗದೀಪಿಕಾ** – ೧೯೯೧
ಪ್ರ: ವಿವೇಕಾನಂದ ಕೇಂದ್ರ, ಚಾಮರಾಜಪೇಟೆ, ಬೆಂಗಳೂರು



೨. ಸಂಪಾದಕರ ಪರಿಚಯ

ಹೆಸರು	:	ಜಿ. ಅಶ್ವತ್ಥನಾರಾಯಣ
ತಾಯಿ-ತಂದೆ	:	ಹೆಚ್. ಗುಂಡಪ್ಪ–ಜಿ. ಜಾನಕಮ್ಮ
ಜನ್ಮದಿನ	:	೧೨–೫–೧೯೩೮
ಜನ್ಮಸ್ಥಳ	:	ಬೆಂಗಳೂರು
ಮನೆ ವಿಳಾಸ	:	ನಂ.೯೫, ೩೮ನೇ 'ಬಿ' ಕ್ರಾಸ್, ೧೬ನೇ ಮುಖ್ಯರಸ್ತೆ, ೪ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು–೫೬೦ ೦೪೧. ದೂರವಾಣಿ–೦೮೦–೨೬೬೩೭೭೮೩
ಶಿಕ್ಷಣ	:	ಎಂ.ಎ. ಕನ್ನಡ (ಎಂ.ಎ. ಸಮಾಜಶಾಸ್ತ್ರ, ಶಾಸನಶಾಸ್ತ್ರ ಡಿಪ್ಲೊಮಾ, ಮೆಕ್ಯಾನಿಕಲ್ ಇಂಜನಿಯರಿಂಗ್ ಡಿಪ್ಲೊಮಾ)
ಉದ್ಯೋಗ	:	ಸರ್ಕಾರಿ ಕಾಲೇಜುಶಿಕ್ಷಣ ಇಲಾಖೆಯ ವಿವಿಧ ಡಿಗ್ರಿ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕ ಹಾಗೂ ಪ್ರಾಧ್ಯಾಪಕನಾಗಿ ಕನ್ನಡಬೋಧನಾ ಸೇವೆ. ೧೯೯೬ರಲ್ಲಿ ನಿವೃತ್ತಿ.
ಸಂಸ್ಥೆಗಳಲ್ಲಿ ಸೇವೆ	:	

೧. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ರಂಶ್ರೀ ಮುಗಳಿ ಅವರ ಅವಧಿಯಲ್ಲಿ ಡಿಗ್ರಿ ಪಠ್ಯಗಳ ಭಾಷಾತಜ್ಞನಾಗಿ ಪರಿಶೀಲಕ.

೨. ಪಿಯುಸಿ ಪಠ್ಯ ಪುಸ್ತಕ ಮಂಡಳಿ, ಕನ್ನಡ ಸಾಹಿತ್ಯಪರಿಷತ್ತಿನ ಪಠ್ಯಪುಸ್ತಕ ಸಮಿತಿ, ಮಹಾವೀರಸಂಸ್ಥೆ ಮುಂತಾದ

ಸಮಿತಿಗಳ ಪಠ್ಯರಚನಾ ಸಮಿತಿ ಸದಸ್ಯ ಮತ್ತು ಪಠ್ಯಗಳ ರಚನೆ.

೩. ಕನ್ನಡ ಸಂಸ್ಕೃತಿ ಇಲಾಖೆಯ ಸಮಗ್ರ ದಾಸಸಾಹಿತ್ಯದ ೫೦ ಸಂಪುಟಗಳ ಪರಿಶೀಲನೆ ಮತ್ತು ಮುದ್ರಣ ಕಾರ್ಯದ ಸಂಚಾಲಕ ಸಮಿತಿ ಸದಸ್ಯ.

೪. ಗಮಕಕಲಾ ಪರಿಷತ್ತಿನ ಪಠ್ಯಯೋಜನೆ ಮತ್ತು ತರಗತಿಗಳ ವ್ಯವಸ್ಥಾಪಕ ಮತ್ತು ಸಂಘಟಕ.

೫. ಕನ್ನಡ ಸಂಸ್ಕೃತಿ ಇಲಾಖೆಯ ಆಡಳಿತ ಕನ್ನಡಶಿಬಿರಗಳ ನಿರ್ದೇಶಕ.

೬. ಐ.ಎ.ಎಸ್., ಕೆ.ಎ.ಎಸ್. ತರಗತಿಗಳಿಗೆ ಕನ್ನಡ ಮಾರ್ಗದರ್ಶಕ.

೭. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ. ದೇವುಡು ಪ್ರತಿಷ್ಠಾನ, ಕರ್ನಾಟಕ ಗಾನಕಲಾ ಪರಿಷತ್ತು. ಗಮಕಕಲಾ ಪರಿಷತ್ತಿನ ಸ್ಥಾಪಕ ಸದಸ್ಯ.

೮. ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ೬ ಜನರಿಗೆ ಎಂ.ಫಿಲ್ ಪದವಿ ಶಿಕ್ಷಣಕ್ಕೆ ಮಾರ್ಗದರ್ಶನ.

೯. ನಾಡಿನಾದ್ಯಂತ ಉಪನ್ಯಾಸಗಳು. ಅ.ನ.ಕೃ–ರಾಮಮೂರ್ತಿ ಪ್ರಾರಂಭಿಸಿದ ಕನ್ನಡ ಚಳುವಳಿಯ ಪ್ರಾರಂಭದ ಕಾರ್ಯಕರ್ತರಲ್ಲಿ ಒಬ್ಬ.

೧೦. **ಪ್ರಶಸ್ತಿಗಳು :**

ಕುವೆಂಪು ಶ್ರೀ ಪ್ರಶಸ್ತಿ	(೨೦೦೪)
ಗುರು ಗೋವಿಂದ ವಿಠಲ ದಾಸ ಸಾಹಿತ್ಯ ಪ್ರಶಸ್ತಿ	(೨೦೦೭)
ಕನ್ನಡ ಶ್ರೀ ಪ್ರಶಸ್ತಿ	(೨೦೦೮)
ಕನ್ನಡ ಸಾಹಿತ್ಯ ಸೇವಾ ಪ್ರಶಸ್ತಿ	(೨೦೧೧)
ಕನ್ನಡ ಸಾಹಿತ್ಯ ಪರಿಷತ್ತಿನ ಗ್ರಂಥ ಪ್ರಶಸ್ತಿ	(೨೦೧೨)
ಸುಮಾ ವಸಂತ ಸಾಹಿತ್ಯ ಪ್ರಶಸ್ತಿ	(೨೦೧೨)
ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ	(೨೦೧೩)

ಇತ್ಯಾದಿ.

ಸನ್ಮಾನ: ನಾಡಿನ ನಾನಾ ಸಂಸ್ಥೆಗಳು ಸಾಹಿತ್ಯಸೇವೆಗಾಗಿ ಗೌರವಿಸಿವೆ.

ಗ್ರಂಥಗಳ ರಚನೆ ಮತ್ತು ಸಂಪಾದನೆ :

ಜೈನ ಸಾಹಿತ್ಯ : ರತ್ನಕರಂಡಕ ಶ್ರಾವಕಾಚಾರ, ರತ್ನಾಕರನ ಮೂರು ಶತಕಗಳು, ಉತ್ತಮ ಕ್ಷಮಾ, ಜಾಗರೂಕರಾಗಿ ಜಾಣರಾಗಿ.

ಗ್ರಂಥ ಸಂಪಾದನೆ : ಅನುಭವಾಮೃತ ಟೀಕೆ, ಕುಮಾರವ್ಯಾಸನ ಭೀಷ್ಮ ಪರ್ವ, ಸೋಮೇಶ್ವರ ಶತಕದ ಟೀಕೆ, ಕಬ್ಬಿಗರ ಕಾವ ಟೀಕೆ, ವಿದ್ಯಾರ್ಥಿಗಳಿಗಾಗಿ ಡಿ.ವಿ.ಜಿ. ಕಗ್ಗದ ಪದ್ಯಗಳು, ಉಪ್ಪಾರಳ್ಳಿ ರಾಮಪ್ಪಯ್ಯನ ಗೀತಾರ್ಥಚಂದ್ರಿಕೆ, ಎಂ.ವಿ.ಸೀ. ಸಮಗ್ರ ಜೀವನಚರಿತ್ರೆ ಅನುವಾದ ಸಂಪುಟ (೨ ಭಾಗಗಳು), ಸಾಹಿತ್ಯ ಸಮ್ಮೇಳನಾಧ್ಯಕ್ಷರ ಭಾಷಣಗಳು, ಸೌಂದರ್ಯ ಲಹರೀದೀಪಿಕೆ

ದಾಸ ಸಾಹಿತ್ಯ : ವಿಜಯದಾಸರ ಕೀರ್ತನೆಗಳು ಮತ್ತು ಉಗಾಭೋಗಗಳು, ಪ್ರಸನ್ನ ಶ್ರೀನಿವಾಸ ದಾಸರ ಸಮಗ್ರ ಕೃತಿಗಳು, ಕೆಲ್ಲಂಗೆರೆ ತಿಮ್ಮಪ್ಪದಾಸರ ಕೀರ್ತನೆಗಳು, ಚಿದಂಬರಯ್ಯನವರ ಭಕ್ತಿ ಗೀತೆಗಳು, ಹರಿದಾಸರ ಸಮಾಜಮುಖಿ ಕೀರ್ತನೆಗಳು ಭಾಗ–೪, ದಾಸ ಸಾಹಿತ್ಯ ಸೌರಭ.

ವಚನಸಾಹಿತ್ಯ : ದೇವರದಾಸಿಮಯ್ಯನ ವಚನಗಳು, ಫ.ಗು.ಹಳಕಟ್ಟಿ

ಸಮಗ್ರ ಗ್ರಂಥ ಉಪನ್ಯಾಸ ಮಾಲಿಕೆ : ಆದಿ ಪುರಾಣ, ಪಂಪಭಾರತ, ರಾಮಾಯಣ ದರ್ಶನ, ಹರಿಶ್ಚಂದ್ರ ಕಾವ್ಯ, ಜೈಮಿನಿ ಭಾರತ, ಸೋಮೇಶ್ವರ ಶತಕ ಇತ್ಯಾದಿ (ಸತತ ೧೦ ವರ್ಷಗಳ ಕಾಲ).


ಶಬ್ದಕೋಶ : ಭಗವದ್ಗೀತಾ ಶಬ್ದಕೋಶ, ಬುಕ್ಕಾಂಬುಧಿ ಪ್ರಾದೇಶಿಕ ಶಬ್ದಕೋಶ.

ಸ್ವತಂತ್ರ ಗ್ರಂಥ ರಚನೆ : ಪರಿಷತ್ತು–೧೦೦, ಕನ್ನಡ ಸಾಹಿತ್ಯ ಮತ್ತು ಕರಡು ತಿದ್ದುವಿಕೆ, ಕನ್ನಡ ಸಾಹಿತ್ಯ ದಿಗ್ಗಜರು, ನಾ ಕಂಡಂತೆ ಹಿರಿಯ ಕನ್ನಡ ಸಾಹಿತಿಗಳು, ಬಿ.ಎಂ.ಶ್ರೀ. ಪರಿಚಯ, ದೇವುಡು ನರಸಿಂಹ ಶಾಸ್ತ್ರೀ, ಫ.ಗು.ಹಳಕಟ್ಟಿ, ಹು.ಮ.ರಾಮಾರಾಧ್ಯ, ಉತ್ತಮಕ್ಷಮಾ, ವ್ಯಾವಹಾರಿಕ ಕನ್ನಡ, ಹೊಸಕೆರೆ ಚಿದಂಬರಯ್ಯನವರು, ಇತ್ಯಾದಿ.

ಸಹ ಸಂಪಾದಕತ್ವ : ಆರ್.ವಿ.ಕಾಲೇಜಿನಿಂದ ಪ್ರಕಾಶಿತವಾದ ಸಿಂಚನ ಗ್ರಂಥಮಾಲೆಯಡಿ

ಪಾಂಡುಗ್ರಂಥಮಾಲೆಯ ೨೯ ಗ್ರಂಥಗಳು, ರಾಸದರ್ಶನ, ನಿಟ್ಟೂರು ಶ್ರೀನಿವಾಸರಾಯರ ಆತ್ಮಕಥೆ, ಇತ್ಯಾದಿ.

* * *



ರತ್ನಾಕರನ ಶತಕತ್ರಯದ ಮೂಲ ಮತ್ತು ಟಿಪ್ಪಣಿ ಸಹಿತ ಸರಳಾನುವಾದ ಪ್ರಕಟಣೆ ಸುಲಭವಾಗಿ ಎಲ್ಲೆಡೆ ಮಾರುಕಟ್ಟೆಯಲ್ಲಿ ಸಿಗದಿರುವ ಕಾಲದಲ್ಲಿ ಮೂಲ, ಅನುವಾದ, ವಿಸ್ತೃತ ಟಿಪ್ಪಣಿಗಳನ್ನು ಒಳಗೊಂಡ ಈ ಗ್ರಂಥವನ್ನು ಪ್ರೊ. ಜಿ. ಅಶ್ವತ್ಥನಾರಾಯಣ ರಚಿಸಿರುವುದು ಜೈನಸಾಹಿತ್ಯಾಸಕ್ತರಿಗೆ ರಸದೌತಣವೇ ಆಗುವುದು ನಿಶ್ಚಿತ.

ಜೈನಸಾಹಿತ್ಯದ ಪ್ರಮುಖ ಗ್ರಂಥಗಳ ಪೈಕಿ ಮಹಾಕವಿ ರತ್ನಾಕರವರ್ಣಿಯು ರಚಿಸಿದ ರತ್ನಾಕರಶತಕ, ಅಪರಾಜಿತೇಶ್ವರಶತಕ ಮತ್ತು ತ್ರಿಲೋಕಶತಕಗಳನ್ನು ಪದ್ಯಾನುಕ್ರಮಣಿಕೆಯಲ್ಲೂ, ಅಕಾರಾದಿಯಾಗಿಯೂ ಪರಿವಿಡಿಯಲ್ಲಿ ವಿಂಗಡಿಸಿರುವುದು ಈ ಹೊತ್ತಿಗೆಯ ವೈಶಿಷ್ಟ್ಯವಾಗಿದೆ. ಜೈನಸಾಹಿತ್ಯದ ಬಗ್ಗೆ ವಿಶೇಷ ಅಧ್ಯಯನವನ್ನು ಕೈಗೊಂಡು, ತತ್ಸಂಬಂಧಿತವಾಗಿ ಅನೇಕ ಉಪನ್ಯಾಸಗಳನ್ನು ನೀಡಿ, ಜೈನಸಾಹಿತ್ಯ ವಲಯದಲ್ಲಿ ತಮ್ಮದೇ ಛಾಪನ್ನು ಒತ್ತಿರುವ ಹಾಗೂ ಆ ಕ್ಷೇತ್ರದಲ್ಲಿ ಸುವಿಖ್ಯಾತರಾದ ಪ್ರೊ. ಜಿ. ಅಶ್ವತ್ಥನಾರಾಯಣ ಅವರ ಈ ತ್ರಿಶತಕಮಾಲಿಕೆಯು ಕನ್ನಡ ಸಾಹಿತ್ಯಲೋಕದ ಮುಕುಟಕ್ಕೆ ಸಂದ ಸುವರ್ಣ ಗರಿ.

ಎನ್. ರಾಮನಾಥ್

ನ್ಯೂ ವೇವ್ ಬುಕ್ಸ್